

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

U.G.C. Care Listed Journal

7ನೇ ಜೂನ್ 2021 ಸಂಪುಟ : 11 ಸಂಚಿಕೆ : 1

ಪ್ರಕಾಶಕರು :

ಜಯದೇವ ಮೈ. ಮೆಣಸಗಿ

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಪಾದಕರು :

ಡಾ. ಎಸ್. ಬಿ. ಯಾದವಾಡ

ಸಹಸಂಪಾದಕರು :

ಡಾ. ಪ್ರಕಾಶ ಕೆ. ಬಡಿಗೇರ



ಸಂಪಾದಕ ಮಂಡಳಿ

- ಪ್ರೊ. ಎಸ್.ಎಸ್. ಪಾಟೀಲ
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- ಪ್ರೊ. ಬಿ.ಎಲ್. ಲಕ್ಕಣ್ಣವರ
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕ.ರಾ.ಅ.ಮ.ವಿ,ವಿಜಯಪುರ ಮತ್ತು ಕುಲಸಚಿವರು, ಕ.ರಾ.ಗ್ರಾ.ಅ.
  ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ.
- ಪ್ರೊ. ಕೆ.ಎಂ. ಮೇತ್ರಿ
  ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ,
  ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಡಾ. ಎನ್. ಲಕ್ಷ್ಮೀ
  ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- ಡಾ. ಜಗನ್ನಾಥ ಕೆ. ಡಾಂಗೆ
  ಮುಖ್ಯಸ್ಥರು ಮತ್ತು ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- ಡಾ. ರಾಜಪ್ಪ ದಳವಾಯಿ
  ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ,
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಡಾ. ಅನಿಲ ವಿ. ಬಮಗೊಂಡ
  ಸಹಾಯಕ ಪ್ರಾಧ್ಯಾಪಕರು, ಬಿ.ಎಲ್.ಡಿ.ಇ. ಸಂಸ್ಥೆಯ
  ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ.



**Shikshan Soudha**

*A Quarterly Education and Research Journal*

VIDYANIDHI PRAKASHANA® Since:1973

SRI SIVAKUMAR AGENCY®

Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-237527, 277527
email : shikshansoudha@gmail.com



The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.



**ಶಿಕ್ಷಣ ಸೌಧ** ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ


## ಅಂತರಂಗ Inside

### ಸೈದ್ಧಾಂತಿಕ (Articles)


05 ಭಾರತದಲ್ಲಿ ಸಾಂಪ್ರದಾಯಿಕ ಆರೋಗ್ಯ ಚಿಕಿತ್ಸೆ ಪದ್ಧತಿಗಳು : ಒಂದು ಅಧ್ಯಯನ – ಲಿಂಗರಾಜ ನಿಡುವಣಿ, ಅಶೋಕ ಎಸ್. ಕೋರಿ

10 ಪ್ರೌಢಶಿಕ್ಷಣದ ಮಹತ್ವ ಮತ್ತು ತಿರುವುಗಳು – ಡಾ. ವರುಣ್ ಎಂ.

12 ಭಾರತದ ಆರ್ಥಿಕತೆಯಲ್ಲಿ ನಿರುದ್ಯೋಗಿ ಯುವಜನರ ಸಮಸ್ಯೆ ಹಾಗೂ ಸವಾಲುಗಳು – ಡಾ. ಶರಣಪ್ಪ ಸೈದಾಪೂರ

18 ಸಮೂಹ ಮಾಧ್ಯಮ ಮತ್ತು ಮಹಿಳೆ : ಸಾಧ್ಯತೆ ಮತ್ತು ಸವಾಲು – ಡಾ. ಗೀತಾ ವಸಂತ

21 ಭಾರತ ಒಕ್ಕೂಟ ವ್ಯವಸ್ಥೆಯ ಮೌಲ್ಯಮಾಪನ – ಬಸವರಾಜ ಕುರಕುಂದ

23 ಭಾರತದಲ್ಲಿ ಸಮ್ಮಿಶ್ರ ಸರಕಾರದ ಪ್ರಸ್ತುತತೆ : ಒಂದು ರಾಜಕೀಯ ವಿಶ್ಲೇಷಣೆ – ಸಂಗೀತ ಯಲ್ಲಪ್ಪ

28 ಭಾವಕವಿ ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು – ಮುರಳಿ ಎಂ.

29 ಕೃಷಿ ಕ್ಷೇತ್ರದ ಕವಲು ದಾರಿಯಲ್ಲಿ ಮಹಿಳೆ – ಡಾ. ಲಕ್ಷ್ಮೀದೇವಿ ವೈ.

30 ಕುವೆಂಪು ಸಾಹಿತ್ಯದ ಮೇಲೆ ಪಾಶ್ಚಾತ್ಯ ಚಿಂತನೆಗಳ ಪ್ರಭಾವ – ಸತೀಶ ಜಿ.ಸಿ.

33 ಆಧುನಿಕ ಮಹಿಳಾ ಕಾವ್ಯದಲ್ಲಿ : ಸ್ತ್ರೀ ಸಂವೇದನೆಗಳ ನೆಲೆಗಳು – ಡಾ. ಅಣ್ಣಪ್ಪ ಬಿ. ರೊಟ್ಟಿಗವಾಡ


### ಸಂಶೋಧನೆ (Reserch)


38 ಶಿಕ್ಷಣದಲ್ಲಿ ಭಾಷೆ–ಬೋಧನೆ ಮತ್ತು ಭಾಷೆ ಕಲಿಸುವಿಕೆಯಲ್ಲಿ ಶಿಕ್ಷಕನ ಪಾತ್ರ – ನಾಗೇಶ್ವರಿ ಪಿ. ಎನ್.

41 ಮಂಗಳ ಮುಖಿಯರ ಜೀವನ ಮತ್ತು ಸ್ಥಿತಿಗತಿಗಳು : ಸಮಾಜಶಾಸ್ತ್ರೀಯ ಅಧ್ಯಯನ – ಡಾ. ಗಿರಿಧರ್ ಎಸ್.

48 ಮಹಿಳಾ ಶಿಕ್ಷಣ : ಹೊರತಳ್ಳುವಿಕೆ ಮತ್ತು ಒಳಗೊಳ್ಳುವಿಕೆಯ ನೆಲೆಗಳು – ಡಾ. ಯರ್ರಿಸ್ವಾಮಿ ಈ

52 ಕನ್ನಡ ಕೈಬರಹದ ಮೂಲಕ ಬುದ್ಧಿಶಕ್ತಿಯ ಅಧ್ಯಯನ – ಡಾ. ಗಿರೀಶ್ ಟಿ.

58 ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ಆತಂಕದ ಕುರಿತು ಅಧ್ಯಯನ – ಡಾ. ಭಾರತಿ ಗಾಣಿಗೇರ, ಶಿವಮ್ಮ ಎನ್. ಹಂಡೇಗಾರ

62 ಮಾದಕೀಯ ಸನ್ನಿವೇಶಗಳ ಚಿತ್ರಣಗಳನ್ನು ವೀಕ್ಷಿಸುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲಾಗುವ ಪ್ರಭಾವದ ಒಂದು ಅಧ್ಯಯನ – ಡಾ. ಪ್ರಕಾಶ ಕೆ. ಬಡಿಗೇರ


### ಶಿಕ್ಷಣ ತಜ್ಞರು (Education Thinkers)


65 ಜಾನ್ ಡ್ಯೂಯಿ – ಜಯದೇವ ಎಂ. ಮೆಣಸಗಿ

ಶಿಕ್ಷಣ ಸೌಧ





# ಸಂಪಾದಕೀಯ

## ಕರ್ನಾಟಕ ರಾಜ್ಯದಲ್ಲಿ ಬಹುನಿರ್ಗಮನ ಆಯ್ಕೆಗಳೊಂದಿಗೆ ನಾಲ್ಕು ವರ್ಷಗಳ ಬಹುಶಿಸ್ತಿನ ಪದವಿ ಕಾರ್ಯಕ್ರಮಗಳು

21 ನೇ ಶತಮಾನದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಾದ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ಪಾತ್ರವು ಸಾಂಪ್ರದಾಯಿಕ ಜ್ಞಾನ ಸೃಷ್ಟಿ ಮತ್ತು ಪ್ರಸಾರವನ್ನು ಮೀರಿ ವಿಸ್ತಾರವಾದ, ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳನ್ನು ಹೊಂದಿರುವ ನಾವೀನ್ಯತೆಗಳಿಗಾಗಿ ಹೊಸ ನಿರೀಕ್ಷೆಗಳನ್ನು ಒಳಗೊಳ್ಳುವುದಾಗಿದೆ. ವೈವಿಧ್ಯಮಯ ಪ್ರತಿಭೆಗಳು, ಆಕಾಂಕ್ಷೆಗಳು ಮತ್ತು ವೃತ್ತಿಪರ ಅವಶ್ಯಕತೆಗಳನ್ನು ಹೊಂದಿರುವ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು, ಅವರ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಲ್ಲಿ ಗುಣಾತ್ಮಕ ಬದಲಾವಣೆಗಳನ್ನು ಮಾಡುವುದು ಅವಶ್ಯಕವಾಗಿದೆ.

ಈ ಹಿನ್ನೆಲೆಯಲ್ಲಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ–2020 ಯು ಬಹು ನಿರ್ಗಮನ ಮತ್ತು ಪ್ರವೇಶ ಆಯ್ಕೆಗಳೊಂದಿಗೆ ಪ್ರಮಾಣಪತ್ರ/ಡಿಪ್ಲೊಮಾ/ಪದವಿಗಳೊಂದಿಗೆ ಬಹು–ಶಿಸ್ತಿನ ಪದವಿ ಕಾರ್ಯಕ್ರಮಗಳನ್ನು ಶಿಫಾರಸ್ಸು ಮಾಡಿದೆ. ಶ್ರೇಣೀಕೃತ ಉನ್ನತ ಶಿಕ್ಷಣ ಸಂಸ್ಥೆಗಳು (ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು) ರಾಷ್ಟ್ರವ್ಯಾಪಿ ಬಹು–ಶಿಸ್ತಿನ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಉದಾರವಾದಿ ವಿಧಾನವು ವೃತ್ತಿಪರ ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮತ್ತು ವಿಭಾಗಗಳಲ್ಲಿ ಪದವಿ ಶಿಕ್ಷಣದ ಆಧಾರವಾಗಿರಬೇಕು. ಪದವಿ ಪಠ್ಯಕ್ರಮವು ಸೃಜನಶೀಲತೆ ಮತ್ತು ನಾವೀನ್ಯತೆ, ವಿಮರ್ಶಾತ್ಮಕ ಚಿಂತನೆ, ಉನ್ನತ ಕ್ರಮದ ಆಲೋಚನಾ ಸಾಮರ್ಥ್ಯಗಳು, ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯಗಳು, ತಂಡವಾಗಿ ಕೆಲಸ ಹಾಗೂ ಸಂವಹನ ಕೌಶಲ್ಯಗಳನ್ನು ಹೆಚ್ಚು ಆಳವಾಗಿ ಕೇಂದ್ರೀಕರಿಸಬೇಕಾಗಿದೆ.

ದೇಶದಲ್ಲಿಯೇ ಮೊದಲಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿಯು ನಮ್ಮ ರಾಜ್ಯದಲ್ಲಿ ಬಹು–ಶಿಸ್ತಿನ ಪದವಿ ಕಾರ್ಯಕ್ರಮಗಳ ಪಠ್ಯಕ್ರಮದ ಚೌಕಟ್ಟನ್ನು ಮತ್ತು ಅನುಷ್ಠಾನಗೊಳಿಸುವ ಯೋಜನೆಯನ್ನು ರೂಪಿಸಲು ಪ್ರಸ್ತಾಪಿಸಿರುವುದು ಹಾಗೂ ಅನುಷ್ಠಾನಗೊಳಿಸಲು ಸಜ್ಜಾಗಿರುವುದು ನಿಜಕ್ಕೂ ಸ್ವಾಗತಾರ್ಹ. ಇದು ಶೈಕ್ಷಣಿಕ ಉತ್ಕೃಷ್ಟತೆಯ ಮಟ್ಟವನ್ನು ಸುಧಾರಿಸುವುದಲ್ಲದೆ ರಾಜ್ಯದ ಶೈಕ್ಷಣಿಕ ಮತ್ತು ಸಂಶೋಧನಾ ವಾತಾವರಣವನ್ನು ಸುಧಾರಿಸುತ್ತದೆ. ಪ್ರಸ್ತಾವಿತ ಪಠ್ಯಕ್ರಮದ ಚೌಕಟ್ಟು ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸಲು ಪ್ರಯತ್ನಿಸುತ್ತದೆ ಮತ್ತು ಒಟ್ಟಾರೆ ಶ್ರೇಷ್ಠತೆಯನ್ನು ಸಾಧಿಸುವ ಪ್ರಯತ್ನದಲ್ಲಿ ಅವರಿಗೆ ಸಹಾಯ ಮಾಡುತ್ತದೆ.

ಪ್ರಸ್ತಾವಿತ ನಾಲ್ಕು ವರ್ಷಗಳ ಮಲ್ಟಿಡಿಸಿಪ್ಲಿನರಿ ಪದವಿ ಕಾರ್ಯಕ್ರಮವು ಪ್ರಸ್ತುತ ಪದವಿ ಶಿಕ್ಷಣಕ್ಕೆ ಒಂದು ಮೂಲಭೂತ ಪರಿವರ್ತನೆಯಾಗಿದ್ದು, ಇದು ರಾಜ್ಯದ ವಿಶ್ವವಿದ್ಯಾಲಯಗಳ ಸಾಂಪ್ರದಾಯಿಕ ಪದವಿ ಕಾರ್ಯಕ್ರಮಗಳ ಸ್ವರೂಪವನ್ನೇ ಬದಲಾಯಿಸಲಿದೆ.

– ಡಾ. ಎಸ್.ಬಿ. ಯಾದವಾಡ
ಸಂಪಾದಕರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾರತದಲ್ಲಿ ಸಾಂಪ್ರದಾಯಿಕ ಆರೋಗ್ಯ ಚಿಕಿತ್ಸೆ ಪದ್ಧತಿಗಳು : ಒಂದು ಅಧ್ಯಯನ

✍ **ಲಿಂಗರಾಜ ನಿಡುವಣಿ,** ಸಂಶೋಧನಾ ವಿದ್ಯಾರ್ಥಿ, ಮಾನವ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
✍ **ಅಶೋಕ ಎಸ್. ಕೋರಿ,** ಮನೋವೈದ್ಯಕೀಯ ಸಮಾಜ ಕಾರ್ಯಕರ್ತರು, ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ (ಡಿಮ್ಹಾನ್ಸ್), ಧಾರವಾಡ.

## ಪ್ರಸ್ತಾವನೆ

"ಆರೋಗ್ಯವೇ ಭಾಗ್ಯ" ಎನ್ನುವಂತೆ ಪ್ರತಿ ವ್ಯಕ್ತಿಯು ಉತ್ತಮ ಆರೋಗ್ಯಕ್ಕಾಗಿ ಪ್ರಯತ್ನಿಸುತ್ತಾನೆ. ಆರೋಗ್ಯ ಸಮಸ್ಯೆಗಳು ಎದುರಾದಾಗ ಉಪಶಮನಗೊಳಿಸುವ ಪ್ರಕ್ರಿಯೆಗಳಲ್ಲಿ ಬೇರೆ ಬೇರೆ ವೈದ್ಯಕೀಯ ತಜ್ಞರನ್ನು ಭೇಟಿಯಾಗುವುದು ನಾವು ನೋಡುತ್ತಿದ್ದೇವೆ. ಮಾನವ ಜನಾಂಗದಿಂದ ಹಿಡಿದು ಇಂದಿನವರೆಗೂ ಮಾನವನು ಅನೇಕ ರೋಗಗಳಿಗೆ ಬಲಿಯಾಗುತ್ತಾ ಬಂದಿದ್ದಾನೆ. ಅದರಂತೆ ಅವುಗಳಿಗೆ ತನ್ನದೇ ಆದ ಚಿಕಿತ್ಸಾ ಕ್ರಮಗಳನ್ನು ಕಂಡುಕೊಂಡು ರೋಗ ನಿವಾರಣೆಗಾಗಿ ಪ್ರಯತ್ನಿಸುತ್ತಿದ್ದಾನೆ. ಬಲಿಷ್ಠ ದೇಶವನ್ನು ಹೊಂದಬೇಕಾದರೆ ಆರೋಗ್ಯವಂತ ಜನರ ಅವಶ್ಯಕತೆ ತುಂಬಾ ಇದೆ. ಭಾರತವು ಅತಿ ಹೆಚ್ಚು ಗ್ರಾಮಗಳಿಂದ ಕೂಡಿದ ದೇಶವಾಗಿದ್ದು, ಇಂದಿಗೂ ಗ್ರಾಮೀಣ ಭಾರತದ ಜನರು ಸಾಂಪ್ರದಾಯಿಕದ ಆರೋಗ್ಯ ಚಿಕಿತ್ಸೆಗಳ ಮೇಲೆ ನಂಬಿಕೆಗಳನ್ನು ಇಟ್ಟುಕೊಂಡಿದ್ದಾರೆ. ನಗರ ಪ್ರದೇಶಗಳಿಗೆ ಹೋಲಿಕೆ ಮಾಡಿದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅತಿ ಶೀಘ್ರವಾಗಿ ಅಥವಾ ತಕ್ಷಣ ತಜ್ಞ ವೈದ್ಯರು ಸಿಗದೇ ಇದ್ದ ಪಕ್ಷದಲ್ಲಿ ಸಾಂಪ್ರದಾಯಿಕ ಆರೋಗ್ಯ ಚಿಕಿತ್ಸೆ ಪದ್ಧತಿಗಳ ಮೇಲೆ ಅವಲಂಬನೆಯನ್ನು ಇಟ್ಟಿದ್ದಾರೆ. ಇಂತಹ ಚಿಕಿತ್ಸಾ ಪದ್ಧತಿಗಳ ಮೇಲೆ ವ್ಯವಸ್ಥಿತ ವೈಜ್ಞಾನಿಕ ಸಂಶೋಧನೆಗಳು ಅತಿ ವಿರಳ. ಭಾರತದ ಅನೇಕ ಗ್ರಾಮೀಣ ಪ್ರದೇಶಗಳು ಪ್ರಾಚೀನ ಕಾಲದ ಋಷಿಮುನಿಗಳಿಂದ ಬಂದಂತಹ ಜ್ಞಾನದ ಪಳೆಯುಳಿಕೆಗಳನ್ನು ಉಳಿಸಿಕೊಂಡು, ಮುಂದುವರಿಸಿಕೊಂಡು ಬಂದಿವೆ. ಪಾರಂಪರಿಕ ಮನೆತನಗಳು ಶಿಸ್ತುಬದ್ಧವಾಗಿ ಮಕ್ಕಳು, ಮೊಮ್ಮಕ್ಕಳಿಗೆ ಕಲಿಸಿ ಸಾರ್ವಜನಿಕರಿಗೆ ಅನೂಕೂಲವಾಗಲೆಂದು ಮಾಡಿಕೊಂಡು ಬಂದಿರುವುದು ವಿಶೇಷ. ಪ್ರಾಚೀನ ಕಾಲದ ಆದಿಮಾನವನಿಂದ ಇಂದಿಗೂ ಅವ್ಯಾಹತವಾಗಿ ಸಾಗಿಬಂದಿರುವ ನಾಟಿವೈದ್ಯವು ಇಂದಿನ ನವನಾಗರಿಕತೆಯ ಯುಗದಲ್ಲಿ ದೇಶಿಯ ವೈದ್ಯಹಳ್ಳಿಗರ ವೈದ್ಯವೆಂದು ಕಡೆಗಣಿಸಲ್ಪಟ್ಟರೂ ಕೂಡ ಅದೇ ವೈದ್ಯದ ವಿಧಾನವೂ ಇಂದಿಗೂ ಸುಪ್ರಸಿದ್ಧವಾಗಿರುವ ಅಲೋಪತಿ, ಹೋಮಿಯೋಪತಿ, ಆಯುರ್ವೇದಗಳಲ್ಲಿ ಮಾತೃಸ್ಥಾನದಲ್ಲಿದೆ.

ಭಾರತ ದೇಶವು ಅತಿ ಹೆಚ್ಚು ಗ್ರಾಮೀಣ ಪ್ರದೇಶಗಳಿಂದ ಕೂಡಿದ್ದು, ಭಾರತ ದೇಶವು ಗ್ರಾಮೀಣ ಪ್ರದೇಶದ ಜನರಿಂದ ಕೂಡಿದೆ.ಇಂದು ನಗರ ಪ್ರದೇಶದಲ್ಲಿರುವ ಎಷ್ಟೋ ಜನರು ಗ್ರಾಮೀಣ ಪ್ರದೇಶದಿಂದ ದುಡಿಮೆಗಾಗಿ, ನೌಕರಿಗಾಗಿ ನಗರ ಪ್ರದೇಶಗಳಿಗೆ ಬಂದು ವಾಸವಾಗಿದ್ದಾರೆ.ಆದರೆ, ಅವರಲ್ಲಿ ಗ್ರಾಮೀಣ ಪ್ರದೇಶದ ಸಂಸ್ಕೃತಿಯನ್ನು ನಾವು ಕಾಣಬಹುದಾಗಿದೆ. ಭಾರತ ದೇಶದಲ್ಲಿ ಸರಿ ಸುಮಾರು 500,000 ಲಕ್ಷ ಹಳ್ಳಿಗಳು ಇದ್ದು, ಅಂದಾಜು 1.2 ಬಿಲಿಯನ್ ಜನರು ಭಾರತದಲ್ಲಿದ್ದಾರೆ. ಅತಿ ಹೆಚ್ಚು ಜನರು ವ್ಯವಸಾಯುವನ್ನು ಜೀವನೋಪಯಕ್ಕಾಗಿ ಮತ್ತು ವೃತ್ತಿಯಾಗಿ ಪರಿಗಣಿಸಿದ್ದು, ಇದನ್ನು ವಂಶಪಾರಂಪರಗತವಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

## ಅಧ್ಯಯನ ಗುರಿ ಮತ್ತು ಉದ್ದೇಶಗಳು

1. ಭಾರತದ ಪಾರಂಪರಿಕ ವೈದ್ಯ ಪದ್ಧತಿಗಳ ಅಸ್ತಿತ್ವದ ಬಗ್ಗೆ ತಿಳಿದುಕೊಳ್ಳುವುದು
2. ವಿವಿಧ ಕಾಯಿಲೆಗಳಿಗೆ ಪಾರಂಪರಿಕ ಔಷಧಗಳ ಲಭ್ಯತೆ ಮತ್ತು ಪ್ರಯೋಜನಗಳ ಬಗ್ಗೆ ತಿಳಿದುಕೊಳ್ಳುವುದು
3. ಸಮಕಾಲೀನ ವೈದ್ಯ ಪದ್ಧತಿಗಳ ಜೊತೆ ಪಾರಂಪರಿಕ ವೈದ್ಯ ಪದ್ಧತಿಯ ಮಹತ್ವದ ಬಗ್ಗೆ ಅರ್ಥೈಸಿಕೊಳ್ಳುವುದು

## ಸಂಶೋಧನಾ ವಿಧಾನ

ಈ ಅಧ್ಯಯನದಲ್ಲಿ ಮುಖ್ಯವಾಗಿ ಆನುಷಂಗಿಕ ಮೂಲಗಳಿಂದ (Secondary Sources) ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಅಧ್ಯಯನದಲ್ಲಿ ಮುಖ್ಯವಾಗಿ ಪಾರಂಪರಿಕ ವೈದ್ಯ ಪದ್ಧತಿಗೆ ಸಂಬಂಧಿಸಿದ ಪುಸ್ತಕಗಳು, ವರ್ತಮಾನ ಪತ್ರಿಕೆಗಳು, ಮ್ಯಾಗಜೀನ್‌ಗಳು, ಪಾರಪಂರಿಕ ವೈದ್ಯ ಪದ್ದತಿ ಬಗ್ಗೆ ಪ್ರಕಟಿಸಿದ ಅಂತರ್ಜಾಲ ತಾಣಗಳು, ರಾಷ್ಟ್ರೀಯ ಮತ್ತು ಪ್ರಕಾಶಿತವಾದ ಅಂತರಾಷ್ಟ್ರೀಯ ಲೇಖನಗಳು, ಪುಸ್ತಕಗಳು ಮತ್ತು ಕಿರುಲೇಖನಗಳಲ್ಲಿ ಮುದ್ರಿತವಾದ ಮಾಹಿತಿಗಳನ್ನು ಉಪಯೋಗಿಸಿ ಕೊಳ್ಳಲಾಗಿದೆ. ಆನುಷಂಗಿಕ ಮೂಲಗಳು ಅಥವಾ ದಾಖಲೆಯ ಮೂಲಗಳಿಂದ ಮಾಹಿತಿ ಸಂಗ್ರಹಣೆ ಸಂಶೋಧಕರುಗಳಿಗೆ ದಾಖಲೆಗಳ ಅಧ್ಯಯನದ ಉಪಯುಕ್ತತೆ ಎಷ್ಟಿರುತ್ತದೆಂಬುದನ್ನು ಖ್ಯಾತ ವಿಜ್ಞಾನಿ ಥಾಮಸ್ ಎಡಿಸನ್ನನ ಮಾತುಗಳಿಂದ ಗ್ರಹಿಸಬಹುದು. "ನಾನು ಏನನ್ನಾದರೂ ಅನ್ವೇಷಿಸಬೇಕೆಂದಾಗ ಈ ಹಿಂದೆ ಆ ಕ್ಷೇತ್ರದಲ್ಲಿ ಏನೇನು ಕೆಲಸಗಳಾಗಿವೆಯೋ ಅವುಗಳನ್ನೆಲ್ಲಾ ಓದುವುದರಿಂದ ಆರಂಭಿಸುತ್ತೇನೆ. ಅತ್ಯಂತ ಹೆಚ್ಚಿನ ಶ್ರಮ ಹಾಗೂ ವೆಚ್ಚದಲ್ಲಿ ಏನೇನು ಸಾಧನೆಗಳಾಗಿವೆಯೋ ಅವನ್ನೇಲ್ಲಾ ನಾನು ಮೊದಲು ಅರ್ಥ ಮಾಡಿಕೊಳ್ಳುತ್ತೇನೆ. ನನ್ನ ಕಾರ್ಯದ ಆರಂಭ ಕಾಲದಲ್ಲಿ ಇದುವರೆಗೂ ನಡೆದಿರತಕ್ಕಂತಹ ಸಾವಿರಾರು ಪ್ರಯೋಗಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುತ್ತೇನೆ. ನಂತರವೇ ನಾನು ಸಾವಿರಾರು ಪ್ರಯೋಗಗಳನ್ನು ನಡೆಸುತ್ತೇನೆ" (ಚ.ನ.ಶಂಕರ್‌ರಾವ್, 2008–2009, ಪುಟ 11–12).

## ಫಲಿತಾಂಶಗಳು

ಭಾರತದ ಗ್ರಾಮೀಣ ಜನರು ಇಂದಿಗೂ ಕೂಡ ಆರೋಗ್ಯದ ಸಮಸ್ಯೆ ಬಂದರೆ ಕೆಲವು ನಂಬಿಕೆಗಳಿಗೆ ಒಳಗಾಗುತ್ತಾರೆ ಮತ್ತು ಸಮಸ್ಯೆ ಪರಿಹರಿಸಲು ಪ್ರಾಯೋಗಿಕವಾಗಿ ಪ್ರಯತ್ನಿಸುತ್ತಾರೆ. ಬುಡಕಟ್ಟು ಜನಾಂಗದ ಪ್ರದೇಶದ ಜನರಲ್ಲಿ ಆರೋಗ್ಯದ ಸಮಸ್ಯೆಗೆ ಭೂತ ಅಥವಾ ಪೈಶಾಚಿಕ ಕಾರಣಗಳಿರುತ್ತವೆ ಎಂದು ನಂಬುತ್ತಾರೆ. ಆಯುರ್ವೇದ, ಯುನಾನಿ, ಸಿದ್ದ, ನ್ಯಾಚೋರಪತಿಯಂತಹ ಔಷಧಿಗಳಿಗೆ ಗ್ರಾಮೀಣ ಜನರು ಹತ್ತಿರ ಇರುವ ವೈದ್ಯರನ್ನು ಭೇಟಿಯಾಗುತ್ತಾರೆ. (ಅಶೋಕ ವಿ. ಪಿ., ಕೆ. ವಿ. ಸೋಮಸುಂದರಮ್ ಮತ್ತು ಆರ್. ಸಿ. ಗೋಯಲ್, 2002).

ISSN : 2249-2429

RNI REG.NO.KARKAN/2011/38712

ಭಾರತದಲ್ಲಿ ಸಾಂಪ್ರದಾಯಿಕ ವೈದ್ಯ ಪದ್ಧತಿ ಅತಿ ಪುರಾತನ ಇತಿಹಾಸವನ್ನು ಹೊಂದಿದ್ದು ಆಳವಾದ ಬೇರುಗಳನ್ನು ಹೊಂದಿದೆ. ಕ್ರೀಶ್ಚೀಯನ್ ಪೂರ್ವಕ್ಕಿಂತ ಮುಂಚೆ ಮತ್ತು ವೇದಗಳ ಪೂರ್ವದಲ್ಲಿ ಅಂದರೆ ಹರಪ್ಪ ಮತ್ತು ಮೆಹೆಂಜೋದಾರ ಕಾಲದ ನಾಗರಿಕತೆಯ ಅವಧಿಯಲ್ಲಿ ಇಂತಹ ಸಾಂಪ್ರದಾಯಿಕ ವೈದ್ಯ ಪದ್ಧತಿ ಇತ್ತು ಎನ್ನುವುದು ಸತ್ಯ. ಇದನ್ನು ಸರಳವಾಗಿ ತಿಳಿದುಕೊಳ್ಳಬೇಕೆಂದರೆ ಅಂದಿನ ಕಾಲದಲ್ಲಿ ಜನರು ಕಾಯಿಲೆಗಳು ಬಂದಾಗ ಈಗಿನಂತೆ ಮಾತ್ರೆಗಳಾಗಲಿ, ಸರ್ಜರಿ ವಿಧಾನಗಳಾಗಲಿ ಇರಲಿಲ್ಲ. ಕ್ರಿಸ್ತ ಪೂರ್ವ 4500 –1600 ಅವಧಿಯಲ್ಲಿ ಮಾನವನ ಮತ್ತು ಪ್ರಾಣಿಗಳ ಕಾಯಿಲೆಗಳಿಗೆ ಸಸ್ಯಗಳ ಔಷಧಗಳ ಬಳಕೆ ಇತ್ತು ಎನ್ನುವುದು ದಾಖಲೆಗಳು ತಿಳಿಸುತ್ತವೆ. ಕ್ರಿಸ್ತ ಪೂರ್ವ 1500–800 ಅವಧಿಯಲ್ಲಿನ ಧರ್ಮಗ್ರಂಥಗಳಾದ ಋಗ್ವೇದ, ಆಯುರ್ವೇದ ಗಳಲ್ಲಿ ದೇಶಿಯ ವೈದ್ಯ ಪದ್ಧತಿ ಬಗ್ಗೆ ಇದ್ದು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಇದಕ್ಕಿಂತ ಪೂರ್ವದಲ್ಲಿ ಅಂದರೆ ಚರಕ ಸಂಹಿತಾ (ಕ್ರಿಸ್ತ ಪೂರ್ವ 1000–800), (ಕ್ರಿಸ್ತ ಪೂರ್ವ ಶುಶ್ರೂತ ಸಂಹಿತಾ (800–700), ವಿಘಟ ಅಸ್ಟನಾಸ್ ಹೃದಯ ಇವುಗಳಲ್ಲಿ ಸಾಂಪ್ರದಾಯಿಕ ವೈದ್ಯ ಪದ್ಧತಿಯನ್ನು ಕಾಣಬಹುದು.

## ಆಧುನಿಕ ಯುಗ

ಬ್ರೀಟಿಷ್ ಭಾರತದಾದ್ಯಂತ ಕ್ರಮವಾಗಿ ಹರಡಿದ ಪರಿಣಾಮವಾಗಿ ಯುರೋಪಿನ ವೈದ್ಯಪದ್ಧತಿ ರಾಜಮಾನ್ಯತೆಯನ್ನು ಪಡೆಯಿತು. ಜನಾರೋಗ್ಯ ರಕ್ಷಣಾ ಕ್ಷೇತ್ರದಲ್ಲಿ ಪ್ರಥಮವಾಗಿ ಕಾರ್ಯನಿರತವಾದ ಈ ಪದ್ಧತಿ ದಿನೇ ದಿನೇ ಬೆಳೆಯುತ್ತ ಇಂದು ಎಲ್ಲೆಲ್ಲೆಯೂ ರೂಢಮೂಲವಾಗಿದೆ. ಪ್ರಾಚೀನ ಆಯುರ್ವೇದಕ್ಕೆ ಇದರಿಂದ ಬಹುಮಟ್ಟಿನ ಧಕ್ಕೆ ತಗುಲಿತಾದರೂ ತನ್ನ ಅಂತ:ಸತ್ವದಿಂದ ಅದು ಇಂದಿಗೂ ಉಳಿದು ತನ್ನ ವೈಶಿಷ್ಟದಿಂದ ಜನಾತಾಸೇವೆಯನ್ನು ಯಥಾಶಕ್ತಿ ಸಲ್ಲಿಸುತ್ತಿದೆ. ಪ್ರಾಚೀನ ಸಂಸ್ಕೃತಿ ವತ್ಸಲರಾದ ಮೈಸೂರು ರಾಜಮನೆತನದ ಒಡೆಯರು ಇದರ ಏಳಿಗೆಗಾಗಿ ಪ್ರಯತ್ನಗಳನ್ನು ಮಾಡಿದ್ದಾರೆ. ಆಯುರ್ವೇದಾಧ್ಯಯನವನ್ನು ವ್ಯವಸ್ಥೆಗೊಳಿಸುವ ಉದ್ದೇಶದಿಂದ ಮಹಾರಾಜ ಚಾಮರಾಜ ಒಡೆಯರು ಮೈಸೂರು ನಗರದ ಸಂಸ್ಕೃತ ಮಹಾಪಾತ ಶಾಲೆಯಲ್ಲಿ 1908 ರಲ್ಲಿ ಆಯುರ್ವೇದ ವಿಭಾಗವೊಂದನ್ನು ಸ್ಥಾಪಿಸಿದರು.1930 ರಲ್ಲಿ ಪ್ರತ್ಯೇಕವಾದ ವಿದ್ಯಾಶಾಲೆಯೊಂದು ಏರ್ಪಟ್ಟು, ಇಂದಿನವರೆಗೆ ಸಾವಿರಾರು ವಿದ್ಯಾರ್ಥಿಗಳನ್ನು ವೈದ್ಯರನ್ನಾಗಿ ಮಾಡಿದೆ. ಇತ್ತೀಚೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯುರ್ವೇದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಕೈಗೊಂಡಿದೆ. (ಕೆ.ಆರ್.ಎಸ್).

## ಆದಿಯುಗ

ಕರ್ನಾಟಕ ಉತ್ತರ ಭಾಗ ಅಶೋಕನ ರಾಜ್ಯದಲ್ಲಿದ್ದುದರಿಂದ ಆತ ಸ್ಥಾಪಿಸಿದ್ದ ಮನುಷ್ಯರ ಮತ್ತು ಪಶುಗಳ ಔಷಧಾಲಯಗಳು ಈ ಪ್ರದೇಶದಲ್ಲಿ ಇದ್ದಿರಬಹುದೆಂದು ಊಹಿಸಿ ಕರ್ನಾಟಕದ ವೈದ್ಯ ಇತಿಹಾಸವನ್ನು ಪ್ರ.ಶ.ಪೂ 260 ರಿಂದ ಪ್ರಾರಂಭಿಸಬಹುದು. ರಸಾಯನ ಮತ್ತು ಲೋಹಶಾಸ್ತ್ರಗಳ ಪಿತನೆಂಬ ಗೌರವಕ್ಕೆ ಪಾತ್ರನಾಗಿದ್ದ, ಸಾತವಾಹನರ ಕಾಲದ ಬೌದ್ಧಭಿಕ್ಷು ನಾಗಾರ್ಜುನ ಶ್ರೀ ಶೈಲ ಪರ್ವತದಲ್ಲಿ ವಾಸವಾಗಿದ್ದು ರಸಾಯನ ಪ್ರಯೋಗಗಳಲ್ಲಿ ತೊಡಗಿದ್ದ. ರತ್ನಾಕರ, ಲೋಹಶಾಸ್ತ್ರ ಮುಂತಾದ ವೈದ್ಯಗ್ರಂಥಗಳನ್ನು ಬರೆದ ಈತನನ್ನು ಕರ್ನಾಟಕದ ಪ್ರಥಮ ವೈದ್ಯ ವ್ಯಕ್ತಿ ಎನ್ನಬಹುದಾಗಿದೆ. ಸಾತವಾಹನರ ಅನಂತರ ರಾಜ್ಯ ಕಟ್ಟಿದ ಗಂಗರು ಜೈನಧರ್ಮಾವಲಂಬಿಗಳಾಗಿದ್ದರು. ಗಂಗರಸ ದುರ್ವಿನಿತ ಗುರುವಾಗಿದ್ದ ದಿಗಂಬರ ಜೈನ ಯತಿ ಪುಜ್ಯವಾದ ವೈದ್ಯಶಾಸ್ತ್ರದಲ್ಲಿಯೂ ಪಂಡಿತನಾಗಿದ್ದ. ಇವನು ಬರೆದ ಕಲ್ಯಾಣಕಾರಕ ಎಂಬ ಸಂಸ್ಕೃತ ವೈದ್ಯಗ್ರಂಥವನ್ನು ಮುಂದಿನ ಎಲ್ಲ ವಿದ್ವಾಂಸರೂ ಗೌರವದಿಂದ ಸ್ಮರಿಸಿದ್ದಾರೆ. ಈತನ ಸೋದರಳೀಯ ಸಿದ್ದ ನಾಗಾರ್ಜುನ ರಸಾಯನ ಮತ್ತು ಲೋಹವಿದ್ಯೆಗಳಲ್ಲಿ ಖ್ಯಾತಿಯನ್ನು ಪಡೆದಿದ್ದ. ರಸೇಂದ್ರ ಮಂಗಳ, ಕಕ್ಷಪುಟತಂತ್ರ, ನಾಗಾರ್ಜುನತಂತ್ರ ಮುಂತಾದವು ಈತನ ಕೃತಿಗಳು. ಕರ್ನಾಟಕ ದಕ್ಷಿಣಭಾಗದ ಬನ್ನೂರಿನಲ್ಲಿ ರಾಜ್ಯವಾಳುತ್ತಿದ್ದ ಗಂಗರಾಜ ಶ್ರೀ ಪುರುಷ : ಗಜಶಾಸ್ತ್ರವನ್ನೂ ಆತನ ಮಗನಾದ ಸೈಗೊಟ್ಟ ಶಿವಮಾರ "ಗಜಾಷ್ಟಕ" ವನ್ನೂ ಬರೆದಿದ್ದಾರೆ ಶಿವಮಾರನ ಗಜಾಷ್ಟಕ ಕನ್ನಡ ಭಾಷೆಯ ಪ್ರಥಮ ಶಾಸ್ತ್ರ ಗ್ರಂಥ. ರಾಷ್ಟ್ರಕೂಟ ರಾಜ ನೃಪತುಂಗನ ಆಸ್ಥಾನದಲ್ಲಿದ್ದ ಉಗ್ರಾದಿತ್ಯನೆಂಬ ಜೈನ ವೈದ್ಯ ಕಲ್ಯಾಣಕಾರಕ ಎಂಬ ಗ್ರಂಥವನ್ನು ಬರೆದಿದ್ದಾನೆ. ಜೈನ ಧರ್ಮದ ನಿಷ್ಠೆಯನ್ನು ಪಾಲಿಸಿರುವ ಈ ಗ್ರಂಥದಲ್ಲಿ ಮದ್ಯ, ಮಾಂಸ ಮತ್ತು ಮಧುಗಳನ್ನು ಔಷಧಾರ್ಥವಾಗಿಯೂ ವರ್ಜಿಸಿರುವುದು ಒಂದು ವೈಶಿಷ್ಟ್ಯ. ಚಾಲುಕ್ಯರಾಜ ಇಮ್ಮಡಿ ಜಯಸಿಂಹನ ಆಸ್ಥಾನದ ಬ್ರಾಹ್ಮಣ ಕವಿ ಚಾವುಂಡರಾಯ ತನ್ನ ಕನ್ನಡ ಗ್ರಂಥವಾದ "ಲೋಕೋಪಕಾರದಲ್ಲಿ" ಆಯುರ್ವೆದ ಶಾಸ್ತ್ರವನ್ನು ವಿಸ್ತಾರವಾಗಿ ವಿವರಿಸಿದ್ದಾನೆ.

ಚಂದ್ರರಾಜನ "ಮದನತಿಲಕ", ಕೀರ್ತಿವರ್ಮನ ಗೋವೈದ್ಯ, ಚಾಲುಕ್ಯ ಚಕ್ರವರ್ತಿ ಸೋಮೇಶ್ವರನ "ಮಾನಸೋಲ್ಲಾಸ" ದಲ್ಲಿನ ಆಯುರ್ವೇದದ ವಿವರಣೆ ಮತ್ತು ಜೈನ ವೈದ್ಯ ಜಗದ್ದಳ ಸೋಮನಾಥನ ಕರ್ನಾಟಕ ಕಲ್ಯಾಣಕಾರಕ, ದೇವೇಂದ್ರ ಮುನಿಯ ಬಾಲಗ್ರಹ ಚಿಕಿತ್ಸೆ, ಕೇಶವ ಪಂಡಿತನ ಸಿದ್ದಮಂತ್ರ, ಬೋಪದೇವನ ಸಿದ್ದ ಮಂತ್ರ ಪ್ರಕಾಶ, ವೈದ್ಯಶತಕ, ಹೃದಯ ದೀಪಿಕ ನಿಘಂಟು, ಯಾದವರಾಜ ಮಹಾದೇವನ ಮುಖ್ಯಮಂತ್ರಿಯಾಗಿದ್ದ ಹೇಮಾದ್ರಿಯ ಆಯುರ್ವೇದ ರಸಾಯನವೆಂಬ ಅಷ್ಟಾಂಗ ಹೃದಯದ ಮೆಲಿನ ವ್ಯಾಖ್ಯಾನ, ಅಮೃತನಂದಿನ ಅಕಾರಾದಿ ನಿಘಂಟು–ಇವು ಈ ಯುಗದ ಕೆಲವು ಮುಖ್ಯ ವೈದ್ಯಗ್ರಂಥಗಳು.

## ಮಧ್ಯಯುಗ

ವಿಜಯನಗರ ಸಾಮ್ರಾಜ್ಯದ ದಕ್ಷ ಆಡಳಿತ ಈ ಯುಗದ ಪ್ರಮುಖ ಘಟನೆ. ಈ ಅರಸರು ಹಿಂದೂ ಧರ್ಮದ ಪುನರಜ್ಜೀವನಕ್ಕಾಗಿ ಮಾಡಿದ ಕಾರ್ಯಗಳಿಂದ ಪ್ರಚೀನ ವಿದ್ಯೆಗಳು ಬದುಕಿಕೊಂಡವು. ವಿದ್ಯಾರಣ್ಯರ ತತ್ವಶಾಸ್ತ್ರ ಗ್ರಂಥಗಳು, ನಾಯಣರ ಚತುರ್ವೆದ ಭಾಷ್ಯಗಳು ಸಮಾಜದಲ್ಲಿ ಹಿಂದೂ ಧರ್ಮವನ್ನು ಸ್ಥಿರಗೊಳಿಸಿದವು. ಪರಧರ್ಮ ಸಹಿಷ್ಣುಗಳಾಗಿದ್ದ ರಾಯರು ಅವನ್ನೂ ಪೋಷಿಸಿದರು. ವಿಜಯನಗರದ ಅಧಿರಾಜನಾಗಿದ್ದ ಮುಗಳೀಪುರದ ಅರಸ ಮಂಗರಾಜ ವಿಷ ಚಿಕಿತ್ಸೆಯಲ್ಲಿ ಅತ್ಯಂತ ಪ್ರಸಿದ್ದನಾಗಿದ್ದ. ಈತನ ಖಗೇಂದ್ರ ಮಣಿದರ್ಪಣ ಕನ್ನಡ ಶಾಸ್ತ್ರ ಸಾಹಿತ್ಯದಲ್ಲಿ ಶ್ರೇಷ್ಠ ಗ್ರಂಥ. ಒಂದನೇಯ ಬುಕ್ಕರಾಯನ ಆಸ್ಥಾನ ವೈದ್ಯ ಲಕ್ಷ್ಮಣ ಪಂಡಿತನ ವೈದ್ಯರಾಜ ವಲ್ಲಭ, ಅಭಿನವ ಚಂದ್ರನ ಅಶ್ವಶಾಸ್ತ್ರ, ವಲ್ಲಭೇಂದ್ರನ ವೈದ್ಯ ಚಿಂತಾಮಣಿ, ಕಲ್ಲರಸನ ಜನವಶ್ಯವೆಂಬ ಕಾಮಶಾಸ್ತ್ರ ಗ್ರಂಥ, ಕವಿಲಿಮಗನ ಕಾಮಶಾಸ್ತ್ರದ ಪದಗಳು, ದಾಮೊದರ ಪಂಡಿತನ ಆರೋಗ್ಯ ಚಿಂತಾಮಣಿ, ಭಟ್ಟನರಹರಿಯ ವಾಗ್ಭಟ ಮಂಡನ, ಶ್ರೀಧರ ದೇವನ, ವೈದ್ಯಾಮೃತ, ಬಾಚರಸನ ಅಶ್ವವೈದ್ಯ, ಮೂರನೆಯ ಮಂಗರಸನ ಸೂಪಶಾಸ್ತ್ರ, ಸಾಳ್ವನ ವೈದ್ಯಸಾಂಗತ್ಯ, ರಘುನಾಥನ ಸೂರಿಯ, ಭೋಜನ ಕುತೂಹಲ, ಯಳಂದೂರು ಚನ್ನರಾಜನ ವೈದ್ಯಸಾರ ಸಂಗ್ರಹ, ವೀರಭದ್ರರಾಜನ, ಹಸ್ತಾಂಯುರ್ವೇದ ಟೀಕೆ, ರಾಮಚಂದ್ರ ಪಂಡಿತನ, ಅಶ್ವಶಾಸ್ತ್ರ ಪದ್ಮಣ ಪಂಡಿತನ, ಹಯಸಾಗರ ಸಮುಚ್ಚಯ, ವಿಜಯಪುರದ ಇಮ್ಮಡಿ ಆದಿಲ್ ಷಾ ಆಸ್ಥಾನದಲ್ಲಿದ್ದ ಲೋಲಂಬರಾಜನ ಸದ್ವೈದ್ಯ ಜೀವನ ಮತ್ತು ವೈದ್ಯಾವ ಸಂತಗಳು, ಕೊಟ್ಟೂರು ಬಸವರಾಜನ ಶಿವತತ್ವ ರತ್ನಾಕರದಲ್ಲಿ ಆಯುರ್ವೇದದ ವಿವರಣೆ, ಶ್ರೀಕಂಠ ನಂದಿಯ ಪರ್ಯಾಯ ಮಂಜರಿ, ಶ್ರೀಕಂಠ ಪಂಡಿತನ ವೈದ್ಯಸಾರ ಸಂಗ್ರಹ, ಶ್ರೀಪಂಡಿತನ ಯೋಗಶತಕ, ಕೃಷ್ಣಾರ್ಯನ ಸಿದ್ಧಯೋಗ ಸಮುಚ್ಚಯ, ಸಲಾದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾಧವಾಚಾರ್ಯನ ಚಿಕಿತ್ಸಾಸಾರ ಸಂಗ್ರಹ, ಗಂಗಾಧರನ ಭೇಷಜ ಕಲ್ಪ, ಕಳಲೆಯ ವೀರರಾಜನ, ಸಕಲ ವೈದ್ಯ ಸಂಹಿತಾ ಸಾರಾರ್ಣವ, ನಂಜರಾಜನ, ವೈದ್ಯಸಾರಸಂಗ್ರಹ, ತಿಮ್ಮರಾಜ ಗೌಡನ, ಸ್ತ್ರೀ ವೈದ್ಯ, ಇಮ್ಮಡಿ ಕೃಷ್ಣರಾಜ ಒಡೆಯನ, ಬಾಹಟ ಟೀಕೆ,

## ಹೋಮಿಯೋ ಪದ್ಧತಿ

ಹೋಮಿಯೋಪತಿ ಒಂದು ವೈದ್ಯ ಪದ್ಧತಿ. ಇದನ್ನು ಸ್ಯಾಮ್ಯುಯೆಲ್ ಹಾನಿಮ್ 1800 ರ ಸುಮಾರಿಗೆ ಬಳಕೆಗೆ ತಂದರು. ಇದು ನೈಸರ್ಗಿಕ ಕ್ಷಮತೆಯನ್ನು ಚೇತರಿಸಿ, ರೋಗಿಯನ್ನು ಗುಣಪಡಿಸುವ ಸಿದ್ಧಾಂತವನ್ನು ಹೊಂದಿದೆ. ಆರೋಗ್ಯವಂತರಿಗೆ ನೀಡಿ, ಅದರ ಪರಿಣಾಮವನ್ನು ವೀಕ್ಷಿಸಿ, ರೋಗಿಗಳಿಗೆ ಹೋಮಿಯೋಪಥಿ ವೈದ್ಯರು, ಹೋಮಿಯೋಪಥಿ ಔಷಧವನ್ನು, ಅದೇ ರೋಗ ಲಕ್ಷಣಗಳು ಕಂಡು ಬಂದಾಗ ನೀಡಿ, ರೋಗಿಯನ್ನು ಗುಣಪಡಿಸುತ್ತಾರೆ. ಉದಾಹರಣೆಗೆ : ಈರುಳ್ಳಿ ಕಣ್ಣಿನಿಂದ ಹಾಗೂ ಮೂಗಿನಿಂದ, ನೀರನ್ನು ಸುರಿಸುವ ಗುಣ ಹೊಂದಿದೆ. ಹಾಗಾಗಿ ಈರುಳ್ಳಿಯಿಂದ ತಯಾರಿಸಿದ ಹೋಮಿಯೋಪಥಿ ಔಷಧವನ್ನು ಕೆಲವು ತರಹದ ಶೀತವನ್ನು ಗುಣಪಡಿಸಲು ನೀಡಲಾಗುತ್ತದೆ. ಹೋಮಿಯೋಪಥಿ ವೈದ್ಯರು ಒಮ್ಮೆಗೆ ಒಂದು ರೋಗಕ್ಕೆ ಒಂದೇ ಔಷಧವನ್ನು ನೀಡುವ ಪದ್ಧತಿಯಿದೆ.

ಹೋಮಿಯೊಪತಿ ಪದ್ಧತಿಯು ವಿಶ್ವದಲ್ಲಿ ಬಳಕೆಯಲ್ಲಿರುವ ಒಂದು ವಿಭಿನ್ನ ವೈದ್ಯಕೀಯ ವಿಶೇಷತೆಯುಳ್ಳ ವೈದ್ಯ ಪದ್ಧತಿಯಾಗಿದೆ. ಭಾರತದಲ್ಲಿ ಇದು ಹೋಮಿಯೋಪತಿ ಕೇಂದ್ರೀಯ ಮಂಡಳಿ ಕಾಯಿದೆ 1973 ರ ಅಡಿಯಲ್ಲಿ ಗುರುತಿಸಿಕೊಂಡಿದೆ. ಈ ಪದ್ಧತಿಯು ಭಾರತದಲ್ಲಿ ಸಂಸ್ಕೃತಿ ಮತ್ತು ಸಂಪ್ರದಾಯ ಪದ್ದತಿಗಳ ಮಿಶ್ರಣವಾಗಿ, ಕಾಯಿದೆ ಅಡಿಯಲ್ಲಿ ಗುರುತಿಸಿಕೊಂಡು ಮಾನ್ಯತೆಯನ್ನು ಪಡೆದುಕೊಂಡಿರುವ ವೈದ್ಯ ಪದ್ಧತಿಯಾಗಿದೆ.

ಪ್ರಾಚೀನ ವೈದ್ಯ ಜ್ಞಾನ ಭಂಡಾರವು ಮುಖ್ಯವಾಗಿ ಹಿಪೋಕ್ರೇಟ್ಸ್‌ನ ಬರಹಗಳು ಎರಡು ವಿಭಿನ್ನ ಚಿಕಿತ್ಸಾ ತತ್ವಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಒಂದು ವಿರುದ್ಧವು ವಿರುದ್ಧದ ಗುಣಲಕ್ಷಣಗಳಿಂದ ವಾಸಿಯಾಗುವುದು. (Contraria Contrariis Curantur - ಲ್ಯಾಟಿನ್ ಪದ). ಈ ತತ್ವವು ತಿಳಿಸುವುದೇನೆಂದರೆ ಕಾಯಿಲೆಯನ್ನು ವಾಸಿಮಾಡಲು ವಿರುದ್ಧದ ಲಕ್ಷಣಗಳನ್ನು ಉತ್ಪಾದನೆ ಮಾಡುವುದರಿಂದ ವಾಸಿಯಾಗುವುದು (This principle teaches to treat disease by using remedies that produc opposite effect). ವಾಸಿಯಾಗುವುದು. ಇನ್ನೊಂದು ತತ್ವದ ಪ್ರಕಾರ (Similia Similibus Curentur - ಲ್ಯಾಟಿನ್ ಪದ) ಸಮಾನ ಹೋಲಿಕೆಯುಳ್ಳ ಅಂಶಗಳು ಅದರಂತೆ ಇರುವ ಸಮಾನತೆ ಅಂಶಗಳನ್ನು ಸೇರುತ್ತವೆ (Let similar things take care of simiar things).

ಹೋಮಿಯೋಪಥಿ ಮೂಲವಾಗಿ ಗ್ರೀಕ್‌ನ ಎರಡು ಶಬ್ದಗಳಿಂದ ಬಂದಿದ್ದು, ಮೊದಲನೆಯದಾಗಿ ಹೊಮಿಯೋಸ್ (homoios - ಹೋಲಿಕೆ), ಎರಡನೆಯದಾಗಿ ಪಥೋಸ್ (pathos - ಬಳಲುತ್ತಿರುವ) ಆಗಿದೆ. ಹೊಮಿಯೋಪಥಿಯಲ್ಲಿ ನೈಸರ್ಗಿಕ ಕಾಯಿಲೆಗಳನ್ನು ನೋವಿನಂತೆಯೇ ಪರಿಣಾಮಗಳನ್ನು ಉಂಟುಮಾಡುವ ವಸ್ತುಗಳೊಂದಿಗೆ ಚಿಕಿತ್ಸೆ ನೀಡಲಾಗುತ್ತದೆ.

ಹೋಮಿಯೋ ಪದ್ಧತಿಯು ಇಂದಿಗೂ ಕೂಡ ಅತ್ಯಂತ ಮಹತ್ವವನ್ನು ಪಡೆದುಕೊಂಡದೆ. ಎಷ್ಟೋ ಜನರು ಅಲೋಪಥಿಕ್ ವೈದ್ಯ ಪದ್ಧತಿಯಿಂದ ಉಪಶಮನವಾಗದೇ ಇರುವ ಕಾಯಿಲೆಗಳಿಗೆ ಹೋಮಿಯೋಪಥಿಕ್ ವೈದ್ಯ ಪದ್ಧತಿ ಮೊರೆಹೊಗಿ, ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿರುವುದನ್ನು ನಾವು ಇಂದೂ ನೋಡಿದ್ದೇವೆ. ಕೆಲವು ಕಟ್ಟು ನಿಟ್ಟಿನ ಸೂಚನೆಗಳನ್ನು ಪಡೆದುಕೊಂಡು ಈ ವೈದ್ಯ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವುದನ್ನು ಬಹುತೇಕ ಜನರಲ್ಲಿ ನಾವು ಕಾಣಬಹುದಾಗಿದೆ. ಭಾರತದಲ್ಲಿ ಹೋಮಿಯೋಪತಿಯ ಅಡಿಪಾಯವನ್ನು ಇನ್ನಷ್ಟು ಬಲವಾಗಿ ಸ್ಥಾಪಿಸಿದವರು ಬಾಬು ರಾಜೇಂದ್ರಲಾಲ್ ದತ್. ಮಹೇಂದ್ರ ಲಾಲ್ ಸರ್ಕಾರ್ ಅವರು ಅಲೋಪಥಿ ಪದ್ಧತಿಯನ್ನು ತೊರೆದು ಹೋಮಿಯೋಪತಿ ವೈದ್ಯರಾಗಿ ಪರಿವರ್ತಿಸಿಕೊಂಡರು.1966 ರಲ್ಲಿ ಬನಾರಸ್ ಹೊಮಿಯೋಪತಿ ಆಸ್ಪತ್ರೆಯ ಉದ್ಘಾಟನೆ ಜರುಗಿದೆ.

## ಯುನಾನಿ ವೈದ್ಯ ಪದ್ಧತಿ

ಯುನಾನಿ ವೈದ್ಯ ಪದ್ಧತಿಯನ್ನು ಗ್ರೀಕ್ ದೇಶದ ಮಹಾನ್ ತತ್ವಜ್ಞಾನಿ ಹಿಪ್ಪೋಕ್ರೇಟಿಸ್ (ಕ್ರಿ. ಪೂ. 460–377) ಅವಧಿಯಲ್ಲಿ ಬಳಕೆಯಾಗುತ್ತಿದ್ದ ವೈದ್ಯ ಪದ್ಧತಿಯಾಗಿದ್ದು, ಭಾರತದಲ್ಲಿ ಮುಗಲ್ ಸಾಮ್ರಾಜ್ಯದ ಅವಧಿಯಲ್ಲಿ ಮತ್ತು ದಕ್ಷಿಣ ಏಷ್ಯಾ ಮುಸ್ಲಿಂ ಸಂಸ್ಕೃತಿಯಲ್ಲಿ ಬಳಸುತ್ತಿದ್ದರು. ಹನ್ನೊಂದನೇ ಶತಮಾತನದಲ್ಲಿ ಈ ಒಂದು ಪದ್ಧತಿಯನ್ನು ಭಾರತದಲ್ಲಿ ಅರಬ್‌ರು ಮತ್ತು ಪರ್ಶಿಯನ್‌ರು ಪರಿಚಯಿಸಿದ್ದರು. ಭಾರತದಲ್ಲಿ ಈಗಲೂ ಕೂಡ ಇಂತಹ ವೈದ್ಯ ಪದ್ಧತಿಯನ್ನು ಕಾಣಬಹುದಾಗಿದೆ. ಭಾರತದಲ್ಲಿ ಬಹಳಷ್ಟು ಸಂಖ್ಯೆಯ ಶೈಕ್ಷಣಿಕ, ಸಂಶೋಧನಾತ್ಮಕ ಮತ್ತು ಆರೋಗ್ಯ ಆರೈಕೆ ಕೇಂದ್ರಗಳಿವೆ. ಇದರ ಹೆಸರೇ ಸೂಚಿಸುವಂತೆ ಇದು ಗ್ರೀಕ್ ದೇಶದ ಮೂಲದಿಂದ ಬಂದಿದೆ. ಭಾರತದಲ್ಲಿ ಅರಬ್‌ರು ಈ ಪದ್ಧತಿಯನ್ನು ಪರಿಚಯಿಸಿದ ನಂತರ ಇದರ ಬೇರುಗಳು ಆಳವಾಗಿ ಭಾರತದಲ್ಲಿ ಅಸ್ತಿತ್ವಗೊಂಡಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ದೆಹಲಿ ಸುಲ್ತಾನರು ಇವರ ಆಳ್ವಿಕೆಯಲ್ಲಿ ಈ ವೈದ್ಯ ಪದ್ಧತಿಯಲ್ಲಿ ಜ್ಞಾನವನ್ನು ಹೊಂದಿದವರನ್ನು ಆಸ್ಥಾನದ ಪಂಡಿತರನ್ನಾಗಿ, ರಾಜ್ಯದ ಉದ್ಯೋಗಿಗಳನ್ನಾಗಿ ಇಟ್ಟುಕೊಂಡಿದ್ದರು. ಭಾರತದ ಸ್ವಾತಂತ್ರ್ಯ ನಂತರವೂ ಕೂಡ ಇಂತಹ ವೈದ್ಯಪದ್ಧತಿಗೆ ರಾಷ್ಟ್ರೀಯ ಸರಕಾರದಿಂದ ಪ್ರೋತ್ಸಾಹ ನೀಡಿತ್ತು. ಭಾರತ ಸರ್ಕಾರವು ಇಂತಹ ವೈದ್ಯಪದ್ಧತಿಯನ್ನು ಸರ್ವತೋಮುಖವಾಗಿ ಬೆಳವಣಿಗೆ ಮಾಡಲು ಹಲವಾರು ಕ್ರಮಗಳನ್ನು ಕೈಗೊಂಡಿತ್ತು. ಇದರ ಅಭಿವೃದ್ಧಿಗಾಗಿ ಭಾರತದಲ್ಲಿ ಸಂಶೋಧನಾ ಕೇಂದ್ರಗಳನ್ನು, ಪ್ರಯೋಗಾಲಯಗಳನ್ನು, ಮತ್ತು ಪ್ರಮಾಣಿಕರಿಸಿದ ಕ್ರಮಗಳನ್ನು ಔಷಧಗಳನ್ನು ಉತ್ಪಾದನೆ ಮಾಡುವ ಸಲುವಾಗಿ ಮತ್ತು ಅಭ್ಯಾಸಿಸುವ ಅಥವಾ ಬಳಸುವ ಸಲುವಾಗಿ ಮಾಡಲಾಗಿದೆ.

ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಯುನಾನಿ ಔಷಧ ಸಂಸ್ಥೆ (ಎನ್‌ಆಯ್‌ಯುಎಮ್) ಅಸ್ತಿತ್ವದಲ್ಲಿದ್ದು, ಇದು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು ಭಾರತ ಸರ್ಕಾರದ ಆಯುಷ್ ಸಚಿವಾಲಯದ ಅಡಿಯಲ್ಲಿ 2004 ರಿಂದ ಕೆಲಸ ನಿರ್ವಹಿಸುತ್ತಿದೆ.ಈ ಸಂಸ್ಥೆಯು ಯುನಾನಿ ವೈದ್ಯ ಪದ್ಧತಿ ಕ್ಷೇತ್ರದಲ್ಲಿ ಸ್ನಾತ್ತಕೋತ್ತರ, ಬೋಧನೆ, ತರಬೇತಿ ಮತ್ತು ಸಂಶೋಧನೆಗಳಿಗೆ ಸಂಬಂಧಿಸಿದಂತೆ ಒಂದು ಮಾದರಿ ಸಂಸ್ಥೆಯನ್ನಾಗಿ ಅಭಿವೃದ್ಧಿಯನ್ನು ಪಡಿಸಿದೆ.

## ಆಯುರ್ವೇದ ವೈದ್ಯ ಪದ್ಧತಿ

ಭಾರತದಲ್ಲಿ ಆಯುರ್ವೇದವು ಒಂದು ಪ್ರಕಾರದ ಔಷಧದ ವ್ಯವಸ್ಥೆಯಾಗಿದ್ದು, ಇದರ ಆಳವಾದ ಇತಿಹಾಸವನ್ನು ಭಾರತದಲ್ಲಿ ಕಾಣಬಹುದಾಗಿದೆ. ಜಾಗತೀಕರಣ ಮತ್ತು ಆಧುನಿಕರಣ ಅಭ್ಯಾಸ ಪದ್ಧತಿಗಳು ಆಯುರ್ವೇದದ ಪದ್ಧತಿಗಳಿಂದ ಬಂದಂತಹ ಪರ್ಯಾಯ ಔಷಧದ ಪದ್ಧತಿಗಳೆಂದು ಹೇಳಬಹುದಾಗಿದೆ. ಭಾರತದ ಹೊರಗೆ, ಈ ಆಯುರ್ವೇದದ ಪದ್ಧತಿಗಳು ಬಳಕೆಯಲ್ಲಿದ್ದು ಸಾಮಾನ್ಯ ಸ್ವಾಸ್ಥ್ಯ ಅನ್ವಯಗಳ ಜೊತೆ ಕೂಡಿಕೊಂಡಿದ್ದು ಕೆಲವು ಪ್ರಕರಣಗಳಲ್ಲಿ ವೈದ್ಯಕೀಯ ಔಷಧಗಳಲ್ಲಿ ಇದರ ಬಳಕೆಯನ್ನು ಕಾಣಬಹುದಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಹರ್ಷಿ ಸೂಶ್ರೂತನು ಬರೆದು "ಸೂಶ್ರೂತ ಸಂಹಿತಾ" ಗ್ರಂಥವು ಆಯುರ್ವೇದದ ಹಿಂದೂ ದೇವರೆಂದು ಪರಿಗಣಿಸಲಾಗಿದೆ. ಇದು 184 ಅಧ್ಯಾಯನಗಳನ್ನು ಒಳಗೊಂಡಿದ್ದು 1,120 ಕಾಯಿಲೆಗಳ ಬಗ್ಗೆ, 700 ವೈದ್ಯಕೀಯ ಸಸಿಗಳ ಬಗ್ಗೆ, 64 ಬಗೆ ಖನಿಜ ಸಂಪನ್ಮೂಲಗಳು, 57 ಬಗೆಯ ಪ್ರಾಣಿಗಳ ಮೂಲಗಳಿಂದ ಮಾಡಿದ ಔಷಧಗಳ ಬಗ್ಗೆ ವಿವರಿಸುತ್ತದೆ. ಇದು ಶಸ್ತ್ರಚಿಕಿತ್ಸೆಯ ಬಗ್ಗೆಯೂ ಕೂಡ ತಿಳಿಸುತ್ತದೆ, ಶಸ್ತ್ರಚಿಕಿತ್ಸೆಯಲ್ಲಿ ಉಪಯೊಗಿಸುವ ವಿವಿಧ ತಂತ್ರಗಳ ಬಗ್ಗೆ ತಿಳಿಸುತ್ತದೆ. ಭಾರತದ ಹರಿದ್ವಾರದಲ್ಲಿ ಮಹರ್ಷಿ ಸುಶ್ರೂತರಿಗಾಗಿಯೇ ಮೂರ್ತಿಯನ್ನು ನಿರ್ಮಿಸಲಾಗಿದೆ. ಇವರು ಕ್ರಿ. ಪೂ. 600 ರ ಅವಧಿಯಲ್ಲಿ ಜೀವಿಸಿದ್ದರು.

ಭಾರತ ಸರ್ಕಾರವು ಆಯುಷ್ (The Ministry of Ayurveda, Yoga & Naturopathy, Unani, Siddha and Homoeopathy, abbreviated as AYUSH) ಸಚಿವಾಲಯ (ಭಾರತ ಸರ್ಕಾರ) ವನ್ನು 2014 ರಲ್ಲಿ ಪ್ರಾರಂಭಿಸಲಾಗಿದೆ ಇದು ಆಯುರ್ವೇದ ಔಷಧ ಪದ್ಧತಿಯನ್ನು ಅಭಿವೃದ್ಧಿಪಡಿಸುವ, ಪ್ರಚಾರ ಮಾಡುವ ಮತ್ತು ಆರೋಗ್ಯ ಕಾಳಜಿಯನ್ನು ಮಾಡುವ ದೃಷ್ಠಿಯಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ. ಪರ್ಯಾಯ ಔಷಧಗಳ ವ್ಯವಸ್ಥೆಯಲ್ಲಿನ ಶಿಕ್ಷಣ, ಮತ್ತು ಸಂಶೋಧನೆಗೆ ಒತ್ತು ಕೊಟ್ಟು ಅಭಿವೃದ್ಧಿಪಡಿಸುವತ್ತ ಈ ಸಚಿವಾಲಯವು ಕಾರ್ಯನಿರ್ವಹಿಸುತ್ತದೆ. ಇದರ ಮುಖ್ಯ ಕಛೇರಿ ದೇಹಲಿಯಲ್ಲಿದೆ.

## ಪ್ರಕೃತಿ ಚಿಕಿತ್ಸೆ ಅಥವಾ ನ್ಯಾಚೋರಪಥಿ ಚಿಕಿತ್ಸೆ

ಪ್ರಕೃತಿ ಚಿಕಿತ್ಸಾ ಪದ್ಧತಿಯ ಒಂದು ಸಮಗ್ರತಾ ದೃಷ್ಠಿಯ ವಿಧಾನ ಹಾಗೂ ಶಸ್ತ್ರಚಿಕಿತ್ಸೆ ಮತ್ತು ಔಷಧಗಳ ಅತ್ಯಲ್ಪ ಬಳಕೆಯನ್ನು ಪ್ರತಿಪಾದಿಸುತ್ತದೆ. ಪ್ರಕೃತಿ ಚಿಕಿತ್ಸಾ ಪದ್ಧತಿಯು ವೈದ್ಯಕೀಯ ಸಮುದಾಯದವರು ವಿವಿಧ ಪ್ರಮಾಣದಲ್ಲಿ ಒಪ್ಪಿಕೊಂಡಿರುವ ಹಲವಾರು ಚಿಕಿತ್ಸಾ ಕ್ರಮಗಳನ್ನು ಒಳಗೊಂಡಿದೆ.ಈ ಚಿಕಿತ್ಸಾ ವಿಧಾನದವರು ಕೊಡುವ ಆಹಾರ ಹಾಗೂ ಜೀವನ ಕ್ರಮಗಳ ಬಗೆಗಿನ ಮಾರ್ಗದರ್ಶನ ನೈಸರ್ಗಿಕ ಚಿಕಿತ್ಸಾ ಕ್ರಮ ಅನುಸರಿಸಿದ ವೈದ್ಯ ಪದ್ಧತಿಗಳೊಂದಿಗೆ ಬಹಳವಾಗಿ ಹೋಲಬಹುದು.ಈ ಚಿಕಿತ್ಸೆಯ ಮೂಲವು ಯುರೋಪಿನ ಪ್ರಕೃತಿ ಚಿಕಿತ್ಸಾ ಪರಿಹಾರ ಆಂದೋಲನ. ಈ ಚಿಕಿತ್ಸಾ ಪದ್ದತಿಯನ್ನು ಹಲವಾರು ದೇಶಗಳಲ್ಲಿ ಬಳಸುತ್ತಾರೆ. ಮುಖ್ಯವಾಗಿ ಅಮೆರಿಕಾ ಮತ್ತು ಕೆನಡಾ ದೇಶಗಳಲ್ಲಿ ಬಳಸುತ್ತಾರೆ.

## ಸಿದ್ಧಾ (Siddha) ಪದ್ಧತಿ

ಇದು ಸಾಂಪ್ರದಾಯಿಕ ವೈದ್ಯ ಪದ್ಧತಿಯ ಬಗೆಯಾಗಿದ್ದು, ತಮಿಳುನಾಡು ಮತ್ತು ದಕ್ಷಿಣ ಭಾರತದಲ್ಲಿ ರೂಪಗೊಂಡ ಪದ್ಧತಿಯಾಗಿದೆ. ನಂದೀಶರ್ ಎನ್ನುವವರು ಸಿದ್ಧರ ಗುರುಗಳು ಎಂದು ಪ್ರತೀತಿ ಇದ್ದು, ಇದು ಶಿವನಿಂದ ಬಳುವಳಿಯಾಗಿ ಬಂದಿದೆ ಎನ್ನುವ ಕಲ್ಪನೆ ಈ ಪ್ರದೇಶದ ಜನರಲ್ಲಿದೆ. ತಮಿಳುನಾಡಿನ ಮಾಜಿ ಮುಖ್ಯ ಮಂತ್ರಿಯಾಗಿದ್ದ ದಿವಂಗತ ಶ್ರೀ ಕರುಣಾನಿಧಿಯವರು ಆಗಿನ ಸಮಯದಲ್ಲಿ ತಮಿಳು ವಿಶ್ವ ದಿನವೆಂದು ಘೋಷಿದ ಸಮಯದಲ್ಲಿ ಪ್ರಥಮ ವಿಶ್ವ ಸಿದ್ಧಾ ದಿನವನ್ನು ತಮಿಳುನಾಡಿನಲ್ಲಿ ಏಪ್ರಿಲ್ 14, 2009 ರಂದು ಆಚರಿಸಲಾಯಿತು. ಎರಡನೆಯ ಬಾರಿ ಚೆನ್ನೈನಲ್ಲಿ ಮತ್ತು ತದನಂತರ ಕೇರಳದ ತ್ರೀವೇಂದ್ರಮ್ಮನಲ್ಲಿ ಇದರ ಆಚರಣೆಯಾಯಿತು.

ಭಾರತದಲ್ಲಿ ಸಾಂಪ್ರದಾಯಿಕ ವೈದ್ಯ ಪದ್ಧತಿಗಳ ಜ್ಞಾನ ಬಂಢಾರವನ್ನು ಸಂರಕ್ಷಿಸುವ ಸಲುವಾಗಿ 2001 ರಲ್ಲಿ Traditional Knowledge Digital Library ಯನ್ನು ಸ್ಥಾಪನೆ ಮಾಡಲಾಗಿದೆ. ಇದು ವೈಜ್ಞಾನಿಕ ಮಂಡಳಿ ಮತ್ತು ಕೈಗಾರಿಕಾ ಸಂಶೋಧನೆ Council of Scientific and Industrial Research (CSIR) ಮತ್ತು ಆಯುಷ್ ಸಚಿವಾಲಯ (MINISTRY OF AYUSH) ಇದರ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತದೆ. ಮೂಲ ಉದ್ದೇಶವೆಂದರೆ ಪ್ರಾಚೀನ ಸಾಂಪ್ರದಾಯಿಕ ಜ್ಞಾನ ಬಂಢಾರವನ್ನು ಸಂರಕ್ಷೀಸಿಡುವುದು. ಇವುಗಳನ್ನು ವಿದ್ಯುನ್ಮಾನವಾಗಿ ದಾಖಲಿಸಿ ಸಂರಕ್ಷಿಸುವುದು ಒಂದು ಉದ್ದೇಶವಾಗಿದೆ. ಅಂತರ್ಜಾಲವನ್ನು (ವೆಬ್‌ಸೈಟ್) ಹುಡಿಕಿದಾಗ ತಿಳಿದ ಮಾಹಿತಿಯೆಂದರೆ, ಆಯುರ್ವೇದ, ಯುನಾನಿ ಮತ್ತು ಸಿದ್ಧ ಔಷಧ ಪದ್ಧತಿ ಬಗೆಯಿಂದ ತಯಾರಿಸುವ ಸುಮಾರು 1200 ಸೂತ್ರಗಳ ಮಾಹಿತಿಯಿದೆ. ಆಯುರ್ವೇದದಿಂದ 500, 500 ಯುನಾನಿ, ಮತ್ತು 200 ಸಿದ್ಧಾ ಸೂತ್ರಗಳ ಲಭ್ಯವಿದೆ ಎಂದು ತಿಳಿಸಲಾಗಿದೆ. (Traditional Knowledge Digital Library, ಆಗಸ್ಟ್, 2019).

## ವಿವಿಧ ಕಾಯಿಲೆಗಳಿಗೆ ನಾಟಿ ಔಷಧ ಹಾಗೂ ಮನೆ ಮದ್ದು ಚಿಕಿತ್ಸಾ ಪದ್ಧತಿಗಳು

ಮಧುಮೇಹ, ಅಧಿಕ ರಕ್ತದೊತ್ತಡ, ಕೊಲಸ್ಟ್ರಾಲ್ ಅಥವಾ ಬೊಜ್ಜು, ಹೃದಯದ ತೊಂದರೆ, ಮಂಡಿ ನೋವು (ಅಸ್ಟ್ರೀಯೋ ಅಥ್ರೈಟಿಸ್), ಬೆನ್ನು ನೋವು/ಸೊಂಟ ನೋವು, ಭುಜದ ನೋವು/ಕುತ್ತಿಗೆ ನೋವು, ಹಿಮ್ಮಡಿ ಒಡಕು/ನೋವು, ಹೊಟ್ಟೆ ನೋವು, ಅಧಿಕ ರಕ್ತಸ್ರಾವ, ರಕ್ತಹಿನತೆ, ಮಟ್ಟಿನ ಮುಂಚಿನ ದಿನಗಳ ತೊಂದರೆಗಳು, ಚಿಕ್ಕಮಕ್ಕಳ ಶೀತ/ಗಂಟಲು ನೋವು/ಒಣಕೆಮ್ಮು ಮತ್ತು ಜ್ವರ, ಕೂದಲಿನ ಆರೋಗ್ಯ, ಚರ್ಮದ ಸಮಸ್ಯೆಗಳು, ಮುಖದ ಕಪ್ಪು ಕಲೆ, ಮೊಡವೆ ನಿವಾರಣೆ, ಸೌಂದರ್ಯ ವರ್ಧಿಸುವ, ಕಪ್ಪು ಕಲೆ ನಿವಾರಿಸುವ ಫೇಸ್ ಪ್ಯಾಕ್‌ಗಳು, ಅಜೀರ್ಣ, ಅಲರ್ಜಿ, ಅಸ್ತಮಾ, ಫ್ಯಾಟಿ ಲಿವರ್, ಗರ್ಭಕೋಶದಲ್ಲಿ ಗಡ್ಡೆ, ಬಿಳಿಸೆರಗು, ಮುಟ್ಟುನಿಲ್ಲುವ ಸಮಯ/ಮೆನೋಪಾಸ್, ಪ್ರೋಸ್ಟೇಟ್ ಎನ್‌ಲಾರ್ಜ ಮೆಂಟ್, ಮಂಡಿ ಊತ, ಆಮವಾತ, ಎಸಿಡಿಟಿ/ಗ್ಯಾಸ್ಟ್ರೈಟಿಸ್, ಮೂಲವ್ಯಾಧಿ, ಮೀನಖಂಡದ ನೋವು, ಮೂತ್ರ ಸಂಬಂಧಿ ಸಮಸ್ಯೆಗಳು, ನಿದ್ರಾಹಿನತೆ, ಪಾರ್ಶ್ವವಾಯು, ಸೋರಿಯಾಸಿಸ್, ತಲೆನೋವು, ಥೈರಾಯಿಡ್ ಸಮಸ್ಯೆ, ಮೂರ್ಛೆ ರೋಗ, ಪಿಸಿಓಡಿ ತೊಂದರೆ, ಯುರಿಕ್ ಆ್ಯಸಿಡ್, ಗಳಗ್ರಂಥಿಯ ಉರಿಯುತ, ಕಿಡ್ನಿಸ್ಟೋನಗೆ ಪರಿಹಾರ, ಕ್ರಿಮಿಬಾಧೆ, ಕಣ್ಣಿನ ಉರಿಯುತ–ನಿವಾರಣೋಪಾಯಗಳು, ಕಾಮಾಲೆ, ಐಬಿಎಸ್, ಹಲ್ಲುನೋವು, ಆಟಿಸಮ್, ಆಟೋ ಇಮ್ಯೂನ್ ಕಾಯಿಲೆ, ಬಾಯಾರಿಕೆ, ಉಸಿರಿನ ದುರ್ವಾಸನೆ, ಆಯಾಸ, ಗರ್ಭಿಣಿ ಸ್ತ್ರೀಯ ಆಹಾರ ಪದ್ಧತಿ, ಅಲ್ಸರೇಟಿವ ಕೊಲೈಟಿಸ್ ಕರುಳಿನ ಅಲ್ಸರ್, ವೆರಿಕೋಸ್ ವೇನ್ಸ್, ಸೀಯಾಟಿಕ್ ಸಮಸ್ಯೆ, ಯುರಿಕ್ ಆಮ್ಲ ನಿಯಂತ್ರಣ, ಮರೆಗುಳಿತನ, ಮೂಗಿನಲ್ಲಿ ರಕ್ತಸ್ರಾವ, ಮಲಬದ್ಧತೆ, ನಿಶ್ಯಕ್ತಿಯನ್ನು ಹಿಮ್ಮೆಟ್ಟಿಸುವುದು, ಹೆರಿಗೆಯ ನಂತರ ಹೊಟ್ಟೆ ಬೊಜ್ಜು ಕಡಿಮೆಗೊಳಿಸುವುದು, ಮಕ್ಕಳಲ್ಲಿ ಒಣ ಕೆಮ್ಮು, ತುರಿಕೆಯಿಂದ ಮುಕ್ತಿ, ತೊನ್ನು ಸಮಸ್ಯೆ, ಬಾಯಿ ಹುಣ್ಣು, ಚಿಕನ್ಯಾ ಗುನ್ಯಾ ನೋವು ಕಡಿಮೆಗೊಳಿಸುವುದು, ಕಣ್ಣಿನ ಸುತ್ತಲಿನ ಕಪ್ಪು ವರ್ತುಲಗಳು ಕಡಿಮೆ ಮಾಡುವುದು, ವಾಂತಿಯನ್ನು ಮನೆಯಲ್ಲಿಯೇ ಕಡಿಮೆಮಾಡಿಕೊಳ್ಳುವುದು, ಮಕ್ಕಳಲ್ಲಿ ಭೇದಿ ಹೀಗೆ ಸುಮಾರು 65 ಕ್ಕೂ ಹೆಚ್ಚು ದೈಹಿಕ ಆರೋಗ್ಯ ಸಮಸ್ಯೆಗಳಿಗೆ ನಾಟಿ ಔಷಧ ಮನೆ ಮದ್ದು ಎಂಬ ಪುಸ್ತಕ (2018) ದಲ್ಲಿ ಲೇಖಕರಾದ ಡಾ. ವೆಂಕಟ್ರಮಣ ಹೆಗಡೆ, ಕು. ಮಾನಸಾ ಹೆಗಡೆಯವರು ಚಿಕಿತ್ಸೆ ನೀಡುವ ಬಗ್ಗೆ ವಿವರವಾಗಿ ತಿಳಿಸಿದ್ದಾರೆ.

ವಿಶ್ವದಲ್ಲಿ ಇಂದು ಹೊಸ ಹೊಸ ವೈಜ್ಞಾನಿಕ ಅವಿಷ್ಕಾರಗಳಾಗುತ್ತಿದ್ದು, ಮಾರಣಾಂತಿಕ ಕಾಯಿಲೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುತ್ತಿದ್ದಾರೆ. ಆದರೆ, ಭಾರತದಲ್ಲಿ ವೇದಕಾಲದಿಂದಲೂ ಹಲವು ರೋಗಗಳಿಗೆ ಚಿಕಿತ್ಸೆಯನ್ನು ವಿವಿಧ ಸಸ್ಯಗಳು, ಬೇರುಗಳು ಮತ್ತು ಇತರ ವನಸ್ಪತಿ ಔಷಧಿಗಳಿಂದ ತಯಾರು ಮಾಡಿ ಕೊಡುತ್ತಿದ್ದರೂ.ಇಂತಹ ಔಷಧಗಳು ಜನರ ಜೀವವನ್ನು ಕಾಪಾಡುತ್ತಿದ್ದವು. ಆದರೆ, ಇಂದು ಆಧುನಿಕತೆಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಒಳಗಾಗಿರುವ ನಮಗೆ ಇಂತಹ ಹಳೆಯ ಚಿಕಿತ್ಸಾ ಪದ್ಧತಿಗಳು ಇದ್ದವು ಎನ್ನುವುದನ್ನು ತಿಳಿದುಕೊಳ್ಳಲು ಪಾರಂಪರಿಕ ಚಿಕಿತ್ಸಾ ಪದ್ಧತಿ ಬಗ್ಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿದ್ದಲ್ಲಿ ನಮಗೆ ಅನೇಕ ವಿಷಯಗಳು ತಿಳಿಯುತ್ತವೆ.

## ಚರ್ಚೆ

ವಸಾಹತು ಅವಧಿಯಲ್ಲಿ ಆಯ್ದ ಆರೋಗ್ಯ ಮಧ್ಯಸ್ಥಿಕೆಗಳ ಫಲಿತಾಂಶವಾಗಿ ಇಂದು ಭಾರತದಲ್ಲಿ "ಆಧುನಿಕ ವೈದ್ಯಕೀಯ/ಔಷಧ" ಅಸ್ತಿತ್ವದಲ್ಲಿದೆ. ಸ್ವಾತಂತ್ರ್ಯ ನಂತರ ಭಾರತದಲ್ಲಿ ಇಂತಹ ಪಾಶ್ಚಾತ್ಯ ಮಾದರಿ (western models) ಗಳನ್ನು ಅನುಸರಿಸುತ್ತಿದೆ. ಇಂತಹ ಪದ್ಧತಿಯು ಆಯ್ದು, ಸಂಸ್ಥೀಕರಣಗೊಂಡ ಮತ್ತು ಕೇಂದ್ರೀಕೃತ ವಿನ್ಯಾಸ ಮಾದರಿಯಾಗಿದ್ದು ಇದು ಜನರನ್ನು ಸಬ್ಜಕ್ಟೀವ್ ಮಾದರಿಯಲ್ಲಿ ನೋಡುವುದಕ್ಕಿಂತ ಆಬ್ಜಕ್ಟೀವ್ ಮಾದರಿಯಲ್ಲಿ ಪರಿಗಣಿಸುತ್ತದೆ. ಆದರೆ, ಬಹುತೇಕ ಭಾಗದ ಜನರು ಗಮನಾರ್ಹವಾಗಿ, ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಿ ಇರುವಂತಹವರು ವೈದ್ಯಕೀಯ ಅವಶ್ಯಕತೆಗಳಿಗೆ ಆಯುರ್ವೇದ, ಹೋಮಿಯೋಪತಿ, ಯುನಾನಿ, ನ್ಯಾಚೋರಪತಿ ಮತ್ತು ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಗಳನ್ನು ಅನುಸರಿಸುತ್ತಾರೆ. ರಾಷ್ಟ್ರೀಯ ಆರೋಗ್ಯ ಕರಡು ನೀತಿ (2001) ರಲ್ಲಿ ಭಾರತದ ಸಾಂಪ್ರದಾಯಿಕ ಆರೋಗ್ಯ ಪದ್ಧತಿಯ ಬಗ್ಗೆ ಪ್ರಾಮುಖ್ಯತೆಯನ್ನು ನೀಡಿಲ್ಲ. ಸಾಮಾಜಿಕ ಹೊಣೆಗಾರಿಕೆ ಕೌಟಂಬಿಕ ವೈದ್ಯ ಪದ್ಧತಿಯು ಸಾಂಪ್ರದಾಯಿಕ ಮೂಲ ಬೇರುಗಳಲ್ಲಿ ಅಡಗಿದ್ದು ಇದು ಗ್ರಾಮೀಣ ಸಮೂಹವು ಅಂಗೀಕರಿಸಿದೆ, ಇದು ಅಸ್ತಿತ್ವದಲ್ಲಿರು ನೀತಿಗಳು ಮತ್ತು ಮೌಲ್ಯಯುತ ಪದ್ಧತಿಯನ್ನು ಕಡಿಮೆಯಾಗಿಸಿದೆ (ಅಶೋಕ ವಿ. ಪಿ., ಕೆ. ವಿ. ಸೋಮಸುಂದರಮ್ ಮತ್ತು ಆರ್. ಸಿ. ಗೋಯಲ್, 2002).

ಭಾರತದಲ್ಲಿ ಇಂದಿಗೂ ಅತ್ಯಮೂಲ್ಯ ಜ್ಞಾನ ಭಂಡಾರ ಹಾಗೂ ತಲೆಮಾರಿನ ಸಂಪ್ರದಾಯಗಳನ್ನು ಜೀವಂತವಾಗಿರಿಸಿಕೊಂಡು ಬಂದಿರುವ ಸಾಂಪ್ರದಾಯಿಕ ಆರೋಗ್ಯ ಪದ್ದತಿಗಳನ್ನು ಅನುಸರಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ.ಇದರಿಂದ ತಿಳಿಯುವುದೇನೆಂದರೆ, ಶತಮಾನ ಗಳಿಂದಲೂ ಬಂದಿರುವ ಪಾರಂಪರಿಕ ವೈದ್ಯಕೀಯ ಪದ್ಧತಿಗಳ ಪ್ರಯೋಜನಗಳು ಇಂದಿಗೂ ಆಗುತ್ತವೆ ಮತ್ತು ಜನರು ಇದರಿಂದ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದರ್ಥ.

## ಉಪಸಂಹಾರ

ಭಾರತ ಸರ್ಕಾರವು ಪ್ರಾಚೀನ ಕಾಲದಿಂದಲೂ ಬಂದತಂಹ ವಿವಿಧ ವೈದ್ಯಕೀಯ ಪದ್ಧತಿಗಳ ಜ್ಞಾನ ಭಂಡಾರವನ್ನು ಸಂರಕ್ಷಿಸಲು, ಅಭಿವೃದ್ದಿಪಡಿಸಲು, ಇದರ ಶಿಕ್ಷಣವನ್ನು ಬೇರೆಯವರಿಗೆ ನೀಡಲು, ಸಂಶೋಧನೆಗೆ ಪ್ರಾಧಾನ್ಯತೆಯನ್ನು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಇಂದು ಆರೋಗ್ಯ ಕ್ಷೇತ್ರದಲ್ಲಿ ಈ ಸಾಂಪ್ರದಾಯಿಕದ ವೈದ್ಯಕೀಯ ಪದ್ಧತಿಗಳು ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದ್ದು, ಇಂದಿಗೂ ಅನೇಕ ಜನರು ಹೋಮಿಯೊಪತಿ, ಆಯುರ್ವೇದ, ನೈಸರ್ಗಿಕ ಚಿಕಿತ್ಸೆಯ ಸೌಲಭ್ಯಗಳನ್ನು ಪಡೆದುಕೊಳ್ಳುವುದರಲ್ಲಿ ಮುಂದಾಗುತ್ತಿರುವುದು ಈ ವೈದ್ಯಪದ್ಧತಿಗಳ ಪ್ರಾಮುಖ್ಯತೆಯನ್ನು ನಮಗೆ ತೋರಿಸುತ್ತದೆ. ಹಾಗಾಗಿ, ಈ ಒಂದು ಚಿಕ್ಕ ಅಧ್ಯಯನವು ವಿವಿಧ ಆನುಷಂಗಿಕ ಮೂಲಗಳಿಂದ ಮಾಹಿತಿಯನ್ನು ಆಧಾರಿಸಿ ಸಿದ್ಧಪಡಿಸಿದ ಅಧ್ಯಯನವಾಗಿದ್ದು ನಮಗೆ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

## ಆಕರ ಗ್ರಂಥಗಳು


- **ಚ. ನ. ಶಂಕರ್‌ರಾವ್ (2008–09)** : ಸಾಮಾಜಿಕ ಸಂಶೋಧನೆಯ ಕೈಪಿಡಿ, ಮಂಗಳೂರು ಜೈ ಭಾರತ್ ಪ್ರಕಾಶನ.
- **ಡಾ. ವೆಂಕಟ್ರಮಣ ಹೆಗಡೆ, ಕು. ಮಾನಸಾ ಹೆಗಡೆ (2018)** : ನಾಟಿ ಔಷಧಿ ಮನೆ ಮದ್ದು, ಬೆಂಗಳೂರು ಎಸ್. ಕೆ. ಪಬ್ಲಿಷರ್ ಮತ್ತು ಡಿಸ್ಟ್ರಿಬ್ಯೂಟರ್ಸ್.
- **ಚ. ನ. ಶಂಕರ್‌ರಾವ್ (2006)** : ಸಮಾಜಶಾಸ್ತ್ರದ ಮೂಲತತ್ವಗಳು ಹಾಗೂ ಸಾಮಾಜಿಕ ಸಂಸ್ಥೆಗಳು ಮತ್ತು ಸಮೂಹಗಳ ಅಧ್ಯಯನ, ಮಂಗಳೂರು ಜೈ ಭಾರತ್ ಪ್ರಕಾಶನ.
- http://vikaspedia.in/health/ayush/unani
- http://ccrum.res.in/#
- http://ccrum.res.in/ViewData/Multiple?mid=1610
- http://nium.in/
- http://vikaspedia.in/health/ayush/unani#section-10
- http://ccrum.res.in/ViewData/Multiple?mid=1610
- https://www.nhp.gov.in/homeopathy_mty
- https://en.wikipedia.org/wiki/Ayurveda
- http://ayush.gov.in/
- https://en.wikipedia.org/wiki/Siddha_medicine
- https://en.wikipedia.org/wiki/Traditional_ Knowledge_ Digital_Library
- http://www.tkdl.res.in/tkdl/langdefault/common/Home.asp


■■


ವಿದ್ಯಾನಿಧಿ ಪ್ರಕಾಶನ® ಶ್ರೀ ಶಿವಕುಮಾರ ಏಜನ್ಸಿ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ-582 101

ದೂರವಾಣಿ : 08372–237527, 277527

e-mail : vidyanidhiprakashana@gmail.com. www. vidyanidhionline.com



ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಪ್ರೌಢಶಿಕ್ಷಣದ ಮಹತ್ವ ಮತ್ತು ತಿರುವುಗಳು

✍ **ಡಾ. ವರುಣ್ ಎಂ.,** ಸಹಾಯಕ ಪ್ರಾಧ್ಯಾಪಕರು, ಶಂಕರಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ.

ಶಿಕ್ಷಣ ಮಾನವನ ಬದುಕನ್ನು ಅರ್ಥಪೂರ್ಣಗೊಳಿಸುವ ಒಂದು ಬಹು ಆಯಾಮಯುಕ್ತ ಮಾಧ್ಯಮ. ಸಮಗ್ರ ಶಿಕ್ಷಣ ಪ್ರಕ್ರಿಯೆಯ ಪ್ರಮುಖ ಧ್ಯೇಯ ವ್ಯಕ್ತಿಯ ವರ್ತನೆಯನ್ನು ಅಪೇಕ್ಷಿತ ರೀತಿಯಲ್ಲಿ ಮಾರ್ಪಡಿಸಿ, ಓರ್ವ ಸುಸಂಸ್ಕೃತ ನಾಗರಿಕನನ್ನು ಸೃಷ್ಟಿಸುವುದಾಗಿದೆ. ನಮ್ಮ ಒಟ್ಟು ಶಿಕ್ಷಣ ವ್ಯವಸ್ಥೆಯ ವಿವಿಧ ಹಂತಗಳಾದ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಹಂತಗಳು ಅಂತಿಮವಾಗಿ ಬುದ್ಧಿವಂತಿಕೆ, ಹೃದಯವಂತಿಕೆ ಹಾಗೂ ಕೌಶಲ್ಯವನ್ನು ಮೈಗೂಡಿಸಿಕೊಂಡಿರುವ ಒಬ್ಬ ಉತ್ತಮ ಪ್ರಜೆಯನ್ನು ನಿರ್ಮಿಸುವ ಮಹತ್ತರ ಕಾರ್ಯವನ್ನು ಮಾಡುತ್ತವೆ. ಈ ನಿಟ್ಟಿನಲ್ಲಿ ನಮ್ಮ ಪ್ರೌಢಶಿಕ್ಷಣ ಹಂತವೂ ಕೂಡ ಬದಲಾಗುತ್ತಿರುವ ಸಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಸೃಜಿಸುವ ಸಾಮರ್ಥ್ಯವನ್ನು ಹೊಂದಿದೆ.

ಪ್ರೌಢ ಶಿಕ್ಷಣವು ಪ್ರಸ್ತುತ ಮತ್ತು ಭವಿಷ್ಯದ ಶಿಕ್ಷಣಕ್ಕೆ ಬುನಾದಿಯಾಗಿದೆ. ಪ್ರೌಢ ಶಿಕ್ಷಣವು ಪಾಥಮಿಕ ಶಿಕ್ಷಣ ಹಾಗೂ ಉನ್ನತ ಶಿಕ್ಷಣವನ್ನು ಜೋಡಿಸುವ ಕೊಂಡಿಯಾದ್ದರಿಂದ ಸರ್ಕಾರ ಕೂಡ ಪ್ರೌಢಶಿಕ್ಷಣದ ಸುಧಾರಣೆಗೆ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಪ್ರಸ್ತುತ ಪ್ರೌಢಶಾಲಾ ಹಂತದ ಸ್ವರೂಪವನ್ನು ಗಮನಿಸುವುದಾದರೆ ಭಾರತದ ಬೇರೆ–ಬೇರೆ ರಾಜ್ಯಗಳ ನಡುವೆ ಈ ಹಂತದ ಶಿಕ್ಷಣದಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ ಕೆಲವು ರಾಜ್ಯಗಳಲ್ಲಿ 6, 7 ಮತ್ತು 8ನೇ ತರಗತಿಗಳನ್ನು ಹೈಯರ್ ಪ್ರೈಮರಿ ಶಾಲೆಗಳೆಂದು, 9 ಮತ್ತು 10ನೇ ತರಗತಿಗಳನ್ನು ಲೋಯರ್ ಸೆಕೆಂಡರಿ ಶಾಲೆಗಳೆಂದು ಹಾಗೂ 11 ಮತ್ತು 12ನೆಯ ತರಗತಿಗಳನ್ನು ಹೈಯರ್ ಸೆಕೆಂಡರಿ ಶಾಲೆಗಳೆಂದು ಪರಿಗಣಿಸಲಾಗಿದೆ. ಆದರೆ ನಮ್ಮ ರಾಜ್ಯದಲ್ಲಿ 8, 9 ಮತ್ತು 10ನೇ ತರಗತಿಗಳನ್ನು ಪ್ರೌಢ ಶಾಲೆಗಳೆಂದು ಪರಿಗಣಿಸಲಾಗಿದೆ. ಪ್ರಸ್ತುತ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನಿರ್ದೇಶನದಂತೆ ದೇಶದಾದ್ಯಂತ ಏಕರೂಪದ ಶೈಕ್ಷಣಿಕ ಹಂತಗಳನ್ನು ಜಾರಿಗೊಳಿಸಬೇಕೆಂಬ ದೃಷ್ಟಿಯಿಂದ ರಾಜ್ಯದಲ್ಲಿ 9 ಮತ್ತು 10 ನೇ ತರಗತಿಗಳನ್ನು ಲೋಯರ್ ಸೆಕೆಂಡರಿ ಶಾಲೆಗಳು ಹಾಗೂ 11 ಮತ್ತು 12ನೇ ತರಗತಿಗಳನ್ನು ಹೈಯರ್ ಸೆಕೆಂಡರಿ ಶಾಲೆಗಳೆಂದು ಬದಲಾವಣೆ ಮಾಡಲು ಹೊರಟಿದೆ. ಪರಿಣಾಮ ಕೆಲವು ಕಡೆ ಈ ಮಾದರಿಯ ಶಾಲೆಗಳು ಅಸ್ತಿತ್ವಕ್ಕೆ ಬಂದಿದ್ದು, ಕಾರ್ಯ ನಿರ್ವಹಿಸುತ್ತಿವೆ.

ಶಿಕ್ಷಣ ವ್ಯವಸ್ಥೆಯಲ್ಲಿ ಪ್ರೌಢಶಿಕ್ಷಣ ಹಂತವು ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಇದು ಕೌಮಾರಾವಸ್ಥೆಯ ಕಾಲ. ನೂರಾರು ಕನಸುಗಳು, ಭ್ರಮೆಗಳು, ಆದರ್ಶಗಳು ರೂಪುತಾಳುವ, ಗರಿಗಟ್ಟಿಗೊಳ್ಳುವ ಘಟ್ಟವಿದು. ಇವುಗಳನ್ನು ತಿದ್ದುವ, ಅನಪೇಕ್ಷಣೀಯವಾದುದನ್ನು ನಿವಾರಿಸುವ, ಉತ್ತಮವಾದವುಗಳನ್ನು ಗಟ್ಟಿಗೊಳಿಸಬೇಕಾದ ಕೆಲಸವನ್ನು ಈ ಹಂತದ ಶಿಕ್ಷಣ ಮಾಡಬೇಕಾಗುತ್ತದೆ. ವಾಸ್ತವದಲ್ಲಿ **'ಪ್ರಸಾಮಾನ್ಯ ಪ್ರೌಢರ ನಿರ್ಮಾಣ'**ವೇ ಪ್ರೌಢಶಿಕ್ಷಣದ ಗುರಿಯಾಗಿದ್ದು, ಪ್ರತಿಯೊಂದು ದೇಶವೂ ತನ್ನ ರಾಜಕೀಯ–ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕತೆಯ ಹಿನ್ನೆಲೆಯಲ್ಲಿ ಈ ಗುರಿಗೆ ಒತ್ತಾಸೆಯಾಗಿ ನಿಲ್ಲುವಂತಹ ಯೋಜನೆಗಳನ್ನು ರೂಪಿಸುತ್ತದೆ; ಹಾಗೆಯೇ ಬದಲಾಗುತ್ತಿರುವ ಸಮುದಾಯದ ಬೇಡಿಕೆಗಳಿಗೆ ಅನುಗುಣವಾಗಿ ಪ್ರೌಢಶಿಕ್ಷಣದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುತ್ತಿದೆ. ಪ್ರೌಢಶಿಕ್ಷಣದಲ್ಲಿ 'ಅತ್ತ ಬಾಲಕನೂ ಅಲ್ಲದ, ಇತ್ತ ಪ್ರೌಢನೂ ಅಲ್ಲದ ಕಿಶೋರನೇ ಗ್ರಾಹಕ'ನಾಗಿರುವುದರಿಂದ, ಇವನನ್ನೇ ಕೇಂದ್ರವಾಗಿಟ್ಟುಕೊಂಡು ಶೈಕ್ಷಣಿಕ ಪರಿಸರ, ಪಠ್ಯಕ್ರಮ, ಸಮಾಜ, ಆಡಳಿತ ವ್ಯವಸ್ಥೆ, ಮೌಲ್ಯಮಾಪನ ಇವೆಲ್ಲವುಗಳೂ ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ನಿರ್ಮಾಣವಾಗುತ್ತಿವೆ.

ಭಾರತದ ಭವಿಷ್ಯ ತರಗತಿಗಳಲ್ಲಿ ರೂಪುಗೊಳ್ಳುತ್ತಿರುವುದರಿಂದ ಕೇವಲ 'ಪಾಂಡಿತ್ಯ ಗಳಿಕೆಯೇ ಪ್ರೌಢ ಶಿಕ್ಷಣದ ಗುರಿ'ಯಾಗದಂತೆ ನೋಡಿಕೊಳ್ಳುವುದು ಶಿಕ್ಷಕರ ಹೊಣೆಗಾರಿಕೆಯಾಗಿದೆ. **'ಜೀವನಕ್ಕಾಗಿಯೇ ಪ್ರೌಢಶಿಕ್ಷಣ'** ಹಾಗೂ **'ಸಮುದಾಯದಲ್ಲಿ ಬದುಕುವ ಬಹುಮುಖ ಕೌಶಲ್ಯವನ್ನು ವಿದ್ಯಾರ್ಥಿಗಳು ಸಂಪಾದಿಸುವಂತೆ ಮಾಡುವುದು'** ಪ್ರೌಢ ಶಿಕ್ಷಣದ ಪ್ರಮುಖ ಗುರಿಯಾಗಬೇಕು. ಈ ದಿಶೆಯಲ್ಲಿ ಸರ್ಕಾರಗಳು ಗಂಭೀರವಾಗಿ ಪ್ರಯತ್ನಿಸಬೇಕಾದದ್ದು ಇಂದಿನ ತುರ್ತು ಅಗತ್ಯಗಳಲ್ಲಿ ಒಂದಾಗಿದೆ. ಸಮಾಜದ ನಿರೀಕ್ಷೆಗಳು ಬದಲಾದಂತೆಲ್ಲ ಹೊಸ ಸಮಸ್ಯೆಗಳು ಉದ್ಭವಿಸುವುದರಿಂದ ಶಿಕ್ಷಣದ ಪ್ರತಿ ಹಂತದ ಗುರಿಗಳನ್ನು ಕಾಲಕಾಲಕ್ಕೆ ಪುನರ್ ಪರಿಶೀಲಿಸಿ, ಯುಕ್ತ ಬದಲಾವಣೆಗಳೊಂದಿಗೆ ಪುನರ್ ನಿರೂಪಿಸುವುದು ಸರ್ಕಾರದ ಕರ್ತವ್ಯವಾಗಿದೆ. ಈ ಪುನರ್ ನಿರೂಪಣೆಯು ದೇಶದ ನೈಜ ಅವಶ್ಯಕತೆಗಳು ಮತ್ತು ಆದರ್ಶಗಳನ್ನು ಗಮನದಲ್ಲಿ ಇಟ್ಟುಕೊಂಡು ರೂಪುಗೊಳ್ಳುವುದು ಸಮಂಜಸವೆನಿಸುತ್ತದೆ.

## ಪ್ರೌಢಶಿಕ್ಷಣದ ಮಹತ್ವ

ಕಳೆದ ಎರಡು ದಶಕಗಳಲ್ಲಿ ಪ್ರೌಢ ಶಿಕ್ಷಣ ವ್ಯವಸ್ಥೆಯು ಅಗಾಧವಾಗಿ ಬೆಳೆಯುತ್ತಿದೆ ಮತ್ತು ವೇಗವಾಗಿ ಬದಲಾಗುತ್ತಿದೆ. ಯಾವುದೇ ಜಾತಿ, ಮತ, ವಾಸಸ್ಥಳ, ಲಿಂಗಭೇದವಿಲ್ಲದೆ ಎಲ್ಲರಿಗೂ ಸಮಾನ ಗುಣಮಟ್ಟದ ಪ್ರೌಢಶಿಕ್ಷಣವನ್ನು ಪಡೆಯಲು ಅವಕಾಶ ಕಲ್ಪಿಸಿರುವುದು ಇದರ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ. ರಾಷ್ಟ್ರೀಯ ಗುರಿಗಳ ಸಾಧನೆಗೆ ಅಗತ್ಯವಾದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಯನ್ನು ಉಂಟುಮಾಡುವಲ್ಲಿ ಪ್ರೌಢ ಶಿಕ್ಷಣವೇ ಒಂದು ಶಕ್ತಿಶಾಲಿಯಾದ ಸಾಧನ. ರಾಷ್ಟ್ರದ ಏಕತೆಯನ್ನು ಸಾಧಿಸಲು, ಸಾರ್ವಭೌಮತ್ವವನ್ನು ಎತ್ತಿಹಿಡಿಯಲು ಆಧುನೀಕರಣ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಪ್ರೌಢ ಶಿಕ್ಷಣವೇ ಮುಖ್ಯ ಹಂತವಾಗಿರುವುದರಿಂದ ಈ ನೆಲೆಯಲ್ಲಿಯೇ ಅದರ ಪ್ರಾಮುಖ್ಯತೆಯನ್ನು ಪರಿಶೀಲಿಸಬೇಕಾಗುತ್ತದೆ.

1. ಶಿಸ್ತು, ಸಂಯಮ, ಸಹಕಾರ, ಮಾನವೀಯತೆ, ತ್ಯಾಗ, ಸಾಮಾಜಿಕ ಸಂವೇದನೆ ಇವುಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದರಲ್ಲಿ ಪ್ರೌಢಶಿಕ್ಷಣದ ಪಾತ್ರ ಮಹತ್ತರವಾದುದು.
2. ರಾಷ್ಟ್ರಪ್ರೇಮ, ರಾಷ್ಟ್ರದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಧನೆಗಳ ಬಗೆಗೆ ಮೆಚ್ಚುಗೆ, ರಾಷ್ಟ್ರದ ದೌರ್ಬಲ್ಯಗಳ ನಿವಾರಣೆಗೆ ಶಕ್ತ್ಯಾನುಸಾರ ಶ್ರಮಿಸುವ ಮನೋಭಾವ ಈ ಗುಣಗಳ ಬೆಳವಣಿಗೆಗೆ ಪ್ರೌಢಶಿಕ್ಷಣವೇ ಆಧಾರ.
3. ವಿದ್ಯಾರ್ಥಿಗಳ ಜಾತಿ, ಮತ, ಭಾಷೆ, ಪ್ರದೇಶ, ಲಿಂಗಭೇದಗಳಿಲ್ಲದ 'ವೈವಿಧ್ಯತೆಯಲ್ಲಿ ಏಕತೆ' ಎಂಬ ತತ್ವದ ಹಿನ್ನಲೆಯಲ್ಲಿ ಪ್ರಜಾಸತ್ತಾತ್ಮಕ ನಾಗರಿಕತ್ವದ ಗುಣದ ಬೆಳವಣಿಗೆಗೆ ಪ್ರೌಢಶಿಕ್ಷಣದ ಅಗತ್ಯತೆ ಇದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

4. ವಿದ್ಯಾರ್ಥಿಗಳಲ್ಲಿ ವಸ್ತುನಿಷ್ಠ ಹಾಗೂ ನಿಷ್ಪಕ್ಷಪಾತ ದೃಷ್ಟಿಕೋನ ಬೆಳೆಯಲು; ತೀಕ್ಷ್ಣ ಚಿಂತನೆ, ಕಷ್ಟ ಸಹಿಷ್ಣುತೆ, ಕೌಶಲ್ಯ ನಿರ್ಧಾರ ತೆಗೆದುಕೊಳ್ಳುವಿಕೆ, ತಂಡ ಮನೋಭಾವ, ಚಾಕಚಕ್ಯತೆ ಮುಂತಾದ ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ಪ್ರೌಢಶಿಕ್ಷಣವು ಅವಶ್ಯಕ.
5. ದೇಶದ ಅಭಿವೃದ್ಧಿ ಅಲ್ಲಿನ ಉತ್ಪಾದನೆಯನ್ನು ಅವಲಂಬಿಸಿರುತ್ತದೆ. ಈ ಉತ್ಪಾದನೆಗೆ ಕಾರಣಕರ್ತರಾಗುವ ನಾಗರಿಕರ ಸೃಷ್ಟಿಯು ಪ್ರೌಢಶಿಕ್ಷಣದ ಗುರಿಯಾಗಿದೆ.
6. ಪರಿವರ್ತನೆಗೊಳ್ಳುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳುವ, ಹೊಸ ವಿಚಾರಗಳಿಗೆ ಸ್ಪಂದಿಸುವ ಹೊಣೆಗಾರಯುತ ನಾಗರಿಕರ ರೂಪಿಸುವಿಕೆಗೆ ಪ್ರೌಢಶಿಕ್ಷಣ ಬೇಕು.
7. ವಿದ್ಯಾರ್ಥಿಯ ವ್ಯಕ್ತಿತ್ವವು ದೈಹಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕ ಮೊದಲಾದ ಆಯಾಮಗಳನ್ನು ಹೊಂದಿದ್ದು, ಇವುಗಳ ಸರ್ವತೋಮುಖ ಬೆಳವಣಿಗೆಗೆ ಪ್ರೌಢಶಿಕ್ಷಣ ಅವಶ್ಯಕ.
8. 'ಸಮರ್ಥ ಪ್ರಜೆ ಸಮರ್ಥ ನಾಡನ್ನು ಕಟ್ಟಬಲ್ಲ' ಎಂಬ ಮಾತಿಗೆ ಅನುಗುಣವಾಗಿ ವಿದ್ಯಾರ್ಥಿಗಳಲ್ಲಿ ವೃತ್ತಿ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸಲು ಪ್ರೌಢಶಿಕ್ಷಣದ ಅವಶ್ಯಕತೆ ದಟ್ಟವಾಗಿದೆ.
9. ದೇಶ ವಿಭಜಿಸಲು ಯತ್ನಿಸುವ ದುಷ್ಪಶಕ್ತಿಗಳನ್ನು ದಮನಗೊಳಿಸುವ, ಮೌಢ್ಯಾಚರಣೆಗಳನ್ನು ವಿರೋದಿಸುವ ಹೊಣೆಗಾರಯುತ ವ್ಯಕ್ತಿಯ ಸೃಷ್ಟಿ ಪ್ರೌಢಶಿಕ್ಷಣದ ಗುರಿಯಾಗಿದೆ.
10. ಭಾರತವು ಸಾಂಸ್ಕೃತಿಕ ವೈವಿಧ್ಯತಾ ತತ್ವದಲ್ಲಿ ನಂಬಿಕೆ ಯಿರಿಸಿರುವುದರಿಂದ ಸರ್ವಧರ್ಮ ಸಹಿಷ್ಣುತೆ, ರಾಷ್ಟ್ರಪ್ರೇಮ, ಸಮಾಜಪ್ರೇಮ, ರಾಷ್ಟ್ರದ ಸಮಗ್ರತೆಯಲ್ಲಿ ನಂಬಿಕೆಯಿರಿಸಿರುವ ವಿದ್ಯಾರ್ಥಿಗಳ ರೂಪಿಸುವಿಕೆಗೆ ಪ್ರೌಢಶಿಕ್ಷಣವೇ ಸೂಕ್ತವಾದ ಹಂತ.
11. ಸ್ವಯಂಶಿಸ್ತು, ಪೌರತ್ವದ ಕರ್ತವ್ಯಗಳು, ಸಾಮಾಜಿಕ ಪ್ರಜ್ಞೆಯಿಂದ ಇತರರೊಂದಿಗೆ ಗೌರವಾನ್ವಿತವಾಗಿ ಹಾಗೂ ಸೌಹಾರ್ದತೆಯಿಂದ ಜೀವಿಸುವ ಶಕ್ತಿಯನ್ನು ವ್ಯಕ್ತಿಯಲ್ಲಿ ಬೆಳೆಸಿಕೊಳ್ಳುವಂತೆ ಮಾಡುವುದೇ ಪ್ರೌಢಶಿಕ್ಷಣದ ಉದ್ದೇಶ.
12. ಮಕ್ಕಳಲ್ಲಿ ಅಡಗಿರುವ ಸುಪ್ತಶಕ್ತಿಯನ್ನು ಕಂಡುಹಿಡಿದು, ಪ್ರಚೋದಿಸಿ, ಹೊರಬರುವಂತೆ ಮಾಡಿ ಅವರಲ್ಲಿ ರಚನಾತ್ಮಕವಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳುವಂತೆ ಮಾಡುವುದೇ ಪ್ರೌಢಶಿಕ್ಷಣದ ಗುರಿ.
13. ಭವಿಷ್ಯದಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಔದ್ಯಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ನಾಯಕತ್ವದ ಜವಬ್ದಾರಿಗಳನ್ನು ವಹಿಸಿಕೊಳ್ಳುವಂತೆ ತರಬೇತಿಯನ್ನು ನೀಡುವ ಮಹತ್ತರ ಕಾರ್ಯವನ್ನು ಪ್ರೌಢಶಿಕ್ಷಣವು ನಿರ್ವಹಿಸುತ್ತದೆ.
14. ಸನ್ನಿವೇಶಗಳನ್ನು ಆಧರಿಸಿ ತೀರ್ಮಾನ ಕೈಗೊಳ್ಳುವ, ವಸ್ತುನಿಷ್ಠವಾಗಿ ಆಲೋಚಿಸುವ, ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವ ಮೊದಲಾದ ಸಾಮರ್ಥ್ಯಗಳ ಬೆಳವಣಿಗೆಗೆ ಪ್ರೌಢಶಿಕ್ಷಣವು ಅವಶ್ಯಕ.

ಹೀಗೆ ಪ್ರೌಢಶಿಕ್ಷಣದ ಮಹತ್ವವನ್ನು ಅಪರಿಮಿತ ನೆಲೆಯಲ್ಲಿ ವ್ಯಾಖ್ಯಾನಿಸಲು ಸಾಧ್ಯವಿದೆಯಾದರೂ ವಿದ್ಯಾರ್ಥಿಗಳ ವ್ಯಕ್ತಿತ್ವದ ವಿಕಾಸದ ದೃಷ್ಟಿಯಿಂದ ಅದು ಮಹತ್ತರ ಪಾತ್ರವನ್ನು ವಹಿಸುತ್ತದೆ. ಸಮಾಜದಲ್ಲಿ ವ್ಯಕ್ತಿಯು ಅತ್ಯಂತ ಪ್ರಾಮಾಣಿಕವಾಗಿ ಬದುಕುವ ಕಲೆಯನ್ನು ಕರಗತ ಮಾಡಿಕೊಳ್ಳುವುದರಲ್ಲಿ ಬದ್ಧನಾಗಿರುವಂತೆ ನೋಡಿಕೊಳ್ಳುವುದೇ ಪ್ರೌಢಶಿಕ್ಷಣದ ಮಹತ್ವವಾಗಿದೆ.

## ಪ್ರೌಢಶಿಕ್ಷಣದ ತಿರುವುಗಳು

ಬದಲಾವಣೆ ಜಗದ ನಿಯಮ. ಸಮಾಜದ ಆಕಾಂಕ್ಷೆಗಳು ಬದಲಾದಂತೆಲ್ಲಾ ಸಂಕೀರ್ಣ ಸಮಸ್ಯೆಗಳು ಉದ್ಭವವಾಗುತ್ತವೆ. ಇದಕ್ಕೆ ಅನುಗುಣವಾಗಿ ಪ್ರೌಢಶಿಕ್ಷಣವನ್ನು ಆಗಾಗ್ಗೆ ಪುನರ್ ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ. ಸಮಾಜ ವಿಕಸಿಸಬೇಕಾದ ದಿಕ್ಕು ಮತ್ತು ಅದು ರೂಪುಪಡೆಯುವ ಅಂತಿಮ ಸ್ವರೂಪವನ್ನು ಗಣನೆಗೆ ತೆಗೆದುಕೊಂಡು ಪ್ರೌಢಶಿಕ್ಷಣ ವ್ಯವಸ್ಥೆಗೆ ತಿರುವನ್ನು ನೀಡಬೇಕಾಗುತ್ತದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಹಾಗೂ ಅದರ ಪರಿಣಾಮದಿಂದ ಉದ್ಭವಿಸಬಹುದಾದ ಶಿಕ್ಷಣದ ವ್ಯಾಪಾರೀಕರಣ, ಸ್ಪರ್ಧಾತ್ಮಕತೆ ಇವೆಲ್ಲವುಗಳ ನಡುವಿನಿಂದಲೇ ಪ್ರೌಢಶಿಕ್ಷಣವು ಹೊಸಹಾದಿಯನ್ನು, ಗಮನಾರ್ಹ ಬದಲಾವಣೆ ಹೊಂದುವ ಸವಾಲನ್ನು ಎದುರಿಸಬೇಕಾಗಿದೆ. ಅವುಗಳನ್ನು ಅವಲೋಕಿಸುವುದಾದರೆ,

1. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಆಧರಿಸಿರುವ ಜಗತ್ತಿನಲ್ಲಿ ಜನತೆಯ ಏಳ್ಗೆ, ಹಿತ ಮತ್ತು ರಕ್ಷಣೆಯ ಮಟ್ಟವನ್ನು ಅವಲಂಭಿಸಿಯೇ ಪ್ರೌಢಶಿಕ್ಷಣ ಬದಲಾಗಬೇಕಿದೆ.
2. ಉತ್ಪಾದಕ ಪ್ರಕ್ರಿಯೆಗಳಾದ ಔದ್ಯಮೀಕರಣ, ಬೇಸಾಯ ಮೊದಲಾದ ಕ್ಷೇತ್ರಗಳಿಗೆ ವಿಜ್ಞಾನವನ್ನು ಅನ್ವಯಿಸುವ ಬೌದ್ಧಿಕ ಸಾಮರ್ಥ್ಯವನ್ನು ಪ್ರೌಢಶಿಕ್ಷಣದ ಹಂತದಲ್ಲೇ ನೀಡಬೇಕಾಗಿರುವುದರಿಂದ ಈ ನೆಲೆಯಲ್ಲಿ ಪ್ರೌಢಶಿಕ್ಷಣವು ತನ್ನ ಕಾರ್ಯಾನುಭವದಲ್ಲಿ ತಿರುವನ್ನು ಹೊಂದಬೇಕಾಗಿದೆ.
3. ಬಹುಸಂಸ್ಕೃತಿಯ ಸಮಾಜದಲ್ಲಿ ಯುಕ್ತ ಹೊಂದಾಣಿಕೆಯನ್ನು ಮಾಡಿಕೊಂಡು ಉತ್ತಮವಾಗಿ ಜೀವಿಸುವ ಸಾಮರ್ಥ್ಯದ ಬೆಳವಣಿಗೆಗೆ ಪ್ರೌಢಶಿಕ್ಷಣವು ಒತ್ತಾಸೆಯಾಗಿ ನಿಲ್ಲಬೇಕಿದೆ.
4. ದೇಶದ ಉತ್ಪಾದನಾ ಪ್ರಕ್ರಿಯೆಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುವ ಮನೋಭಾವವನ್ನು ಪ್ರೌಢ ಹಂತದಲ್ಲೇ ಬೆಳೆಸುವ ಕಾರ್ಯದಲ್ಲಿ ಪ್ರೌಢಶಿಕ್ಷಣ ಸಫಲವಾಗಬೇಕಿದೆ.
5. ಪ್ರೌಢಶಿಕ್ಷಣವು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮತ್ತು ರಾಷ್ಟ್ರೀಯ ಏಕತೆಯನ್ನು ಬಲಪಡಿಸುವ ಸಾಧನವಾಗಿ ರೂಪುಗೊಳ್ಳಬೇಕಿದೆ.
6. ಪ್ರೌಢಶಿಕ್ಷಣದ ಮೂಲಕ ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸಿಕೊಂಡು ಸನ್ನಿವೇಶಾನುಸಾರ ಅನುಷ್ಠಾನಕ್ಕೆ ತರುವ ಬದ್ಧತೆಯುನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಂತೆ ಪ್ರೌಢಶಿಕ್ಷಣವನ್ನು ಪುನರ್ ರೂಪಿಸಬೇಕಿದೆ.
7. ಸಮಾಜ, ಶಿಕ್ಷಕ, ಪಠ್ಯಕ್ರಮ, ಮೌಲ್ಯಮಾಪನ ಮೊದಲಾದ ಸಂಗತಿಗಳು ವಿದ್ಯಾರ್ಥಿ ಕೇಂದ್ರಿತವಾಗಿ ರೂಪುಗೊಳ್ಳಬೇಕಾದ ಅನಿವಾರ್ಯತೆ ಪ್ರಸ್ತುತ ಸೃಷ್ಟಿಯಾಗಿದೆ. ಈ ದಿಕ್ಕಿನಲ್ಲಿ ಪ್ರೌಢಶಿಕ್ಷಣ ತಿರುವು ಪಡೆಯಬೇಕಿದೆ.
8. ಪ್ರೌಢಶಿಕ್ಷಣದಲ್ಲಿ ಶಿಕ್ಷಕರಿಂದ ವಿದ್ಯಾರ್ಥಿಗಳಿಗೆ ಜ್ಞಾನ ಮಾತ್ರ ವರ್ಗಾವಣೆಯಾಗಬಾರದು. ಬದಲಾಗಿ ಸ್ವತಃ ವಿದ್ಯಾರ್ಥಿಗಳೇ ಜ್ಞಾನವನ್ನು ಆವಿಷ್ಕರಿಸುವ, ಜ್ಞಾನವನ್ನು ಪರಿಷ್ಕರಿಸುವ ಮತ್ತು ಸ್ವಯಂ ಅನುಭವದ ಮೂಲಕ ವಿಚಾರಗಳನ್ನು ಅರ್ಥೈಸಿಕೊಳ್ಳುವ ನೆಲೆಯಲ್ಲಿ ಪ್ರೌಢಶಿಕ್ಷಣವು ತಿರುವನ್ನು ಪಡೆಯಬೇಕಿದೆ.
9. ಆಧುನಿಕ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಪ್ರೌಢಶಿಕ್ಷಣದ ಹಂತಗಳಲ್ಲಿ ಬಳಸಿಕೊಳ್ಳುವ ವಾತಾವರಣವನ್ನು ಸೃಷ್ಟಿಸಬೇಕಿದೆ. ಇದಕ್ಕೆ ಸರ್ಕಾರಗಳು ಕೂಡ ಬಹು ಕಾಳಜಿಯಿಂದ, ಬದ್ಧತೆಯಿಂದ ಶಾಲೆಗಳಿಗೆ ತಾಂತ್ರಿಕ ಉಪಕರಣಗಳನ್ನು, ಮೂಲಭೂತ

– 17ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾರತದ ಆರ್ಥಿಕತೆಯಲ್ಲಿ ನಿರುದ್ಯೋಗಿ ಯುವಜನರ ಸಮಸ್ಯೆ ಹಾಗೂ ಸವಾಲುಗಳು

✍ **ಡಾ. ಶರಣಪ್ಪ ಸೈದಾಪೂರ,** ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಚಿತ್ತಾಪೂರ, ಜಿ. ಕಲಬುರಗಿ (ಕರ್ನಾಟಕ),

## ಪೀಠಿಕೆ

ದೇಶದ ಉಜ್ವಲ ಭವಿಷ್ಯ ರೂಪಿಸುವ ಆಶಾಕಿರಣ ಯುವ ಜನಾಂಗದ ಮೇಲೆ ಇದೆ ಎನ್ನುವುದರಲ್ಲಿ ರಾಮ ಮನೋಹರ ಲೋಹಿಯಾ ಮತ್ತು ಡಾ.ಬಾಬಾ ಸಾಹೇಬ ಅವರುಗಳಿಗೆ ಅಪಾರವಾದ ವಿಶ್ವಾಸವಿತ್ತು. ಯುವಧ್ವನಿ ನಿರ್ಲಿಪ್ತವಾಗಿ ಬಿಟ್ಟರೆ ಆ ದೇಶಕ್ಕೆ ಭವಿಷ್ಯವಿಲ್ಲ ಎಂದೇ ಅರ್ಥ. ದೇಶದಲ್ಲಿ ಜನಸಂಖ್ಯೆಯ ಅರ್ಧದಷ್ಟು ಪಾಲು ಯುವ ಸಮೂಹದ್ದೇ ಆಗಿದೆ. ಯುವಕರು ದೇಶದ ಆರ್ಥಿಕ ವ್ಯವಸ್ಥೆಯ ಭವಿಷ್ಯ ಅಷ್ಟೇ ಅಲ್ಲ ಭದ್ರ ಬುನಾದಿ ಕೂಡ ಆಗಿದ್ದಾರೆ. ದೇಶದಲ್ಲಿ ಪರಿವರ್ತನೆ ತರುವ ಸಾಧನವಾಗಿದ್ದಾರೆ. ದೇಶದ ಭವಿಷ್ಯವನ್ನು ಬರೆಯುವ ಹಾಗೂ ಬದಲಾಯಿಸುವ ಶಕ್ತಿ ಇಂದಿನ ಯುವಕರಿಗಿದೆ. ಆದ್ದರಿಂದ ಸಶಕ್ತ ಭಾರತದ ಬೆನ್ನೆಲುಬು ಇಲ್ಲಿನ ಯುವಕರಾಗಿದ್ದಾರೆ. ವಿಶ್ವದ ಯಾವುದೇ ದೇಶದ ಅಭಿವೃದ್ಧಿಯಲ್ಲಿ ಯುವ ಶಕ್ತಿಯ ಕೊಡುಗೆ ಅಪಾರವಾದದ್ದು ಮತ್ತು ಅನುಪಮವಾದದ್ದು. ರಾಷ್ಟ್ರದ ಅಭಿವೃದ್ಧಿಯಲ್ಲಿ ಯುವಜನರ ಸದ್ಬಳಕೆ ಅಥವಾ ದುರ್ಬಳಕೆ ಮಾಡುವುದರ ಮೇಲೆ ದೇಶದ ಭವಿಷ್ಯ ಅಡಗಿದೆ. ಯುಜನರನ್ನು ಸದ್ಬಳಕೆ ಮಾಡಿಕೊಂಡ ದೇಶಗಳು ಅಭಿವೃದ್ಧಿ ಸಾಧಿಸಿದರೆ ದುರ್ಬಳಕೆ ಮಾಡಿಕೊಂಡ ದೇಶಗಳು ದಿವಾಳಿಯಾಗುತ್ತವೆ. ಯುವ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿದಾಗ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧಿಸಲು ಸಾಧ್ಯ.

ಒಂದು ದೇಶದ ದುಡಿಮೆ ಮಾಡಬಲ್ಲ ಎಲ್ಲಾ ಪ್ರಜೆಗಳೂ ಒಂದಿಲ್ಲೊಂದು ಉತ್ಪದನಾ ಚಟುವಟಿಕೆಯಲ್ಲಿ ತೊಡಗಿದಾಗ ಮಾತ್ರ ಸುಭದ್ರವಾದ ಘನತೆ–ಗೌರವದ ಬದುಕನ್ನು ನಡೆಸಲು ಸಾಧ್ಯವಾಗುವುದು. ಅಂಥ ದೇಶ ಅಥವಾ ಪ್ರದೇಶ ಮಾತ್ರವೆ ಆರೋಗ್ಯಕರವಾಗಿರಬಲ್ಲದು. ಉತ್ಪಾದನೆಯಲ್ಲಿ ತೊಡಗುವ ಮೂಲಕ ಯುವಕರು ತಮ್ಮ ಜೀವನವನ್ನು ಸ್ವಾವಲಂಬಿಯಾಗಿ ಕಟ್ಟಿಕೊಳ್ಳುವುದಲ್ಲದೆ ದೇಶದ ಅಭಿವೃದ್ಧಿಯಲ್ಲಿ ಸಕಾರಾತ್ಮಕ ಪಾತ್ರ ವಹಿಸಲು ಸಾಧ್ಯವಾಗುತ್ತದೆ. ಇದನ್ನೇ ನಾವು ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದು ಎಂದು ಕರೆಯಬಹುದು. ಆದರೆ ಇಂದು ನಮ್ಮ ದೇಶದ ಮತ್ತು ರಾಜ್ಯದ ಪರಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿದೆ. ದುಡಿಯುವ ಹಂಬಲ, ಅರ್ಹತೆ ಹಾಗೂ ಸಾಮರ್ಥ್ಯವಿದ್ದರೂ ಸಹ ಕೋಟ್ಯಾಂತರ ಯುವಜನತೆ ಸೂಕ್ತ ಉದ್ಯೋಗ ಸಿಗದೆ ಒದ್ದಾಡುವ ಪರಸ್ಥಿತಿ ನಿರ್ಮಾಣವಾಗಿದೆ.

ಇಂದು ಭಾರತದ ಜನಸಂಖ್ಯೆಯುಲ್ಲಿ ಶೇ.65 ರಷ್ಟು ಯುವಜನರಿದ್ದಾರೆ. ಇದರಲ್ಲಿ ಅರ್ಧದಷ್ಟು ಯುವಜನರಿಗೆ ಅವರ ಸಾಮರ್ಥ್ಯ ಮತ್ತು ನಿರೀಕ್ಷೆಗೆ ತಕ್ಕ ಉದ್ಯೋಗವಿಲ್ಲ. ಇಷ್ಟೊಂದು ದೊಡ್ಡ ಸಂಖ್ಯೆಯ ಯುವ ಜನರನ್ನು ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳದೆ ದೇಶದ ಅಭಿವೃದ್ಧಿ ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಆಳುವ ಸರಕಾರಗಳು ಮರೆತಿವೆ. ದೊಡ್ಡ ದೊಡ್ಡ ಬಂಡವಾಳಿಗರಿಗೆ ಮತ್ತಷ್ಟು ಮಗದಷ್ಟು ಸಾಲ ನೀಡುವುದು, ತೆರಿಗೆ ವಿನಾಯ್ತಿಗಳನ್ನು ನೀಡುವುದು ಮತ್ತು ಹೆಚ್ಚಿನ ಹೂಡಿಕೆಗೆ ಬೇಕಾದ ನೀತಿಗಳನ್ನು ಮಾಡುವುದರಿಂದ ದೇಶ ಅಭಿವೃದ್ಧಿಯಗುತ್ತದೆ ಎಂಬ ಭ್ರಮೆಯನ್ನು ಮೂಡಿಸಲು ಪ್ರಯತ್ನಿಸುತ್ತಿರುವ ಸರಕಾರಗಳು, ಯುವಜನರ ಪರವಾದ ಯಾವುದೇ ನೀತಿಗಳನ್ನು ತರುತ್ತಿಲ್ಲ. ಇದರಿಂದಾಗಿ ಇಂದು ಭಾರತದಲ್ಲಿ ನಿರುದ್ಯೋಗವೆಂಬುದು ಒಂದು ಆರ್ಥಿಕ ಸಮಸ್ಯೆ ಅಷ್ಟೇ ಅಲ್ಲ, ಅದು ಒಂದು ಪೇಡಂಭೂತವಾಗಿ ಕೂಡ ಭಾರತವನ್ನು ಕಾಡುತ್ತಿದೆ.ಹೀಗಾಗಿಯೇ ಭಾರತದಲ್ಲಿ ನಿರುದ್ಯೋಗವೆಂಬುದು 'ನಂಬರ್ ಒನ್' ಸಮಸ್ಯೆಯಾಗಿ ಬೆಳೆದು ನಿಂತಿದೆ.

ಉದ್ಯೋಗ ಸೃಷ್ಟಿ ಎಂಬುದು ಸಾಮಾಜಿಕ ಮತ್ತು ಆರ್ಥಿಕ ಅಗತ್ಯ. ಹಾಗೆಯೇ ಅದು ರಾಜಕೀಯ ಸಾಧನವು ಕೂಡ. ಭಾರತದ ಆರ್ಥಿಕ ಪ್ರಗತಿ ಮತ್ತು ಅದರಿಂದ ಆದ ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಪ್ರಗತಿಯಲ್ಲಿನ ಹಿನ್ನಡೆಯ ಪರಿಣಾಮದಿಂದಾದ ಉದ್ಯೋಗದ ನಷ್ಟದ ಬಗ್ಗೆ ಭಾರಿ ಚರ್ಚೆ ಈ ದೇಶದಲ್ಲಿ ನಡೆದಿದೆ. ಉದ್ಯೋಗದ ಲಭ್ಯತೆ ಅಥವಾ ನಿರುದ್ಯೋಗವು ಒಂದು ಅರ್ಥವ್ಯವಸ್ಥೆಯ ಆರೋಗ್ಯ ಸ್ಥಿತಿಗೆ ಕನ್ನಡಿ ಹಿಡಿಯುತ್ತದೆ. ಹಾಗಾಗೀಯೇ ನಿರುದ್ಯೋಗದ ಪ್ರಮಾಣವು ನಿಯಂತ್ರಣ ಮೀರದಂತೆ ನೋಡಿಕೊಳ್ಳುವುದು ಯಾವುದೇ ಸರಕಾರಕ್ಕೆ ಅಥವಾ ಆಡಳಿತ ಪಕ್ಷಕ್ಕೆ ಅತ್ಯಂತ ಮುಖ್ಯ. ಆದರೆ, ಭಾರತದಲ್ಲಿ ಆರ್ಥಿಕ ಪ್ರಗತಿಯ ಹಿನ್ನಡೆ ಮತ್ತು ನಿರುದ್ಯೋಗ ಹೆಚ್ಚಳದ ಸಮಸ್ಯೆಯನ್ನು ಮರೆಮಾಚುವಲ್ಲಿ ಪ್ರಭುತ್ವ ಯಶಸ್ವಿಯಾದ ನಿದರ್ಶನಗಳು ಇವೆ. ಆರ್ಥಿಕ ಪ್ರಗತಿಯಲ್ಲಿನ ಹಿನ್ನಡೆ ಅಥವಾ ನಿರುದ್ಯೋಗಕ್ಕಿಂತ ಮುಖ್ಯವಾದ ವಿಚಾರಗಳು ಇವೆ ಎಂದು ಮತದಾರರಿಗೆ ಮನವರಿಕೆ ಮಾಡುವ ಚಾತುರ್ಯದಿಂದ ಇದು ಸಾಧ್ಯವಾಗಿದೆ.

ಕಳೆದ ಎರಡು ದಶಕಗಳ ಬಹುಪಾಲು ವರ್ಷಗಳಲ್ಲಿ ಭಾರತದ ನಿರುದ್ಯೋಗ ಪ್ರಮಾಣವು ಶೇ.4.5ರ ಆಸುಪಾಸಿನಲ್ಲಿತು. ಆದರೆ, 2006ರ ಬಳಿಕ ಉದ್ಯೋಗ ಸೃಷ್ಟಿಯು ಚುರುಕು ಪಡೆದುಕೊಂಡಿತ್ತು. 2012ರಲ್ಲಿ ನಿರುದ್ಯೋಗ ಪ್ರಮಾಣವು ಶೇ.3.8ರಷ್ಟು ಮಾತ್ರ ಇತ್ತು. ಆದರೆ, ನಂತರದ ವರ್ಷಗಳಲ್ಲಿ ಉದ್ಯೋಗ ಸೃಷ್ಟಿಯು ಮಂದವಾಗಿತ್ತು. 2014ರಲ್ಲಿ ನಿರುದ್ಯೋಗ ಪ್ರಮಾಣವು ಶೇ.4.9ಕ್ಕೆ ಏರಿತು(ಕೇಂದ್ರದ ಕಾರ್ಮಿಕ ಖಾತೆಯ ಮಾಹಿತಿ). ಭಾರತದ ಜನಸಂಖ್ಯೆಯ ಏರಿಕೆಯ ಪ್ರಮಾಣವು ಶೇ.1ಕ್ಕಿಂತ ಸ್ವಲ್ಪ ಹೆಚ್ಚಿದೆ. 2018ಕ್ಕೆ ಹೋಲಿಸಿದರೆ 2019ರಲ್ಲಿ ಜನಸಂಖ್ಯೆಯ ಏರಿಕೆ ಪ್ರಮಾಣವು ಶೇ.1.02ರಷ್ಟು.ಅಂದರೆ,ಆ ವರ್ಷ ಜನಸಂಖ್ಯೆಯು 1.38 ಕೋಟಿಯಷ್ಟು ಹೆಚ್ಚಿತ್ತು. ಪ್ರತಿ ವರ್ಷ ಹುಟ್ಟುವ ಮಕ್ಕಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿ ಆಗಬೇಕಾದ ಅನಿವಾರ್ಯತೆ ಇದೆ. 2019ರ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆಯು(ಎನ್‌ಎಸ್‌ಎಸ್‌ಒ) ನಿರುದ್ಯೋಗಕ್ಕೆ ಸಂಬಂಧಿಸಿದ ವರದಿ ಪ್ರಕಾರ ನಿರುದ್ಯೋಗ ಪ್ರಮಾಣವು ಶೇ.6.1ಕ್ಕೆ ಏರಿಕೆ ಆಗಿತ್ತು. ಇದು 1972–73ರ ನಂತರದಲ್ಲಿ ದೇಶ ಕಂಡ ಅತಿ ಹೆಚ್ಚಿನ ನಿರುದ್ಯೋಗ ಪ್ರಮಾಣ. 19–29ರ ವಯೋಮಾನದವರಲ್ಲಿಯೇ ಅತಿ ಹೆಚ್ಚು ನಿರುದ್ಯೋಗಿಗಳು ಎಂಬ ವಿಚಾರವು ಸಮಸ್ಯೆಯ ತೀವ್ರತೆ ಇನ್ನೂ ಹೆಚ್ಚು ಎಂಬುದನ್ನು ಬಿಂಬಿಸಿತು. 2020 ಮಾರ್ಚ್‌ನಿಂದ ಕೋವಿಡ್–19 ಎಂಬ ಸಾಂಕ್ರಾಮಿಕ ರೋಗ ತೀವ್ರ ಹರಡುವಿಕೆಯಿಂದಾಗಿ ಉದ್ಯೋಗ ನಷ್ಟದ ಪ್ರಮಾಣವು ಏಪ್ರಿಲ್‌ನಲ್ಲಿ ಶೇ.23.52ರಷ್ಟಕ್ಕೆ ಏರಿಕೆಯಾಗಿತ್ತು. ಕೋವಿಡ್ ಮತ್ತು ಲಾಕ್‌ಡೌನ್ ಜನರ ಉದ್ಯೋಗ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮತ್ತು ಜೀವನೋಪಾಯಗಳನ್ನು ಕಸಿದಿದೆ. ಇತ್ತೀಚಿನ ದಿನಗಳಲ್ಲಿ, ಪುನಶ್ಚೇತನದ ಸುಳಿವುಗಳು ಅಲ್ಲಲ್ಲಿ ಕಂಡಿವೆ. ಆದರೆ, ಉದ್ಯೋಗ ಸೃಷ್ಟಿಯು ಕೋವಿಡ್‌ನ ಹಿಂದಿನ ಸ್ಥಿತಿಗೆ ಮರಳಬಹುದು ಎಂಬ ಭರವಸೆ ಅಲ್ಲಿ ಕಾಣಿಸುತ್ತಿಲ್ಲ.

2012ರಿಂದ ಆರಂಭಗೊಂಡ ಉತ್ಪದನಾ ಕ್ಷೇತ್ರದಲ್ಲಿನ ಕುಸಿತ ಇನ್ನೂ ಚೇತರಿಕೆ ಕಂಡಿಲ್ಲ. ಆರ್ಥಿಕತೆಯ ಇತರೆ ಕ್ಷೇತ್ರಗಳಲ್ಲಿ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಿ, ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸದಿದ್ದರೆ ಉತ್ಪದಾನಾ ಕ್ಷೇತ್ರಗಳ ಚೇತರಿಕೆ ಕಾಣುವುದಿಲ್ಲ ಎಂಬ ಸರಳ ಸತ್ಯ ಸರಕಾರಗಳಿಗೆ ಗೊತ್ತಿಲ್ಲವೆಂದಲ್ಲ. ಆದರೆ ಉದ್ಯೋಗ ರಹಿತ ಅಭಿವೃದ್ಧಿ (ಜಾಬ್‌ಲೆಸ್ ಗ್ರೋಥ್) ಎಂಬ ಕಾರ್ಪೋರೇಟ್ ಬೆಳವಣಿಗೆಯನ್ನು ತಮ್ಮ ಸಾಧನೆಯಂತೆ ಬಿಂಬಿಸಿಕೊಳ್ಳುತ್ತಿರುವ ಆಳುವ ಸರಕಾರಗಳಿಗೆ ಕಾರ್ಪೋರೇಟ್ ಸಾಲ ಮರುಪಾವತಿ ಮಾಡಿಸುವುದು ಸೇರಿದಂತೆ ಹೂಡಿಕೆಗೆ ತಕ್ಕ ಉದ್ಯೋಗ ಸೃಷ್ಟಿಸುವಂತೆ ಉದ್ಯಮಿಗಳಿಗೆ ತಾಕೀತು ಮಾಡುವ ಇಚ್ಚಾಶಕ್ತಿ ಇಲ್ಲದಿರುವುದು ಇಂದಿನ ನಿರುದ್ಯೋಗ ಸಮಸ್ಯೆಯ ಮೂಲ ಕಾರಣವಾಗಿದೆ. ಜೊತೆಗೆ 1990 ರಿಂದಲೇ ಆಳುವ ಸರಕಾರಗಳು ತಮ್ಮ ಹೊಸ ಆರ್ಥಿಕ ನೀತಿಗಳ ಮೂಲಕ ಕೃಷಿಯನ್ನು ಮತ್ತು ಗ್ರಾಮೀಣ ಆರ್ಥಿಕತೆಯನ್ನು ಶಿಥಿಲಗೊಳಿಸಿರುವುದು, ಸಣ್ಣ, ಅತಿ ಸಣ್ಣ ಮತ್ತು ಮದ್ಯಮ ಪ್ರಮಾಣದ ಕೈಗಾರಿಕೆಗಳ ನಿರ್ಲಕ್ಷ, ಪ್ರಸ್ತುತ ಸಂದರ್ಭಕ್ಕನುಗುಣವಾಗಿ ಅಪ್‌ಡೇಟ್ ಆಗದ ಶಿಕ್ಷಣ ಪದ್ಧತಿ ಮತ್ತು 2017ರಲ್ಲಿ ಮುಂದಾಲೋಚನೆ ಇಲ್ಲದೆ ಮಾಡಿದ ನೋಟು ಅಮಾನ್ಯೀಕರಣ ಹಾಗೂ ಇತ್ತೀಚೆಗಿನ ಜಿಎಸ್‌ಟಿ ತೆರಿಗೆ ನೀತಿ– ಇವೆಲ್ಲವೂ ನಿರುದ್ಯೋಗದ ಕಾಳ್ಗಿಚ್ಚಿನೊಳಗೆ ಭಾರತವನ್ನು ದೂಡಿವೆ.

## ನಿರುದ್ಯೋಗಿ ಯುವಜನರ ಪರಿಕಲ್ಪನೆ

ವಿಶ್ವದಾದ್ಯಂತ ಯುವಜನರ ನಡುವೆ ನಿರುದ್ಯೋಗ ವಿಪತ್ಕಾರೀ ಪ್ರಮಾಣದಲ್ಲಿ ಹೆಚ್ಚುತ್ತಿರುವುದು ಎಚ್ಚರಿಕೆ ಗಂಟೆ ಬಾರಿಸಿದೆ. ವಿಶ್ವಸಂಸ್ಥೆ, ಐಎಲ್‌ಓ ದಂತಹ ಅಂತರರಾಷ್ಟ್ರೀಯ ಸಂಸ್ಥೆಗಳ ಗಮನ ಸೆಳೆದಿದೆ. ಐಎಲ್‌ಓ ಪ್ರಕಟಿಸಿದ 'ಯುವಜನರ ಜಾಗತಿಕ ಉದ್ಯೋಗ ಪ್ರವೃತ್ತಿಗಳು 2004,ರ ಪ್ರಕಾರ ಯುವಜನರು (ವಿಶ್ವಸಂಸ್ಥೆಯ ನಿರ್ವಚನೆಯ ಪ್ರಕಾರ 15 ರಿಂದ 24 ವರ್ಷದ ವರೆಗಿನವರು) ಒಟ್ಟು ದುಡಿಯುವ ವಯಸ್ಸಿನ ಜನಸಂಖ್ಯೆಯಲ್ಲಿ ಶೇಕಡಾ 25 ರಷ್ಟು ಮಾತ್ರವಿದ್ದರೆ, 1993 ರಿಂದ 2003ರ ನಡುವೆ ನಿರುದ್ಯೋಗಿ ಯುವಜನರ ಸಂಖ್ಯೆ 8.8 ಕೋಟಿಗೆ ತಲುಪಿತು. ಅದು 2003ರಲ್ಲಿ ವಿಶ್ವದ ಒಟ್ಟು ನಿರುದ್ಯೋಗಿಗಳಲ್ಲಿ ಶೇಕಡಾ 47 ಇದ್ದು, 2003ರಲ್ಲಿ ಒಟ್ಟು ನಿರುದ್ಯೋಗಿಗಳ ಸಂಖ್ಯೆ 18.6 ಕೋಟಿ, 2012ರಲ್ಲಿ ಯುವಜನರ ಸಂಖ್ಯೆ 20 ಕೋಟಿಗೂ ಮೀರಿತು. 2003ರಲ್ಲಿ ಜಾಗತಿಕ ಯುವಜನರ ನಿರುದ್ಯೋಗ ಪ್ರಮಾಣ ಜಾಗತಿಕ ವಯಸ್ಕ ನಿರುದ್ಯೋಗದ ದರದ 3.5 ಪಟ್ಟು ಇತ್ತು. 1993–2003ರ ದಶಕದಾದ್ಯಂತವೂ ಇದು ಮೂರು ಪಟ್ಟಿಗಿಂತ ಹೆಚ್ಚಿನ ಪ್ರಮಾಣದಲ್ಲೇ ಇತ್ತು. 1993ರಲ್ಲಿ ಯುವಜನರ ನಡುವಿನ ನಿರುದ್ಯೋಗ ದರ ಶೇಕಡಾ 11.7 ಇದ್ದದ್ದು ಅಂದಿನಿಂದ ಇಂದಿನವರೆಗೂ ಹೆಚ್ಚುತ್ತಾ ಬಂದಿದೆ. 2003ರಲ್ಲಿ ಇದು ಶೇಕಡಾ 14.4 ದಾಖಲೆ ಮಟ್ಟವನ್ನು ತಲುಪಿತು, ಅಂದರೆ 8.8 ಕೋಟಿಯಷ್ಟಾಯಿತು. ಇದು 1993 ಕ್ಕಿಂತ ಶೇಕಡಾ 26.8 ಹೆಚ್ಚು ಎಂದು ವಿಶ್ಲೇಷಿಸಬಹುದಾಗಿದೆ.

ಯುವಜನರ ಸಂಖ್ಯೆಯಲ್ಲಿ ಏರಿಕೆ ಮತ್ತು ಉದ್ಯೋಗದಲ್ಲಿ ಇಳಿಕೆಗಳ ನಡುವಿನ ಅಂತರ ಹೇಗೆ ಗಂಭೀರ ಸ್ವರೂಪದಲ್ಲಿ ಹೆಚ್ಚುತಾ ಬಂದಿದೆ ಎಂಬುದು ವರದಿಯಿಂದ ಸ್ಪಷ್ಟವಾಗುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಯುವಜನರ ಸಂಖ್ಯೆ ಶೇಕಡಾ 10.05 ರ ದರದಲ್ಲಿ ಹೆಚ್ಚಿದರೆ ಯುವಜನರ ಉದ್ಯೋಗ ಕೇವಲ ಶೇಕಡಾ 0.2 ದರದಲ್ಲಿ ಹೆಚ್ಚಿದೆ. ಕೆಲವು ಪ್ರದೇಶಗಳಲ್ಲಂತೂ ಪರಸ್ಥಿತಿ ನಿಜಕ್ಕೂ ಆಘಾತಕಾರಿಯಾಗಿದೆ. ಸಂಕ್ರಮಣ ಸ್ಥಿತಿಯಲ್ಲಿದೆ ಎನ್ನಲಾಗುವ ಆರ್ಥಿಕ ವ್ಯವಸ್ಥೆಗಳಲ್ಲಿ ಯುವಜನರ ಸಂಖ್ಯೆ ಶೇಕಡಾ 10.01 ಕ್ಕೆ ಏರಿದರೆ, ಯುವಜನ ಉದ್ಯೋಗ ಶೇಕಡಾ 11.7 ಇಳಿಕೆ ಕಂಡಿತು. ಪೂರ್ವ ಏಷ್ಯಾದಲ್ಲಿ ಯುವಜನ ಸಂಖ್ಯೆ ಶೇಕಡಾ 11.3 ರಷ್ಟು ಇಳಿಯಿತು. ಅದೇ ವೇಳೆ ಯುವಜನರ ಉದ್ಯೋಗ ಪ್ರಮಾಣ ಶೇಕಡಾ 18 ಕ್ಕೆ ಇಳಿಯಿತು. ದಕ್ಷಿಣ ಏಷ್ಯಾದಲ್ಲಿ ಯುವಜನರ ಸಂಖ್ಯೆ ಶೇಕಡಾ 21.9 ಕ್ಕೆ ಹೆಚ್ಚಿತು.ಆದರೆ ಉದ್ಯೋಗ ಪ್ರಮಾಣ ಶೇಕಡ 11.6 ರಷ್ಟು ಮಾತ್ರ ಹೆಚ್ಚಿತು. ಅಂತಿಮವಾಗಿ ಲ್ಯಾಟಿನ್ ಅಮೆರಿಕಾ ಮತ್ತು ಕೆರೀಬಿಯನ್ ಪ್ರದೇಶದಲ್ಲಿ 2003ರಲ್ಲಿ ಯುವಜನರ ಸಂಖ್ಯೆ 1993 ರಲ್ಲಿ ಶೇಕಡಾ 11.1 ಕ್ಕಿಂತ ಹೆಚ್ಚಿತು.

ವಿಶ್ವದಲ್ಲಿ ಈ ಅಗಾಧ ಪ್ರಮಾಣದ ಯುವಜನರ ನಿರುದ್ಯೋಗ ಸಮಸ್ಯೆ ಬಗ್ಗೆ ಐ.ಎಲ್.ಓ. ಮಹಾ ನಿರ್ದೇಶಕರು ಹೀಗೆ ಹೇಳಿದ್ದಾರೆ. "ಅದು ಯುವ ಪೀಳಿಗೆಯ ನಡುವಿನ ಬಡತನದ ವಿಷವರ್ತುಲವನ್ನು ಶಾಶ್ವತಗೊಳಿಸುತ್ತದೆ ಮತ್ತು ಅಪರಾಧ, ಬಾಲಾಪರಾಧ, ದುರುಪಯೋಗ ಹಾಗೂ ರಾಜಕೀಯ ಉಗ್ರಗಾಮಿತನ ಅದರೊಟ್ಟಿಗೇ ಬರುತ್ತದೆ. ಕೆಲವು ದೇಶಗಳಲ್ಲಿ ಯುವಜನರ ಮುಂದಿದ್ದ ಸಂಬಳದ ಉದ್ಯೋಗವೆಂದರೆ ಆಂತರಿಕ ಯುದ್ಧದಲ್ಲಿ ತೊಡಗಿದ್ದ ವಿವಿಧ ಸಶಸ್ತ್ರ ಗುಂಪುಗಳನ್ನು ಸೇರಿಕೊಳ್ಳುವುದು ಎಂದರ್ಥ".

ಯುವಜನರ ನಿರುದ್ಯೋಗದ ಈ ಸ್ಫೋಟಕ ಅಂಶವನ್ನು ಆರ್ಥಿಕ ಮತ್ತು ಸಾಮಾಜಿಕ ಅಂಶಗಳೊಂದಿಗೆ ಒಟ್ಟಾಗಿ ಗ್ರಹಿಸಬೇಕು. ಒಬ್ಬ ವಿದ್ಯಾವಂತ ಯುವಕ / ಯುವತಿಗೆ ನಿರುದ್ಯೋಗವೆಂದರೆ ಅವರನ್ನು ಸಮಾಜದಿಂದ 'ಹೊರಗಿಡುವುದು',ರಾಷ್ಟ್ರ ಕಟ್ಟುವ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಮಾಡುವುದು ರಾಷ್ಟ್ರ ಕೆಡುವ ಕಾರ್ಯದಲ್ಲಿ ಪಾಲ್ಗೊಳುವಂತೆ ಪ್ರೇರೆಪಿಸುವುದು, ಈ ವಿಚ್ಛಿದ್ರಕಾರಿ ಕೆಲಸಗಳಿಗೆ ಕಾಣಿಕೆ ನೀಡುವಂತೆ ಪ್ರೇರೇಪಿಸುವುದು ಎಂಬಂತಾಗಿದೆ. ಇಂಥ ಪರಿಸ್ಥಿತಿಯಲ್ಲಿ ಯುವಜನರು ದೈಹಿಕವಾಗಿ ಮತ್ತು ಮಾನಸಿಕವಾಗಿ ಬಲಿಯಾಗುವ ಸಾಧ್ಯತೆ ಹೆಚ್ಚು. ಯುವಜನರನ್ನು ಯುಕ್ತ ರೀತಿಯಲ್ಲಿ ಕಾರ್ಯಮಗ್ನರಾಗಿಸುವುದು ಹಾಗೂ ಸಾಮಾಜಿಕ ಪ್ರಗತಿಯಲ್ಲಿ ಆಸಕ್ತಿ ಹೊಂದುವಂತೆ ಮಾಡುವುದು ವಿಶ್ವದ ಎಲ್ಲೆಡೆಯೂ ಸಮಾಜಗಳ ಎದುರಿಗಿರುವ ಒಂದು ದೊಡ್ಡ ಸವಾಲು.

## ಪ್ರಬಂಧದ ಉದ್ದೇಶಗಳು

ಪ್ರಸ್ತುತ ಪ್ರಬಂಧವು ಕೆಲವು ಪ್ರಮುಖವಾದ ಉದ್ದೇಶಗಳನ್ನು ಹೊಂದಿದೆ. ಅವು ಕೆಳಗಿನಂತಿವೆ.

1. ನಿರುದ್ಯೋಗ ಪರಿಕಲ್ಪನೆಯನ್ನು ನಿರ್ವಚಿಸುವುದು.
2. ನಿರುದ್ಯೋಗದ ಸಮಸ್ಯೆ ಹಾಗೂ ಸವಾಲುಗಳನ್ನು ವಿಶ್ಲೇಷಿಸುವುದು.
3. ಯುವಕರ ನಿರುದ್ಯೋಗ ಸಮಸ್ಯೆಗೆ ಸೂಕ್ತ ಪರಿಹಾರಗಳನ್ನು ಸೂಚಿಸುವುದು.

## ಅಧ್ಯಯನದ ವಿಧಾನ

ಪ್ರಸ್ತುತ ಪ್ರಬಂಧವು ಮಾಧ್ಯಮಿಕ ದತ್ತಾಂಶಗಳ ಮೇಲೆ ಆಧಾರಿತವಾಗಿದೆ. ಮಾಧ್ಯಮಿಕ ದತ್ತಾಂಶಗಳೆಂದರೆ ಪ್ರಕಟಿತ ಅಂಕಿ–ಸಂಖ್ಯೆಗಳು ಎಂದು ಅರ್ಥ. ಅಂದರೆ ಪುಸ್ತಕಗಳು, ಜರ್ನಲ್‌ಗಳು, ಸರಕಾರದ ವರದಿಗಳು, ಜನನಗಣತಿ ವರದಿ ಮುಂತಾದ ವಿಷಯಗಳಿಂದ ಪ್ರಬಂಧಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ಪಡೆಯಲಾಗಿದೆ. ಸದರಿ ಪ್ರಬಂಧದ ವಿಶ್ಲೇಷಣೆಗೆ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ವಿಷಯ ವಿಶ್ಲೇಷಣೆ

ವಿಶ್ವದಲ್ಲೇ ಇತ್ತೀಚೆಗೆ ಹೆಚ್ಚು ಚರ್ಚೆಗೆ ಒಳಪಡುತ್ತಿರುವ ಸಂಗತಿ ನಿರುದ್ಯೋಗ ಸಮಸ್ಯೆಯಾಗಿದೆ. ನಿರುದ್ಯೋಗವು ಆರ್ಥಿಕತೆಗೆ ಅಂಟಿಕೊಂಡಿರುವ ಒಂದು ಕಪ್ಪು ಚುಕ್ಕೆಯಾಗಿದೆ. ನಿರುದ್ಯೋಗದಿಂದಾಗಿ ಮಾನವ ಸಂಪನ್ಮೂಲ ಸದ್ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಿರುದ್ಯೋಗ ಎಂಬುದು ವ್ಯಕ್ತಿಗತ ಸಮಸ್ಯೆಯಲ್ಲ. ಬದಲಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಸ್ಯೆಯಾಗಿದೆ. ಇದಕ್ಕೆ ಸರಕಾರದ ನೀತಿಗಳು ಕಾರಣವೇ ಎಂಬುದನ್ನು ಪತ್ತೆ ಹಚ್ಚಬೇಕಾಗಿದೆ. ಬೃಹತ್ ಸಂಖ್ಯೆಯ ಯುವ ಜನರನ್ನು ಒಳಗೊಂಡಿರುವ ಭಾರತದಂತಹ ರಾಷ್ಟ್ರದಲ್ಲಿ ಎಲ್ಲರಿಗೂ ಉದ್ಯೋಗ ಕೊಡಲು ಹೇಗೆ ಸಾಧ್ಯ ? ಉದ್ಯೋಗ ಸೃಷ್ಟಿಯ ಸಾಧ್ಯತೆಗಳೇನು ? ಮತ್ತು ಉದ್ಯೋಗ ಸೃಷ್ಟಿಯ ಪರ್ಯಾಯ ಮಾದರಿಗಳ ಜೊತೆಗೆ ನಿರುದ್ಯೋಗದ ವಿವಿಧ ಆಯಾಮಗಳನ್ನು ಕುರಿತು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ಎಂಬ ಹೊಸ ಆರ್ಥಿಕ ನೀತಿಗಳು ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ನಿರ್ದೇಶಿತ ನೀತಿಗಳ ಅನುಷ್ಠಾನದ ನಂತರ ಹಾಗೂ 2002ರಲ್ಲಿ 2ನೇ ಕಾರ್ಮಿಕ ಆಯೋಗದ ಶಿಫಾರಸ್ಸುಗಳಲ್ಲಿ Hire and Fire, Contract labour and VRS ತತ್ವಗಳನ್ನು ಕೇಂದ್ರ ಸರಕಾರ ಅನುಷ್ಠಾನಕ್ಕೆ ತಂದಿದ್ದರಿಂದ ನಿರುದ್ಯೋಗದ ಪ್ರಮಾಣ ಇನ್ನಷ್ಟು ಅಧಿಕಗೊಂಡಿತು. ಇಂದು ಅರ್ಥವ್ಯವಸ್ಥೆಯಲ್ಲಿ ಉದ್ಯೋಗರಹಿತ (Jobless growth) ಅಷ್ಟೇ ಅಲ್ಲಾ, ಉದ್ಯೋಗ ನಷ್ಟ (Job loss growth) ಬೆಳವಣಿಗೆಯು ಸಹ ನಡೆಯುತ್ತಿರುವುದರಿಂದ ನಿರುದ್ಯೋಗದ ಪ್ರಮಾಣ ನಿರಂತರವಾಗಿ ಅಧಿಕಗೊಳ್ಳುತ್ತಿವೆ. ಅಂದರೆ ಎಂಭತ್ತರ ದಶಕದಲ್ಲಿ ಶೇ. 4.29ರಷ್ಟು ಉದ್ಯೋಗದ ಬೆಳವಣಿಗೆ ದರ ಇದ್ದ, ಇಂದು ಶೇ. 0.05 ರಷ್ಟು ಆಗಿದೆ. ಇದು ನಿರುದ್ಯೋಗ ತೀವ್ರವಾಗಿ ಏರಿಕೆಯಾಗಿರುವುದನ್ನು ಸೂಚಿಸುತ್ತದೆ. ವಿಶ್ವ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಕೋಫಿ ಅನ್ನನ್‌ರವರು ನಿರುದ್ಯೋಗವನ್ನು ಕುರಿತು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ: "ಈ ಕ್ಷಣದಲ್ಲಿ ವಿಶ್ವದಲ್ಲಿ ದಿನಕ್ಕೆ ಒಂದು ಡಾಲರಿಗಿಂತಲೂ ಕಡಿಮೆ ಹಣದಲ್ಲಿ ಬದುಕುಳಿಯಲು ಹೋರಾಡುತ್ತಿರುವ 130 ಕೋಟಿ ಜನಗಳಿದ್ದಾರೆ ಎಂದು ನಿಮಗೆ ನೆನಪಿಸಬಯಸುತ್ತೇನೆ. ಸದೃಢ ದೈಹಿಕ ಸಾಮರ್ಥ್ಯವುಳ್ಳ ಕೋಟಿಗಟ್ಟಲೆ ಜನರು ಅರೆ ಉದ್ಯೋಗಿಗಳಾಗಿದ್ದಾರೆ ಅಥವಾ ಅವರಿಗೆ ಸರಿಯಾದ ಉದ್ಯೋಗವಿಲ್ಲ. ಇದನ್ನು ಮೀರಿ ನಿಲ್ಲವುದು ಹೊಸ ಶತಮಾನದ ಮೊದಲ ದಶಕಗಳಲ್ಲಿ ನಮ್ಮ ಪ್ರಥಮ ಕೆಲಸವಾಗಬೇಕಾಗಿದೆ."

## ರಾಜ್ಯದ ನಿರುದ್ಯೋಗದ ಪ್ರಮಾಣ ಮತ್ತು ಪರಿಸ್ಥಿತಿ

ಕಳೆದ 20 ವರ್ಷಗಳಿಂದ ರಾಜ್ಯ ಸರಕಾರ ಉದ್ಯೋಗ ನೇಮಕಾತಿ ಮೇಲೆ ಅಘೋಷಿತ ನಿರ್ಬಂಧ ಹೇರಿರುವುದರಿಂದ ನಿರುದ್ಯೋಗ ಸಮಸ್ಯೆ ನಿರಂತರವಾಗಿ ಬೆಳೆಯುತ್ತಿದೆ. ಇನ್ನೊಂದು ಕಡೆ ಸರ್ಕಾರಗಳು ಅನುಸರಿಸಿಕೊಂಡು ಬರುತ್ತಿರುವ ಕೈಗಾರಿಕಾ ನೀತಿಯಿಂದಾಗಿ ಸಾವಿರಾರು ಸಣ್ಣ ಉದ್ದಿಮೆಗಳು ಮುಚ್ಚಿವೆ. ಹೀಗಾಗಿ ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡಿದೆ. ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಸುಮಾರು 36 ಸಾವಿರ ಉದ್ಯೋಗಗಳನ್ನು ರದ್ದು ಮಾಡಲಾಗಿದೆ. ಆಡಳಿತ ಸುಧಾರಣೆಯ ಮತ್ತು ಕಂಪ್ಯೂಟರೀಕರಣದ ನೆಪದಲ್ಲಿ ಉದ್ಯೋಗ ಕಡಿತ ಮಾಡಲಾಗಿದೆ. ಮಾನ್ಯ ಬಿ.ಎಸ್. ಯಡಿಯೂರಪ್ಪನವರು ರಾಜ್ಯ ಸರಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 58-60ಕ್ಕೆ ಹೆಚ್ಚಿಸಿದ್ದರಿಂದ ಯುವಜನರ ನಿರುದ್ಯೋಗ ಸಮಸ್ಯೆ ಮತ್ತಷ್ಟು ಹೆಚ್ಚಿತು. ಅದೇ ರೀತಿಯಾಗಿ ಮಾನ್ಯ ಸಿದ್ರಾಮಯ್ಯನವರು ಹಣಕಾಸು ಸಚಿವರಾಗಿದ್ದಾಗ ಆಡಳಿತ ಸುಧಾರಣೆಯ ನೆಪದಲ್ಲಿ ಹಾಗೂ ಆಡಳಿತದ ಖರ್ಚು-ವೆಚ್ಚಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಹಲವಾರು ಹುದ್ದೆಗಳನ್ನು ರದ್ದು ಮಾಡಿದ್ದರಿಂದ ರಾಜ್ಯದಲ್ಲಿ ನಿರುದ್ಯೋಗ ಇನ್ನಷ್ಟು ಬೆಳೆಯಲು ಕಾರಣವಾಯಿತು.

ಕೇಂದ್ರ ಸರ್ಕಾರ ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್ ಮಾರ್ಗದರ್ಶನದಲ್ಲಿ ಸರ್ಕಾರದ ಆಡಳಿತ ಗಾತ್ರವನ್ನು ಕಡಿಮೆಗೊಳಿಸಲು ಪ್ರಯತ್ನಿಸುತ್ತಿದೆ. ನಮ್ಮ ರಾಜ್ಯ ಸರ್ಕಾರ ಸಹ ಇದೇ ಆಣತಿಯನ್ನು ಪಾಲಿಸುವಂತೆ ಕಾಣುತ್ತಿದೆ. ರಾಜ್ಯ ಸರ್ಕಾರದ ಅಡಿಯಲ್ಲಿ ಖಾಲಿ ಇರುವ ಒಂದು ಲಕ್ಷಕ್ಕಿಂತ ಹೆಚ್ಚು ಸಾಮಾನ್ಯ ಹಾಗೂ ಬ್ಯಾಕ್‌ಲಾಗ ಹುದ್ದೆಗಳ ಭರ್ತಿಗೆ ಯಾವುದೇ ಕ್ರಮ ಕೈಗೊಂಡಿಲ್ಲ.ಆಡಳಿತದ ಖರ್ಚನ್ನು ಕಡಿಮೆ ಮಾಡುವ ನೆಪದಲ್ಲಿ ಹುದ್ದೆಗಳ ರದ್ದತಿಗೆ ಮುಂದಾಗಿರುವುದು ಹಾಗೂ ಅನಾವಶ್ಯಕವಾದ ಹಲವಾರು ದುಂದು ವೆಚ್ಚಗಳ ಕಡಿತಕ್ಕೆ ಗಂಭೀರ ಪ್ರಯತ್ನ ಮಾಡದೆ, ಉದ್ಯೋಗ ಕಡಿತ ಮಾಡುವುದು ಸರಿಯಾದ ಕ್ರಮವಾಗಲಾರದು. ಸಾರ್ವಜನಿಕರ ಕೆಲಸ ನಿರ್ವಹಿಸಲು ಸರ್ಕಾರಿ ಕಚೇರಿಗಳಲ್ಲಿ ನೌಕರರು ಇಲ್ಲದಂತಾಗಿದೆ. ಟೇಬಲ್‌ಗಳು ಖಾಲಿ ಬಿದ್ದಿವೆ. ಕಚೇರಿಗಳಿಗೆ ಬಡ ಜನತೆ ಹತ್ತಾರು ಸಲ ಅಲೆದಾಡಬೇಕಾದಂತಹ ಅನಿವಾರ್ಯತೆ ಬಂದಿದೆ. ಆಡಳಿತದ ಕಾರ್ಯವನ್ನು ಕೇವಲ ಅರೆಕಾಲಿಕ ಅಥವಾ ಒಪ್ಪಂದ ಆಧಾರಿತ ಸಿಬ್ಬಂದಿಗಳ ಮೂಲಕ ನಡೆಸುವಂತಹ ಅನಿವಾರ್ಯತೆ ಉಂಟಾಗಿರುವುದು ದೊಡ್ಡ ದುರಂತವಾಗಿದೆ.

ಕಳೆದ ದಶಕದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ಕ್ಷಿಪ್ರವಾಗಿ ಪ್ರತಿ ವರ್ಷವೂ ಶೇ. 7ರಷ್ಟು ಏರಿಕೆಯಾಗಿದೆ.ಆದರೆ ಕೊರೋನಾ ಕಾಲದಲ್ಲಿ ಆರ್ಥಿಕ ಅಭಿವೃದ್ಧಿ ತೀವ್ರವಾಗಿ ಕುಸಿಯುತ್ತಿದೆ ಹಾಗೂ ಕುಸಿದಿದೆ ಕೂಡ. ಪ್ರತಿ ವರ್ಷವೂ 2 ಕೋಟಿಗೂ ಹೆಚ್ಚು ಯುವಕರು ಉದ್ಯೋಗ ಅರಸುತ್ತಿದ್ದಾರೆ.ಕಾರ್ಮಿಕ ಶಕ್ತಿ ಮತ್ತು ದುಡಿಯುವ ಕೈಗಳು ಪ್ರತಿ ವರ್ಷವೂ ಶೇ. 2ರಷ್ಟು ಬೆಳವಣಿಯಾಗುತ್ತಿದ್ದರೆ, ಔಪಚಾರಿಕ (ಸಂಘಟಿತ) ವಲಯದಲ್ಲಿನ ಉದ್ಯೋಗ ಸೃಷ್ಟಿಯ ಬೆಳವಣಿಗೆ ಮಾತ್ರ ವಾರ್ಷಿಕವಾಗಿ ಶೇ.1 ಕ್ಕಿಂತಲೂ ಕಡಿಮೆ. ಹೀಗಿರುವಾಗ ಯುವಜನರ ಮುಂದಿರುವ ಆಯ್ಕೆ ಅನೌಪಚಾರಿಕ(ಅಸಂಘಟಿತ) ವಲಯದಲ್ಲಿ ಕೆಲಸ ಮಾಡುವುದು ಅಥವಾ ನಿರುದ್ಯೋಗಿಯಾಗಿಯೇ ಉಳಿಯುವುದಾಗಿರುತ್ತದೆ.

ಕೇಂದ್ರ ಕಾರ್ಮಿಕ ಸಚಿವಾಲಯದ ಅಂಕಿ-ಅಂಶಗಳ ಪ್ರಕಾರ, ಹೆಚ್ಚಿನ ಜನರ ಜೀವನೋಪಾಯದ ಮೂಲ ಸ್ವ ಉದ್ಯೋಗವೇ ಆಗಿದೆ.ಅಂದಾಜು ಶೇ.47 ರಷ್ಟು ದುಡಿಯುವ ಜನರು ಸ್ವ ಉದ್ಯೋಗಸ್ಥರಾಗಿದ್ದಾರೆ, ಅವರಲ್ಲಿನ ಶೇ. 70 ರಷ್ಟು ಜನರ ಆದಾಯ ಪ್ರತಿ ತಿಂಗಳಿಗೆ 5000 ರೂಪಾಯಿಗಳಿಗೂ ಕಡಿಮೆ ಇದೆ. ಸ್ವ ಉದ್ಯೋಗಸ್ಥರ ನಂತರ ದಿನಗೂಲಿ ಮತ್ತು ಗುತ್ತಿಗೆ ನೌಕರರ ಸರದಿ ಬರುತ್ತದೆ. ಅಂದಾಜು ಶೇ.36 ರಷ್ಟು ದುಡಿಯುವ ಜನ ಬಹುಮಂದಿ ದಿನಗೂಲಿ ಅಥವಾ ಗುತ್ತಿಗೆ ನೌಕರರಾಗಿದ್ದು, ತಾತ್ಕಾಲಿಕ ಅಥವಾ ಅಭದ್ರ ನೌಕರಿಯನ್ನು ಹೊಂದಿದ್ದಾರೆ. ಇವರಲ್ಲಿ ಕೇವಲ ಶೇ. 17 ರಷ್ಟು ನೌಕರರು ಮಾತ್ರ ನಿಯಮಿತ ವೇತನ ಅಥವಾ ಮಾಸಿಕ ಸಂಬಳ ಪಡೆಯುವವರಾಗಿದ್ದಾರೆ ಮತ್ತು ಬಹಳಷ್ಟು ಜನ ಪಾವತಿಸಿದ ರಜೆ ಮತ್ತು ಪಿಂಚಣಿಯಿಂದ ವಂಚಿತರಾಗಿದ್ದಾರೆ. ದೇಶದಲ್ಲಿನ ಶೇ.67ಕ್ಕೂ ಹೆಚ್ಚಿನ ಗುತ್ತಿಗೆ ನೌಕರರ ಕುಟುಂಬಗಳ ಆದಾಯ ತಿಂಗಳಿಗೆ 10,000 ರೂಪಾಯಿಗಳಿಗಿಂತಲೂ ಕಡಿಮೆ ಇದೆ.

ಕರ್ನಾಟಕದಲ್ಲೂ ಸಹ ಶೇ. 80 ರಷ್ಟು ದುಡಿಯುವ ಜನರು ಸ್ವ ಉದ್ಯೋಗಸ್ಥರು ಅಥವಾ ದಿನಗೂಲಿ/ ಅಸಂಘಟಿತ ಕಾರ್ಮಿಕರು ಅಥವಾ ಗುತ್ತಿಗೆ ನೌಕಾರರಾಗಿದ್ದಾರೆ.ಶೇ. 60 ರಷ್ಟು ಸ್ವ ಉದ್ಯೋಗಸ್ಥರ ಆದಾಯ ಪ್ರತಿ ತಿಂಗಳಿಗೆ 7500 ರೂಪಾಯಿಗಳಿಗೂ ಕಡಿಮೆ ಇದೆ. ಇದೊಂದು ಸಂಕಷ್ಟದ ಉದ್ಯೋಗದ ದ್ಯೋತಕವೇ ಹೊರತು ಉದ್ಯಮಶೀಲತೆಯಾಗಲಾರದು. ಇದಕ್ಕೆ ಕಾರಣ ಔಪಚಾರಿಕ ವಲಯದಲ್ಲಿನ ಕಡಿಮೆ

ಅವಕಾಶಗಳು ಹಾಗೂ ನಿರುದ್ಯೋಗದಲ್ಲಿ ಸಿಲುಕಿರುವವರಿಗೆ ಯಾವುದೇ ರೀತಿಯ ಬೆಂಬಲ ದೊರಕದೆ ಇರುವುದು. ಕರ್ನಾಟಕದಲ್ಲಿ ಶೇ. 60 ಕ್ಕೂ ಹೆಚ್ಚಿನ ಕುಟುಂಬಗಳ ಆದಾಯ ತಿಂಗಳಿಗೆ ಹೆಚ್ಚು ಕಡಿಮೆ 10,000 ರೂಪಾಯಿಗಿಂತಲೂ ಕಡಿಮೆ ಇದೆ. ಒಟ್ಟು 2.7 ಕೋಟಿ ಕಾರ್ಮಿಕ ಶಕ್ತಿಯಲ್ಲಿ ಕೇವಲ 24 ಲಕ್ಷ ಕಾರ್ಮಿಕರು ಔಪಚಾರಿಕ ವಲಯದಲ್ಲಿದ್ದು ಇದರಲ್ಲಿ 10.4 ಲಕ್ಷ(43.5%) ಕಾರ್ಮಿಕರು ಸಾರ್ವಜನಿಕ ವಲಯದಲ್ಲಿದ್ದಾರೆ. ಇನ್ನುಳಿದ 13.5 ಲಕ್ಷ (56.5%) ಕಾರ್ಮಿಕರು ಖಾಸಗೀ ವಲಯದಲ್ಲಿದ್ದಾರೆ. ಅಂದರೆ ರಾಜ್ಯದ ಬಹುತೇಕ ಕಾರ್ಮಿಕರು ಅಸಂಘಟಿತ ವಲಯದಲ್ಲಿದ್ದಾರೆ. ದೇಶದಲ್ಲಿ ಬೆಳೆಯುತ್ತಿರುವ ಯುವಜನಸಂಖ್ಯೆಗೆ ಪ್ರತಿ ವರ್ಷ10–12 ಮಿಲಿಯನ್ ಉದ್ಯೋಗಗಳನ್ನು ಒದಗಿಸುವ ಅವಶ್ಯಕತೆ ಇದೆ.ಕಾರ್ಮಿಕ ಬ್ಯೂರೋದ ಸಮೀಕ್ಷೆಗಳ ಪ್ರಕಾರ, ಶೇ.58 ರಷ್ಟು ಪದವೀಧರರು ಮತ್ತು ಶೇ.62ರಷ್ಟು ಸ್ನಾತಕೋತ್ತರ ಪದವೀಧರರು ತಮ್ಮ ಶೈಕ್ಷಣಿಕ ಅರ್ಹತೆ ಮತ್ತು ಅನುಭವಕ್ಕೆ ತಕ್ಕಂಥ ಉದ್ಯೋಗಾವಕಾಶಗಳು ಇಲ್ಲದಿರುವುದೇ ನಿರುದ್ಯೋಗ ಸಮಸ್ಯೆಯ ಪ್ರಧಾನ ಲಕ್ಷಣ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

### ಕೋವಿಡ್ ಕಾಲದಲ್ಲಿ ನಿರುದ್ಯೋಗದ ಪ್ರಮಾಣ

ಕೋವಿಡೋತ್ತರ ಅವಧಿಯಲ್ಲಿ ಭಾರತದ ಯುವಜನರಲ್ಲಿ ನಿರುದ್ಯೋಗಿಗಳ ಪ್ರಮಾಣ ಶೇ.30ರಷ್ಟಕ್ಕೆ ಏರಬಹುದು ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ ತನ್ನ ಔದ್ಯೋಗಿಕ ಟ್ರೇಂಡ್ ವರದಿಯಲ್ಲಿ ಅಂದಾಜಿಸಿದೆ. ಭಾರತದಲ್ಲಿ ಕೋವಿಡ್ ಪೂರ್ವದಲ್ಲೇ ನಿರುದ್ಯೋಗದ ಸಮಸ್ಯೆ ಅಗಾಧವಾಗಿ ಇತ್ತು. ಕೋವಿಡ್ ಬಂದ ನಂತರ ನಿರುದ್ಯೋಗದ ಸಮಸ್ಯೆ ತೀವ್ರತರವಾಗಿದೆ. ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ವಿಶ್ವದಾದ್ಯಂತ ಶೇ.18ರಷ್ಟು ಯುವಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಭಾರತದಲ್ಲಿ ಇದಕ್ಕಿಂತಲೂ ಹೆಚ್ಚಿನ ಪ್ರಮಾಣದ ಯುವಜನರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) ಹೇಳಿದೆ.

ಸಮೀಕ್ಷೆಯನ್ನು ನಡೆಸಿ, ಐಎಲ್‌ಒ ಈ ವರದಿಯನ್ನು ಸಿದ್ಧಪಡಿಸಿದೆ. ನಿರುದ್ಯೋಗ ಮತ್ತು ಉದ್ಯೋಗ ನಷ್ಟದ ಸ್ವರೂಪವನ್ನು ವಿವರಿಸುವ ಪ್ರಯತ್ನವನ್ನು ಈ ವರದಿಯಲ್ಲಿ ಐಎಲ್‌ಒ ಮಾಡಿದೆ. ಏಷ್ಯಾ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಬಿಡುಗಡೆ ಮಾಡಿರುವ ವರದಿಯಲ್ಲೂ ಇದೇ ಸ್ವರೂಪದ ವಿಶ್ಲೇಷಣೆ ಇದೆ. ಭಾರತದಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸಿದ 18–24 ವರ್ಷದ ಯುವ ಜನರಲ್ಲಿ ಶೇ.23.1ರಷ್ಟು ಮಂದಿ ಉದ್ಯೋಗವನ್ನು ಕಳೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹೀಗೆ ಉದ್ಯೋಗ ಕಳೆದುಕೊಂಡ ಪ್ರತಿ ಹತ್ತು ಯುವಜನರಲ್ಲಿ ನಾಲ್ವರನ್ನು ಶಾಶ್ವತವಾಗಿ ಕೆಲಸದಿಂದ ತೆಗೆದುಹಾಕಲಾಗಿದೆ. ಪ್ರತಿ ಹತ್ತರಲ್ಲಿ ಆರು ಮಂದಿಯನ್ನು ವೇತನ ರಹಿತ ದೀರ್ಘ ರಜೆಯ ಮೇಲೆ ಕಳುಹಿಸಲಾಗಿದೆ. ಈ ಅವಧಿಯಲ್ಲಿ ನಮಗೆ ಬೇರೆ ಉದ್ಯೋಗ ದೊರೆತಿಲ್ಲ ಎಂದು ಸಮೀಕ್ಷೆ ವೇಳೆ ಅವರು ಮಾಹಿತಿ ನೀಡಿದ್ದಾರೆ ಎಂದು ಐಎಲ್‌ಒ ಹೇಳಿದೆ.

ಕೃಷಿ ವಲಯದಲ್ಲಿ ಹೆಚ್ಚಿನ ಉದ್ಯೋಗ ನಷ್ಟವಾಗಿದೆ ಎಂದು ಐಎಲ್‌ಒ ಮತ್ತು ಎಡಿಬಿ ವರದಿಗಳು ವಿವರಿಸಿವೆ. ಕೃಷಿಗೆ ಸಂಬಂಧಿಸಿದ ಯಂತ್ರೋಪಕರಣ ತಯಾರಿಕೆ ಮತ್ತು ಮಾರುಕಟ್ಟೆ ಕ್ಷೇತ್ರದಲ್ಲಿ ಲಕ್ಷಾಂತರ ಮಂದಿ ಕೆಲಸ ಕಳೆದುಕೊಂಡಿದ್ದಾರೆ. ಕೃಷಿ ಯಂತ್ರೋಪಕರಣಗಳ ಖರೀದಿ ಪ್ರಮಾಣ ಕುಸಿದಿರುವ ಕಾರಣ, ಉದ್ಯೋಗ ನಷ್ಟವಾಗಿದೆ. ಕೃಷಿ ಕಾರ್ಮಿಕರೂ ಕೆಲಸ ಕಳೆದುಕೊಂಡಿದ್ದಾರೆ. ಕೃಷಿ ಉತ್ಪನ್ನಗಳ ಸಾಗಣೆ ವಲಯದಲ್ಲಿ ಲಕ್ಷಾಂತರ ಮಂದಿ ಕೆಲಸ ಕಳೆದುಕೊಂಡಿದ್ದಾರೆ. ಕೃಷಿ ಮಾರುಕಟ್ಟೆಗಳಲ್ಲಿ ಕೆಲಸ ಕಳೆದುಕೊಂಡ ಹಮಾಲಿಗಳ ಸಂಖ್ಯೆಯೂ ದೊಡ್ಡದಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಭಾರತದಲ್ಲಿ ಕೃಷಿಯನ್ನು ಹೊರತುಪಡಿಸಿದರೆ ನಿರ್ಮಾಣ ವಲಯದಲ್ಲಿ ಉದ್ಯೋಗವನ್ನು ಕಳೆದುಕೊಂಡವರ ಪ್ರಮಾಣ ಹೆಚ್ಚು. ಲಾಕ್‌ಡೌನ್ ಕಾರಣದಿಂದ ನಿರ್ಮಾಣ ವಲಯವು ಸಂಪೂರ್ಣ ಸ್ಥಗಿತವಾಗಿತ್ತು. ಈಗ ಲಾಕ್‌ಡೌನ್ ತೆರವಾಗಿದ್ದರೂ ಹಣಕಾಸು ಮತ್ತು ಕಚ್ಚಾವಸ್ತುಗಳ ಕೊರತೆಯ ಕಾರಣ ನಿರ್ಮಾಣ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ಆರಂಭವಾಗಿಲ್ಲ. ಹೀಗಾಗಿ ಕೆಲಸ ಕಳೆದುಕೊಂಡಿದ್ದವರಿಗೆ ಮತ್ತೆ ಕೆಲಸ ದೊರೆತಿಲ್ಲ. ನಿರ್ಮಾಣ ಚಟುವಟಿಕೆಗಳಿಗೆ ಅಗತ್ಯವಾದ ಸಿಮೆಂಟ್, ಕಬ್ಬಿಣ, ಪ್ಲಾಸ್ಟಿಕ್, ವಸ್ತುಗಳ ತಯಾರಿಕಾ ವಲಯಗಳೂ ಪೂರ್ಣಪ್ರಮಾಣದಲ್ಲಿ ಕಾರ್ಯಾರಂಭ ಮಾಡಿಲ್ಲ. ಹೀಗಾಗಿ ಇಲ್ಲಿ ನಷ್ಟವಾದ ಎಲ್ಲಾ ಉದ್ಯೋಗಗಳ ಮರುಸೃಷ್ಟಿ ಈವರೆಗೆ ಆಗಿಲ್ಲ. ಇನ್ನೂ ಕೆಲವು ತಿಂಗಳು ಇದೇ ಪರಿಸ್ಥಿತಿ ಇರಲಿದೆ ಎಂದು ವರದಿಯಲ್ಲಿ ಅಂದಾಜು ಮಾಡಲಾಗಿದೆ.

ಉದ್ಯೋಗ ಕಳೆದುಕೊಂಡ 18–29 ವರ್ಷದ ಯುವಜನರಲ್ಲಿ ಬಹುಪಾಲು ಮಂದಿ ದಿನಸಿ ಅಂಗಡಿ, ಸಣ್ಣ ಹೋಟೆಲ್‌ಗಳು,ಮೊಬೈಲ್–ಎಲೆಕ್ಟ್ರಾನಿಕ್ಸ್ ಅಂಗಡಿಗಳು, ಆಡಿಟಿಂಗ್, ಎವೆಂಟ್ ಮ್ಯಾನೇಜ್‌ಮೆಂಟ್, ಟ್ಯಾಕ್ಸಿ ಚಾಲನೆ ವಲಯದಲ್ಲಿ ಉದ್ಯೋಗದಲ್ಲಿದ್ದವರು. ಕೆಲಸ ಕಳೆದು ಕೊಂಡವರಲ್ಲಿ ಅರ್ಧಕ್ಕೂ ಹೆಚ್ಚು ಮಂದಿ, ನಮ್ಮ ಮಾಲೀಕರು ಉದ್ದಿಮೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದ್ದಾರೆ ಎಂದು ಉತ್ತರಿಸಿದ್ದಾರೆ. ತಮಗೆ ಮುಂದೆ ಉದ್ಯೋಗ ದೊರೆಯುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಇವರಲ್ಲಿ ಯಾವುದೇ ಭರವಸೆ ಇಲ್ಲ. ಇವರ ಭವಿಷ್ಯ ಅತಂತ್ರವಾಗಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಪ್ರತಿ ಐವರಲ್ಲಿ ನಾಲ್ವರು ತಮ್ಮ ಆದಾಯದ ಬಹುಪಾಲು ಕಡಿಮೆ ಆಗಿದೆ ಎಂದು ಹೇಳಿದ್ದಾರೆ. ಅದಾಯದಲ್ಲಿನ ಇಳಿಕೆಯು ಇವರ ದೈನಂದಿನ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಇದು ಅವರ ಕುಟುಂಬದವರ ಮೇಲೂ ಪರಿಣಾಮ ಬೀರಿದೆ. ಈ ಸ್ಥಿತಿ ಮತ್ತಷ್ಟು ಬಿಗಡಾಯಿಸುವ ಮೊದಲೇ, ಆರ್ಥಿಕತೆಗೆ ಮರುಚಾಲನೆ ನೀಡಬೇಕಿದೆ. ಇದಕ್ಕಾಗಿ ಸರಕಾರಗಳು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಬೇಕು ಎಂದು ಐಎಲ್‌ಒ ತನ್ನ ವರದಿಯಲ್ಲಿ ಒತ್ತಾಯಿಸಿದೆ.

### ಯುವಜನರ ನಿರುದ್ಯೋಗಕ್ಕೆ ಕಾರಣಗಳು

ಯುವಜನ ನಿರುದ್ಯೋಗಕ್ಕೆ ಹತ್ತು ಹಲವು ಕಾರಣಗಳಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

1. ಅತಿಯಾದ ಜನಸಂಖ್ಯೆ.
2. ಹೇರಳ ಉದ್ಯೋಗಾವಕಾಶಗಳ ಅಲಭ್ಯತೆ,
3. ಕೌಶಲ್ಯದ ಕೊರತೆ,
4. ಸರಕಾರಿ ವಲಯದ ಖಾಸಗೀಕರಣ ಮಾಡುವಿಕೆ,
5. ತಂತ್ರಜ್ಞಾನದ ಅತಿಯಾದ ಬಳಕೆ,
6. ಹೂಡಿಕೆಯಲ್ಲಿನ ಕೊರತೆ
7. ಉದ್ಯೋಗಾಧಾರಿತ ಉದ್ದಿಮೆಗಳ ಕೊರತೆ
8. ವೃತ್ತಿ ತರಬೇತಿಯ ಅಲಭ್ಯತೆ
9. ವೃತ್ತಿ ಶಿಕ್ಷಣದ ಅಭಾವ

### ನಿರುದ್ಯೋಗದ ಪರಿಣಾಮಗಳು

ಯುವಜನ ನಿರುದ್ಯೋಗದಿಂದ ಸಮಾಜದ ಮೇಲೆ ಹಲವು ಪರಿಣಾಮಗಳು ಉಂಟಾಗುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲೇಖಿಸಲಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

1. ಸಮಾಜದಲ್ಲಿ ಅಶಾಂತಿಯುಂಟಾಗುತ್ತದೆ.
2. ಸಮಾಜ ವಿರೋಧಿ ಚಟುವಟಿಕೆಗಳ ಹೆಚ್ಚಳ,
3. ಸಾಮಾಜಿಕ ಸಾಮರಸ್ಯಕ್ಕೆ ಭಂಗ ಬರುತ್ತದೆ.
4. ರಾಜಕೀಯ ಅಸ್ಥಿರತೆ
5. ಭ್ರಷ್ಟಚಾರದ ಅಟ್ಟಹಾಸ,
6. ಆರ್ಥಿಕ ಅಭದ್ರತೆ

## ನಿರುದ್ಯೋಗ ಸಮಸ್ಯೆಗೆ ಪರಿಹಾರ ಹಾಗೂ ಪರ್ಯಾಯ

ನಿರುದ್ಯೋಗ ಸಮಸ್ಯೆ ನಿರ್ಮೂಲನೆಗೆ ಭೂಸುಧಾರಣೆ ಸಂಜೀವಿನಿ ಸಾಧನವಾಗಿದೆ. ನಿಜವಾದ ಭೂಸುಧಾರಣೆಯು ಭೂಹೀನರಿಗೆ ಹೆಚ್ಚುವರಿ ಭೂಮಿಯ ಹಂಚಿಕೆ ಮಾಡಿ, ಗ್ರಾಮೀಣ ನಿರುದ್ಯೋಗವನ್ನು ನಿರ್ಮೂಲನೆ ಮಾಡಲು ಮಾತ್ರವಲ್ಲ, ಒಟ್ಟಾರೆ ಉದ್ಯೋಗ ನಿರ್ಮಾಣಕ್ಕೆ ಸಕಾರಾತ್ಮಕವಾದ ವಾತಾವರಣ ನಿರ್ಮಿಸಲಿಕ್ಕೆ ಕೂಡಾ ಅತ್ಯಂತ ಮಹತ್ವದ ಕ್ರಾಂತಿಕಾರಿ ಕ್ರಮವಾಗಿರುತ್ತದೆ.

ಈ ಭೂಸುಧಾರಣೆ ಕುರಿತು ಹಲವಾರು ಕಾನೂನುಗಳನ್ನು, ಸಂವಿಧಾನ ತಿದ್ದುಪಡಿಗಳನ್ನು ಪಾಸು ಮಾಡಿದ್ದರೂ ಸಹ ದೇಶದ ಕೃಷಿ ಆರ್ಥಿಕದಲ್ಲಿ ಪಟ್ಟಭದ್ರಹಿತಾಸಕ್ತಿಗಳ ಒತ್ತಡದಿಂದಾಗಿ ಈ ಕೆಲಸ ಅಪೂರ್ಣವಾಗಿಯೇ ಉಳಿದಿದೆ. ಭೂಸುಧಾರಣೆ ಕಾನೂನುಗಳಲ್ಲಿನ ಲೋಪಗಳನ್ನು ಸರಿಪಡಿಸಿ ಎಲ್ಲಾ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು ಭೂಹೀನರಿಗೆ ಹಂಚಿದರೆ ಕನಿಷ್ಠ 10 ಕೋಟಿ ಗ್ರಾಮೀಣ ಜನರಿಗೆ ಉದ್ಯೋಗ ನಿರ್ಮಿಸಿ ಅವರಿಗೆ ಜೀವನಾಧಾರ ಕಲ್ಪಿಸಬಹುದಾಗಿದೆ. ಆರ್ಥಿಕ ವ್ಯವಸ್ಥೆಯ ಎಲ್ಲಾ ಕ್ಷೇತ್ರಗಳಲ್ಲಿ ನಿರುದ್ಯೋಗ ಉಂಟಾಗುತ್ತಿರುವುದರಿಂದ 'ನಿರುದ್ಯೋಗಿಗಳ ಸೈನ್ಯ' ಸೃಷ್ಟಿಯಾಗಿ ಕ್ರಾಂತಿ ತಂತಾನೆ ಸಂಭವಿಸುತ್ತದೆ ಎಂಬ ಕಾರ್ಲ್‌ಮಾರ್ಕ್ಸ‌ರ ತತ್ವ ನೈಜತೆಯ ದಿಕ್ಕಿನಲ್ಲಿ ನಡೆದಿದೆ.ನಮ್ಮ ದೇಶವು ಜನಸಂಖ್ಯೆ ಬಾಹುಳ್ಯ ರಾಷ್ಟ್ರವಾಗಿದ್ದು ಇಲ್ಲಿಯ ಜನರಿಗೆ ಉದ್ಯೋಗವನ್ನು ಒದಗಿಸಿ ಕೊಡಲು ಶ್ರಮಸಾಂದ್ರ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು. ಸಂವಿಧಾನದಲ್ಲಿ ಉಲ್ಲೇಖಿಸಿದ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕು. ಯುವಕರಿಗೆ ಉದ್ಯೋಗ ಭದ್ರತೆ ನೀಡಬೇಕು.ಸರಕಾರವು 'ಒಂದು ಕುಟುಂಬಕ್ಕೆ ಒಂದು ಉದ್ಯೋಗ' ಎಂಬ ನೀತಿಯನ್ನು ಜಾರಿಗೊಳಿಸಬೇಕು.

## ಮುಗಿಸುವ ಮುನ್ನ

ಕೋವಿಡ್ ಸಂಕಷ್ಟದ ಈ ಸಮಯದಲ್ಲಿ ಜೀವನ ನಡೆಸುವುದೇ ಬಹಳ ಕಷ್ಟಕರವಾಗಿದೆ. ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸಲು ಅಗತ್ಯವಾದ ಹೊಸ ಹಾಗೂ ಸೂಕ್ತ ನೀತಿಗಳನ್ನು ಸರಕಾರ ಈಗ ರೂಪಿಸಬೇಕಿದೆ.ಉದ್ಯೋಗವನ್ನು ಖಾತ್ರಿಪಡಿಸುವಂತಹ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅದು ಹಾಕಿಕೊಳ್ಳಬೇಕಿದೆ. ಭಾರತ ರತ್ನ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರು ರಚಿಸಿದ ಭಾರತೀಯ ಸಂವಿಧಾನದ ನಾಲ್ಕನೆಯ ಭಾಗದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಕಲಂ 39 ಎ ರಲ್ಲಿ ಉದ್ಯೋಗದ ಕುರಿತು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ದೇಶದ ಎಲ್ಲ ನಾಗರಿಕರೂ (ಮಹಿಳೆಯರು ಮತ್ತು ಪುರುಷರಿಬ್ಬರೂ ಸಮಾನವಾಗಿ) ಜೀವನ ಸಾಗಿಸಲು ಅಗತ್ಯವಿರುವಷ್ಟು ಪ್ರಮಾಣದ ಉದ್ಯೋಗ (ಜೀವನೋಪಾಯದ ಮಾರ್ಗ) ಹೊಂದುವ ಹಕ್ಕನ್ನು ಗಳಿಸಲು ಸಾಧ್ಯವಾಗುವ ರೀತಿಯುಲ್ಲಿ ಪ್ರಭುತ್ವವು ತನ್ನ ನೀತಿಗಳನ್ನು ರೂಪಿಸಿಕೊಳ್ಳಬೇಕೆಂದು ಒಕ್ಕೂಟದ ರಾಜ್ಯಗಳಿಗೆ ನಿರ್ದೇಶಿಸಿದೆ. ಕರ್ನಾಟಕವು ನಿರುದ್ಯೋಗ ಮುಕ್ತವಾದರೆ ಮುಂದೆ ಅದು ನಿರುದ್ಯೋಗ ಮುಕ್ತ ಭಾರತ ಕಟ್ಟಲು ಮಾದರಿಯಾಗಬಲ್ಲದು.

ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಉದ್ಯೋಗ ಸೃಷ್ಟಿಸಬೇಕಾದ ತಮ್ಮ ಕರ್ತವ್ಯವನ್ನು, ತನ್ನ ಸಾಂವಿಧಾನಿಕ ಹೊಣೆಗಾರಿಕೆಯನ್ನು ಸ್ವ ಉದ್ಯೋಗದ ಮಾತುಗಳನ್ನು ಹೆಚ್ಚಚ್ಚಾಗಿ ಆಡುವ ಮೂಲಕ ಉದ್ಯೋಗಾಕಾಂಕ್ಷಿಗಳ ಮೇಲೆ ವರ್ಗಾಯಿಸಲು ಹವಣಿಸುತ್ತಿವೆ. ಆದರೆ ಸರಕಾರವು ಹೇಳುತ್ತಿರುವ ಇಂತಹ ಸ್ವ ಉದ್ಯೋಗಗಳ ಕ್ಷೇತ್ರಗಳ ಬಹುಪಾಲು ಸುಸ್ಥಿರ ಉದ್ಯೋಗಗಳನ್ನು ಸೃಷ್ಟಿಸುವುದಿಲ್ಲ. ಸಂವಿಧಾನದಲ್ಲಿ ಸರ್ವರಿಗೂ ಶಿಕ್ಷಣ ಹಾಗೂ ಸರ್ವರಿಗೂ ಉದ್ಯೋಗವೆಂದು ಉಲ್ಲೇಖಿಸಲಾಗಿದೆ. ಯುವಕರಿಗೆ ಉದ್ಯೋಗ ಕೊಡಬೇಕು ಇಲ್ಲವೆ ನಿರುದ್ಯೋಗ ಭತ್ಯೆ ಕೊಡುವುದು ಪ್ರಭುತ್ವದ ಮಹತ್ವದ ಹೊಣೆಗಾರಿಕೆಯಾಗಿದೆ ಎಂದು ಹೇಳಿದೆ. ಆ ಮೂಲಕ ಕಲ್ಯಾಣ ರಾಜ್ಯದ ಗುರಿಯನ್ನು ಈಡೇರಿಸಲು ಮುಂದಾಗಬೇಕಾಗಿದೆ. ಯುವಜನತೆ ಈಗ ಎಚ್ಚೆತ್ತುಕೊಳ್ಳಬೇಕು. ಏಕೆಂದರೆ ಕೋವಿಡ್‌ನಿಂದ ಅತಿ ಹೆಚ್ಚು ತೊಂದರೆಗೀಡಾಗಿರುವವರು ಯುವಕರೆ. ಭವಿಷ್ಯದಲ್ಲಿ ಅವರಿಗೆ ನಿರುದ್ಯೋಗ ಕಾಡಬಹುದು. ಬಡತನ ಮರುಕಳುಹಿಸಬಹುದು. ಎಲ್ಲವನ್ನೂ ಎದುರಿಸಲು ಯುವಕರು ಸಜ್ಜಾಗಬೇಕೆಂದು ಖ್ಯಾತ ಲೇಖಕ ಚೇತನ ಭಗತ ಹೇಳಿರುವುದು ಸಮಂಜಸವಾಗಿದೆ.

ನಿರುದ್ಯೋಗ ಸಮಸ್ಯೆಯು ವಿಶ್ವವ್ಯಾಪಕವಾಗಿದೆ. ಅದು ಆರ್ಥಿಕತೆಗೆ ಅಂಟಿದ ಶಾಪವಾಗಿದೆ. ಉದ್ಯೋಗ ನಿರ್ಮಾಣ ಮಾಡಿ ಯುವಜನರ, ಜನಗಳ ಜೀವನ ಮಟ್ಟವನ್ನು ಉತ್ತಮಗೊಳಿಸಿದರೆ ಮಾತ್ರವೇ ಸತತವಾಗಿ ಹೆಚ್ಚಿನ ಆರ್ಥಿಕ ಬೆಳವಣಿಗೆ ಸಾಧಿಸಲು ಸಾಧ್ಯ ಎಂಬುದನ್ನು ಚೀನಾದ ಅನುಭವ ಮನದಟ್ಟು ಮಾಡಿಸಿದೆ. ಜನಗಳ ಕೊಳ್ಳುವ ಶಕ್ತಿಯನ್ನು ಸತತವಾಗಿ ಹೆಚ್ಚಿಸುತ್ತಿದ್ದರೆ ದೇಶದಲ್ಲಿ ಉತ್ಪಾದನೆಯಾಗುವ ಉತ್ಪನ್ನಗಳಿಗೆ ಮಾರುಕಟ್ಟೆ ವಿಸ್ತಾರಗೊಂಡು ಅದರಿಂದ ಆರ್ಥಿಕ ಬೆಳವಣಿಗೆಯ ಉನ್ನತ ದರವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಯಾವುದೇ ದೇಶವು ಲಭ್ಯವಿರುವ ಅಗಾಧ ಮಾನವ ಸಂಪನ್ಮೂಲವನ್ನು ಸಮರ್ಥವಾಗಿ ಸದ್ಬಳಕೆ ಮಾಡಿಕೊಂಡಾಗ ಮಾತ್ರ ನಿರುದ್ಯೋಗ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ. ನಿರುದ್ಯೋಗ ಸಾಮಾಜಿಕ ಅಸ್ವಾಸ್ಥ್ಯವನ್ನು ಉಂಟುಮಾಡಬಲ್ಲದು. ನಿರುದ್ಯೋಗಿಗಳಾದ ಯುವಜನರು ಗ್ರಾಮೀಣ ಪ್ರದೇಶದಲ್ಲಿ ಒಂದು ರೀತಿಯ ಅಶಾಂತತೆಯನ್ನು ನಿರ್ಮಿಸುತ್ತಿದ್ದಾರೆ. "ಕೆಲಸವಿಲ್ಲದ ವ್ಯಕ್ತಿಯ ಮನಸ್ಸು ಸೈತಾನನ ನೆಲೆ", ಇದ್ದಂತೆ ಎಂದು ಹೇಳಬಹುದು. ಹಾಗಾಗಿ ಯುವಕರಿಗೆ ಉದ್ಯೋಗ ಒದಗಿಸಿದರೆ ವಿಕಾಸವಾಗುತ್ತದೆ ಇಲ್ಲವಾದರೆ ವಿನಾಶವಾಗುತ್ತದೆ. ದೇಶದ ಆರ್ಥಿಕ ಭವಿಷ್ಯವನ್ನು ಭದ್ರಗೊಳಿಸಬೇಕಾದಂತಹ ಅನಿವಾರ್ಯತೆ ಇಂದಿನ ಯುವಕರ ಮೇಲಿದೆ.

ದೊಡ್ಡ ಸಂಖ್ಯೆಯಲ್ಲಿ ಉದ್ಯೋಗ ಸೃಸ್ಟಿಸಲು ಸಾಧ್ಯವಿರುವ ಸೇವೆಗಳನ್ನು ತಕ್ಷಣವೇ ಗುರುತಿಸುವ ಅಗತ್ಯವಿದೆ ಹಾಗೂ ಆ ಸೇವೆಗಳನ್ನು ಪ್ರೋತ್ಸಾಹಿಸಬೇಕಿದೆ. ಈ ನಿಟ್ಟಿನಲ್ಲಿ ಆರೋಗ್ಯ ಸೇವೆ, ಶಿಕ್ಷಣ, ವಸತಿ ಹಾಗೂ ಪ್ರವಾಸೋದ್ಯಮದಂತಹ ಕ್ಷೇತ್ರಗಳನ್ನು ಒಳ್ಳೆಯ ಉದ್ಯೋಗ ಸೃಷ್ಟಿ ಮಾಡಬಲ್ಲ, ಸ್ಥಿರವಾದ ಕ್ಷೇತ್ರಗಳೆಂದು ಗುರುತಿಸಬಹುದಾಗಿದೆ. ಈ ಉದ್ದಿಮೆಗಳಿಗೆ ಆಟೋಮೇಷನ್ ಮತ್ತು ಮೆಕ್ಯಾನೈಜೇಷನ್ (ಯಾಂತ್ರೀಕರಣ) ನಿಂದ ಹೆಚ್ಚಿನ ಅಪಾಯವಿರುವುದಿಲ್ಲ. ಎಲ್ಲಾ ಸರಕಾರಿ ವಿಭಾಗಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ರಾಜ್ಯ ಸರಕಾರದ ಒಟ್ಟು 7.2 ಲಕ್ಷ ಹುದ್ದೆಗಳಲ್ಲಿ 2.8 ಲಕ್ಷ ಹುದ್ದೆಗಳು ಖಾಲಿ ಉಳಿದಿವೆ. ನಮ್ಮ ರಾಜ್ಯ ಇಂತಹ ನಿರುದ್ಯೋಗದ ಬೃಹತ್ ಸಮಸ್ಯೆಯನ್ನು ಎದುರಿಸುತ್ತಿರುವಾಗ ಇದು ಕ್ಷಮಾರ್ಹವಲ್ಲ. ಎಲ್ಲ ಗುತ್ತಿಗೆ ನೌಕರರಿಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸುಭದ್ರತೆ ಒದಗಿಸಿದ ನಂತರ ಸರಕಾರವು ಪ್ರತೀ ವಿಭಾಗದಲ್ಲಿ ಖಾಲಿ ಉಳಿದಿರುವ ಎಲ್ಲಾ ಸ್ಥಾನಗಳನ್ನು ಮುಂದಿನ ನಿಗದಿತ ಅವಧಿಯಲ್ಲಿ ನೇಮಕಾತಿ ಮಾಡಿಕೊಳ್ಳಬೇಕು. ಮುಗಿಸುವ ಮುನ್ನ 2018ರಲ್ಲಿ ಉದ್ಯೋಗಕ್ಕಾಗಿ ಯುವಜನರು ಹೊರತಂದಿದ್ದ ಯುವ ಪ್ರಣಾಳಿಕೆಯಲ್ಲಿನ ಒಂದು ಮಾತನ್ನು ಉಲ್ಲೇಖಿಸಬಹುದಾಗಿದೆ.ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿದ ಸ್ಥಳೀಯ ಉದ್ಯೋಗಗಳನ್ನು ಹೆಚ್ಚೆಚ್ಚಾಗಿ ಸೃಷ್ಟಿಸುವ ಕಡೆಗೆ ಸರಕಾರವು ಕಣ್ಣು ಹಾಯಿಸಿದರೆ ಸ್ಥಳೀಯರಿಗೆ ಹೆಚ್ಚು ಉದ್ಯೋಗಗಳು ಸಿಗುತ್ತವೆ ಮತ್ತು ಅದು ಸುಸ್ಥಿರ ಆರ್ಥಿಕತೆ ಹಾಗೂ ಸುಸ್ಥಿರ ಸಮಾಜ ನಿರ್ಮಾಣಕ್ಕೆ ದಾರಿ ಮಾಡಿಕೊಡುತ್ತದೆ. ಅಂದು 'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಗಾದೆ ಮಾತಿನ ಬದಲಾಗಿ ಇಂದು ನಿರುದ್ಯೋಗಂ ಪುರುಷ ಲಕ್ಷಣಂ ಎಂಬಾಂತಾಗಿದೆ.

## ಆಕರ ಗ್ರಂಥಗಳು


- **ಮುತ್ತುರಾಜ ಮತ್ತು ಸರೋವರ(2018) :** "ಉದ್ಯೋಗಕ್ಕಾಗಿ ಯುವಕರು", ಬೆಂಗಳೂರು ಯುವಜನ ಪ್ರಣಾಳಿಕೆ, ವಿಜಯನಗರ, ಪು.1–6.
- **ಚಿತ್ತಬ್ರತ ಮಜುಂದಾರ (2005) :** "ಉದ್ಯೋಗದ ಹಕ್ಕು", ಸಿರಸಿ, ಉತ್ತರ ಕನ್ನಡ, ಅಧ್ಯಾಯನ ಪ್ರಕಾಶನ, ಪು. 01–44.
- **ಕೃಷ್ಣ ಬಿ.ಆರ್. (2010),** "ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ", ಗದಗ ವಿದ್ಯಾನಿಧಿ ಪ್ರಕಾಶನ, ಪು. 434–435.
- **ಕರ್ನಾಟಕ ಎಕನಾಮಿಕ್ ಸರ್ವೆ (2017–18)** ಬೆಂಗಳೂರು.
- **ಮಹೇಶ.ಮ(2002),** "ಜಾಗತೀಕರಣ ದಕ್ಷಿಣದ ದೃಷ್ಟಿಯಲ್ಲಿ", ಬೆಂಗಳೂರು ನವಕರ್ನಾಟಕ ಪ್ರಕಾಶನ, ಪು. 114–117.
- **ಶ್ರವಣಕುಮಾರ ಸಿಂಗ್(2020),** "ಇಂಡಿಯಾಸ್ ಎಂಪ್ಲಾಯಿಮೆಂಟ್ ಚಾಲೇಂಜ್ಸ್, ಪಾಲಸಿ ಅಜಂಡಾ ಮೀಟ್", ಪ್ರತಿಯೋಗಿತಾ ದರ್ಪಣ (ಪಿಡಿ), ಪು. 83–84.
- **ಹಮೀದ್.ಕೆ(2020)** "ನಿರುದ್ಯೋಗ ಸಮಸ್ಯೆಗೆ ಸರಕಾರ ನಿರುತ್ತರ", ಬೆಂಗಳೂರು ಪ್ರಜಾವಾಣಿ ದಿನಪತ್ರಿಕೆ, ದಿನಾಂಕ : 18–9–20, ಪು.9.
- **ಜಯಸಿಂಹ ಆರ್(2020)** " ಉದ್ಯೋಗ ನಷ್ಟದ ಹಲವು ಮುಖಗಳು", ಬೆಂಗಳೂರು ಪ್ರಜಾವಾಣಿ ದಿನಪತ್ರಿಕೆ, ದಿನಾಂಕ 18–9–20.ಪು.9.


■■

– 11ನೇ ಪುಟದಿಂದ ಮುಂದುವರೆದುದು

ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ಕೆ ಮುಂದಾಗಬೇಕಿದೆ. ಆ ಮೂಲಕ ಪ್ರೌಢಶಿಕ್ಷಣದ ಬದಲಾವಣೆಗೆ ಸ್ಪಂದಿಸಬೇಕಿದೆ.

10. ಇಂದು ಪ್ರೌಢಶಿಕ್ಷಣದ ಹಂತದಲ್ಲಿ ಜಾರಿಯಲ್ಲಿರುವ ಚಟುವಟಿಕೆ ಆಧಾರಿತ ಶಿಕ್ಷಣ ನೀಡುವ ಕ್ರಮದಲ್ಲಿ ಸಾಕಷ್ಟು ಬದಲಾವಣೆಗಳನ್ನು ತರಬೇಕಿದೆ. ವಿದ್ಯಾರ್ಥಿಗಳಲ್ಲಿ ಮತ್ತು ಶಿಕ್ಷಕರಲ್ಲಿ ಚಟುವಟಿಕೆಯು ಕ್ರಿಯಾಶೀಲತೆಯನ್ನು ಹೆಚ್ಚಿಸುವ ಬದಲು ಸಮಯ ಮತ್ತು ಆರ್ಥಿಕ ದೃಷ್ಟಿಯಿಂದ ಹೊರೆ ಎಂಬ ಭಾವನೆ ಹೆಚ್ಚಾಗುತ್ತಿವೆ. ಮುಂದಿನ ದಿನಗಳಲ್ಲಿ ಚಟುವಟಿಕೆಗಳು ಅರ್ಥಪೂರ್ಣವಾಗಿ ರೂಪು ಪಡೆಯಬೇಕೇ ವಿನಃ ಹೊರೆಯಾಗಿ ಪರಿಣಮಿಸದಂತೆ ಎಚ್ಚರಿಕೆ ವಹಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.
11. ಪ್ರೌಢಶಿಕ್ಷಣದಲ್ಲಿ ಗಟ್ಟಿಗೊಳ್ಳುವ ರಾಷ್ಟ್ರಪ್ರೇಮವು ಕಾಲಾನಂತರದಲ್ಲಿ ವಿದ್ಯಾರ್ಥಿಗಳಲ್ಲಿ ಅಬ್ಬರದ ಅಂಧಾಭಿಮಾನವಾಗಿ ರೂಪು ಗೊಳ್ಳದಂತೆ ಎಚ್ಚರಿಕೆ ವಹಿಸಬೇಕಾದ ಸವಾಲು ಎದುರಾಗಿದೆ.
12. ಪ್ರೌಢಶಿಕ್ಷಣದ ಕಾಳಜಿ ಕೇವಲ ಮಾಹಿತಿ ಪ್ರಸಾರವಲ್ಲ; ಬದಲಿಗೆ ಆಸಕ್ತಿಗಳ–ಮೌಲ್ಯಗಳ–ಮನೋಭಾವಗಳ ವಿಕಾಸ, ಸ್ವತಂತ್ರವಾಗಿ ಅಧ್ಯಯನ ಮಾಡುವ, ಆಲೋಚಿಸುವ, ತೀರ್ಮಾನ ತೆಗೆದುಕೊಳ್ಳುವ, ಕೌಶಲತೆಗಳನ್ನು ಅಂತರ್ಗತ ಮಾಡಿಕೊಳ್ಳುವ ಕ್ರಿಯೆಗಳಿಗೆ ಒತ್ತಾಸೆಯಾಗಿ ನಿಲ್ಲಬೇಕಿದೆ. ಈ ದಿಕ್ಕಿನಲ್ಲಿ ಪ್ರೌಢ ಶಿಕ್ಷಣವು ಅಗತ್ಯ ತಿರುವನ್ನು ಹೊಂದಬೇಕಿದೆ.

ಒಟ್ಟಾರೆ ಭಾರತದ ಸಾಂಸ್ಕೃತಿಕ ಪರಂಪರೆ, ಸಮಾಜವಾದ, ಜಾತ್ಯತೀತತೆ, ಪ್ರಜಾಪ್ರಭುತ್ವ, ಪರಿಸರ ಸಂರಕ್ಷಣೆ, ವೈಜ್ಞಾನಿಕ ಮನೋಭಾವ ಮೊದಲಾದ ಮೌಲ್ಯಗಳ ವಿಕಾಸಕ್ಕೆ ಒತ್ತು ನೀಡುವಂತೆ ಪ್ರೌಢಶಿಕ್ಷಣವು ತಿರುವನ್ನು ಪಡೆಯಬೇಕಿದೆ. ಈ ದಿಶೆಯಲ್ಲಿ ಕಾಲಕಾಲಕ್ಕೆ ಪ್ರೌಢಶಿಕ್ಷಣದ ಪಠ್ಯಕ್ರಮವು ಪರಿಷ್ಕರಣೆಗೊಳ್ಳಬೇಕಿದೆ. ಸಮಾಜದ ನಿರೀಕ್ಷೆಗಳಿಗೆ ತಕ್ಕಂತೆ ಬದಲಾವಣೆಯಾಗುವ ಪಠ್ಯಕ್ರಮವು ಪ್ರೌಢಶಿಕ್ಷಣದಲ್ಲಿ ಅಪೇಕ್ಷಿತ ಬದಲಾವಣೆಯನ್ನು ತರುತ್ತದೆ. ಹಾಗೆಯೇ ಶಿಕ್ಷಣದ ಪ್ರತಿ ಹಂತದಲ್ಲಿ ಕಲಿಕೆಯ ಕನಿಷ್ಠ ಸಾಮರ್ಥ್ಯಗಳನ್ನು ನಿಗದಿಗೊಳಿಸುವ ವ್ಯವಸ್ಥೆಯು ಜಾರಿಗೆ ಬರಬೇಕಿದೆ. ಇದರಿಂದ ಪ್ರತಿ ಹಂತದಲ್ಲೂ ವಿದ್ಯಾರ್ಥಿಗಳಲ್ಲಿ ಗರಿಷ್ಠ ಮಟ್ಟದ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳುವಂತೆ ಮಾಡಲು ಸಾಧ್ಯವಾಗುತ್ತದೆ. ದೇಶದ ಚಾರಿತ್ರಿಕ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತಲೇ ಅವರಲ್ಲಿ ಭವಿಷ್ಯದ ಕುರಿತು ಜಾಗೃತಿಯ ಪ್ರಜ್ಞೆಯನ್ನು ರೂಪುಗೊಳಿಸುವಲ್ಲಿ ಪ್ರೌಢಶಿಕ್ಷಣ ಮುಖ್ಯ ಹಂತವಾಗಿರುವುದರಿಂದ ಕಾಲಕ್ಕೆ ತಕ್ಕಂತೆ ಇದು ಬದಲಾಗಬೇಕಾದುದು ಅನಿವಾರ್ಯ ಸಂಗತಿಯಾಗಿದೆ. ಪ್ರಸ್ತುತ ದುರ್ಬಲರು, ಅವಕಾಶವಂಚಿತರು, ಗಿರಿಜನರು ಮೊದಲಾದ ನಿರ್ಲಕ್ಷಿತ ಗುಂಪುಗಳಿಗೆ ಪ್ರೌಢಶಿಕ್ಷಣದ ಅವಕಾಶಗಳನ್ನು ವಿಸ್ತರಿಸುವ, ಗುಣಮಟ್ಟದ ಶಿಕ್ಷಣ ನೀಡುವ, ಜಾಗತಿಕ ಮೌಲ್ಯಪ್ರಜ್ಞೆಯನ್ನು ಬೆಳೆಸುವ, ಜೀವನವನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಅಗತ್ಯವಾದ ಶಿಕ್ಷಣ ಒದಗಿಸುವ ಸವಾಲುಗಳನ್ನು ಪ್ರೌಢಶಿಕ್ಷಣ ಇಂದು ಎದುರಿಸಬೇಕಾಗಿದೆ.

## ಆಕರ ಗ್ರಂಥಗಳು


- **ಡಾ.ಮಹಾಬಲೇಶ್ವರ ರಾವ್ :** ಶಿಕ್ಷಣದಲ್ಲಿ ತತ್ವಶಾಸ್ತ್ರೀಯ ಮತ್ತು ಸಮಾಜ ಶಾಸ್ತ್ರೀಯ ಪರಿಪ್ರೇಕ್ಷ್ಯಗಳು, ಮೈಸೂರು ಶ್ರುತಿಲೋಕ ಪ್ರಕಾಶನ.
- **ಹೆಚ್.ಎಸ್.ಮುದ್ದೇಗೌಡ :** ಹೊಸ ಶಿಕ್ಷಣ ನೀತಿ, ಮಂಡ್ಯ ಶ್ರೀನಿಧಿ ಪ್ರಿಂಟರ್ಸ್.
- **ಜಿ.ಹನುಮಂತ ರೆಡ್ಡಿ :** ಶಿಕ್ಷಣ, ಮೈಸೂರು ಚೇತನ್ ಬುಕ್ ಹೌಸ್.
- **ಡಾ. ವೈ. ಎನ್. ಶ್ರೀಧರ್ :** ಶಿಕ್ಷಣದ ತಾತ್ವಿಕ ನೆಲೆ, ಬೆಂಗಳೂರು ಅನುರಾಧ ಪ್ರಕಾಶನ.
- **ಸಿ. ಇ. ಮಲ್ಲೇಶ್ ಮತ್ತು ಆರ್. ಶ್ರೀರಂಗಪ್ಪ :** ಆಧುನಿಕ ಶಿಕ್ಷಣದ ಒಲವುಗಳು, ಕೋಲಾರ ಎಸ್. ಎಂ. ವಿ. ಪ್ರಕಾಶ.
- **Dr.R.N.Sharma :** Philosophy and Sociology of Education, Delhi Surjeet Publications.
- **R.A. Sharma :** Methaphysics, Epistemology, Axiology and Education, Meerut (UP) R.Lall Book Depot.
- **Dr.S.Arulsamy :** Philosophical and Sociological Perspectives on Education, New Delhi Neelkamal Publication.


■■



– 20ನೇ ಪುಟದಿಂದ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಮೂಹ ಮಾಧ್ಯಮ ಮತ್ತು ಮಹಿಳೆ : ಸಾಧ್ಯತೆ ಮತ್ತು ಸವಾಲು

✍ **ಡಾ. ಗೀತಾ ವಸಂತ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

'ಸಮೂಹ' ಮತ್ತು 'ಮಾಧ್ಯಮ' ಎರಡೂ ಪ್ರಜ್ಞೆಗಳಿಂದ ದೂರವಾಗಿ ಮಹಿಳೆ ಒಂಟಿ ದ್ವೀಪದಂತಿದ್ದ ಗತದಿನಗಳಿದ್ದವು. ಹಿತ್ತಲ ಜಗತ್ತಿನ ನೋವುಗಳು ಜಗಲಿಗೂ ದಾಟಗೊಡದ ಗೋಡೆಗಳಿದ್ದವು. ಇನ್ನು ಸಾಮಾಜಿಕ ರಚನೆಗಳಲ್ಲಿ ಅವಳದು ಮೌನ ಹಾಜರಿ. ಚರಿತ್ರೆಯಲ್ಲೂ ದಾಖಲಾಗದ ಕ್ರಿಯಾಶೀಲತೆ. ಮಹಿಳೆಯಿಲ್ಲದ ಯಾವ ಸಮೂಹವೂ ಇರಲೇ ಇಲ್ಲ. ಕಲೆ, ಸಂಸ್ಕೃತಿ, ಹಾಡು, ಕಥನ, ಕೃಷಿ ಕೌಶಲಗಳು. ಹೀಗೆ ಜೀವನವನ್ನು ಸೃಜಿಸುವ ಎಲ್ಲ ಮಾಧ್ಯಮಗಳಲ್ಲಿ ಅವಳು ಇದ್ದಳು. ಅವಳ ಅರಿವು ಸಮೂಹದ ಬದುಕನ್ನುಕಟ್ಟಿತ್ತು. ಆದರೆ ಅವಳ ಇರುವು ಅರಿವೇ ಆಗದಂತೆ ಇತ್ತು. ಅದನ್ನು 'ಕಾಣುವ', 'ಕೇಳಿಸಿ' ಕೊಳ್ಳುವ ಪ್ರಜ್ಞೆ ಮಸಕಾಗಿತ್ತು. ಅವಳು ಅಂತರಗಂಗೆಯಂತೆ ಹರಿಯುತ್ತಿದ್ದಳು. 'ದಾಖಲಾಗುವ ಅಕ್ಷರ' ರಾಜಕಾರಣದಲ್ಲಿ ಶೂನ್ಯವಾಗಿದ್ದಳು.

ಇಂದು ಆಧುನಿಕ ಸಂದರ್ಭದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಒಳಗೆ ಮಹಿಳೆಯಿದ್ದಾಳೆ. ಈಗಲೂ ಯಾಕೆ ಅವಳ ದೇಹ ಮನಸ್ಸುಗಳು ಅವಳವೇ ಆಗಿಲ್ಲ ?. ಅಭಿವ್ಯಕ್ತಿ ಸ್ವಾತಂತ್ರ್ಯ, ಆಯ್ಕೆ ಸ್ವಾತಂತ್ರ್ಯ, ಮೂಲಭೂತ ಹಕ್ಕು, ಸಂವಿಧಾನಾತ್ಮಕ ಪರಿಹಾರಗಳನ್ನು ಯಾಕೆ ಈಗಲೂ ಕ್ಲೈಮ್ ಮಾಡಲು ಆಗುತ್ತಿಲ್ಲ ? ಮಾಧ್ಯಮಗಳಲ್ಲಿ ಮಹಿಳೆಯ ಚಿತ್ರಣ ಯಾಕೆ ಇನ್ನೂ ಆಶಾದಾಯಕವಾಗಿಲ್ಲ ? ಮಾಧ್ಯಮ ಕ್ಷೇತ್ರದಲ್ಲಿ ಅವಳ ನಿರ್ಣಾಯಕ ಸ್ವರ ಏಕೆ ಕೇಳುತ್ತಿಲ್ಲ ? ಎಂಬ ಪ್ರಶ್ನೆಗೆ ಗತದೊಂದಿಗೆ ಮುಖಾಮುಖಿ ಯಾಗಬೇಕು.

ಆಳವಾಗಿ ಬೇರೂರಿದ ಲಿಂಗ ಪೂರ್ವಗ್ರಹಗಳನ್ನು ಕಳಚಿಕೊಳ್ಳದೇ ನವ ಮಾಧ್ಯಮಗಳೂ ಹೊಸ ಹೆಣ್ಣಿನ ಶೋಧವನ್ನು ಮಾಡಲಾರವು. ಅವಳ ಧ್ವನಿಯನ್ನು ಸರಿಯಾಗಿ ಗ್ರಹಿಸಿ ಬಿತ್ತರಿಸಲಾರವು. ಮಹಿಳೆಯ ಕುರಿತುಧನಾತ್ಮಕ/ಋಣಾತ್ಮಕ ಅಭಿಪ್ರಾಯಗಳನ್ನು ರೂಪಿಸುವಲ್ಲಿ ಸಮೂಹ ಮಾಧ್ಯಮಗಳಿಗೆ ಅಪಾರ ಸಾಧ್ಯತೆ ಇದೆ ಎಂಬುದು ಗಮನಾರ್ಹ. ಸಮೂಹ ಮಾಧ್ಯಮಗಳು ಬರಿಯ ಸುದ್ದಿಪ್ರಚಾರ ಸಂಸ್ಥೆಗಳಲ್ಲ. ಜನರ ಅಭಿಪ್ರಾಯ, ಜೀವನ ಶೈಲಿ, ಜೀವನವನ್ನು ಕುರಿತ ದೃಷ್ಟಿಕೋನಗಳನ್ನು ಪ್ರಭಾವಿಸುವ ಶಕ್ತಿ ಹೊಂದಿದಂಥವು. ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖ ಸ್ಥಾನ ವಹಿಸುವ ಅವುಗಳಿಗೆ ಸಾಮಾಜಿಕ ಜವಾಬ್ದಾರಿ ಕೂಡ ಇದೆ. ಭಾರತದಂತಹ ಅನಕ್ಷರಸ್ಥರು ಅಧಿಕವಾಗಿರುವ ರಾಷ್ಟ್ರಗಳಲ್ಲಿ ರೇಡಿಯೋ, ದೂರದರ್ಶನಗಳು ಅನಿವಾರ್ಯವಾಗಿ ಕಲಿಕೆ ಹಾಗೂ ಗ್ರಹಿಕೆಯ ಮೂಲಗಳೂ ಆಗಿಬಿಟ್ಟಿವೆ. ಅವು ರೈತರಿಗೆ ಸಲಹೆ, ಸರ್ಕಾರಿ ಯೋಜನೆಗಳ ತಿಳುವಳಿಕೆ, ಪಲ್ಸ್ ಪೋಲಿಯೋ, ಸಂತಾನ ನಿಯಂತ್ರಣ, ಏಡ್ಸ್‌ಜಾಗೃತಿ, ವೈದ್ಯಕೀಯ ಮಾಹಿತಿಇತ್ಯಾದಿ ಬದುಕಿನ ಮೂಲಭೂತ ಸಂಗತಿಗಳನ್ನು ತಿಳಿಸುವ ಮಾಧ್ಯಮಗಳು ಹೌದು. ಆದರೆ ಇಂದು ಸಮೂಹ ಮಾಧ್ಯಮಗಳು ಸೇವಾ ಕ್ಷೇತ್ರಗಳಾಗಿ ಉಳಿಯದೇ ಅವು ಉದ್ಯಮಗಳೆಂದು ಘೋಷಿಸಿಕೊಂಡಾಗಿದೆ. ತಂತ್ರಜ್ಞಾನದ ಪ್ರಗತಿಯಿಂದ ಎಲೆಕ್ಟ್ರಾನಿಕ್ ಮೀಡಿಯಾ ಕ್ರಾಂತಿ ಆರಂಭವಾದ ಮೇಲೆ ಅವು ಎಲ್ಲ ಸಾಮಾಜಿಕ ನೈತಿಕತೆಯನ್ನು ಗಾಳಿಗೆ ತೂರಿದ ಲಾಭಕೋರ ಉದ್ದಿಮೆಯಾಗಿವೆ.

ಇವತ್ತು ಸಮೂಹ ಮಾಧ್ಯಮಗಳ ಹಿಂದೆಇರುವ ಶಕ್ತಿಗಳು ಮಾರುಕಟ್ಟೆ ನಿರ್ದೇಶಿತ ಏಜೆಂಟರಂತೆ ವರ್ತಿಸುತ್ತಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯ ಉತ್ಪನ್ನಗಳು ನ್ಯಾಯದ ಪ್ರಶ್ನೆಗಳನ್ನು ಕೇಳಲು ಬಿಡುವುದಿಲ್ಲ. ಸರಕು ಸಂಸ್ಕೃತಿಯನ್ನು ಬೆಳೆಸುವ ಧ್ಯೇಯಹೊಂದಿರುವ ಈ ವ್ಯವಸ್ಥೆ ಹೆಣ್ಣನ್ನು ಓರ್ವ 'ಗ್ರಾಹಕ'ಳಾಗಿ ಮಾತ್ರ ಕಾಣುತ್ತದೆ. ಅದಕ್ಕೆ ಪೂರಕವಾಗಿ ಅವಳನ್ನು ಸರಕು/ ಕಮಾಡಿಟಿಯಾಗಿ ಚಿತ್ರಿಸುತ್ತದೆ. ಅದಕ್ಕೆ ಪ್ರಜಾತಾಂತ್ರಿಕ ಮೌಲ್ಯಗಳ ವಿಕಸನದಕುರಿತು ಎಳ್ಳಷ್ಟು ಕಾಳಜಿಯಿಲ್ಲ ಎಂಬುದು ವರ್ತಮಾನದ ಅನುಭವಗಳಿಂದ ವಿದಿತವಾಗುತ್ತದೆ. ಯಂತ್ರ ನಾಗರೀಕತೆಯ ಕೊಡುಗೆಗಳಾದ ಸಮೂಹ ಮಾಧ್ಯಮಗಳು ಬಂಡವಾಳಶಾಹಿಯೊಂದಿಗೆ ಆಂತರಿಕ ಸಂಬಂಧ ಹೊಂದಿದೆ. ಅವುಗಳಿಗೆ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಹೊಸ ಮಾದರಿಗಳ ಶೋಧ ಮುಖ್ಯವಲ್ಲ. ಈಗಾಗಲೇ ಇರುವ ಸಿದ್ಧಮಾದರಿ, ಜನಪ್ರಿಯ ನಿಲುವುಗಳನ್ನೇ ಬಳಸಿಕೊಂಡು ಅದನ್ನು ಗೊತ್ತಿಲ್ಲದಂತೆ ಸ್ಥಿರೀಕರಿಸುತ್ತಿವೆ. ಸೂಕ್ಷ್ಮ ಗ್ರಹಿಕೆಗಳ ಬದಲು ಅಲ್ಲಿ ಸ್ಥೂಲ ಗ್ರಹಿಕೆಗಳೇ ವಿಜೃಂಭಿಸುತ್ತಿವೆ. ಇದಕ್ಕೆ ನೂರಾರು ಉದಾಹರಣೆಗಳನ್ನು ಕೊಡಬಹುದು.

## ಜನಪ್ರಿಯ ಹುಸಿ ಮಾದರಿಯ ನಿರ್ಮಾಣ

ತಂತ್ರಜ್ಞಾನದ ಬಲದಿಂದಾಗಿ ಇಂದು ಸಮೂಹ ಮಾಧ್ಯಮಗಳು ಕಾಲ, ದೇಶಗಳ ಗಡಿಗಳನ್ನು ಮೀರಿನಿಂತಿವೆ. ಅವು ಬಹುವ್ಯಾಪಕವಾಗಿ ಹಾಗೂ ವೇಗವಾಗಿ ಪಿತೃಪ್ರಧಾನ ಸಂಸ್ಕೃತಿಯ ಧೋರಣೆಗಳನ್ನು ಹಾಗೂ ಜ್ಞಾನವನ್ನು ಹರಡುವ ಸಾಧನವೂ ಆಗಿವೆ. ಇದನ್ನು ಸುದ್ದಿ – ವರದಿಗಳು, ವಿಶ್ಲೇಷಣೆ – ವಿಮರ್ಶೆಗಳು, ದೃಶ್ಯಮಾಧ್ಯಮದ ಧಾರವಾಹಿಗಳು, ಜಾಹೀರಾತುಗಳು, ರಿಯಾಲಿಟಿ ಶೋಗಳು, ಗೇಮ್‌ಗಳು ಅಲ್ಲದೇ ಜನಪ್ರಿಯ ಸಿನಿಮಾಗಳಲ್ಲೂ ಢಾಳಾಗಿ ಕಾಣಬಹುದು.ಸಾಂಸ್ಕೃತಿಕ 'ಸ್ಟೀರಿಯೊ ಟೈಪ್' ಅಥವಾ ಸಮೂಹ ಸ್ಮೃತಿಯಲ್ಲಿ ಬಿತ್ತಲ್ಪಟ್ಟ ಸಿದ್ಧಮಾದರಿಗಳನ್ನು ಇವು ಮತ್ತೂ ವಿಜೃಂಭಿಸಿ ಮೆಲೊಡ್ರಾಮೆಟಿಕ್ ಆಗಿ ಕಟ್ಟಿಕೊಟ್ಟು ಒಂದು ಹುಸಿ ಭ್ರಮೆಯನ್ನು ಅತ್ಯಂತ ಆಳವಾಗಿ ನಿರ್ಮಿಸುತ್ತವೆ. ಇದು ಒಂದೇ ಸಲ ಬರುವ ರೋಗವಲ್ಲ. ನಿಧಾನವಾಗಿ ಜೀವಕೋಶಗಳನ್ನು ಆಕ್ರಮಿಸುತ್ತಾ ಹರಡುತ್ತಾ ರಕ್ತಗತವಾಗುವ ಪೂರ್ವಗ್ರಹದ ರೋಗ.

ಜನಪ್ರಿಯ ಧಾರವಾಹಿಗಳಲ್ಲಿ ಹಾಗೂ ಸಿನಿಮಾಗಳಲ್ಲಿ ಸ್ತ್ರೀಯರು ಚಿತ್ರಣಗೊಳ್ಳುವ ಬಗೆ ಇದೇ ಸಿದ್ಧಮಾದರಿಯದು. ಅವಳು ಒಂದೋದೇವತೆ ಇಲ್ಲ ರಾಕ್ಷಸಿ. ಅಸಹಾಯಕತೆಯೇ ಮೈವೆತ್ತ ಪಾತ್ರಗಳು ಇಲ್ಲದುಷ್ಟತನವೇ ಮೈದಾಳಿದ ಪಾತ್ರಗಳು. ಇಂಥ ಕಪ್ಪು ಬಿಳುಪಿನ ಚಿತ್ರಣಗಳಲ್ಲಿ ಬದುಕಿಗೆ ಸಮೀಪವಾದ ಪಾತ್ರಗಳು ಅವುಗಳ ನಿಜ ತಲ್ಲಣಗಳು ಕಾಣುವುದು ಕಡಿಮೆ. ಮಹಿಳೆಯರೇ ಧಾರವಾಹಿಗಳ ಅಧಿಕ ವೀಕ್ಷಕರು ಎಂಬ ಸರ್ವೆಯನ್ನು ಬಂಡವಾಳಶಾಹಿಗಳು ಮಾಡಿಕೊಂಡಮೇಲೆಅಲ್ಲಿ 'ಏಕ್ತಾ ಕಪೂರ್ ನಿರ್ಮಾಣ ಮಾದರಿ'ಯೊಂದು ಹುಟ್ಟಿಕೊಂಡು ಬಿಡುತ್ತದೆ. "ಕ್ಯೂಂಕಿ ಸಾಸ್ ಭೀಕಭೀ ಬಹೂಥೀ" ಎಂಬ 90ರ ದಶಕದ ಜನಪ್ರಿಯ ಧಾರವಾಹಿಯೊಂದನ್ನು ಇಲ್ಲಿ ಹೆಸರಿಸಬಹುದು. ಅತ್ತೆ ಸೊಸೆ ನಾದಿನಿಯರ ನಡುವೆ ಸ್ಪರ್ಧೆ, ಮತ್ಸರಗಳನ್ನು ಪ್ರಚೋದಿಸುವಂಥ ಧಾರಾವಾಹಿಗಳು ಸ್ತ್ರೀ ಚೈತನ್ಯವನ್ನು ನೆಗೆಟಿವ್ ಆಗಿ ಕಟ್ಟುತ್ತವೆ.

70ರ ದಶಕದಲ್ಲೇ ನಮ್ಮಸಾಹಿತ್ಯದಲ್ಲಿ "ಅಂಗಳದ ತುಳಸಿಗೆ ಪ್ರದಕ್ಷಿಸಿ ರಂಗೋಲೆ ಬರೆದು ಕೈಲಾಸ ಕಾಣಲು ನಿನ್ನದಮ್ಮಯ್ಯ ನನ್ನ ಕೈಲಾಗಲ್ಲ

ದಾರಿಬಿಡು" ಎಂಬಂಥದಿಟ್ಟ ಅಭಿವ್ಯಕ್ತಿ ಬಂದಿದ್ದರೆ, ಇಂದಿನ ಧಾರವಾಹಿಗಳು ತುಳಸಿಕಟ್ಟೆ ಸುತ್ತುವ, ಗಂಡನ ಕೃಪೆಗಾಗಿ 'ತೆರೆಯೋ ಬಾಗಿಲನು' ಎಂದು ದೈನ್ಯದಿಂದ ಬೇಡುವ, ಕಾಯುವ ಪಾತ್ರಗಳು. ಇಲ್ಲಿನ ಹೊಸತನವೆಂದರೆ ಮಹಿಳಾ ವಿಲನ್‌ಗಳು ಪರಿಚಯಿಸಲ್ಪಟ್ಟಿದ್ದು.! ವಿಷಹಾಕುವ, ಕೊಲೆಮಾಡುವ ವಿಕೃತ ತಂತ್ರಗಳಿಂದ ಹಿಂಸಿಸುವ ಪಾತ್ರಗಳು. ಇಲ್ಲವೇ ಮೊದಲು ಸೂಚಿಸಿದ ಅಸಹಾಯಕ ಪಾತ್ರಗಳು. ಇವು ಮತ್ತೆ ಸ್ತ್ರೀ – ಪುರುಷರ ನಡುವಿನ ಅಧಿಕಾರ ಸಂಬಂಧವನ್ನೇ ಪೋಷಿಸುತ್ತ ಹಿಮ್ಮುಖ ಚಲನೆಗೆಳೆಸುತ್ತವೆ. ಖಳನಾಯಕಿಯರಂತೂ ನೈತಿಕ ಪ್ರಜ್ಞೆ ಹಾಗೂ ಕಾನೂನಿನ ಪ್ರಜ್ಞೆ ಎರಡೂ ಇಲ್ಲದ ಅತಿರಂಜಿತ ಪಾತ್ರಗಳು. ಇವು "ಪರಿಣಾಮ ಎದುರಿಸದೇ ಕಾನೂನು ಮುರಿಯುತ್ತವೆಂದು" ರಾಷ್ಟ್ರೀಯ ಮಹಿಳಾ ಆಯೋಗ ಆರೋಪಿಸಿದೆ. 'ಮಹಿಳೆಯರ ಅನುಚಿತ ಪ್ರಾತಿನಿಧ್ಯತಡೆ' ಕಾಯ್ದೆಗೆ ಸೂಕ್ತತಿದ್ದುಪಡಿತರಬೇಕೆಂದು ಮಹಿಳಾ ಆಯೋಗವು ಸರ್ಕಾರವನ್ನು ಒತ್ತಾಯಿಸಿದ ಸಂದರ್ಭದಲ್ಲಿ ಟಿ. ವಿ., ಧಾರವಾಹಿಗಳನ್ನೂ ಕೂಡ ಈ ಕಾನೂನಿನ ವ್ಯಾಪ್ತಿಗೆತರಬೇಕೆಂದು ಸೂಚಿಸಿದ್ದನ್ನು ಇಲ್ಲಿ ಗಮನಿಸಬಹುದು.

'ಮಹಿಳೆ' ಎಂಬ ಪದದಡಿ ಭಿನ್ನ ಸಾಮಾಜಿಕ/ ಸಾಂಸ್ಕೃತಿಕ ಸಮೂಹಗಳಿವೆ. ಶ್ರಮಿಕ, ಕೃಷಿಕ, ಕಾರ್ಮಿಕ ಮಹಿಳೆಯರ ಅಸಂಘಟಿತ ವಲಯವಿದೆ. ಗೃಹಿಣಿತ್ವದಲ್ಲಿ ಒಳಸರಿದ ಮಹಿಳೆಯಿದ್ದಾಳೆ. ಸೂಳೆ ಎಂಬ ಪದದಡಿಯಲ್ಲಿ ಅಮಾನವೀಯವಾಗಿ ಪರಿಗಣಿಸಲ್ಪಡುವ ಮಹಿಳೆಯರಿದ್ದಾರೆ. ಭಿನ್ನ ನೈತಿಕ, ಸಾಮಾಜಿಕ, ಆರ್ಥಿಕ ಚೌಕಟ್ಟುಗಳಲ್ಲಿರುವ ಅವರಿಗೆ ವಿಸ್ಮೃತಿ ಕಳಚಿಕೊಂಡು ತಮ್ಮನ್ನುತಾವು 'ಕಾಣುವುದೇ' ಸಾಹಸ. ಕಟ್ಟಿಕೊಳ್ಳುವುದು ಸವಾಲು. ಅಭಿವ್ಯಕ್ತಿಸುವುದು ಬಯಲಲ್ಲಿ ಬೆತ್ತಲೆ ನಿಂತಂತೆ!. ಸಮೂಹ ಮಾಧ್ಯಮಗಳಲ್ಲಿ ಹೆಣ್ಣಿನ ಪ್ರಾತಿನಿಧ್ಯವೇ ಅತ್ಯಲ್ಪ. ಅದರಲ್ಲೂ ಈ ಎಲ್ಲ ಹಿನ್ನೆಲೆಯ ಮಹಿಳೆಯರು ಅಲ್ಲಿ ಅಭಿವ್ಯಕ್ತಿ ಪಡೆದಿಲ್ಲ. ದಲಿತ, ಅಲೆಮಾರಿ, ಬುಡಕಟ್ಟು ಮಹಿಳೆಯರು, ಲಿಂಗ ಪರಿವರ್ತಿತರು ಅವರ ಸಂಕಟ– ಸಮಸ್ಯೆಗಳು ಬಟ್ಟೂ 'ಸುದ್ದಿಮೌಲ್ಯ'ದ ದೃಷ್ಟಿಯಿಂದ ನಗಣ್ಯ ವಿಷಯಗಳೆಂದೇ ಭಾವಿಸಿರುವುದು ಹೆಚ್ಚು. ಅದರಲ್ಲೂ ದೃಶ್ಯ ಮಾಧ್ಯಮಗಳ ಆದ್ಯತೆಯೇ ಬೇರೆ. ಜನಪ್ರಿಯ ಸಿನಿಮಾ ಹಾಗೂ ಧಾರವಾಹಿಗಳ ಕತೆಗಳ ಆವರಣ, ಹಿನ್ನೆಲೆ, ಪರಿಸರ ಹೆಸರುಗಳನ್ನು ಗಮನಿಸಿದರೆ ಗೊತ್ತಾಗುತ್ತದೆ ಅವೆಲ್ಲ ಮೇಲ್ ಸ್ತರದ, ಮೇಲ್ ಮಧ್ಯಮ ವರ್ಗದ, ಶ್ರೀಮಂತರ ಕತೆಗಳು. ಅಲ್ಲಿ ನಡೆವ ಅದ್ದೂರಿ ಸೀಮಂತ, ಮದುವೆ, ನಿಶ್ಚಿತಾರ್ಥ, ತೊಟ್ಟಿಲಶಾಸ್ತ್ರ, ಪೂಜೆ ಪುನಸ್ಕಾರ, ದೃಶ್ಯ ವೈಭವಗಳು ಭ್ರಮಾಧೀನ 'ಸುಖ'ದ ಕಲ್ಪನೆಯನ್ನು ನಿರ್ಮಿಸುತ್ತವೆ. ಟಿ.ವಿ ಮುಂದೆ ಮೈಮರೆತು ಕುಳಿತು ವೀಕ್ಷಿಸುವ ಬಡ ಹೆಣ್ಣು ಮಕ್ಕಳು ದ್ವಂದ್ವ, ಕೀಳರಿಮೆಯಲ್ಲಿ ನರಳುತ್ತಾರೆ. ಅಂಥ ಹುಸಿ ಬದುಕಿಗಾಗಿ ಹಾತೊರೆಯುತ್ತಾರೆ. ಕೊನೆಗೂ ಅವರು ಉಪಭೋಗ ಸಂಸ್ಕೃತಿಗೆ ಅಡಿಯಾಳಾಗುತ್ತಾರೆ.

ಸಮೂಹ ಮಾಧ್ಯಮಗಳಲ್ಲಿ ಅದರಲ್ಲೂ ದೃಶ್ಯಮಾಧ್ಯಮಗಳಲ್ಲಿ ಮಹಿಳೆಯ ದೇಹವೇ ಒಂದು ಸರಕು. ಅಲ್ಲಿ ಅವಳ ದೇಹಾಭಿವ್ಯಕ್ತಿಗೆ ಇರುವಷ್ಟು ಅವಕಾಶ ಬೌದ್ಧಿಕ ಅಭಿವ್ಯಕ್ತಿಗೆ ಇಲ್ಲದಿರುವುದೇ ಒಂದು ದುರಂತ. ಇದು ಹೆಣ್ಣನ್ನು ನೋಡುವ ಸಾಂಪ್ರದಾಯಿಕ ಪುರುಷರ ದೃಷ್ಟಿಕೋನದ ಮುಂದುವರಿಕೆಯೇ ಸರಿ. Sex ಮತ್ತು Crime ಇಂದು ಹೆಚ್ಚು ಬಿಕರಿಯಾಗುವ ಬೇಡಿಕೆಯಲ್ಲಿರುವ ಸರಕುಗಳು. ಮಹಿಳೆಯನ್ನು ಈ ಎರಡೂ ಸುದ್ದಿ ಚರ್ಚೆಗಳಲ್ಲಿ ಒಂದು object ಆಗಿ ಬಳಸಿಕೊಳ್ಳಲಾಗುತ್ತದೆ ರೋಚಕವಾಗಿ ಬಿಂಬಿಸಲಾಗುತ್ತದೆ. ಅತ್ಯಾಚಾರ, ಮಕ್ಕಳ ಲೈಂಗಿಕ ಶೋಷಣೆ, ಪಾತಿವ್ರತ್ಯದ ಕುರಿತು ಸಂಶಯ.... ಇಂಥ ವಿಚಾರಗಳಲ್ಲಿ ಖಾಸಗಿತನವನ್ನು ಹಾಳು ಮಾಡಬಾರದೆಂಬ, ಹೆಸರು ಚಿತ್ರಗಳನ್ನು ಬಳಸಬಾರದೆಂಬ ನಿಯಮವನ್ನು 'ಭಾರತೀಯ ಪತ್ರಿಕಾ ಮಂಡಳಿಯ ನೀತಿ ಸಂಹಿತೆ' ಉಲ್ಲಂಘಿಸಲ್ಪಡುತ್ತಲೇಇರುತ್ತದೆ.ಪರೋಕ್ಷವಾಗಿ ಹೆಸರು ಹೇಳದೇ ಆ ವ್ಯಕ್ತಿಯಾರೆಂದು ತಿಳಿಸುವ ನಾಟಕ ನಡೆಯುತ್ತದೆ. ರಾಜಕಾರಣಿಗಳ, ಪ್ರತಿಷ್ಠಿತ ವ್ಯಕ್ತಿಗಳ ತೇಜೋವಧೆ ಮಾಡಬೇಕೆಂಬ ರಾಜಕೀಯ ಹುನ್ನಾರಗಳ ಸಂದರ್ಭದಲ್ಲಿಯೂ ಸ್ತ್ರೀಯರ ಬದುಕು ನಾಶವಾಗುತ್ತದೆ. ಅಧಿಕಾರವಿರುವ ಪುರುಷ ತಲೆಯೆತ್ತಿಯೇ ಓಡಾಡುತ್ತಿರುತ್ತಾನೆ !.

ರಿಯಾಲಿಟಿ ಶೋಗಳಲ್ಲಿ ರಿಯಾಲಿಟಿಯೇ ಇರುವುದಿಲ್ಲ ಎಂಬುದು ಜನಜನಿತ ಸತ್ಯ. ಅಶ್ಲೀಲತೆ, ಗಾಸಿಪ್, ದೇಹಪ್ರದರ್ಶನ, ಉದ್ರೇಕಕಾರಿ ದೇಹ ಭಾಷೆಯನ್ನೇ ಅವು ಮಹಿಳೆಯಿಂದ ಅಪೇಕ್ಷಿಸುತ್ತಿರುತ್ತವೆ. ಸಿನಿಮಾಗಳಲ್ಲೂ ಇದೇ ಪ್ರತಿಬಿಂಬ 'ಮರಸುತ್ತುವ ನಾಯಕಿ' ಯರಿಗೆ ವ್ಯಕ್ತಿತ್ವವೇ ಶೂನ್ಯ. ಇನ್ನು ಹೊಸ ಕಾಲದ ಸಿನಿಮಾಗಳಲ್ಲಿ ಅವರು ಐಟಂ ಗರ್ಲ್‌ಗಳೂ ಆಗಿ 'ದೇಹಸಿರಿ' ಪ್ರದರ್ಶಿಸುವ ಭೋಗ ವಸ್ತುಗಳು. ಇಂಥ ಸಂದರ್ಭದಲ್ಲಿ ನಾಯಕ ನಟಿಯರೂ ಸಹ 'ಪಾತ್ರಕ್ಕೆ ಅಗತ್ಯವಿದ್ದರೆ expose ಮಾಡಲು ಸಿದ್ಧ ಎಂದು ಉಲಿಯುವುದು ಸಾಮಾನ್ಯ. ಇನ್ನೂ ಮುಂದೆ ಹೋಗಿ ಕೆಲವರು ನನ್ನ ದೇಹ ನನ್ನ ಸ್ವಾತಂತ್ರ್ಯ. ದೇಹವನ್ನು ಬಂಡವಾಳ ಮಾಡಿಕೊಳ್ಳುವುದು ನನ್ನ ಹಕ್ಕು ಎಂಬ ಬೋಲ್ಡ್ ಹೇಳಿಕೆ ಕೊಡುವುದಿದೆ. ದೇಹದ ಲಿಬರೇಟೆಡ್ ಸೆನ್ಸ್ ಬೇರೆ, ದೇಹವನ್ನು ಸರಕಾಗಿಸುವುದೇ ಬೇರೆ. ಅಕ್ಕಮಹಾದೇವಿಯ ಬಯಲಾಗುವ ಭಾವಕ್ಕೂ ನಟಿ/ರೂಪದರ್ಶಿಯರ ಹಣ ಗಳಿಸುವ ದಾಹಕ್ಕೂ ಸಂಬಂಧವಿಲ್ಲ.

ಇನ್ನೊಂದು 'ಸುಸಂಸ್ಕೃತ' ಮಾದರಿಯನ್ನು ಮಾಧ್ಯಮಗಳು ಪ್ರಾಜೆಕ್ಟ್ ಮಾಡುವುದು ಸೀರೆ, ಬಳೆ, ಕಾಲುಂಗುರ, ಸಿಂಧೂರ ಶೋಭಿತೆಯಾಗಿ. ಅವಳು ಅಪ್ಪಟ ಗೃಹಿಣಿ, ತ್ಯಾಗಮಯಿ. ತಾಯಿ, ಮಂತ್ರಿ, ವೇಶ್ಯೆ, ರಂಭೆ ಎಲ್ಲವೂ ಏಕಕಾಲಕ್ಕೆ ಆಗಬಲ್ಲ 'ಸೂಪರ್ ವುಮನ್'. ಎಂಟು ಕೈಗಳಲ್ಲಿ ಕಾವಲಿ, ಇಸ್ತ್ರಿಪೆಟ್ಟಿಗೆ, ಕಸಬರಿಗೆ, ಕುಕ್ಕರ್, ಹಾಲುಬಾಟಲಿ, ಲ್ಯಾಪ್‌ಟಾಪ್, ಗನ್ ಏನೆಲ್ಲ ಹಿಡಿದಿರುವ ಆಧುನಿಕ ನವದುರ್ಗೆ'. ಸಾಂಪ್ರದಾಯಿಕ ಪಾತ್ರಗಳು ಹಾಗೂ ಆಧುನಿಕ ಸವಾಲು ಎರಡೂ ಭಾರದಲ್ಲಿ ಬಗ್ಗಿ ಹೋದ ಆಧುನಿಕ ಸ್ತ್ರೀ !. ಅವಳೆ ಆದರ್ಶ ಮಹಿಳೆ. ಇನ್ನು 'ಆದರ್ಶ ದಂಪತಿ' ಸ್ಪರ್ಧೆಯಲ್ಲೂ ಇಂದೇ ಸ್ಟೀರಿಯೋ ಟೈಪ್‌ಗಳ ಮೆರವಣಿಗೆ. ಸೀರೆಯ ಬೆಲೆ ಹೇಳುವುದು, ಈರುಳ್ಳಿ ಹೆಚ್ಚುವುದು ಇಂಥದೇ ಸ್ಪರ್ಧೆಗಳು. ಜಾಹೀರಾತುಗಳ ವಿಷಯಕ್ಕೆ ಬಂದರೆ ಅದು ಆಧುನಿಕ ಗೃಹ ವಾದಿನಿಯರನ್ನು ಅಚ್ಚುಕಟ್ಟಾಗಿ ಸ್ಥಾಪಿಸುತ್ತದೆ. ಬಹುತೇಕ ಜಾಹೀರಾತುಗಳ ರೂಪದರ್ಶಿಯರು ಮಹಿಳೆಯರೇ. ಏಕೆಂದರೆ ಅವರೇ ಆಧುನಿಕ ಗ್ರಾಹಕಿಯರು !. 'ಯಾರು ಹೆಂಡತಿಯನ್ನು ಪ್ರೀತಿಸುತ್ತಾರೋ ಅವರು ಪ್ರೆಸ್ಟೀಜ್‌ನ್ನು ಹೇಗೆ ನಿರಾಕರಿಸುತ್ತಾರೆ' ಎಂಬಂಥ ಉಕ್ತಿಗಳು ಅದಕ್ಕೆ ಸಾಕ್ಷಿ. ಪುರುಷರಿಗೆ ಸಂಬಂಧಿಸಿದ ವಸ್ತುಗಳ ಜಾಹಿರಾತೇ ಇದ್ದರೂ ಅದಕ್ಕೆ ಮಹಿಳಾ ರೂಪದರ್ಶಿಗಳೇ ಬೇಕು !. ಅವರನ್ನು ಪೌರುಷ ಪ್ರದರ್ಶನಕ್ಕೆ ಮಾದಕ ಹಿನ್ನೆಲೆಯೊದಗಿಸುವ ಸಾಧನವಾಗಿ ಕಾಣಿಸಲಾಗುತ್ತದೆ. ಶೇವಿಂಗ್‌ಕ್ರೀಂ ಹಾಗೂ ಪುರುಷ ಸುಗಂಧ ದ್ರವ್ಯಗಳ ಜಾಹೀರಾತು ಇಂಥ ಚಂಚಲತೆಯೇ ಮೈವೆತ್ತ ಹೆಣ್ಣುಗಳನ್ನು ಗಂಡಸಿನ ಪಕ್ಕ ಸರಕಾಗಿ ನಿಲ್ಲಿಸಿ ಬಿಡುತ್ತದೆ ! ಇಲ್ಲಿ ಜಾಹೀರಾತಿನ ಪರಿಕಲ್ಪನೆಯ ಸುಸಂಬದ್ಧತೆಯಾಗಲೀ ಅದು ಸಮಾಜಕ್ಕೆ ಕೊಡುವ ಸಂದೇಶವಾಗಲೀ ಮುಖ್ಯವಾಗುವುದಿಲ್ಲ. ಜನರನ್ನು ಆಕರ್ಷಿಸುವ ಕ್ಷಣಿಕ ಸುಲಭ ವಿಧಾನವಷ್ಟೇ ಮುಖ್ಯ.

ಹೆಣ್ಣಿನ ಸೌಂದರ್ಯವೇ ಅವಳ ವ್ಯಕ್ತಿತ್ವ ಎಂಬಸಿದ್ಧ ಕಲ್ಪನೆಯಂತೂ ಚಾರಿತ್ರಿಕವಾದುದು. ಸೌಂದರ್ಯದ ಮಾನದಂಡಗಳನ್ನು fix ಮಾಡುವುದು ಹಿಂದೆಯೂ ಇರುವುದು ಮಾರುಕಟ್ಟೆ ರಾಜಕಾರಣವೇ. ಅದರ ಹಿಂದೆ ವರ್ಣ ರಾಜಕೀಯವೂ ಕೆಲಸ ಮಾಡುತ್ತದೆ. ವಿಧವಿಧದಕ್ರೀಂ. ಲೋಷನ್, ಶಾಂಪೂಗಳು, ಆ್ಯಂಟಿರಿಂಕಲ್, ಆ್ಯಂಟಿಏಜಿಂಗ್ ಕ್ರೀಂಗಳು, ಸ್ಲಿಂ ಆಗಿಸುವ, ದಪ್ಪಗಾಗಿಸುವ ಆಕಾರ ಹೆಚ್ಚಿಸು ಆಹಾರ ಔಷಧ ಉತ್ಪನ್ನಗಳು, ಇವೆಲ್ಲ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೆಣ್ಣನ್ನು ಸ್ಲಿಮ್ ಆಗಿ ಸುಂದರವಾಗಿ, ಬೆಳ್ಳಗೆ, ವಯಸ್ಸು ಮರೆ ಮಾಚುವಂತೆ ಇರಬೇಕೆಂದು ಪರೋಕ್ಷವಾಗಿ ನಿರ್ದೇಶಿಸುತ್ತವೆ. ಇತ್ತೀಚೆಗೆ ವರದಿಯಾದ ಎರಡು ಘಟನೆಗಳು ಇಂಥ ಮಾಧ್ಯಮ / ಜಾಹಿರಾತು ನಿರ್ಮಿತ ಮಿಥ್‌ಗಳಿಂದ ತರುಣ ಪೀಳಿಗೆ ಹೇಗೆ ದಾರಿತಪ್ಪಿ ಕ್ಷೋಭೆಗೊಳಗಾಗುತ್ತದೆ ಎಂಬುದನ್ನು ನೋಡಬಹುದು. ತುಮಕೂರಿನ ಒಬ್ಬ ಯುವತಿ ತಾನು ದಪ್ಪಗಿರುವೆ ಎಂಬ ಖಿನ್ನತೆಯಿಂದ ನರಳಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕೊಡಗಿನ ಇನ್ನೊಬ್ಬ ಯುವತಿ ಹೇರ್ ಸ್ಟ್ರೇಟನಿಂಗ್ ಮಾಡಿಸುವ ಟ್ರೀಟ್‌ಮೆಂಟ್‌ನಿಂದ ಕೂದಲು ಉದುರಿ ಹೋಗಿದ್ದಕ್ಕೆ ಮನನೊಂದುಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದಕ್ಕೆಲ್ಲ ಜವಾಬ್ದಾರರಾಗುವವರು ಯಾರು ? ಹರೆಯದ ಹುಡುಗಿಯರ 'ರೋಲ್ ಮಾಡೆಲ್'ಗಳು ರಿಯಾಲಿಟಿ ಶೋಗಳ ಕಲ್ಪಿತ ಮಹಿಳೆಯರು. ಈ ಎಲ್ಲ ಅವಾಂತರಗಳ ನೈತಿಕ ಜವಾಬ್ದಾರಿಯಾರ ಪಾಲಿಗೆ ? ಸಮಾಜದ ಅರ್ಧದಷ್ಟಿರುವ ಸ್ತ್ರೀಯರ ಅಭಿವೃದ್ಧಿ ಹಾಗೂ ದೇಶದ ಅಭಿವೃದ್ಧಿಗೆ ಇದು ಮಾರಕ.

ಪ್ರಿಂಟ್‌ಮೀಡಿಯಾಗಳು ವಿದ್ಯುನ್ಮಾನ ಮಾಧ್ಯಮಗಳಿಗೆ ಹೋಲಿಸಿದರೆ ಹೆಚ್ಚು ಬದ್ಧತೆ ಉಳಿಸಿಕೊಂಡ ಮಾಧ್ಯಮಗಳು. ಆದರೂ ಅವು ಸಂಪೂರ್ಣ ಪೂರ್ವಗ್ರಹ ಕಳಚಿಕೊಂಡವುಗಳಲ್ಲ. ವೃತ್ತಪತ್ರಿಕೆಗಳಲ್ಲಿ ಮಹಿಳೆಗೆ ಸಿಗುವ ಪ್ರತಿನಿಧ್ಯ ಕಡಿಮೆಯೇ. ಮಹಿಳೆಯೇ ಮುಖ್ಯ ಸುದ್ದಿಯಾಗುವಂತಹ ಸುದ್ದಿಮೌಲ್ಯ ಅವಳಿಗೆ ಕಡಿಮೆ. ಸುದ್ದಿಮೌಲ್ಯಗಳೆನಿಸಿಕೊಂಡ ಅಪರಾಧ, ದುರಂತ, ಮಾನವಾಸಕ್ತಿ, ನಿಗೂಢತೆ, ಸಂಘರ್ಷ ಲೈಂಗಿಕತೆಗಳಲ್ಲಿ ಒಂದು ಅಂಶವಾಗಿ ಮಹಿಳೆ ಕಾಣುತ್ತಾಳೇ ಹೊರತುಒಂದು ಸ್ವತಂತ್ರ ಮೌಲ್ಯವಾಗಿ ಅಲ್ಲ. ಅನೇಕ ಪತ್ರಿಕೆಗಳಲ್ಲಿ ಮಹಿಳೆಯರಿಗೇ ಸಂಬಂಧಿಸಿದ ಪುರವಣಿಗಳಿವೆ. ಆದರೆ, ಅಲ್ಲಿ ಮಹಿಳೆಯರ ರೀಡರ್‌ಶಿಪ್ ಹೆಚ್ಚಿಸುವ ಸಲುವಾಗಿ ಸೌಂದರ್ಯ ಸಲಹೆ, ವ್ಯಾಯಾಮ, ಗೃಹಾಲಂಕಾರ, ಅಡುಗೆ, ಹಬ್ಬ ಹರಿದಿನಗಳ ಆಚರಣೆ, ಮನೆವಾರ್ತೆ ನಿಭಾಯಿಸುವಲ್ಲಿ ಮಹಿಳೆಯ ಪಾತ್ರ ಇಂಥ ವಿಚಾರಗಳೇ ಪ್ರಧಾನ. ಅಲ್ಲಿಗಂಭೀರ ಲೇಖನಗಳು ಇರಬಾರದೆಂಬುದೇ ಅವರ ಪ್ರಾಥಮಿಕ ನಿರೀಕ್ಷೆ. ಮಹಿಳೆಯ ಮೇಲಾಗುವ ದೌರ್ಜನ್ಯ, ಅನ್ಯಾಯಗಳ ವರದಿಗಳು ಪ್ರಕಟವಾಗುತ್ತಾವಾದರೂ ಅವು ವಿವರಣಾತ್ಮಕವಾಗಿರುತ್ತವೆಯೇ ಹೊರತು ವಿಚಾರಾತ್ಮಕವಾಗಿರುವುದಿಲ್ಲ. ಈ Sexist ಧೋರಣೆಗಳ ಹಿಂದಿನ ಲಿಂಗ ರಾಜಕಾರಣ, ಸಂಸ್ಕೃತಿ ರಾಜಕಾರಣಗಳ ಬೇರು ಬಗೆದಿಡುವ ತಾತ್ವಿಕ ಗ್ರಹಿಕೆಗಳು ಅಲ್ಲಿರುವುದಿಲ್ಲ. ಸ್ತ್ರೀ ಸಮುದಾಯವನ್ನು ಸಂವೇದನಾಶೀಲಗೊಳಿಸಲು ಇಂಥ ಅರಿವಿನ ಬರಹಗಳು ಹೆಚ್ಚು ಬೇಕು. ಆದರೆ ಅವು ವಿರಳವಾಗಿರುತ್ತವೆ. ಏಕೆಂದರೆ ಬಂಡವಾಳಶಾಹಿ ವ್ಯವಸ್ಥೆಗೆ ಇದು ವಿದ್ರೋಹೀ ಮಾದರಿಯಾಗಿ ತೋರುತ್ತಿರುತ್ತದೆ.

ಮಹಿಳಾ ವಿಷಯಗಳ ಪ್ರಾತಿನಿಧ್ಯದಷ್ಟೇ ಅವುಗಳನ್ನು ಪ್ರಸ್ತುತ ಪಡಿಸುವ ರೀತಿ ಕೂಡ ಮುಖ್ಯ. ಅತ್ಯಾಚಾರ, ವರದಕ್ಷಿಣೆ ಸಾವು, ಕೆಲಸ, ಅಧ್ಯಯನದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳಗಳು ಇಂಥ ಸುದ್ದಿಗಳನ್ನು ವೈಭವೀಕರಿಸಿ, ಓದುಗರ ಭಾವನೆ ಕೆರಳಿಸುವ ರೀತಿಯಲ್ಲಿ ಬರೆಯಲಾಗುತ್ತದೆ. ಅದನ್ನು 'Crime' ಆಗಿ ನೋಡುವ ಧೋರಣೆ ಮುಂದಾಗಿ ಕಳಕಳಿ ಹಿಂದಾಗುತ್ತದೆ. ಪ್ರಚೋದಕ ಭಾಷೆಯುಲ್ಲಿ ಮಹಿಳೆಯ ಚಾರಿತ್ರ್ಯದ ಬಗೆಗೆ ಅನುಮಾನ ಮೂಡಿಸುವಂಥ ಸಂಜ್ಞೆಗಳಿರುತ್ತವೆ. ಇದಕ್ಕೆ 'Me too'ಚಳವಳಿಯನ್ನು ಉದಾಹರಿಸಬಹುದು. ಮಹಿಳೆಯರನ್ನೇ ತಪ್ಪಿತಸ್ಥರನ್ನಾಗಿ ತೋರಿಸಲು ಅವರ ಹಿನ್ನೆಲೆ ಕೆದಕುವ, ಅವರ ಮಾತುಗಳಿಗೆಲ್ಲ ವಿಶೇಷಾರ್ಥ ಕಲ್ಪಿಸುವ ಪ್ರಯತ್ನಗಳಾದವು.

## ಮಾಧ್ಯಮದೊಳಗೆ ಮಹಿಳೆಯ ಪಾಲುದಾರಿಕೆ

ಮಾಧ್ಯಮಗಳು ಚಿತ್ರಿಸುವ ಮಹಿಳೆಯ ಬಿಂಬಕ್ಕೂ, ಅವುಗಳ ಆಂತರಿಕ ಕಕ್ಷೆಯಲ್ಲಿ ಮಹಿಳೆಯರ ಸ್ಥಾನಮಾನದ ಸ್ವರೂಪಕ್ಕೂ ಸಂಬಂಧವಿದೆ. ಇಂದು ಮಾಧ್ಯಮ ಕ್ಷೇತ್ರಕ್ಕೆ ಮಹಿಳೆಯರು ಗಣನೀಯ ಪ್ರಮಾಣದಲ್ಲಿ ಇಳಿದಿದ್ದಾರೆ. ಅಧಿಕ ಸಂಖ್ಯೆಯಲ್ಲಿದ್ದರೂ ನಿರ್ಣಾಯಕ ಸ್ಥಾನಗಳಲ್ಲಿ ಪಾತ್ರವಹಿಸುತ್ತಿದ್ದಾರೆಯೇ ? ಎಂಬುದು ಪ್ರಶ್ನೆ. ನಿರ್ಧಾರ ತೆಗೆದುಕೊಳ್ಳುವಂತಹ, ಪತ್ರಿಕಾ ನೀತಿಧೋರಣೆ ನಿರೂಪಿಸುವಂಥ ಅವಕಾಶಗಳು ಅವರಿಗೆ ಈಗಲೂ ಕಡಿಮೆಯೇ. ರಾಜಕೀಯ, ಪರಿಸರ, ಅಭಿವೃದ್ಧಿ ಯಾವುದೇ ವಿಷಯವಿರಲಿ ಸಮಾಜವನ್ನು ರೂಪಿಸುವಲ್ಲಿ 'ಹೆಣ್ಣು ಅರಿವಿನ' ದೃಷ್ಟಿಕೋನ ಭಿನ್ನವಾಗಿರುವುದು ಸಾಧ್ಯ. ಅಂಥದೊಂದು ಭಿನ್ನ ಸಂವೇದನಾಶೀಲತೆ ಮಾಧ್ಯಮಗಳಿಗೆ ಒದಗುವುದು ಅಗತ್ಯ. ಯುದ್ಧರಂಗ, ಶೇರು ಮಾರುಕಟ್ಟೆ, ಸಂಸತ್ತಿನಿಂದಲೂ ಈಗ ಮಹಿಳೆಯರು ವರದಿ ಮಾಡುತ್ತಿದ್ದಾರೆ. ವಿದೇಶಾಂಗ ನೀತಿ, ಆರ್ಥಿಕ ನೀತಿ, ರಾಜಕೀಯ ವಿಶ್ಲೇಷಣೆ, ಬಜೆಟ್ ವಿಶ್ಲೇಷಣೆ ಮುಂತಾದ ಅಲಿಖಿತ ಪುರುಷ ರಂಗಗಳಲ್ಲೂ ಪ್ರಬುದ್ಧವಾಗಿ ಅಭಿವ್ಯಕ್ತಿಸುತ್ತಿದ್ದಾರೆ. ಲಿಂಗ ಸೂಕ್ಷ್ಮತೆಯ ವಿಷಯಗಳನ್ನು ಸಂಪಾದಕೀಯ ಬರಹಗಳಲ್ಲಿ ಚರ್ಚೆಯಾಗುವಂತೆ ಮಾಡಿದ್ದಾರೆ. ಆರ್. ಪೂರ್ಣಿಮಾ, ಸಿ. ಜಿ. ಮಂಜುಳಾ, ಶಮಂತ ಮುಂತಾದವರನ್ನುಈ ನಿಟ್ಟಿನಲ್ಲಿ ಹೆಸರಿಸಬಹುದು. ಅಂತೆಯೇ ಮಾನುಷಿ, ಅಚಲಾದಂತಹ ಸ್ತ್ರೀ ಪರ ಪತ್ರಿಕೆಗಳೂ ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ. ಹಿತೈಷಿಣಿ ಎಂಬ ವೆಬ್ ಪತ್ರಿಕೆ ಲಿಂಗ ಸೂಕ್ಷತೆಯ ಪ್ರಶ್ನೆಗಳನ್ನು ಎತ್ತುತ್ತ ವಿಶ್ಲೇಷಿಸುತ್ತಿದೆ.

ಸಮೂಹ ಚಳವಳಿಗಳು ಬಲವಾಗದೇ ಸಮೂಹ ಮಾಧ್ಯಮಗಳ ಸ್ವರೂಪ ಹೆಚ್ಚು ಬದಲಾಗುವುದಿಲ್ಲ. 'ಸಮುದಾಯ ಪರ' ಪ್ರಯತ್ನಗಳು ಸಮೂಹಮಾಧ್ಯಮ ಸಂಸ್ಕೃತಿಗೆ ಹೊಸ ನೆಲೆ, ಶಕ್ತಿ ಒದಗಿಸುತ್ತವೆ. ಇಂಥ ಸಮೂಹ ಪ್ರಜ್ಞೆಯ ಪ್ರಯತ್ನಗಳು ಯುವ ಪೀಳಿಗೆಯ ಕೆಲವು ಮಹಿಳಾ ಪತ್ರಕರ್ತೆಯರಲ್ಲಿ ಕಾಣಿಸುತ್ತಿರುವುದು ಆಶಾದಾಯಕ. ಇವೆಲ್ಲದರ ನಡುವೆಯೂ ರಾತ್ರಿ ಪಾಳಿ ಕೆಲಸ, ಮುಟ್ಟು, ಬಸಿರು, ತಾಯ್ತನಗಳಿಗೆ ಅವರು ಬೆಲೆ ತೆರಲೇಬೇಕು. ವೃತ್ತಿಪರತೆ ಹಾಗೂ ತಾಯ್ತನದ ನಡುವೆ ನಲುಗುವ ಪಾಡು ಮಾಧ್ಯಮಗಳಲ್ಲಿ ದುಡಿಯುವ ಮಹಿಳೆಯರಿಗೂ ಇದ್ದೇ ಇದೆ. ಮಹಿಳೆಯು ಬೌದ್ಧಿಕ ಪ್ರಖರತೆ, ಆತ್ಮವಿಶ್ವಾಸಗಳನ್ನು ಸಹಿಸದಧೋರಣೆ ಮಾಧ್ಯಮ ಕ್ಷೇತ್ರದ ಪುರುಷರಲ್ಲೂ ಕೆಲವೊಮ್ಮೆ ಹೆಡೆಯಾಡುವುದಿದೆ. ಮಾಧ್ಯಮಗಳ ಮುಂಚೂಣಿಯಲ್ಲಿ, ವಿಶ್ವ ವಿದ್ಯಾನಿಲಯಗಳ ವಿಭಾಗಗಳಲ್ಲಿ ಇಂಥ ಮಹಿಳೆಯರು ಕಾಲಿಡದಂತೆ ನೋಡಿಕೊಳ್ಳುವ ಪುರುಷ ಪ್ರಯತ್ನಗಳು ನಡೆದೇ ಇರುತ್ತವೆ. ಪ್ರಜ್ಞೆಯನ್ನು ಮಸೆದು ಸೂಕ್ಷ್ಮಗೊಂಡ ಪ್ರತಿಭಾವಂತೆಯರು ಹೆಚ್ಚುತ್ತ, ಮಾಧ್ಯಮವನ್ನು ಸೂಕ್ಷ್ಮಹಾಗೂ ಸೂಕ್ತವಾಗಿ ಬಳಸಿಕೊಳ್ಳತೊಡಗಿದಾಗ ಅಧಿಕಾರ ಸಂಬಂಧಗಳ ಆಚೆಗೂ ಮಾನವೀಯ ಬದುಕು ಸಾಧ್ಯವಾಗುತ್ತದೆ.ಅಂಥ ಮಾನವೀಯ ಸಾಧ್ಯತೆಗಳನ್ನು ವಿಸ್ತರಿಸಲು ಮಹಿಳೆಯರೇ ಮಾಧ್ಯಮವಾಗುವುದು ಇಂದಿನ ತುರ್ತು.

## ಆಕರ ಗ್ರಂಥಗಳು


- ಸಮೂಹ ಮಾಧ್ಯಮಗಳಲ್ಲಿ ಮಹಿಳೆ, ಸಿದ್ದಪಾತ್ರಗಳ ಭಂಜಕತೆ ಹೇಗೆ: ಪ್ರಜಾವಾಣಿ ಸಂಪಾದಕೀಯ ಪುಟ. 12, ಮಾರ್ಚ 2011
- **ಸಿ.ಜಿ.ಮಂಜುಳಾ (ಫೆಬ್ರುವರಿ 11, 2014) :** ಮಾಧ್ಯಮಗಳಲ್ಲಿ ಮಹಿಳೆಯ ಅಸ್ಮಿತೆ: ಪ್ರಜಾವಾಣಿ ಅಂಕಣ,
- **ಎನ್. ಗಾಯತ್ರಿ (2012) :** ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ, ಗದಗ ಲಡಾಯಿ ಪ್ರಕಾಶನ.
- **ಡಾ. ಹೇಮಲತಾ ಎಚ್.ಎಂ. (2010) :** ಮಹಿಳಾ ಅಧ್ಯಯನ ಸಂಪುಟಗಳು(1–7) (ಸಂ) ಮೈಸೂರು ಡಿ.ವಿ.ಕೆ ಮೂರ್ತಿ ಪ್ರಕಾಶನ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾರತ ಒಕ್ಕೂಟ ವ್ಯವಸ್ಥೆಯ ಮೌಲ್ಯಮಾಪನ

✍ **ಬಸವರಾಜ ಕುರಗುಂದ,** ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಶ್ರೀ ಜ. ಫ. ಸ. ಪ್ರ. ದ. ಕಾಲೇಜು ಶಿರಹಟ್ಟಿ.

*ಸಾರಲೇಖ*

*ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಭಿನ್ನ ಪಕ್ಷಗಳು ಆಡಳಿತದಲ್ಲಿ ಇರುವಾಗ ಅಥವಾ ಪ್ರಾದೇಶಿಕ ಪಕ್ಷಗಳು ಕೇಂದ್ರ ಸರಕಾರಗಳನ್ನು ಟೀಕಿಸುವಾಗ "ಇದು ಒಕ್ಕೂಟ ವ್ಯವಸ್ಥೆಗೆ ಮಾರಕ" "ಇದು ಸಂಯುಕ್ತ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಕ್ರಮ" "ಒಕ್ಕೂಟ ವ್ಯವಸ್ಥೆಗೆ ಕೊಡಲಿ ಪೆಟ್ಟು" ಎಂಬ ಸಾಮಾನ್ಯ ಪದಗುಚ್ಛಗಳನ್ನು ಕೇಳಿರುತ್ತೀರಿ. ಹಾಗಾದರೆ ಏನಿದು ಒಕ್ಕೂಟ ವ್ಯವಸ್ಥೆ ? ಬೇರೆ ವ್ಯವಸ್ಥೆಗಳು ಇವೆಯೋ? ಎಂಬುದರ ಕುರಿತು ಪ್ರಸ್ತುತ ಲೇಖನ ಬೆಳಕು ಚೆಲ್ಲಲಿದೆ.*

## ಪೀಠಿಕೆ

ಆಧುನಿಕ ಜಗತ್ತಿನ ಸರ್ಕಾರಗಳನ್ನು / ದೇಶಗಳನ್ನು ಕೇಂದ್ರ ಸರ್ಕಾರ ಮತ್ತು ಅದರ ಘಟಕ ಪ್ರಾಂತ್ಯಗಳ ನಡುವೆ ಅಧಿಕಾರದ ವಿತರಣೆ ಹಾಗೂ ಕೇಂದ್ರೀಕರಣದ ಆಧಾರದ ಮೇಲೆ ಸಂಯುಕ್ತ ಸರಕಾರಗಳು ಮತ್ತು ಏಕಾತ್ಮಕ ಸರಕಾರಗಳೆಂದು ವರ್ಗೀಕರಿಸಲಾಗಿದೆ. ಸಂಯುಕ್ತ ಸರಕಾರಗಳನ್ನು ಒಕ್ಕೂಟ ಸರಕಾರಗಳೆಂದು ಸಹ ಕರೆಯಲಾಗುತ್ತದೆ. ಈ ಎರಡೂ ಬಗೆಯ ಸರಕಾರಗಳಿಗೆ ಅದರದೇ ಆದ ಲಕ್ಷಣಗಳಿವೆ. ಭಾರತ ಸಂವಿಧಾನದ 1ನೇ ವಿಧಿಯೂ ಹೇಳುವಂತೆ 'ಭಾರತವು ರಾಜ್ಯಗಳ ಒಕ್ಕೂಟವಾಗಿದೆ'. ಆದರೆ ಅದರದೇ ಕೆಲವು ವಿಧಿಗಳು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿವೆ ಎನ್ನಬಹುದು. ಸಂವಿಧಾನ ನಿರ್ಮಾತೃಗಳು ಹೀಗೆ ಮಾಡಲು ಕಾರಣ ಇಲ್ಲದಿಲ್ಲ. ಭಾರತದ ವೈವಿಧ್ಯಮಯ ಸಂಸ್ಕೃತಿ ಹಾಗೂ ಸ್ವಾತಂತ್ರ್ಯೋತ್ತರ ದಿನಮಾನಗಳಲ್ಲಿ ಅದು ಎದುರಿಸಿದ ಸವಾಲುಗಳು 'ಒಕ್ಕೂಟ ವ್ಯವಸ್ಥೆಗೆ' ಕಾರಣವಾದವೆಂದು ಸ್ಥೂಲವಾಗಿ ಹೇಳಬಹುದು.

## ಆಧುನಿಕ ಸರ್ಕಾರಗಳ ವಿಂಗಡಣೆ

ಆಧುನಿಕ ಸಂವಿಧಾನಬದ್ಧ ಸರ್ಕಾರಗಳನ್ನು ಏಕಾತ್ಮಕ ಸರ್ಕಾರಗಳು ಮತ್ತು ಸಂಯುಕ್ತ/ಒಕ್ಕೂಟ ಸರ್ಕಾರಗಳೆಂದು ವಿಂಗಡಿಸಬಹುದು. ಆ ದೇಶದ ಸಂವಿಧಾನವು ಅಧಿಕಾರವನ್ನು ಕೇಂದ್ರ ಮತ್ತು ಪ್ರಾಂತ್ಯಗಳ (ಭಾರತದ ಮಟ್ಟಿಗೆ ರಾಜ್ಯಗಳು) ಮಧ್ಯೆ ಹೇಗೆ ಹಂಚಲಾಗಿದೆ? ಎಂಬುದೇ ಈ ವರ್ಗೀಕರಣದ ಮಾನದಂಡ. ಏಕಾತ್ಮಕ ಸರಕಾರದ ಪದ್ಧತಿಯಲ್ಲಿ ಎಲ್ಲ ಅಧಿಕಾರವೂ ಕೇಂದ್ರ ಸರ್ಕಾರಗಳಲ್ಲಿ ಕೇಂದ್ರೀಕೃತವಾಗಿರುತ್ತದೆ. ಪ್ರಾಂತ್ಯೀಯ (ರಾಜ್ಯ) ಸರಕಾರಗಳು ಕೇಂದ್ರದಿಂದ ರಚಿತವಾಗಿದ್ದು (ಸಂವಿಧಾನದ ಸೃಜನೆವಲ್ಲ), ಕೇಂದ್ರ ನೀಡುವಷ್ಟು ಅಧಿಕಾರ ಮಾತ್ರ ಹೊಂದಿರುತ್ತವೆ. ಯಾವುದೇ ರೀತಿಯ ಸ್ವಾಯತ್ತತೆ ಇರುವುದಿಲ್ಲ. ಇವು ಸಂಪೂರ್ಣವಾಗಿ ಕೇಂದ್ರದ ಮೇಲೆ ಅವಲಂಬಿತ. ಪ್ರಾಂತ್ಯೀಯ ಸರಕಾರಗಳು ಕೇಂದ್ರದ ಪ್ರತಿನಿಧಿಗಳಂತೆ ಮಾತ್ರ ವರ್ತಿಸುತ್ತವೆ. ಸಂವಿಧಾನಬದ್ಧ ಯಾವುದೇ ಮೂಲಾಧಾರವಿರುವುದಿಲ್ಲ. ಆಧುನಿಕ ಜಗತ್ತಿನಲ್ಲಿ ಇಂಗ್ಲೆಂಡ, ಪ್ರಾನ್ಸ, ಜಪಾನ, ಇಂಡೋನೇಷ್ಯಾ ಇತ್ಯಾದಿ ರಾಷ್ಟ್ರಗಳು ಇದಕ್ಕೆ ಉದಾಹರಣೆಯಾಗಿವೆ.

ಆ ದೇಶದ ಸಂವಿಧಾನವೇ ಅಧಿಕಾರವನ್ನು ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಹಂಚಿಕೆ ಮಾಡಿದ್ದರೆ ಅದನ್ನು ಸಂಯುಕ್ತ / ಒಕ್ಕೂಟ ಪದ್ಧತಿ ಎನ್ನಲಾಗುತ್ತದೆ. ಸಂವಿಧಾನವೇ ಅಧಿಕಾರ ಹಂಚಿಕೆ ಮಾಡಿರುವುದರಿಂದ ಎರಡೂ ಸರಕಾರಗಳೂ ತಮ್ಮ ತಮ್ಮ 'ಮೂಲ ಅಧಿಕಾರ ವ್ಯಾಪ್ತಿ' ಮತ್ತು ಸ್ವಾಯತ್ತತೆ ಹೊಂದಿರುತ್ತವೆ. ಪ್ರಾಂತ್ಯೀಯ ಸರಕಾರಗಳು ಕೇಂದ್ರದ ಮುಲಾಜಿಗೆ ಒಳಪಡದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ. ಅಮೆರಿಕಾ, ಸ್ವಿಟ್ಜರ್ಲೆಂಡ್, ಆಸ್ಟ್ರೇಲಿಯಾ, ಕೆನಡಾ ದೇಶಗಳು ಸಂಯುಕ್ತ ಪದ್ಧತಿಗೆ ಕೆಲವು ಉದಾಹರಣೆಯಾಗಿವೆ.

ಭಾರತದ ಮಟ್ಟಿಗೆ ಹೇಳುವುದಾದರೆ ಸಂವಿಧಾನದ 1ನೇ ವಿಧಿಯು ಭಾರತವನ್ನು 'ರಾಜ್ಯಗಳ ಒಕ್ಕೂಟ' (Union of States) ಎಂದು ಕರೆದಿರುವುದರಿಂದ ಹಾಗೂ ರಾಜ್ಯಗಳಿಗೆ ಸಂವಿಧಾನಬದ್ಧ ಅಧಿಕಾರ ಹಂಚಿಕೆ ಮಾಡಿರುವುದರಿಂದ ಭಾರತವನ್ನು "ಸಂಯುಕ್ತ / ಒಕ್ಕೂಟ ಪದ್ಧತಿಯ ಸರಕಾರ"ವೆಂದು ಕರೆಯಬಹುದು. ಆದರೆ ಭಾರತದ ಈ ಒಕ್ಕೂಟ ಪದ್ಧತಿ ಲಕ್ಷಣಗಳು ಸಾಂಪ್ರದಾಯಿಕ ಸಂಯುಕ್ತ ಪದ್ಧತಿಗಿಂತ ತುಸು ಭಿನ್ನವಾಗಿದ್ದು ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

- ಭಾರತದ ಸಂವಿಧಾನದ ಯಾವುದೇ ಭಾಗದಲ್ಲಿಯೇ ಆಗಲಿ ಭಾರತವನ್ನು ಒಂದು ಸಂಯುಕ್ತ ಪದ್ಧತಿ ಹೊಂದಿದ ದೇಶವೆಂದು ಘೋಷಿಸಿಲ್ಲ. (ಭಾರತವು ಏಕಾತ್ಮಕ ಲಕ್ಷಣಗಳನ್ನೂ ಸಹ ಹೊಂದಿರುವುದು ಇದಕ್ಕೆ ಕಾರಣ ಇರಬಹುದು) ಆದರೂ 'ರಾಜ್ಯಗಳ ಒಕ್ಕೂಟ'ವೆಂದು ಕರೆದಿರುವುದರಿಂದ ಹಾಗೂ 28 ರಾಜ್ಯಗಳನ್ನು, 9 ಕೇಂದ್ರಾಡಳಿತ ಪ್ರದೇಶಗಳನ್ನು ಗುರುತಿಸಿ ಅಧಿಕಾರ ಹಂಚಿಕೆ ಮಾಡಿರುವುದರಿಂದ ಭಾರತವನ್ನು ಒಂದು ಸಂಯುಕ್ತ ಪದ್ಧತಿ ಹೊಂದಿದ ರಾಷ್ಟ್ರವೆಂದು ಹೇಳಬಹುದು.
- ಸಂಯುಕ್ತ ವ್ಯವಸ್ಥೆಯಲ್ಲಿ ಲಿಖಿತ ಸಂವಿಧಾನ ಇರುವುದು ಅವಶ್ಯಕ. ಅದರಂತೆ ಭಾರತವು ಸಹ ಲಿಖಿತ ಸಂವಿಧಾನ ಹೊಂದಿದೆ. ಕೇಂದ್ರ ಮತ್ತು ಪ್ರಾಂತ್ಯಗಳ ಮಧ್ಯೆ ಗೊಂದಲ–ಘರ್ಷಣೆಗೆ ಲಿಖಿತ ಸಂವಿಧಾನ ಅವಕಾಶ ನೀಡುವುದಿಲ್ಲ. ಆದರೆ ಇದೇ ಸಂವಿಧಾನವು ಕೇಂದ್ರಕ್ಕೆ ಹೆಚ್ಚಿನ ಅಧಿಕಾರ ನೀಡಿರುವುದನ್ನು ನಾವು ಗಮನಿಸಬೇಕು.
- ಒಕ್ಕೂಟ ವ್ಯವಸ್ಥೆಯ ಸಂವಿಧಾನಗಳು ಅನಮ್ಯವಾಗಿರಬೇಕು. ಭಾರತದ ಸಂವಿಧಾನವು ಸಹ ಭಾಗಶಃ ಅನಮ್ಯವಾಗಿದ್ದು ಒಕ್ಕೂಟ ವ್ಯವಸ್ಥೆಯ ಮೇಲೆ ಪ್ರಭಾವ ಬೀರಬಹುದಾದ ಅಂಶಗಳಾದ ಕೇಂದ್ರ–ರಾಜ್ಯಗಳ ಸಂಬಂಧ, ರಾಷ್ಟ್ರಪತಿಗಳ ಚುನಾವಣೆ ವಿಧಾನ, ಹೈಕೋರ್ಟ ಮತ್ತು ಸುಪ್ರೀಂ ಕೋರ್ಟಗಳ ಅಧಿಕಾರ ವ್ಯಾಪ್ತಿ, ಸಂಸತ್ತಿನಲ್ಲಿ ರಾಜ್ಯಗಳಿಗೆ ನೀಡಲಾಗಿರುವ ಪ್ರಾತಿನಿಧ್ಯ ಮುಂತಾದ ವಿಷಯಗಳನ್ನು ಸುಲಭವಾಗಿ ತಿದ್ದುಪಡೆ ಮಾಡಲಾಗದು. ಈ ತಿದ್ದುಪಡೆಯ ಮಸೂದೆಗಳನ್ನು ಸಂಸತ್ತಿನ ಎರಡೂ ಸದನಗಳಲ್ಲಿ 2/3 ಬಹುಮತದಿಂದ ಅಂಗೀಕರಿಸಿ, ಅರ್ಧಕ್ಕಿಂತ ಹೆಚ್ಚು ರಾಜ್ಯಗಳು ಒಪ್ಪಿದಾಗ ಮಾತ್ರ ಶಾಸನಗಳು ಜಾರಿಗೆ ಬರುತ್ತವೆ.
- ಸಂವಿಧಾನಬದ್ಧ ಅಧಿಕಾರ ವಿಭಜನೆ ಸಂಯುಕ್ತ ಸರ್ಕಾರದ ಜೀವಾಳ. ಭಾರತ ಸಂವಿಧಾನದ 7ನೇ ಅನುಸೂಚಿಯು 1ನೇ ಪಟ್ಟಿಯಲ್ಲಿನ 97 ವಿಷಯಗಳ ಮೇಲೆ ಕೇಂದ್ರ ಸರಕಾರಕ್ಕೆ, 2ನೇ ಪಟ್ಟಿಯಲ್ಲಿನ 66 ವಿಷಯಗಳ ಮೇಲೆ ರಾಜ್ಯ ಸರ್ಕಾರಗಳಿಗೂ ಹಾಗೂ 3ನೇ ಪಟ್ಟಿಯಲ್ಲಿನ 47 ವಿಷಯಗಳಗೆ ಕೇಂದ್ರ–ರಾಜ್ಯ ಸರ್ಕಾರಗಳೆರಡಕ್ಕೂ ಶಾಸನ ರಚಿಸುವ ಅಧಿಕಾರ ನೀಡಿದೆ. ಈ

ISSN : 2249-2429

RNI REG.NO.KARKAN/2011/38712

ಅಧಿಕಾರ ವಿಭಜನೆಯು ರಾಜ್ಯಗಳಿಗೆ ಸ್ವಾಯತ್ತತೆ ನೀಡುತ್ತದೆ ಹಾಗೂ ಸಂಭವನೀಯ ಘರ್ಷಣೆ ತಪ್ಪಿಸುತ್ತದೆ.

- ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಒಕ್ಕೂಟ ಪದ್ಧತಿಯ ಮತ್ತೊಂದು ಆಧಾರ ಸ್ತಂಭ. ಕೇಂದ್ರ–ರಾಜ್ಯಗಳ ಮಧ್ಯೆ ವಿವಾದ, ಘರ್ಷಣೆ ಏರ್ಪಟ್ಟಾಗ ನ್ಯಾಯಾಲಯಗಳು ಅದನ್ನು ಸಂವಿಧಾನ ಬದ್ಧವಾಗಿ ಬಗೆಹರಿಸುತ್ತವೆ. ನಮ್ಮ ಸಂವಿಧಾನದ 124ನೇ ವಿಧಿಯು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ಸ್ಥಾಪಿಸಿದ್ದು, ಈ ವ್ಯವಸ್ಥೆಯು ಸರಕಾರಗಳ ಹಸ್ತಕ್ಷೇಪದಿಂದ ಮುಕ್ತವಾಗಿದೆ. ಸುಪ್ರೀಂ ಕೋರ್ಟಿನ ಮೂಲ ಅಧಿಕಾರ ವ್ಯಾಪ್ತಿಯಲ್ಲಿಯೇ ಬರುವುದರಿಂದ ನ್ಯಾಯಾಲಯವು ರಾಜ್ಯಗಳ ಸ್ವಾಯತ್ತತೆ ಕಾಪಾಡುತ್ತವೆ.
- ಕೇಂದ್ರ ಶಾಸಕಾಂಗವು ದ್ವಿಸದನ ಪದ್ಧತಿ ಅನುಸರಿಸುವುದು ಒಕ್ಕೂಟ ವ್ಯವಸ್ಥೆಯ ಮತ್ತೊಂದು ಪ್ರಮುಖ ಲಕ್ಷಣ. ಒಂದು ಸದನ ರಾಷ್ಟ್ರವನ್ನು ಇಡಿಯಾಗಿ ಪ್ರತಿನಿಧಿಸಿದರೆ, ಮತ್ತೊಂದು ಸದನವು ಪ್ರಾಂತೀಯ ಸರ್ಕಾರಗಳ ಪ್ರತಿನಿಧಿಯಾಗಿದ್ದು ಅವುಗಳ ಹಿತಾಸಕ್ತಿ ಕಾಯುವುದು ಇದರ ಆಶಯ. ಅದರಂತೆ ಭಾರತದಲ್ಲಿ ಕೇಂದ್ರ ಶಾಸಕಾಂಗವು ಲೋಕಸಭೆ (ಕೆಳಮನೆ) ಮತ್ತು ರಾಜ್ಯಸಭೆ (ಮೇಲ್ಮನೆ) ಎಂಬ ಎರಡು ಸದನಗಳನ್ನು ಹೊಂದಿದೆ. ಲೋಕಸಭೆಯು ರಾಷ್ಟ್ರದ ಅಖಂಡ ಪ್ರತಿನಿಧಿತ್ವವನ್ನು ಹಾಗೂ ರಾಜ್ಯಸಭೆ ರಾಜ್ಯಗಳ ಪ್ರತಿನಿಧಿತ್ವವನ್ನು ಬಿಂಬಿಸುತ್ತವೆ. ರಾಜ್ಯಸಭೆ ರಾಜ್ಯಗಳ ಹಿತಕಾಯುವ ಪ್ರಮುಖ ಜವಾಬ್ದಾರಿ ನಿರ್ವಹಿಸುತ್ತದೆ.
- ಭಾರತ ಒಕ್ಕೂಟ ವ್ಯವಸ್ಥೆ ಯಾವುದೇ ನಿರ್ದಿಷ್ಟ ಒಪ್ಪಂದದೊಂದಿಗೆ ಅಸ್ತಿತ್ವಕ್ಕೆ ಬಂದುದಲ್ಲ. ಅದು ಐತಿಹಾಸಿಕವಾಗಿ ವಿಕಸಿತವಾಗಿರುವಂತಹದು. ಹೀಗಾಗಿ ಈ ಒಕ್ಕೂಟವನ್ನು ತ್ಯಜಿಸುವ ಅಧಿಕಾರ ರಾಜ್ಯಗಳಿಗಿಲ್ಲ. (ಅಮೇರಿಕಾದ ರಾಜ್ಯಗಳಿಗೆ ಈ ಸೌಲಭ್ಯವಿದೆ) ಭಾರತದ ಅಖಂಡತೆಯನ್ನು ಸಂವಿಧಾನ ಎತ್ತಿಹಿಡಿಯುತ್ತದೆ.

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ಭಾರತವು ಒಂದು ಆದರ್ಶ ಒಕ್ಕೂಟ ವ್ಯವಸ್ಥೆಯಂತೆ ಭಾಸವಾಗುತ್ತದೆ. ಆದರೆ ಸಂವಿಧಾನವನ್ನು ಆಮೂಲಾಗ್ರವಾಗಿ ಅಭ್ಯಸಿಸಿದಾಗ ಭಾರತವು ಏಕಾತ್ಮಕ ಸರ್ಕಾರದ ಹಲವು ತತ್ವಗಳನ್ನು ಸಹ ಹೊಂದಿರುವುದು ಬೆಳಕಿಗೆ ಬರುತ್ತದೆ. ಹೀಗಾಗಿಯೇ ಕಾನೂನು ತಜ್ಞರಾದ ಕೆ. ಸಿ. ವ್ಹೀರ್ ಅವರು ಇದನ್ನು "ಅರೆ ಸಂಯುಕ್ತ ವ್ಯವಸ್ಥೆ" (Quasi-federal constitution) ಎಂದು ಕರೆಯುತ್ತಾರೆ. ಹಾಗಾದರೆ ಭಾರತ ಸಂವಿಧಾನದ ಏಕಾತ್ಮಕ ಅಂಶಗಳು ಯಾವುವು ಎಂದು ಗಮನಿಸುವುದಾದರೆ –

- ಭಾರತದಲ್ಲಿ ರಾಜ್ಯ ಮತ್ತು ಕೇಂದ್ರಗಳಿಗೆ ಪ್ರತ್ಯೇಕ ಸಂವಿಧಾನವಿಲ್ಲ. ಕೇವಲ ಒಂದೇ ಸಂವಿಧಾನ ಇದ್ದು ಇದರ 2,3, ಮತ್ತು 4ನೇ ವಿಧಿಗಳು ರಾಜ್ಯಗಳ ಗಡಿ ಬದಲಾವಣೆ, ಹೊಸ ರಾಜ್ಯಗಳ ಸೃಷ್ಟಿ, ಹೆಸರುಗಳ ಬದಲಾವಣೆ ಅಧಿಕಾರವನ್ನು ಸಂಪೂರ್ಣವಾಗಿ ಕೇಂದ್ರ ಸರಕಾರಕ್ಕೆ ನೀಡಿದ್ದು ರಾಜ್ಯಗಳ ಇಚ್ಛೆಯ ವಿರುದ್ಧವಾಗಿಯೂ ಈ ಅಧಿಕಾರ ಚಲಾಯಿತವಾಗಬಹುದು. (ಜಮ್ಮು ಮತ್ತು ಕಾಶ್ಮೀರದ ಪ್ರಕರಣ ಇಲ್ಲಿ ಉಲ್ಲೇಖಿಸಬಹುದು)
- ಸಂವಿಧಾನದ 7ನೇ ಅನುಸೂಚಿಯಲ್ಲಿ ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಗಳನ್ನು ಹಂಚಿಕೆ ಮಾಡಲಾಗಿದೆ. ಆದರೆ ಉಳಿಕೆ ಶೇಷಾಧಿಕಾರವನ್ನು ಕೇಂದ್ರಕ್ಕೆ ನೀಡಲಾಗಿದೆ. (ಅಮೇರಿಕಾದಲ್ಲಿ ಈ ಶೇಷಾಧಿಕಾರವು ರಾಜ್ಯಗಳಿಗೆ ಸೇರಿದೆ.)
- ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಮೇಲೆಯೂ ಕೆಲವು ಸಂದರ್ಭಗಳಲ್ಲಿ ಕೇಂದ್ರ ಶಾಸನ ಮಾಡಬಹುದು. (249 ಮತ್ತು 250ನೇ ವಿಧಿಗಳ ಪ್ರಕಾರ) ಸಮವರ್ತಿ ಪಟ್ಟಿಯ ಮೇಲೆಯೂ ಕೂಡಾ ಕೇಂದ್ರದ ಹಿಡಿತ ಹೆಚ್ಚು. ಶಾಸನಗಳ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕೇಂದ್ರದ ಕಾನೂನುಗಳಿಗೆ ಮಾನ್ಯತೆ ಹೆಚ್ಚು. ರಾಜ್ಯ ಶಾಸಕಾಂಗ ಅನುಮೋದಿಸಿದ ಶಾಸನಗಳನ್ನೂ ಸಹ ರಾಜ್ಯಪಾಲರು ರಾಷ್ಟ್ರಪತಿಗಳ ಒಪ್ಪಿಗಾಗಿ ಕಾಯ್ದಿರಿಸಬಹುದಾಗಿದೆ.
- ರಾಜ್ಯಪಾಲರ ಹುದ್ದೆಯೂ ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ಒಗ್ಗುವುದಿಲ್ಲ. ರಾಜ್ಯಪಾಲರು ಕೇಂದ್ರದ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಾರೆ ಹಾಗೂ ಇವರು ಪ್ರಜಾನಿರ್ಣಯಗಳಿಗೆ ಒಳಪಟ್ಟಿರುವುದಿಲ್ಲ, ಪ್ರಜೆಗಳಿಗೆ ಉತ್ತರದಾಯಿತ್ವ ಹೊಂದಿಲ್ಲ.
- ಭಾರತದ ಶಾಸಕಾಂಗ ಮತ್ತು ಕಾರ್ಯಾಂಗ ಸಂಯುಕ್ತ ಪದ್ಧತಿ ಮಾದರಿ ಹೊಂದಿದ್ದರೂ ನ್ಯಾಯಾಂಗವು ಏಕಾತ್ಮಕ ವ್ಯವಸ್ಥೆ ಹೊಂದಿದೆ. ನ್ಯಾಯಾಧೀಶರ ನೇಮಕ, ಬಡ್ತಿ, ವರ್ಗಾವಣೆಗಳಲ್ಲಿ ಕೇಂದ್ರದ ಹೆಚ್ಚಿನ ಅಧಿಕಾರ ಹೊಂದಿದೆ.
- ತುರ್ತು ಪರಿಸ್ಥಿತಿಗಳಲ್ಲಿ (ಸಂವಿಧಾನದ 352 ಮತ್ತು 360 ರ ವರೆಗಿನ ವಿಧಿಗಳ) ಸಂದರ್ಭಗಳಲ್ಲಿ ರಾಷ್ಟ್ರವು ತನ್ನ ಸಂಯುಕ್ತ ಮಾದರಿಯ ಸ್ವರೂಪ ಕಳೆದುಕೊಂಡು ಏಕಾತ್ಮಕ ಮಾದರಿ ಸರ್ಕಾರವಾಗುತ್ತದೆ.
- ಸಂವಿಧಾನದ 262 ಮತ್ತು 263ನೇ ವಿಧಿಗಳ ಪ್ರಕಾರ ಅಂತರರಾಜ್ಯ ವಿವಾದಗಳನ್ನು ಬಗೆಹರಿಸಲು ನ್ಯಾಯಮಂಡಳಿ ಸ್ಥಾಪಿಸುವುದು ಹಾಗೂ ಐತೀರ್ಪುಗಳನ್ನು ಒಪ್ಪಿ ಜಾರಿಗೊಳಿಸುವ ಅಧಿಕಾರ ಕೇಂದ್ರಕ್ಕೆ ಇದೆ. ಇದು ಒಕ್ಕೂಟ ವ್ಯವಸ್ಥೆಯನ್ನು ಕ್ಷೀಣಿಸುತ್ತದೆ.
- ರಾಜ್ಯಗಳು ಹಣಕಾಸಿನ ಸಂಪನ್ಮೂಲಗಳಿಗಾಗಿ ಕೇಂದ್ರಗಳನ್ನೇ ಹೆಚ್ಚು ಅವಲಂಬಿಸಿವೆ. ಆರ್ಥಿಕ ಪರಾವಲಂಬನೆ ರಾಜ್ಯಗಳನ್ನು ಬಾಧಿಸುತ್ತದೆ.
- ಏಕಪೌರತ್ವವು (ಇಡೀ ದೇಶಕ್ಕೆ ಅನ್ವಯಿಸುವಂತೆ ಒಂದೇ ಪೌರತ್ವ) ಸಹ ಭಾರತದ ಏಕಾತ್ಮಕ ಗುಣವನ್ನೇ ಬಿಂಬಿಸುತ್ತದೆ.
- ರಾಜಕೀಯ ಪಕ್ಷಗಳ ಹೈಕಮಾಂಡ್ ಸಂಸ್ಕೃತಿ ರಾಜ್ಯಗಳನ್ನು ಮತ್ತಷ್ಟು ದುರ್ಬಲಗೊಳಿಸುತ್ತಿವೆ. ಪ್ರಬಲ ರಾಜಕೀಯ ಪಕ್ಷಗಳ ಏಕಸೌಮ್ಯತೆಯಿಂದ ಸ್ಥಳೀಯ ಅಸ್ಮಿತೆ ಕುಂದುತ್ತಿವೆ.
- ಅಖಿಲ ಭಾರತ ಸೇವೆಗಳು, ಕೇಂದ್ರೀಕೃತ ಚುನಾವಣಾ ಆಯೋಗ, ಸಿ. ಎ. ಜಿ., ರಾಜ್ಯಸಭೆಯಲ್ಲಿ ರಾಜ್ಯಗಳಿಗೆ ಅಸಮಾನ ಹಂಚಿಕೆ ಹಾಗೂ ಬೇರೆ ರಾಜ್ಯಗಳ ನಿವಾಸಿಗಳನ್ನು ರಾಜ್ಯ ಸಭಾ ಸದಸ್ಯರನ್ನಾಗಿ ಆಯ್ಕೆ ಮಾಡುವ ಸಂಪ್ರದಾಯವು ಒಕ್ಕೂಟ ವ್ಯವಸ್ಥೆಗೆ ಪೂರಕವಾಗಿಲ್ಲ.

## ಭಾರತ ಒಕ್ಕೂಟ ವ್ಯವಸ್ಥೆಯ ಮೌಲ್ಯಮಾಪನ

ಭಾರತ ಒಕ್ಕೂಟ ವ್ಯವಸ್ಥೆಯ ಬಗ್ಗೆ ಹಲವು ತಜ್ಞರು ಹಲವು ರೀತಿಯ ಟಿಪ್ಪಣಿ ಮಾಡುತ್ತಾರೆ. ಕೆಲವು ತಜ್ಞರ ಅಭಿಪ್ರಾಯದಲ್ಲಂತೂ ಭಾರತ ಒಂದು ಒಕ್ಕೂಟ ವ್ಯವಸ್ಥೆಯ ರಾಷ್ಟ್ರವೇ ಅಲ್ಲ. ಇದು ಕೇವಲ ಕೇಂದ್ರೀಕೃತ ವ್ಯವಸ್ಥೆಯ ಮಾರ್ಪಾಡು. ಏಕೆಂದರೆ ಭಾರತದ ಸಂವಿಧಾನ ಕೇಂದ್ರದ ಕಡೆಗೆ ವಾಲುತ್ತದೆ. ಹಾಗೂ ರಾಜ್ಯಗಳಿಗೆ ಪೂರ್ಣಪ್ರಮಾಣದ ಸ್ವಾತಂತ್ರ್ಯ ನೀಡಿಲ್ಲ. ಆದರೆ ಇದನ್ನು ಪೂರ್ಣಪ್ರಮಾಣದಲ್ಲಿ ಒಪ್ಪಿಕೊಳ್ಳುವುದು ತಪ್ಪಾಗುತ್ತದೆ. ಏಕೆಂದರೆ ಭಾರತದ ಸಂವಿಧಾನವು ಒಕ್ಕೂಟ ವ್ಯವಸ್ಥೆಯ ತತ್ವಗಳ ತಳಹದಿಯ ಮೇಲೆಯೇ ನಂಬಿಕೆ ಇರಿಸಿದೆ. ಒಕ್ಕೂಟ

– 27ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾರತದಲ್ಲಿ ಸಮ್ಮಿಶ್ರ ಸರಕಾರದ ಪ್ರಸ್ತುತತೆ : ಒಂದು ರಾಜಕೀಯ ವಿಶ್ಲೇಷಣೆ

✍ **ಸಂಗೀತಾ ಯಲ್ಲಪ್ಪ,** ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

*ಸಾರಲೇಖ*

*ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಭಿನ್ನ ಪಕ್ಷಗಳು ಆಡಳಿತದಲ್ಲಿ ಇರುವಾಗ ಅಥವಾ ಪ್ರಾದೇಶಿಕ ಪಕ್ಷಗಳು ಕೇಂದ್ರ ಸರಕಾರಗಳನ್ನು ಟೀಕಿಸುವಾಗ "ಇದು ಒಕ್ಕೂಟ ವ್ಯವಸ್ಥೆಗೆ ಮಾರಕ" "ಇದು ಸಂಯುಕ್ತ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಕ್ರಮ" "ಒಕ್ಕೂಟ ವ್ಯವಸ್ಥೆಗೆ ಕೊಡಲಿ ಪೆಟ್ಟು" ಎಂಬ ಸಾಮಾನ್ಯ ಪದಗುಚ್ಛಗಳನ್ನು ಕೇಳಿರುತ್ತೀರಿ. ಹಾಗಾದರೆ ಏನಿದು ಒಕ್ಕೂಟ ವ್ಯವಸ್ಥೆ ? ಬೇರೆ ವ್ಯವಸ್ಥೆಗಳು ಇವೆಯೋ? ಎಂಬುದರ ಕುರಿತು ಪ್ರಸ್ತುತ ಲೇಖನ ಬೆಳಕು ಚೆಲ್ಲಲಿದೆ.*

ವಿಶ್ವದ ಯಾವುದೇ ದೇಶವು ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಬೇಕಾದರೆ ಆ ದೇಶದಲ್ಲಿ ಸ್ಥಿರ ಸರಕಾರದ ಆಡಳಿತ ಅಸ್ತಿತ್ವದಲ್ಲಿರುವುದು ಅತಿ ಅವಶ್ಯವಾಗಿದೆ. ಸ್ಥಿರ ಸರಕಾರ ಅಸ್ತಿತ್ವದಲ್ಲಿದ್ದರೆ ಮಾತ್ರ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬಹುದು. ಒಂದು ಪಕ್ಷದ ಸರಕಾರ ಸ್ಥಿರ ಆಡಳಿತ ನಡೆಸಿದರೆ ಅಲ್ಲಿ ಹೂಡಿಕೆ, ಉತ್ಪನ್ನ, ಉದ್ಯೋಗ, ಆದಾಯ, ಅನುಭೋಗದಂಥ ಆರ್ಥಿಕ ಪ್ರಕ್ರಿಯೆಗಳು ಬಹಳ ಸುಲಭವಾಗಿ ನಡೆಯುತ್ತವೆ. ಸ್ಥಿರ ಸರಕಾರದ ಆಡಳಿತ ಅನುಷ್ಠಾನದಲ್ಲಿದ್ದರೆ ಮಾತ್ರ ಅಭಿವೃದ್ಧಿಯ ವೇಗ ತೀವ್ರವಾಗಿ ಹೆಚ್ಚುತ್ತದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಬಹುದಾಗಿದೆ. ಸಮಾಜದ ಅಂಚಿನಲ್ಲಿರುವ ಮತ್ತು ವಂಚನೆಗೊಳಗಾಗಿರುವ ಶೋಷಿತ ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಕಲ್ಪಿಸಿಕೊಡಲು ಸ್ಥಿರ ಸರಕಾರದಿಂದ ಮಾತ್ರ ಸಾಧ್ಯ. ಅದು ಅಸ್ಥಿರ ಸರಕಾರದಿಂದ ಸಾಧ್ಯವಿಲ್ಲ. ಆರ್ಥಿಕ ಸುಸ್ಥಿರತೆಯನ್ನು ಸಾಧಿಸಬೇಕಾದರೆ ಅಲ್ಲಿ ರಾಜಕೀಯ ಸ್ಥಿರತೆ ಇರುವುದು ಅತಿ ಅನಿವಾರ್ಯವಾಗಿದೆ. ದೇಶದ ಜನರು ಮಾನಸಿಕ ನೆಮ್ಮದಿಯಿಂದ ಜೀವನ ಸಾಗಿಸಬೇಕಾದರೆ ಸ್ಥಿರ ಸರಕಾರದ ಆಡಳಿತದ ಅವಶ್ಯಕತೆ ಬಹಳಷ್ಟಿದೆ. ಒಂದು ವೇಳೆ ಸ್ಥಿರ ಸರಕಾರ ಇರದೆ ಇದ್ದರೆ ಅಭಿವೃದ್ಧಿಗೆ ಹಲವಾರು ಅಡ್ಡಿ–ಆತಂಕಗಳು ಎದುರಾಗುತ್ತವೆ. ಆದ್ದರಿಂದ ದೇಶದ ಸಮಗ್ರ ಅಭಿವೃದ್ಧಿ ಸಾಧಿಸಲು ಹಾಗೂ ಬಡ ಜನರಿಗೆ ಮೂಲ ಸೌಕರ್ಯಗಳನ್ನು ಪೂರೈಸಲು ಪೂರ್ಣಬಹುಮತ ಪಡೆದ ಸರಕಾರದ ಆಡಳಿತದ ಅವಶ್ಯಕತೆ ಇತ್ತೀಚೆಗೆ ಹೆಚ್ಚಾಗಿರುವುದನ್ನು ಕಾಣುತ್ತೇವೆ.

ಸಮ್ಮಿಶ್ರ ಸರಕಾರಗಳು ವಿಶ್ವ ರಾಜಕೀಯ ವ್ಯವಸ್ಥೆಯ ಸಾಮಾನ್ಯ ಲಕ್ಷಣಗಳಾಗಿವೆ. ಇದು ಇತ್ತೀಚಿಗೆ ಸಾರ್ವತ್ರಿಕ ಮನ್ನಣೆ ಪಡೆಯುತ್ತಿರುವ ಪರಿಕಲ್ಪನೆಯಾಗಿದೆ. ಜೊತೆಗೆ ಇದು ಪ್ರಸ್ತುತದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದಿರುವ ಸಂಗತಿಯಾಗಿದೆ. ಭಾರತವು ಸಂಸದೀಯ ಪದ್ಧತಿ ಸರಕಾರ ಅಳವಡಿಸಿಕೊಂಡಿದೆ.ಅಂದರೆ ಬಹುಪಕ್ಷ ಪದ್ಧತಿಯ ತತ್ವವನ್ನು ಮೈಗೂಡಿಸಿಕೊಂಡಿರುವುದರಿಂದ ಹಲವು ಪ್ರಾದೇಶಿಕ ಮತ್ತು ರಾಷ್ಟ್ರೀಯ ಪಕ್ಷಗಳು ತಮ್ಮವೆ ಆದ ತತ್ವ–ಸಿದ್ಧಾಂತಗಳ ಆಧಾರದ ಮೇಲೆ ಜನರನ್ನು ಸಂಘಟಿಸುತ್ತಿರುವುದು ಸಾಮಾನ್ಯವಾಗಿದೆ. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಮತದಾರ ಪ್ರಭು ಹೆಚ್ಚು ಗೊಂದಲಕ್ಕೊಳಗಾಗಿದ್ದಾನೆ. ಹಾಗಾಗಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಕೊಡುವಲ್ಲಿ ವಿಫಲನಾಗಿದ್ದಾನೆ. ಹೀಗಾಗಿ 'ಯುನೈಟೆಡ್ ವಿ ಸ್ಟ್ಯಾಂಡ್ ಮತ್ತು ಡಿವೈಡೆಡ್ ವಿ ಫಾಲ್' ಎನ್ನುವ ತತ್ವದ ಅಡಿಯಲ್ಲಿ ಸರ್ವ ಪಕ್ಷಗಳು ಒಂದುಗೂಡಿ ಆಡಳಿತ ನಡೆಸಿದರೆ ಯಶಸ್ಸು ದೊರೆಯುವುದು ಸುಲಭ ಸಾಧ್ಯ.ಅಂದರೆ ಒಗ್ಗಟ್ಟಿನಿಂದ ಸಾಗಿದರೆ ಸಫಲತೆ ಸಾಧ್ಯ ಎನ್ನುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುತ್ತವೆ. ಹಲವು ತಾತ್ವಿಕ ಭಿನ್ನತೆಗಳು ಹೊಂದಿರುವ ವಿವಿಧ ರಾಜಕೀಯ ಪಕ್ಷಗಳು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಡಿ ಒಂದುಗೂಡಿ ಆಡಳಿತ ನಡೆಸುವುದನ್ನು ಕಾಣುತ್ತೇವೆ. ಹಾಗಾಗೀಯೇ ಸಮ್ಮಿಶ್ರ ಪದ್ಧತಿಯ ಸರಕಾರ ಕೇವಲ ಭಾರತದಲ್ಲಿ ಮಾತ್ರ ಇರದೇ ಈ ಪದ್ಧತಿಯ ಸರಕಾರವನ್ನು ನಾವು ಬ್ರಿಟನ್, ಜರ್ಮನಿ, ಸ್ವಿಜ್ಜರ್‌ಲ್ಯಾಂಡ್ ಮುಂತಾದ ದೇಶಗಳಲ್ಲಿ ಕೂಡ ನೋಡಬಹುದಾಗಿದೆ.ಇತ್ತೀಚೆಗೆ ಭಾರತದ ರಾಜಕೀಯ ಪದ್ಧತಿಯಲ್ಲಿ ಯಾವೊಂದು ಪಕ್ಷವೂ ಕೇಂದ್ರ ಮತ್ತು ರಾಜ್ಯಗಳಲ್ಲಿ ಸರಕಾರ ರಚಿಸಿಕೊಳ್ಳುವಷ್ಟು ಅಗತ್ಯ ಸಂಖ್ಯಾಬಲ ಹೊಂದದೆ ಇರುವುದರಿಂದ ಹಲವು ಪಕ್ಷಗಳು ಸೇರಿಕೊಂಡು ಸಮ್ಮಿಶ್ರ ಸರಕಾರವನ್ನು ರಚಿಸುವುದನ್ನು ಕಾಣುತ್ತೇವೆ. ಇದು ನಮ್ಮ ರಾಜಕೀಯ ಕಾರ್ಯ ವಿಧಾನದ ಒಂದು ಭಾಗವಾಗಿದೆ.

## ಸಮ್ಮಿಶ್ರ ಸರಕಾರದ ಐತಿಹಾಸಿಕ ಹಿನ್ನೆಲೆ

ಸಮ್ಮಿಶ್ರ ಪದ್ಧತಿಯ ಸರಕಾರದ ಇತಿಹಾಸವನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಗಮನಿಸಬಹುದಾಗಿದೆ. ಪಂಜಾಬಿನಲ್ಲಿ 1937ರ ಚುನಾವಣೆಯ ನಂತರ ಒಂದು ಬಗೆಯಾದ ಸಮ್ಮಿಶ್ರ ಪದ್ಧತಿಯ ಸರಕಾರ ಸ್ಥಾಪನೆಯಾಗಿತ್ತು. 1948 ರಲ್ಲಿ ರಚನೆಯಾದ ಪಂಡಿತ ನೆಹರೂರವರ ನಾಯಕತ್ವದ ಭಾರತ ನಡುಗಾಲದ ಸರಕಾರ ಕೂಡ ಒಂದು ಬಗೆಯ ಸಮ್ಮಿಶ್ರ ಸರಕಾರವಾಗಿದ್ದು, ಹಲವಾರು ಪಕ್ಷದ ಸದಸ್ಯರಿಂದ ಕೂಡಿದ ಮತ್ತು ವಿರೋಧ ಪಕ್ಷಗಳಿಲ್ಲದ ಒಂದು ರಾಷ್ಟ್ರೀಯ ಸರಕಾರವಾಗಿತ್ತು. ಅದರಲ್ಲಿ ಕಾಂಗ್ರೆಸ್, ಮುಸ್ಲಿಂಲೀಗ್, ಅಕಾಲಿದಳ, ಮುಂತಾದ ಗುಂಪಿನ ನಾಯಕರು ಮಂತ್ರಿಗಳಾಗಿದ್ದರು. ಒಟ್ಟು 14 ಜನ ಮಂತ್ರಿಗಳಲ್ಲಿ ಕಾಂಗ್ರೆಸ್‌ನ 6 ಜನ, ಮುಸ್ಲಿಂಲೀಗ್‌ನ 5 ಜನ, ಅಕಾಲಿದಳದ ಒಬ್ಬರು, ಆಂಗ್ಲೋ ಇಂಡಿಯನ್ ಸಮುದಾಯದ ಒಬ್ಬರು ಮತ್ತು ಪಾರ್ಸಿ ಸಮುದಾಯದ ಒಬ್ಬರು ಇದ್ದರು. ಕಾಂಗ್ರೆಸ್‌ನ ಮುಂಚೂಣಿ ನಾಯಕ ಪಂಡಿತ ನೆಹರೂ ಅವರು ಪ್ರಧಾನಿಯಾದರು.

ಸ್ವಾತಂತ್ರ್ಯ ಬಂದ ನಂತರ 1952 ರಿಂದ 1989 ರವರೆಗೆ ಕೆಲವು ಕಡೆ ಸಮ್ಮಿಶ್ರ ಪದ್ಧತಿಯ ಸರಕಾರಗಳಿದ್ದವು. ಎಲ್ಲಾ ರಾಜ್ಯಗಳಲ್ಲಿ ಕಾಂಗ್ರೆಸ್‌ನ ರಾಜ್ಯಭಾರ ಇದ್ದುದ್ದರಿಂದ 1967 ರಿಂದ 1971ರ ವರೆಗೆ ಮತ್ತು 1979 ರಿಂದ 1980ರ ವರೆಗೆ ಕೆಲವು ಕಡೆ ಸಮ್ಮಿಶ್ರ ಸರಕಾರ ಬಿಟ್ಟರೆ ಎಲ್ಲಾ ಕಡೆ ಕಾಂಗ್ರೆಸ್ ಆಡಳಿತ ನಡೆಸುತ್ತಿತ್ತು. ಆದರೆ 1989ರ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೊಮ್ಮೆ ಸಮ್ಮಿಶ್ರ ಸರಕಾರವನ್ನು ನ್ಯಾಷನಲ್ ಫ್ರಂಟ್ ನೇತೃತ್ವದಲ್ಲಿ ರಚಿಸಲಾಯಿತು. ಅದು 1991ರ ವರೆಗೆ ಮುಂದುವರೆಯಿತು. ಇಬ್ಬರು ಪ್ರಧಾನ ಮಂತ್ರಿಗಳೊಂದಿಗೆ ಸರಕಾರದ ಆಡಳಿತ ಕೊನೆಯಾಯಿತು. 1991ರ ಚುನಾವಣೆಯ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಅಲ್ಪ ಸಂಖ್ಯಾತ ಸರಕಾರ 5 ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. 1998ರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಚುನಾವಣೆಯಲ್ಲಿ ಯಾವ ಪಕ್ಷಗಳಿಗೂ ಸ್ಪಷ್ಟ ಬಹುಮತ ಸಿಗಲಿಲ್ಲ. ಆದರೆ ಭಾರತೀಯ ಜನತಾ ಪಕ್ಷದ(ಬಿಜೆಪಿ) ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ(ಎನ್‌ಡಿಎ) ಸರಕಾರವು ಅಸ್ತಿತ್ವಕ್ಕೆ ಬಂದು ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು 1999 ರಿಂದ 2004ರ ವರೆಗೆ ಪ್ರಧಾನಿಯಾಗಿ ತಮ್ಮ ಅವಧಿಯನ್ನು ಪೂರ್ಣಗೊಳಿಸಿದರು.ಯಶಸ್ವಿಯಾಗಿ 5 ವರ್ಷ ಅವಧಿಯನ್ನು ಪೂರ್ಣಗೊಳಿಸಿದ ಮೊದಲ ಸಮ್ಮಿಶ್ರ ಸರಕಾರ ಇದಾಗಿತ್ತು. ನಂತರ ಮತ್ತೊಂದು ಒಕ್ಕೂಟವಾದ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ ಸರಕಾರ ರಚಿಸಿತು ಇದು 13 ಪ್ರತ್ಯೇಕ ಪಕ್ಷಗಳನ್ನು ಒಳಗೊಂಡು 2004 ರಿಂದ 2014ರ ವರೆಗೆ ಎರಡು ಅವಧಿಗೆ ಭಾರತವನ್ನು ಆಳಿತು. ಕಾಂಗ್ರೆಸ್‌ನ ನಾಯಕ ಡಾ.ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿ ಕಾರ್ಯನಿರ್ವಹಿಸಿದರು.2014ರ ಮೇನಲ್ಲಿ ನಡೆದ 16ನೇ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ತನ್ನದೇ ಆದ ಸ್ಪಷ್ಟ ಬಹುಮತ ಗಳಿಸಿ ಎನ್‌ಡಿಎ ಒಕ್ಕೂಟ ಅಧಿಕಾರಕ್ಕೆ ಬಂದಿತು. ಮಾನ್ಯ ನರೇಂದ್ರ ಮೋದಿಯವರು ಪ್ರಧಾನಿಯಾದರು.2019ರ ಮೇನಲ್ಲಿ ನಡೆದ 17ನೇ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟ ಸ್ಪಷ್ಟ ಬಹುಮತ ಪಡೆದಿದ್ದರಿಂದ 2019ರಲ್ಲಿ ಮಾನ್ಯ ನರೇಂದ್ರ ಮೋದಿಯವರು ಎರಡನೇ ಬಾರಿಗೆ ಮತ್ತೆ ಪ್ರಧಾನಿಯಾಗಿ ಆಯ್ಕೆ ಆಗಿ ಆಡಳಿತ ನಡೆಸುತ್ತಿದ್ದಾರೆ. ಇದು ಭಾರತೀಯ ರಾಜಕೀಯ ಪರಂಪರೆಯಲ್ಲಿ ಸಮ್ಮಿಶ್ರ ಸರಕಾರಗಳು ನಡೆದು ಬಂದ ಇತಿಹಾಸವಾಗಿದೆ.

## ಸಮ್ಮಿಶ್ರ ಸರಕಾರದ ಪರಿಕಲ್ಪನೆ

ಸಮ್ಮಿಶ್ರ ಸರಕಾರ ಎಂಬ ಪದ ಇಂಗ್ಲಿಷ್ ಪದವಾದ ಕೋಯಿಲಿಷನ್ ಎಂಬ ಪದದ ಅನುವಾದವಾಗಿದೆ. ಈ ಕೋಯಿಲಿಷನ್ ಎಂಬ ಪದವು ಲ್ಯಾಟಿನ್ ಪದವಾದ 'ಕೋಯಿಲೆಸ್' ಎಂಬ ಪದದಿಂದ ಬಂದಿದೆ. ಲ್ಯಾಟಿನ್ ಭಾಷೆಯಲ್ಲಿ ಕೋಯಿಲೆಸ್ ಎಂದರೆ 'ಕೂಡಿ ಬೆಳೆಯುವುದು'(ಟು ಗ್ರೊ ಟುಗೆದರ್) ಎಂದು ಅರ್ಥವಾಗುತ್ತದೆ. ಇಂಗ್ಲಿಷ್ ನಿಘಂಟಿನ ಅರ್ಥದಂತೆ ಸಮ್ಮಿಶ್ರ ಸರಕಾರವೆಂದರೆ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಳ್ಳಲು ಹಲವಾರು ಪಕ್ಷಗಳು ಒಂದುಗೂಡುವದಕ್ಕೆ ಸಮ್ಮಿಶ್ರ ಸರಕಾರವೆಂದು ಕರೆಯಲಾಗುತ್ತದೆ. ರಾಜ್ಯಶಾಸ್ತ್ರದಲ್ಲಿ ಸಮ್ಮಿಶ್ರ ಸರಕಾರವೆಂದರೆ "ಸಾರ್ವತ್ರಿಕ ಚುನಾವಣೆಯಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ಸರಕಾರ ರಚಿಸುವಷ್ಟು ಅಗತ್ಯ ಸ್ಥಾನಗಳು(ಸೀಟುಗಳು) ಬರದೆ ಇದ್ದಾಗ ಕೆಲವು ಸಮಾನ ಮನಸ್ಕ ಪಕ್ಷಗಳು ಸೇರಿಕೊಂಡು ಸರಕಾರವನ್ನು ಸ್ಥಾಪಿಸುವ ಮೂಲಕ ಅಧಿಕಾರ ಹಂಚಿಕೊಳ್ಳುವುದೆ ಆಗಿದೆ". ಖ್ಯಾತ ರಾಜಕೀಯ ತಜ್ಞರಾದ ಪ್ರೊ.ಎಫ್.ಎ. ಆಗ್‌ರವರು, ಸರಕಾರ ಹಾಗೂ ಮಂತ್ರಿಮಂಡಳ ರಚನೆಯಲ್ಲಿ ಅನ್ಯ ರಾಜಕೀಯ ಪಕ್ಷಗಳ ಸಹಕಾರ ಪಡೆದುಕೊಳ್ಳುವುದನ್ನೆ ಸಮ್ಮಿಶ್ರ ಸರಕಾರವೆಂದು ಅರ್ಥೈಸಿದ್ದಾರೆ.

## ಅಧ್ಯಯನದ ಉದ್ದೇಶಗಳು

ಪ್ರಸ್ತುತ ಪ್ರಬಂಧದ ವಿಶ್ಲೇಷಣೆಗೆ ಐತಿಹಾಸಿಕ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಐತಿಹಾಸಿಕ ಅವಲೋಕನದ ಜೊತೆಗೆ ಸಮ್ಮಿಶ್ರ ಸರಕಾರದ ಪ್ರಸ್ತುತತೆಯ ಮಹತಿ ಮತ್ತು ಮಹತ್ವವನ್ನು ಕುರಿತು ವಿಶ್ಲೇಷಣಾತ್ಮಕವಾಗಿ ವಿವರಿಸಲಾಗಿದೆ.

## ಅಧ್ಯಯನದ ಮೂಲಗಳು

ಪ್ರಸ್ತುತ ಸಂಶೋಧನಾ ಪ್ರಬಂಧವು ಮಾಧ್ಯಮಿಕ ಮೂಲಗಳ ಆಧಾರದ ಮೇಲೆ ಅವಲಂಬಿತವಾಗಿದೆ. ಸರಕಾರದ ವರದಿ, ಪುಸ್ತಕಗಳು, ಜರ್ನಲ್‌ಗಳು, ದಿನ ಪತ್ರಿಕೆ ಮತ್ತು ತಜ್ಞರ ಲೇಖನಗಳು ಮುಂತಾದ ಮೂಲಗಳಿಂದ ಅಧ್ಯಯನದ ವಿಷಯ–ವಸ್ತುವನ್ನು ಪಡೆದುಕೊಳ್ಳುವುದರ ಜೊತೆಗೆ ಪ್ರಸ್ತುತದ ಅಗತ್ಯಕ್ಕೆ ಅನುಗುಣವಾಗಿ ವಿಷಯವನ್ನು ವಿಮರ್ಶಾತ್ಮಕವಾಗಿ ಪ್ರಸ್ತುತಪಡಿಸಲಾಗಿದೆ.

## ವಿಷಯ ವಿಶ್ಲೇಷಣೆ

ಸಮ್ಮಿಶ್ರ ಸರಕಾರಗಳು ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಾಗಿವೆ. ಪ್ರಜಾಪ್ರಭುತ್ವದ ಸಾಫಲ್ಯ ಹಾಗೂ ವೈಫಲ್ಯಗಳು ಸಮ್ಮಿಶ್ರ ಸರಕಾರವನ್ನು ಅವಲಂಬಿಸಿವೆ.ಇವು ಸ್ಥಿರ ಮತ್ತು ಸುಭದ್ರ ಆಡಳಿತ ನೀಡುವಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಹಲವು ರಾಜಕೀಯ ಪಕ್ಷಗಳ ಮಧ್ಯೆ ವೈಚಾರಿಕ ಮತ್ತು ಸೈದ್ಧಾಂತಿಕ ಭಿನ್ನತೆಗಳು ಇದ್ದರೂ ಸಹ ಜನರ ಹಿತ ದೃಷ್ಟಿಯಲ್ಲಿಟ್ಟುಕೊಂಡು ಅಥವಾ ಅಧಿಕಾರದ ಆಸೆಗಾಗಿಯೋ ಎಂಬಂತೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಸರಕಾರ ನಡೆಸುವುದನ್ನು ಕಾಣುತ್ತೇವೆ. ಅಂದರೆ ಇಲ್ಲಿ ಪಕ್ಷಗಳ ತಾತ್ವಿಕ ಭಿನ್ನತೆಗಳಿಗಿಂತ ಬಹು ಮುಖ್ಯವಾಗಿ ದೇಶದ ಭವಿಷ್ಯ ಬಹಳ ಪ್ರಮುಖವಾಗುತ್ತದೆ. ಏಕ ಪಕ್ಷದ ಪೂರ್ಣ ಪ್ರಮಾಣದ ಬಹುಮತದ ಸರಕಾರ ರಚನೆ ಅಸಾಧ್ಯ ಅನ್ನುವ ಸಂಕೀರ್ಣ ಸಂದರ್ಭದಲ್ಲಿ ಅನಿವಾರ್ಯವಾಗಿ ಹುಟ್ಟಿಕೊಂಡಿರುವ ಪದ್ಧತಿಯೇ ಸಮ್ಮಿಶ್ರ ಸರಕಾರವಾಗಿದೆ. ಕೆಲವೊಮ್ಮೆ ಒಕ್ಕೂಟ ವ್ಯವಸ್ಥೆಗೆ ಅಪಾಯಕಾರಿಯಾದರೆ ಇನ್ನು ಕೆಲವೊಮ್ಮೆ ಪ್ರಜಾಪ್ರಭುತ್ವಕ್ಕೆ ಅನಿವಾರ್ಯ ಅಂಗವಾಗಿ ಮಾರ್ಪಟ್ಟಿರುವುದನ್ನು ನೋಡಬಹುದಾಗಿದೆ.ಆದ್ದರಿಂದ ಪ್ರಸ್ತುತ ಪ್ರಬಂಧದಲ್ಲಿ ಸಮ್ಮಿಶ್ರ ಸರಕಾರದ ಸಾಧಕ–ಬಾಧಕಗಳನ್ನು ಕುರಿತು ಚರ್ಚಿಸಲಾಗಿದೆ. ಅದರ ಪ್ರಸ್ತುತತೆಯನ್ನು ಒರೆಗೆ ಹಚ್ಚಿ ನೋಡುವ ಪ್ರಯತ್ನ ಮಾಡಲಾಗಿದೆ.

ಸಮ್ಮಿಶ್ರ ಸರಕಾರದ ವಿವಿಧ ರಾಜಕೀಯ ಪಕ್ಷಗಳು ಒಂದುಗೂಡಿ ಸರಕಾರ ರಚಿಸುತ್ತವೆ. ಅಂದರೆ ಸರಕಾರ ರಚನೆಯಲ್ಲಿ ಪಾಲುದಾರ ರಾಗಿರುತ್ತವೆ. ಸರ್ವ ಪಕ್ಷಗಳು ಅಂದರೆ ಸಮ್ಮಿಶ್ರ ಸರಕಾರದ ಪಾಲುದಾರ ಪಕ್ಷಗಳು ಸಂವಿಧಾನದತ್ತವಾಗಿ ಅಧಿಕಾರವನ್ನು ಹಂಚಿಕೊಂಡು ತಮಗೆ ತಾವೇ ಒಪ್ಪಿಕೊಂಡು ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳಿಗಾಗಿ ಕೂಡಿ ಕೆಲಸ ಮಾಡಿಕೊಳ್ಳುತ್ತವೆ. ಸಮ್ಮಿಶ್ರ ಪದ್ಧತಿಯ ಒಪ್ಪಂದವು ಚುನಾವಣಾ ಪೂರ್ವ ಮತ್ತು ಚುನಾವಣೋತ್ತರ ಹೊಂದಾಣಿಕೆಯ ಪ್ರಕಾರ ನಡೆಯುವುದು. ಅಂದರೆ ಚುನಾವಣೆಗಿಂತ ಮೊದಲೇ ಕೆಲವು ರಾಜಕೀಯ ಪಕ್ಷಗಳು ಒಂದುಗೂಡಿ ಕೆಲವು ಸಾಮಾನ್ಯ ಕಾರ್ಯಕ್ರಮಗಳನ್ನು ರೂಪಿಸಿ ಅದರಂತೆ ಸಮ್ಮಿಶ್ರ ಸರಕಾರದ ಚುನಾವಣಾ ಪ್ರಣಾಳಿಕೆಯನ್ನು ಜನತೆಯ ಮುಂದಿಟ್ಟು ಜೊತೆಗೂಡಿ, ಕೆಲವೊಮ್ಮೆ ಕ್ಷೇತ್ರಗಳನ್ನು ಹಂಚಿಕೊಂಡು ಚುನಾವಣೆಗೆ ಸ್ಪರ್ಧಿಸಿ ಚುನಾವಣಾ ನಂತರ ಒಪ್ಪಿಕೊಂಡ ಷರತ್ತಿನಂತೆ ಸರಕಾರ ರಚಿಸಿ ಅಧಿಕಾರ ಹಂಚಿಕೊಂಡು ಸರಕಾರ ನಡೆಸುವುದು ಸಾಮಾನ್ಯವಾದ ಸಂಗತಿಯಾಗಿದೆ.

ಮತ್ತೊಂದು ರೀತಿಯಲ್ಲಿ ಚುನಾವಣೆ ಮುಗಿದ ನಂತರ ಯಾವುದೇ ರಾಜಕೀಯ ಪಕ್ಷಕ್ಕೆ ಸ್ಪಷ್ಟ ಬಹುಮತ ಬರದೇ ಇದ್ದ ಪಕ್ಷದಲ್ಲಿ ಸಮಾನ ಮನಸ್ಕ ಕೆಲವು ಪಕ್ಷಗಳು ಜೊತೆಗೂಡಿ ಒಂದು ಮೈತ್ರಿ ಸಂಘಟನೆ ರಚನೆ ಮಾಡಿಕೊಂಡು ಎಲ್ಲ ಪಕ್ಷಗಳ ಪ್ರಣಾಳಿಕೆ ಭಿನ್ನವಾಗಿದ್ದರೂ ಕೂಡ ಕೆಲವು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಡಿ ಸರಕಾರ ರಚಿಸಿಕೊಂಡು ಅಧಿಕಾರವನ್ನು ಹಂಚಿಕೊಂಡು ಆಡಳಿತ ನಡೆಸುವುದು ತೀರಾ ಸಾಮಾನ್ಯವಾದ ಪ್ರಕ್ರಿಯೆಯಾಗಿದೆ. ಹಾಗೂ ಅಷ್ಟೇ ಅನಿವಾರ್ಯವಾದ ಸಹಜ ಸಂಗತಿಯೂ ಕೂಡ ಆಗಿದೆ.

ಒಟ್ಟಾರೆಯಾಗಿ ಸಾರ್ವತ್ರಿಕ ಚುನಾವಣೆಯಲ್ಲಿ ಯಾವೂದೇ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ಪಡೆಯುವುದು ಸಾಧ್ಯವಾಗದಿದ್ದರೆ ಅಥವಾ ಏಕ ಪಕ್ಷದ ಸರಕಾರ ರಚನೆ ಸಮರ್ಥವಾಗಿರದೆ ಇದ್ದರೆ ಹಲವು ಪಕ್ಷಗಳು ಒಂದುಗೂಡಿ ಸರಳ ಬಹುಮತವನ್ನು ಸಾಬೀತುಪಡಿಸಿ ಸಾಮಾನ್ಯ

ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅಧಿಕಾರವನ್ನು ಹಂಚಿಕೊಂಡು ಸರಕಾರ ನಡೆಸುವುದನ್ನೆ ಸಮ್ಮಿಶ್ರ ಸರಕಾರವೆನ್ನಿಸಿಕೊಳ್ಳುತ್ತದೆ.

## ಸಮ್ಮಿಶ್ರ ಸರಕಾರದ ಲಕ್ಷಣಗಳು

ಸಮ್ಮಿಶ್ರ ಪದ್ಧತಿಯ ಸರಕಾರದಲ್ಲಿ ನಾವು ಈ ಕೆಳಕಂಡ ಕೆಲವು ಪ್ರಮುಖ ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.ಅವುಗಳು ಈ ರೀತಿಯಾಗಿವೆ.

1. ಸಮ್ಮಿಶ್ರ ಪದ್ಧತಿಯ ಸರಕಾರದಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳು ಕೂಡಿಕೊಂಡು ಸರಕಾರ ರಚಿಸುತ್ತವೆ.
2. ಸಮ್ಮಿಶ್ರ ಪದ್ಧತಿಯ ಸರಕಾರಗಳು ಸಹಕಾರ ಹಾಗೂ ಸಂಘರ್ಷದ ಸಮ್ಮಿಶ್ರವಾದ ಪ್ರಕ್ರಿಯೆಯಾಗಿದೆ.
3. ಸಮ್ಮಿಶ್ರ ಪದ್ಧತಿಯ ಸರಕಾರ ರಚನೆಯು ಕೆಲವೊಮ್ಮೆ ಚುನಾವಣಾಪೂರ್ವ ಅಥವಾ ಚುನಾವಣೋತ್ತರ ಘಟಬಂಧನ ಆಗಿರುತ್ತದೆ.
4. ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳು ಸಮ್ಮಿಶ್ರ ಸರಕಾರಕ್ಕೆ ಆಧಾರವಾಗಿರುತ್ತವೆ.
5. ಸರಕಾರವನ್ನು ಮುನ್ನಡೆಸಲು ಸರ್ವ ಸಮ್ಮತವಾಗಿ ಶಾಸಕಾಂಗ ಪಕ್ಷದ ಒಬ್ಬರನ್ನು ನಾಯಕನಾಗಿ ಆಯ್ಕೆ ಮಾಡಲಾಗಿರುತ್ತದೆ.
6. ಮೈತ್ರಿ ಪಕ್ಷಕ್ಕೆ ಸೇರಿದ ಪಕ್ಷದ ಪ್ರತಿಯೊಬ್ಬ ಸದಸ್ಯರನ್ನು ಗೌರವದಿಂದ ಕಾಣುವುದರ ಜೊತೆಗೆ ಅವರ ಬೇಕು-ಬೇಡಿಕೆಗಳನ್ನು ಪೂರೈಸಬೇಕಾಗುತ್ತದೆ.

7) ಪಕ್ಷದಿಂದ ಆಯ್ಕೆಯಾದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಅವರಿಗೆ ಸ್ಥಾನಮಾನಗಳನ್ನು ನೀಡಬೇಕಾಗುತ್ತದೆ.
8) ಸಮ್ಮಿಶ್ರ ಸರಕಾರಗಳು ಅನಿವಾರ್ಯ ಸಂದರ್ಭದ ಅಸಹಾಯಕ ಪರಿಸ್ಥಿತಿಯ ಪ್ರತಿಫಲವಾಗಿವೆ.

ಈ ಮೇಲೆ ಹೇಳಿದ ಲಕ್ಷಣಗಳಿಂದ ಚುನಾವಣಾ ಪೂರ್ವ ಒಪ್ಪಂದದಂತೆ ಅಥವಾ ಚುನಾವಣೋತ್ತರ ಒಪ್ಪಂದ ಮಾಡಿಕೊಂಡು ಹಲವು ರಾಜಕೀಯ ಪಕ್ಷಗಳು ಕೂಡಿಕೊಂಡು ಒಂದು ಮೈತ್ರಿ ಗುಂಪು ರಚಿಸಿಕೊಂಡು ಶಾಸಕಾಂಗದಲ್ಲಿ ಬಹುಮತ ತೋರಿಸಿ ಸಮ್ಮಿಶ್ರ ಸರಕಾರ ಕಾರ್ಯನಿರ್ವಹಿಸಬೇಕಾಗುತ್ತದೆ.

## ಸಮ್ಮಿಶ್ರ ಸರಕಾರದ ಅನುಕೂಲಗಳು

ಸಮ್ಮಿಶ್ರ ಸರಕಾರದಿಂದ ಕೆಲವು ಅನುಕೂಲಗಳು ಜನರಿಗೆ ದೊರೆಯುತ್ತವೆ.ಅವುಗಳು ಈ ರೀತಿಯಾಗಿರುತ್ತವೆ.

1. ಸಮ್ಮಿಶ್ರ ಸರಕಾರವು ಹೊಸ ನಾಯಕತ್ವದ ಬೆಳವಣಿಗೆಗೆ ಸಹಕಾರಿಯಾಗಿದೆ.
2. ಇದು ಸದಸ್ಯರಿಗೆ ಪರಸ್ಪರ ಪ್ರೋತ್ಸಾಹ ಮತ್ತು ಪ್ರೇರಣೆ ಒದಗಿಸುತ್ತದೆ.
3. ವಿವಿಧ ಅಥವಾ ವಿಭಿನ್ನ ಜನರನ್ನು ಮತ್ತು ಸಂಘಟನೆಗಳನ್ನು ಒಟ್ಟಿಗೆ ಬೆಳೆಸುತ್ತವೆ.
4. ಸಮಯ ಹಾಗೂ ಸಂಪನ್ಮೂಲಗಳನ್ನು ಉಳಿತಾಯ ಮಾಡುತ್ತವೆ.
5. ವ್ಯಕ್ತಿ ಮತ್ತು ಸಂಘಟನೆಯ ಮಧ್ಯೆ ಸಂಪರ್ಕಕ್ಕೆ ನೆರವು ನೀಡುತ್ತದೆ.
6. ಸಂವಹನ-ಸಂಪರ್ಕ ಮತ್ತು ಕೌಶಲ್ಯಗಳ ನಡುವೆ ನೇರ ವಿನಿಮಯ ಏರ್ಪಡಿಸುತ್ತವೆ.
7. ಪಕ್ಷದ ಸದಸ್ಯರಲ್ಲಿ ವಿಶ್ವಾಸರ್ಹತೆ ಮತ್ತು ಪ್ರಭಾವ ವೃದ್ಧಿಸುತ್ತದೆ.
8. ಅಂಗ ಪಕ್ಷಗಳ ಸದಸ್ಯರಲ್ಲಿ 'ನಾವು ನಮ್ಮವರು' ಎನ್ನುವ ಭಾವನೆ ಬೆಳೆಸುತ್ತದೆ.
9. ಪ್ರಜಾಪ್ರಭುತ್ವದಲ್ಲಿ ಸದಸ್ಯರ ಪ್ರಯತ್ನಕ್ಕೆ ಸೂಕ್ತ ರಕ್ಷಣೆಯನ್ನು ಒದಗಿಸುತ್ತದೆ

## ಸಮ್ಮಿಶ್ರ ಸರಕಾರದ ಸವಾಲುಗಳು

ಸಮ್ಮಿಶ್ರ ಸರಕಾರ ರಚನೆಯು ಭಾರತದಲ್ಲಿ ಹೊಸ ಪ್ರಯೋಗವಾಗಿದೆ. ಆದರೆ ಪ್ರಸ್ತುತ ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳು ಕೇಂದ್ರ ಮತ್ತು ರಾಜ್ಯಗಳಲ್ಲಿ ಪೂರ್ಣ ಬಹುಮತ ಪಡೆದು ಸರಕಾರ ಸ್ಥಾಪಿಸಲು ವಿಫಲವಾದ ಕಾರಣಕ್ಕೆ ಮತ್ತು ರಾಜ್ಯದ ರಾಜಕೀಯ ಪಕ್ಷಗಳು ಆಯಾ ರಾಜ್ಯಗಳಲ್ಲಿ ಜನಪ್ರಿಯವಾಗಿ ಬಹುಮತದ ಜೊತೆಗೆ ಪ್ರಾಬಲ್ಯ ಪಡೆಯುತ್ತಿರುವದರಿಂದ ಸಮ್ಮಿಶ್ರ ಸರಕಾರ ಆಡಳಿತ ನಡೆಸುವುದು ಪ್ರಸ್ತುತದಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಅನಿವಾರ್ಯವಾಗಿದೆ. ಆದರೆ ಸಮ್ಮಿಶ್ರ ಸರಕಾರಗಳು ಹಲವಾರು ಗೊಂದಲಗಳ ಗೂಡಾಗಿವೆ. ಅವುಗಳ ಸಮರ್ಥ ಕಾರ್ಯನಿರ್ವಹಣೆಗೆ ಹಲವಾರು ಸಮಸ್ಯೆ-ಸವಾಲುಗಳಿವೆ.ಅವುಗಳಿಗೆ ಸೂಕ್ತ ಸಂವಿಧಾನಾತ್ಮಕ ಪರಿಹಾರ ಸೂಚಿಸದೆ ಇದ್ದರೆ ಸಮ್ಮಿಶ್ರ ಸರಕಾರಗಳ ಮೇಲೆ ಜನರು ಭರವಸೆಗಳನ್ನೇ ಕಳೆದುಕೊಳ್ಳುತ್ತಾರೆ.ಆದ್ದರಿಂದ ಜನರ ಭರವಸೆಗಳು ಭದ್ರಗೊಳ್ಳಬೇಕಾದರೆ ಸಮ್ಮಿಶ್ರ ಸರಕಾರಗಳು ಸಮರ್ಥವಾಗಿ ಅಂದರೆ ವಿಶೇಷವಾಗಿ ಜನರ ಕಣ್ಣೀರನ್ನು ಒರೆಸುವ ಜನೋಪಯೋಗಿ ಕಾರ್ಯಕ್ರಮಗಳನ್ನು ರೂಪಿಸುವ ಹಾಗೂ ಅವುಗಳನ್ನು ಅನುಷ್ಠಾನ ಗೊಳಿಸುವುದು ಅತಿ ಅವಶ್ಯಕವಾಗಿದೆ. ಹಾಗಾಗಿ ಅವುಗಳು ಎದುರಿಸುವಂಥ ಸಮಸ್ಯೆಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

1. ಸಮ್ಮಿಶ್ರ ಪದ್ಧತಿ ಸರಕಾರಗಳು ಆಕಸ್ಮಿಕವಾಗಿ ಮೂಡಿಬಂದ ರಾಜಕೀಯ ಪ್ರಕ್ರಿಯೆಗಳೆ ಹೊರತು ಅವುಗಳಿಗೆ ಯಾವುದೇ ಸೈದ್ಧಾಂತಿಕ ಬದ್ಧತೆ ಇರುವುದಿಲ್ಲ.
2. ಸಮ್ಮಿಶ್ರ ಸರಕಾರದ ಅಂಗ ಪಕ್ಷಗಳಲ್ಲಿ ಪರಸ್ಪರ ಹೊಂದಾಣಿಕೆ ಕೊರತೆ ಕಂಡುಬರುತ್ತದೆ.
3. ಸಮ್ಮಿಶ್ರ ಸರಕಾರಕ್ಕೆ ಅಧಿಕಾರದ ಆಸೆ ಇರುತ್ತದೆ ಹೊರತು ಅಭಿವೃದ್ಧಿ ಒತ್ತಾಸೆ ಇರವುದಿಲ್ಲ.
4. ಆಂತರಿಕ ಭಿನ್ನಾಭಿಪ್ರಾಯಗಳಿಂದ ಸಮ್ಮತಿಸಿರುವ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳು ಕೂಡ ಅನುಷ್ಠಾನಕ್ಕೆ ತರಲು ಅಸಾಧ್ಯ.
5. ಪಕ್ಷದ ಪ್ರಣಾಳಿಕೆಗಿಂತ ಮಿಗಿಲಾಗಿ ವೈಯಕ್ತಿಕ ಪ್ರಲೋಭನೆಗಳೆ ಹೆಚ್ಚು ಪ್ರಾಬಲ್ಯ ಪಡೆಯುತ್ತವೆ.
6. ಹೊಂದಾಣಿಕೆ ರಾಜಕಾರಣದಿಂದಾಗಿ ಅಭಿವೃದ್ಧಿಯ ಹಾದಿ ಹಳ್ಳ ಹಿಡಿಯುತ್ತದೆ.
7. ಅನಾವಶ್ಯಕ ಶ್ರಮ,ಸಮಯ ಮತ್ತು ಸಂಪನ್ಮೂಲಗಳು ಪೋಲಾಗುತ್ತವೆ.
8. ರಾಷ್ಟ್ರದ ಹಿತ ದೃಷ್ಟಿಯಿಂದ ದೊಡ್ಡ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ.
9. ಸಮ್ಮಿಶ್ರ ಸರಕಾರದ ಅಂಗ ಪಕ್ಷಗಳಲ್ಲಿ ಅಧಿಕಾರವು ಸಮಾನವಾಗಿ ಹಂಚಿಕೆಯಾಗಿರುವದಿಲ್ಲ.
10. ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನಾವಶ್ಯಕ ವಿಳಂಬ ನೀತಿ ಅನುಸರಿಸಲಾಗುತ್ತದೆ.
11. ಸಮಯ ಸಾಧಕತನ ಮೇಲುಗೈ ಪಡೆಯುತ್ತದೆ.

ಹೀಗಾಗಿ ಸಮ್ಮಿಶ್ರ ಸರಕಾರಗಳು ಹಲವಾರು ಸಮಸ್ಯೆ-ಸವಾಲುಗಳನ್ನು ಎದುರಿಸುತ್ತವೆ. ಆದ್ದರಿಂದ ಆ ಸವಾಲುಗಳಿಗೆ ಸಮರ್ಥವಾಗಿ ಕಾನೂನಿನ ಮೂಲಕ ಸೂಕ್ತ ಪರಿಹಾರ ಕಂಡುಕೊಳ್ಳುವುದು ಅತಿ ಅನಿವಾರ್ಯವಾಗಿದೆ.

ISSN : 2249-2429

RNI REG.NO.KARKAN/2011/38712

## ಪರಿಹಾರ ಕ್ರಮಗಳು

ಸಮ್ಮಿಶ್ರ ಪದ್ಧತಿಯ ಸರಕಾರಗಳ ಸಮರ್ಥ ಕಾರ್ಯನಿರ್ವಹಣೆಗಾಗಿ ಕೆಲವು ಪರಿಹಾರ ಕ್ರಮಗಳನ್ನು ಸೂಚಿಸಲಾಗಿದೆ.ಅವುಗಳು ಈ ಕೆಳಗಿನಂತಿವೆ:

1. ಸಮ್ಮಿಶ್ರ ಸರಕಾರಗಳನ್ನು ಕಾನೂನುಬದ್ಧಗೊಳಿಸಬೇಕು.
2. ಅಂಗ ಪಕ್ಷಗಳಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಬೇಕು.
3. ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
4. ಅಂಗ ಪಕ್ಷಗಳ ಮಧ್ಯೆ ಸಾಮರಸ್ಯ ಸಾಧಿಸಲು 'ಸಮನ್ವಯ ಸಮಿತಿ' ರಚಿಸಬೇಕು.
5. ರಾಜಕೀಯ ಪಕ್ಷಗಳು ಚುನಾವಣಾಪೂರ್ವ ಒಪ್ಪಂದ ಮಾಡಿಕೊಳ್ಳಬೇಕು.
6. ರಾಜ್ಯಪಾಲರು ಅನಾವಶ್ಯಕ ರಾಜಕೀಯ ಹಸ್ತಕ್ಷೇಪ ಮಾಡುವದನ್ನು ನಿಲ್ಲಿಸಬೇಕು.
7. ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗಳು ಅಂಗ ಪಕ್ಷಗಳ ಉದ್ದೇಶವಾಗಿರಬೇಕು.
8. ಸಮ್ಮಿಶ್ರ ಸರಕಾರದ ಸದಸ್ಯ ಪಕ್ಷಗಳ ಜಂಡಾ ಮತ್ತು ಅಜೆಂಡಗಳು ಒಂದೇಯಾಗಿರಬೇಕು.
9. ಪಕ್ಷಾಂತರ ನಿಷೇಧ ಕಾಯ್ದೆ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
10. ಸಮ್ಮಿಶ್ರ ಸರಕಾರಗಳು ಸೈದ್ಧಾಂತಿಕ ಬದ್ಧತೆ ಹೊಂದಿರಬೇಕೇ ಹೊರತು ಅಧಿಕಾರಕ್ಕೆ ಬದ್ಧತೆ ಹೊಂದಿರಬಾರದು
11. ಸಮ್ಮಿಶ್ರ ಸರಕಾರಗಳು ಎಲ್ಲಾ ಹಂತಗಳಲ್ಲಿ 'ರಾಜಧರ್ಮ' ಪರಿಪಾಲನೆ ಮಾಡಬೇಕು.

## ಸಮಾರೋಪ

ಸಮ್ಮಿಶ್ರ ಸರಕಾರಗಳು ಸ್ವಾತಂತ್ರ್ಯ ಬಂದಾಗಿನಿಂದಲೇ ಕೆಲವು ರಾಜ್ಯಗಳಲ್ಲಿ ರಚನೆಯಾಗಿದ್ದರೂ ಈ ಪದ್ಧತಿ ಎಂಬತ್ತರ ದಶಕದಲ್ಲಿ ರಾಷ್ಟ್ರ ರಾಜಕೀಯದಲ್ಲಿ ಹೆಚ್ಚು ಬೆಳಕಿಗೆ ಬಂತು. ಈಗ ಭಾರತೀಯ ರಾಜಕೀಯ ಲಕ್ಷಣಗಳಲ್ಲಿ ಸಮ್ಮಿಶ್ರ ಸರಕಾರವೂ ಸೇರಿಕೊಂಡಿದೆ. ಜೊತೆಗೆ ಅದು ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವಾಗಿದೆ. ರಾಷ್ಟ್ರ ಮತ್ತು ಪ್ರಾದೇಶಿಕ ಮಟ್ಟದಲ್ಲಿ ಈಗ ಕೇವಲ ಸಮ್ಮಿಶ್ರ ಸರಕಾರವನ್ನು ಮಾತ್ರ ಕಾಣುತ್ತೇವೆ. ಆದ್ದರಿಂದ ಆಧುನಿಕ ಯುಗವನ್ನು ಸಮ್ಮಿಶ್ರ ಸರಕಾರದ ಯುಗವೆಂದು ಕರೆಯಲಾಗುತ್ತಿದೆ.

ಇಂದಿನ ರಾಷ್ಟ್ರೀಯ ಪಕ್ಷಗಳು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಪೂರ್ಣ ಬಹುಮತದಿಂದ ಆರಿಸಿ ಬಂದು ಸರಕಾರ ರಚನೆ ಮಾಡುವ ಸಾಮರ್ಥ್ಯ ಕಳೆದುಕೊಂಡಿವೆ. ಆಯಾ ಪಕ್ಷದ ರಾಷ್ಟ್ರೀಯ ನಾಯಕರುಗಳು ಏಕ ಪಕ್ಷದ ಪರ ಪೂರ್ಣ ಜನಾದೇಶ ಪಡೆಯುವ ಸಾಮರ್ಥ್ಯ ಇಲ್ಲದೆ ಇರುವುದರಿಂದ ಹಲವು ಆತಂಕಗಳನ್ನು ಎದುರಿಸುತ್ತಿದ್ದಾರೆ. ಕಾರಣ ರಾಷ್ಟ್ರೀಯ ರಾಜಕೀಯ ಪಕ್ಷಗಳ ನಾಯಕರು ಜನತೆಯ ಬೇಕು–ಬೇಡಿಕೆಗಳಿಗೆ ಸ್ಪಂದಿಸದೆ ಚುನಾವಣೆಯಿಂದ ದೂರವಿರುವುದರಿಂದ ಪ್ರಸ್ತುತದಲ್ಲಿ ಪ್ರಾದೇಶಿಕ ಪಕ್ಷದ ನಾಯಕರು ಆಯಾ ರಾಜ್ಯಗಳಲ್ಲಿ ಜನಪ್ರಿಯ–ಜನಪರ ನಾಯಕತ್ವ ಪಡೆದುಕೊಂಡಿದ್ದಾರೆ. ನಮ್ಮ ರಾಷ್ಟ್ರಗಳಲ್ಲಿ ಪ್ರಾದೇಶಿಕ ಪಕ್ಷಗಳು ಪ್ರಾಬಲ್ಯತೆ ಪಡೆದಿರುವುದರಿಂದ ಸಮ್ಮಿಶ್ರ ಸರಕಾರಗಳು ಮೇಲಿಂದ ಮೇಲೆ ರಚನೆಯಾಗುತ್ತಿವೆ. ರಾಷ್ಟ್ರದ ಹಿತಾಸಕ್ತಿಯನ್ನು ರಾಷ್ಟ್ರೀಯ ಪಕ್ಷಗಳು ಕಾಪಾಡಿಕೊಂಡರೆ ರಾಜ್ಯದ ಹಿತಾಸಕ್ತಿಯನ್ನು ಪ್ರಾದೇಶಿಕ ಪಕ್ಷಗಳು ಕಾಪಾಡಿಕೊಳ್ಳುತ್ತಿವೆ. ಅಂದರೆ ರಾಷ್ಟ್ರದ ಬೇಕು–ಬೇಡಿಕೆಗಳನ್ನು ರಾಷ್ಟ್ರೀಯ ಪಕ್ಷಗಳು ಈಡೇರಿಸಿದರೆ ರಾಜ್ಯದ ಬೇಕು–ಬೇಡಿಕೆಗಳನ್ನು ಪ್ರಾದೇಶಿಕ ಪಕ್ಷಗಳು ಈಡೇರಿಸುತ್ತಿವೆ.ಹಾಗಾಗಿ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಸಮ್ಮಿಶ್ರ ಸರಕಾರಗಳ ರಚನೆ ತೀರಾ ಅನಿವಾರ್ಯವಾಗಿ ಬಿಟ್ಟಿದೆ.

ಇದರಿಂದಾಗಿ ಪ್ರಾದೇಶಿಕ ಪಕ್ಷಗಳು ರಾಷ್ಟ್ರದ ರಾಜಕೀಯದಲ್ಲಿ ಬಹುದೊಡ್ಡ ಪಾಲು ಪಡೆದು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿವೆ.ಹಾಗಾಗಿಯೇ ಸಮ್ಮಿಶ್ರ ಸರಕಾರ ಇಂದಿನ ಅನಿವಾರ್ಯತೆಯಾಗಿದೆ.ಹೀಗಾಗಿಯೇ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಯುಪಿಎ ಮೈತ್ರಿಕೂಟ ರಚಿಸಿಕೊಂಡು ಆಡಳಿತ ನಡೆಸಿದರೆ ಬಿಜೆಪಿ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟ ರಚಿಸಿಕೊಂಡು ಅಧಿಕಾರ ನಡೆಸುತ್ತಿವೆ. ಸಮ್ಮಿಶ್ರ ಸರಕಾರ ರಚನೆ ರಾಜಕೀಯ ಪಕ್ಷಗಳಲ್ಲಿ ಭಿನ್ನತೆಯ ಬದಲಾಗಿ ಸಂಯೋಜನೆ ಮತ್ತು ಸಮನ್ವಯತೆಗೆ ಅವಕಾಶ ಮಾಡಿಕೊಟ್ಟಿದೆ. ಇದರಿಂದ ಕೇಂದ್ರ ಮತ್ತು ರಾಜ್ಯಗಳ ಸಂಬಂದಗಳಲ್ಲಿ ಪ್ರಾದೇಶಿಕ ಪಕ್ಷಗಳ ಜೊತೆಗೆ ರಾಷ್ಟ್ರೀಯ ಪಕ್ಷಗಳು ಹೊಂದಾಣಿಕೆಯಾಗುವ ಸಾಧ್ಯತೆಗಳು ಹೆಚ್ಚಾಗಿ ಇರುತ್ತದೆ.ಆದ್ದರಿಂದ ಸಂಪನ್ಮೂಲಗಳ ಹಂಚಿಕೆಯಲ್ಲಿ ಕೇಂದ್ರ ಮತ್ತು ರಾಜ್ಯಗಳು ಹೆಚ್ಚು ಸಂಘರ್ಷಕ್ಕಿಳಿಯದೆ ಪರಸ್ಪರ ಸಹಕಾರ ಮನೋಭಾವನೆ ತೋರುತ್ತಿವೆ. ಸಮ್ಮಿಶ್ರ ಸರಕಾರ ಕೆಲವೊಂದು ಸಂದರ್ಭದಲ್ಲಿ ಪ್ರಜಾತಂತ್ರ ವ್ಯವಸ್ಥೆಗೆ ಮಾರಕವೆನಿಸಿದರೂ ಇನ್ನೂ ಕೆಲವೊಮ್ಮೆ ಅದು ಅನಿವಾರ್ಯವೆನಿಸುತ್ತದೆ.

ಒಟ್ಟಾರೆಯಾಗಿ ಹೇಳುವದಾದರೆ ಸಮ್ಮಿಶ್ರ ಸರಕಾರಗಳು ಭಾರತೀಯ ರಾಜಕೀಯ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾಗಿವೆ. ಸಮ್ಮಿಶ್ರ ಸರಕಾರದ ಸಾಫಲ್ಯತೆ ಹಾಗೂ ವೈಫಲ್ಯತೆಗಳು ಆಯಾ ಪಕ್ಷಗಳ ನಾಯಕತ್ವದ ಮೇಲೆ ಅವಲಂಬಿತವಾಗಿವೆ. ಹೀಗಾಗಿ ಸಮ್ಮಿಶ್ರ ಸರಕಾರವಿಲ್ಲದ ಆಧುನಿಕ ರಾಜಕೀಯ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದಂತಾಗಿದೆ. ಹಾಗಾಗಿಯೇ ಸಮ್ಮಿಶ್ರ ಸರಕಾರಗಳು ಜನರ ಮನೋಧೋರಣೆಯ ಪ್ರತಿಬಿಂಬದ ಪ್ರತೀಕಗಳಾಗಿವೆ. ಆದ್ದರಿಂದ ಸಮ್ಮಿಶ್ರ ಸರಕಾರಗಳು ಕಲ್ಯಾಣ ರಾಜ್ಯದ ಕನಸುಗಳನ್ನು ನನಸು ಮಾಡುವಲ್ಲಿ ಅತಿ ಮಹತ್ವದ ಪಾತ್ರ ವಹಿಸುತ್ತಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

'ಜೇನಿನಗೂಡು ನಾವೆಲ್ಲ ಬೇರೆಯಾದರೆ ಜೇನಿಲ್ಲ' ಎನ್ನುವ ಮಾತಿನ ಹಾಗೆ ವಿವಿಧ ಪಕ್ಷಗಳು ಒಗ್ಗೂಡಿದರೆ ಅಧಿಕಾರ, ಅಂದರೆ ವಿಕಾಸ, ಒಂದು ವೇಳೆ ಒಡೆದರೆ ವಿನಾಶ ಎನ್ನುವ ತತ್ವದ ಹಿನ್ನೆಲೆಯಲ್ಲಿಯೇ ಸಮ್ಮಿಶ್ರ ಸರಕಾರ ಕಾರ್ಯನಿರ್ವಹಿಸಿ ಜನಪರ ಮತ್ತು ಜೀವಪರ ಇರುವ 'ಕಲ್ಯಾಣ ರಾಜ್ಯದ' ಸ್ಥಾಪನೆಗೆ ಮುನ್ನುಡಿ ಬರೆಯಲು ಮುಂದಡಿ ಇಡಬೇಕಾದ್ದು ಇಂದಿನ ಅನಿವಾರ್ಯತೆಯಾಗಿದೆ.

**ಕೃತಜ್ಞತೆಗಳು:** ಸದರಿ ಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಬೌದ್ಧಿಕ ನೆರವು ನೀಡಿದ ನನ್ನ ಮಾರ್ಗದರ್ಶಕರಾದ ಡಾ.ಐ.ಎಸ್.ವಿದ್ಯಾಸಾಗರ, ಸಹ ಪ್ರಾಧ್ಯಾಪಕರು, ಡಾ. ಅಂಬೇಡ್ಕರ್ ಕಲಾ ಮತ್ತು ವಾಣಿಜ್ಯ ಮಾಹಾವಿದ್ಯಾಲಯ, ಕಲಬುರಗಿ, ಇವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

## ಆಕರ ಗ್ರಂಥಗಳು


- **ಡಾ. ವಿದ್ಯಾಸಾಗರ ಐ.ಎಸ್.(2014) :** "ಭಾರತದಲ್ಲಿ ರಾಜಕೀಯ ಪ್ರಕ್ರಿಯೆಗಳು", ಕಲಬುರಗಿ ಎಸ್.ಎಸ್. ಭಾವಿಕಟ್ಟಿ ಪ್ರಕಾಶನ, ಪು.93–108.
- **ಡಾ. ರಾಮಸುಂದರ ಡಿ.(2000) :** "ಕೋಯಿಲಿಷನ್ ಪೊಲಿಟಿಕ್ಸ್ ಇನ್ ಇಂಡಿಯಾ: ಸರ್ಚ್ ಫಾರ್ ಪೊಲಿಟಿಕಲ್ ಸ್ಟೆಬಿಲಿಟಿ", ಜೈಪೂರ ನ್ಯಾಷನಲ್ ಪಬ್ಲಿಕೇಷನ್ ಹೌಸ್, ಪು.180–181.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712


- **ಡಾ.ರಾಜನ್ ರಾಕೇಶ (2016) : "ಕೋಯಿಲಿಷನ್ ಗವರ್ನ್‌ಮೆಂಟ್ ಆ್ಯಂಡ್ ಪೊಲಿಟಿಕ್ಸ್ ಇನ್ ಇಂಡಿಯಾ"**, ನವದೆಹಲಿ ಗ್ಲೋಬಸ್ ಪ್ರೆಸ್, ಪು.1–2.
- **ಖನ್ನಾ ಎಸ್.ಕೆ. (1999) : "ಕೋಯಿಲಿಷನ್ ಪೊಲಿಟಿಕ್ಸ್ ಇನ್ ಇಂಡಿಯಾ"**, ನವದೆಹಲಿ ಕಾಮನ್‌ವೆಲ್ತ್ ಪಬ್ಲಿಷರ್, ಪು.11.
- **ಕರುಣಾಕರನ್ ಕೆ.ಪಿ.(1979) : "ಕೋಯಿಲಿಷನ್ ಗವರ್ನ್‌ಮೆಂಟ್ಸ್ ಇನ್ ಇಂಡಿಯಾ ಪ್ರಾಬ್ಲೆಮ್ಸ್ ಆ್ಯಂಡ್ ಪ್ರಾಸ್‌ಪೆಕ್ಟ್ಸ್"**, ಶಿಮ್ಲಾ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡಿ, ಪು.15–37.
- **ಕಾಶ್ಯಪ್ಪ ಸಿ. ಸುಭಾಸ್ (1997) : "ಕೋಯಿಲಿಷನ್ ಗವರ್ನ್‌ಮೆಂಟ್ ಆ್ಯಂಡ್ ಪೊಲಿಟಿಕ್ಸ್ ಇನ್ ಇಂಡಿಯಾ"**, ನವದೆಹಲಿ ಉಪ್ಪಾಳ ಪಬ್ಲಿಷಿಂಗ್ ಹೌಸ್, ಪು.12–31.
- **ವಜೀದ್ ಅಕ್ತರ್(2000) : "ಕೋಯಿಲಿಷನ್ ಪಾಲಿಟಿಕ್ಸ್ ಆ್ಯಂಡ್ ಪಾವರ್ ಶೇರಿಂಗ್"**, ನವದೆಹಲಿ ಮಾನಕ್ ಪಬ್ಲಿಕೇಷನ್ ಪ್ರೈವೆಟ್ ಲಿಮಿಟೆಡ್, ಪು.132–133.
- **ಬ್ರಾರ್ ಜೆ.ಎಸ್.(1998) : "ಕೋಯಿಲಿಷನ್ ಗವರ್ನ್‌ಮೆಂಟ್ಸ್ ಇನ್ ಇಂಡಿಯಾ ಪ್ರಾಬ್ಲೆಮ್ಸ್ ಆ್ಯಂಡ್ ಪ್ರಾಸ್‌ಪೆಕ್ಟ್ಸ್"**, ನವದೆಹಲಿ ಅನಾಮಿಕಾ ಪಬ್ಲಿಷರ್ಸ್ ಆ್ಯಂಡ್ ಡಿಸ್ಟಿಬ್ಯೂಟರ್ಸ್ ಲಿಮಿಟೆಡ್, ಪು.399.


■■

– 22ನೇ ಪುಟದಿಂದ ಮುಂದುವರೆದುದು

ವ್ಯವಸ್ಥೆಯ ಪ್ರಧಾನ ಲಕ್ಷಣವಾದ ಅಧಿಕಾರದ ವಿಭಜನೆಯನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ಕಾಣಬಹುದು. 1947ರ ಭಾರತ ಸ್ವತಂತ್ರ ಕಾಯ್ದೆಯು ಸ್ಥಳೀಯ ಸಂಸ್ಥಾನಗಳಿಗೆ ಸ್ವತಂತ್ರವಾಗಿ ಉಳಿಯುವ ಅವಕಾಶ ಕಲ್ಪಿಸಿದರ ಪರಿಣಾಮ ಹಲವಾರು ವಿಛಿದ್ರಕಾರಕ ಶಕ್ತಿಗಳು ತಲೆಯೆತ್ತುವ ಸಂಭವವಿದ್ದಿತ್ತು. ಆ ಹಿನ್ನೆಲೆಯಲ್ಲಿ ರಾಷ್ಟ್ರೀಯ ಏಕತೆ ಮತ್ತು ಅಖಂಡತೆ ಎತ್ತಿಹಿಡಿಯುವ ದೃಷ್ಟಿಯಿಂದ ಪ್ರಬಲ ಕೇಂದ್ರ ಸರ್ಕಾರದ ಅವಶ್ಯಕತೆಯನ್ನು ನಮ್ಮ ಸಂವಿಧಾನ ನಿರ್ಮಾತೃಗಳು ಮನಗಂಡಿದ್ದರು. ಈ ಹಿನ್ನಲೆಯಲ್ಲಿ ನಾವು ನಮ್ಮ ಒಕ್ಕೂಟ ವ್ಯವಸ್ಥೆ ನೋಡಬೇಕಾಗುತ್ತದೆ.

ಹಲವು ರೀತಿಯ ವೈವಿಧ್ಯತೆಗಳನ್ನು ಭಿನ್ನ–ವಿಭಿನ್ನ ಜನಾಂಗಗಳನ್ನು ಹೊಂದಿರುವ ಭಾರತದಂತಹ ದೇಶಕ್ಕೆ ಪ್ರಬಲ ಕೇಂದ್ರವು ನ್ಯಾಯಯುತವೇ ಆಗಿದೆ. ಪ್ರೊ. ಕೆ. ಪಿ. ವ್ಹೀರ್ ಅವರು ಭಾರತವನ್ನು ಒಂದು 'ಅರೆ ಸಂಯುಕ್ತ ಸಂವಿಧಾನ' (Quasi-federal constitution) ಎಂದು ಸರಿಯಾಗಿ ಕರೆದಿದ್ದಾರೆ. ಭಾರತವು ಒಕ್ಕೂಟದ ಮೂಲಕ ಏಕಾತ್ಮಕ ಲಕ್ಷಣಗಳನ್ನೊಳಗೊಂಡ ಸಂಯುಕ್ತ ರಾಜ್ಯಕ್ಕಿಂತ ಪೂರಕ ಸಂಯುಕ್ತ ಅಂಶಗಳನ್ನು ಒಳಗೊಂಡ ಒಂದು ಏಕಾತ್ಮಕ ರಾಜ್ಯವೆಂದು ಇವರು ಅಭಿಪ್ರಾಯ ಪಟ್ಟಿದ್ದಾರೆ. ಸರ್ ಐವರ್ ಜೆನ್ನಿಂಗ್ ಅವರು ಭಾರತದ ಒಕ್ಕೂಟ ವ್ಯವಸ್ಥೆಯ ಕೇಂದ್ರೀಕರಣ ಧೋರಣೆಯುಳ್ಳ ಒಂದು ವ್ಯವಸ್ಥೆ ಎಂದಿದ್ದಾರೆ. ಇನ್ನೂ ಕೆಲವು ತಜ್ಞರು ಭಾರತದ ಒಕ್ಕೂಟ ವ್ಯವಸ್ಥೆಯನ್ನು ಮೆಚ್ಚಿಕೊಂಡಿದ್ದಾರೆ. ಉದಾಹರಣೆಗೆ, ಪಾಲ್ ಆಪೆಲ್ಬಿ ಅವರು ಭಾರತದ ಒಕ್ಕೂಟ ವ್ಯವಸ್ಥೆಯನ್ನು ಪರಿಪೂರ್ಣ ಒಕ್ಕೂಟ ಎಂದಿದ್ದಾರೆ. ಮಾರಿಸ್ ಜೋನ್ಸ್ ಅವರು ಭಾರತದ ಒಕ್ಕೂಟವನ್ನು 'ಅನುಕೂಲಕರ ವ್ಯವಹಾರದ ವ್ಯವಸ್ಥೆ' ಎಂದಿದ್ದಾರೆ. (Bargaining Federalism) ಒಟ್ಟಾರೆಯಾಗಿ ಭಾರತದ ಒಕ್ಕೂಟ ವ್ಯವಸ್ಥೆ ಹೊಸ ಮಾದರಿಯದ್ದಾದಿದ್ದು ಜಗತ್ತಿನ ಬೇರೆ ಬೇರೆ ರಾಷ್ಟ್ರಗಳ ವಿಭಿನ್ನ ಮಾದರಿಗಳನ್ನು ಅಧ್ಯಯನ ಮಾಡಿಯೇ ಸೂಕ್ತ ಬದಲಾವಣೆಗಳೊಂದಿಗೆ ಈ ಮಾದರಿಯನ್ನು ಜಾರಿಗೆ ತಂದಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರರು ಅಭಿಪ್ರಾಯ ಪಟ್ಟಂತೆ 'ಸಮಯ ಮತ್ತು ಸಂದರ್ಭಗಳಿಗೆ ಅನುಸಾರವಾಗಿ ಇದು ಏಕಾತ್ಮಕ ಹಾಗೂ ಸಂಯುಕ್ತಗಳೆರಡು ಆಗಿದೆ'. ಸಾಮಾನ್ಯ ಪರಿಸ್ಥಿತಿಗಳಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ–ಸ್ವಾತಂತ್ರ್ಯವನ್ನು ನೀಡಿದೆ ಹಾಗೂ ಅಸಾಮಾನ್ಯ ಪರಿಸ್ಥಿತಿಗಳಲ್ಲಿ ರಾಷ್ಟ್ರೀಯ ಸಮಗ್ರತೆ ಎತ್ತಿಹಿಡಿಯಲು ಏಕಾತ್ಮಕ ಸಂವಿಧಾನವಾಗಿ ಮಾರ್ಪಡುತ್ತದೆ.

## ಉಪಸಂಹಾರ

ಭಾರತ ಸ್ವಾತಂತ್ರ್ಯಗಳಿಸಿ ಸಂವಿಧಾನ ರಚನೆ ಮಾಡಿಕೊಳ್ಳುವ ಸಂದರ್ಭದಲ್ಲಿ ಬಹಳಷ್ಟು ವಿಭಜನಕಾರಿ ದುಷ್ಟ ಶಕ್ತಿಗಳು ಪ್ರಬಲವಾಗಿದ್ದ ಕಾರಣ ಭಾರತದ ವಿವಿಧ ವೈವಿಧ್ಯತೆಯನ್ನು ಗಮನದಲ್ಲಿರಿಸಿ ರಾಜ್ಯಗಳಿಗೆ ಸ್ವಾಯತ್ತತೆ ನೀಡುವುದಕ್ಕಿಂತ ರಾಷ್ಟ್ರದ ಐಕ್ಯತೆಗೆ ಪ್ರಬಲ ಕೇಂದ್ರ ಸರ್ಕಾರದ ಅನಿವಾರ್ಯತೆ ಮನಗಂಡು ನಮ್ಮ ಸಂವಿಧಾನ ನಿರ್ಮಾತೃಗಳು ಈ ವ್ಯವಸ್ಥೆ ಕಲ್ಪಿಸಿದ್ದಾರೆ. 'ಒಕ್ಕೂಟ ವ್ಯವಸ್ಥೆ' ಎಂಬುದೇ ಒಂದು ಸಂಕೀರ್ಣ ವ್ಯವಸ್ಥೆಯಾಗಿದ್ದು ಆಯಾ ದೇಶಗಳ ಐತಿಹಾಸಿಕ ಹಿನ್ನೆಲೆಯಲ್ಲಿ ಅದರ ಸಫಲತೆ ಹಾಗೂ ವಿಫಲತೆಯನ್ನು ನೋಡಬೇಕಾಗುತ್ತದೆ. ಭಾರತದ ಒಕ್ಕೂಟ ವ್ಯವಸ್ಥೆ ಹಲವಾರು ಸವಾಲುಗಳನ್ನು ಎದುರಿಸಿದ್ದರೂ ತಕ್ಕ ಮಟ್ಟಿಗೆ ಯಶಸ್ವಿಯಾಗಿದೆಯೆಂದೇ ಹೇಳಬೇಕು. ಇನ್ನೂ ಸಾಕಷ್ಟು ಸುಧಾರಣೆಗಳಿಗೆ ಅವಕಾಶವಿದೆ. ಕೇಂದ್ರ ಸರ್ಕಾರ ರಾಜ್ಯಗಳಿಗೆ ಇನ್ನೂ ಹೆಚ್ಚಿನ ಸ್ವಾಯತ್ತತೆ ನೀಡಿ, ಆರ್ಥಿಕವಾಗಿ ರಾಜ್ಯಗಳಿಗೆ ಹೇರಳ ಸಂಪನ್ಮೂಲಗಳನ್ನು ಒದಗಿಸಿದ್ದಲ್ಲಿ 'ಸಹಕಾರ ಒಕ್ಕೂಟ ವ್ಯವಸ್ಥೆ' ಸಾಕಾರಗೊಳ್ಳಬಲ್ಲದು.

## ಆಕರ ಗ್ರಂಥಗಳು


- **ಹಾಲಪ್ಪ ಎನ್.** : ಭಾರತೀಯ ಆಡಳಿತ, ಗದಗ ವಿದ್ಯಾನಿಧಿ ಪ್ರಕಾಶನ.
- **ಪಾಟೀಲ ಎನ್.ಬಿ. ಮತ್ತು ಜಿ.ಬಿ ಶೀಲವಂತರ (2011)** : ಭಾರತದ ಆಡಳಿತ – ಭಾರತದ ರಾಜಕೀಯ ಪ್ರಕ್ರಿಯೆಗಳು ಹಾಗೂ ಸಂಸ್ಥೆಗಳು, ವಿಜಾಪೂರ ಅರುಣ ಪ್ರಕಾಶನ.
- **ಗಂಗಾಧರ ಪಿ.ಎಸ್., (2019)** : ಭಾರತದ ಸಂವಿಧಾನ ಮತ್ತು ರಾಜಕೀಯ, ಬೆಂಗಳೂರು ಚೈತ್ರ ಪ್ರಕಾಶನ.
- **ಭಾರತ ಸರ್ಕಾರ (2011)** : ಭಾರತದ ಸಂವಿಧಾನ, ಕಾನೂನು ಮತ್ತು ನ್ಯಾಯ ಮಂತ್ರಾಲಯ, ಬೆಂಗಳೂರು ವಿಧಾಯಿ ಇಲಾಖೆ.


■■


ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ–582 101
ದೂರವಾಣಿ : 08372–237527, 277527
e-mail : vidyanidhiprakashana@gmail.com. www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾವಕವಿ ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು

✍ **ಮುರಳಿ ಎಂ.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಹೆಚ್. ಪಿ. ಪಿ. ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ

ಕನ್ನಡ ಸಾರಸ್ವತ ಲೋಕದಲ್ಲಿನ ಜನಪ್ರಿಯ ಕವಿಗಳಲ್ಲೊಬ್ಬರಾದ ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಭಾವ ಕವಿ' ಹಾಗೂ 'ಎನ್‌ಎಸ್‌ಎಲ್' ಎಂದೇ ಖ್ಯಾತರಾಗಿದ್ದ ಅವರ ಅಗಲಿಕೆಯೂ ಕನ್ನಡ ಸಾಹಿತ್ಯ ಲೋಕಕ್ಕೆ ಬಹು ದೊಡ್ಡ ನಷ್ಟ. ಸರಳ ಸಜ್ಜನಿಕೆಗೆ ಹೆಸರಾಗಿದ್ದ ಭಟ್ಟರ ಸಾಹಿತ್ಯ ಜೀವನವನ್ನು ಕುರಿತಾದ ಕಿರು ನೋಟದ ಮೂಲಕ ಅವರನ್ನು ನೆನೆಯೋಣ.

## ಜನನ ಮತ್ತು ವಿದ್ಯಾಭ್ಯಾಸ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಭಾವಗೀತೆ, ಸಾಹಿತ್ಯ ವಿಮರ್ಶೆ, ಅನುವಾದ ಸಾಹಿತ್ಯ, ನವ್ಯಕವಿತೆ, ಶಿಶು ಸಾಹಿತ್ಯ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ ಎಸ್‌ಎಲ್‌ಎನ್‌ರವರು 1936ರ ಅಕ್ಟೋಬರ್ 29ರಂದು ಶಿವಮೊಗ್ಗದಲ್ಲಿ ಶಿವರಾಮ ಭಟ್ಟ ಮತ್ತು ಮೂಕಾಂಬಿಕೆ ದಂಪತಿಗಳ ಮಗನಾಗಿ ಜನಿಸಿದರು. ತಮ್ಮ ಎರಡನೆ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಕಡುಬಡತನ, ಶಿವಮೊಗ್ಗದ ಮಲೆನಾಡಿನ ಪ್ರಕೃತಿ ಮತ್ತು ಗುರುವರ್ಯರ ಆಶೀರ್ವಾದ ಇವರ ವ್ಯಕ್ತಿತ್ವದ ಮೇಲೆ ಅಪಾರ ಪ್ರಭಾವ ಬೀರಿತ್ತು. ಆರಂಭದ ಇಂಟರ್‌ಮಿಡಿಯೇಟ್‌ರವರೆಗಿನ ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿಯೇ ಪಡೆದರು. ಬಾಲ್ಯದಲ್ಲಿಯೇ ಕನ್ನಡದೊಂದಿಗೆ ಸಂಸ್ಕೃತ ಭಾಷೆಯನ್ನು ಸಹ ಕಲಿತರು. ನಂತರದಲ್ಲಿ ಕನ್ನಡ ಎಂಎ ಆನರ್ಸ್ ಪದವಿಯನ್ನು ಪಡೆದರು. ಮುಂದೆ ಕನ್ನಡದ ಖ್ಯಾತ ವಿದ್ವಾಂಸರಾದ 'ತೀನಂಶ್ರೀ'ಯವರ ಮಾರ್ಗದರ್ಶನದಲ್ಲಿ ಸಂಶೋಧನಾ ವೃತ್ತಿಯಲ್ಲಿ ತೊಡಗಿಸಿಕೊಂಡರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಎಚ್‌ಡಿ ಪದವಿಗಾಗಿ "ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರತಿಮಾದೃಷ್ಟಿ" ಎಂಬ ಮಹಾಪ್ರಬಂಧವನ್ನು ಮಂಡಿಸಿದರು. ತೀನಂಶ್ರೀ, ಡಿಎಲ್‌ಎನ್ ಮತ್ತು ಶ್ರೀಕಂಠಶಾಸ್ತ್ರಿ ಮೊದಲಾದ ಗುರು ಪರಂಪರೆಯಿಂದ ಪ್ರಭಾವಿತಗೊಂಡರು.

## ವೃತ್ತಿಜೀವನ

1965ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ ಎನ್‌ಎಸ್‌ಎಲ್‌ರವರು ಮುಂದೆ ಅಲ್ಲಿ ರೀಡರ್, ಪ್ರಾಧ್ಯಾಪಕ, ನಿರ್ದೇಶಕರಾಗಿ ಹಾಗೂ 1990ರಲ್ಲಿ ಆರ್ಟ್ ಫ್ಯಾಕಲ್ಟಿಡೀನ್ ಆಗಿ ವಿವಿಧ ಹುದ್ದೆಗಳನ್ನು ಅಲಂಕರಿಸಿ ಪ್ರಾಮಾಣಿಕ ಸೇವೆ ಸಲ್ಲಿಸಿದರು.

## ಸಾಹಿತ್ಯ ಕೃಷಿ

1960ರ ದಶಕದಲ್ಲಿ ನವ್ಯಕಾವ್ಯ ಮಾರ್ಗದಲ್ಲಿ ತಮ್ಮ ಕಾವ್ಯೋದ್ಯೋಗ ಆರಂಭಿಸಿದರು. ನವ್ಯ ಕಾವ್ಯದ ಕಾಲದಲ್ಲಿ ನಿಂತು ಹೋಗಿದ್ದ ಭಾವಗೀತೆಗಳ ರಚನೆಯನ್ನು ಪುನರುಜ್ಜೀವನಗೊಳಿಸಿದರು. ಕನ್ನಡವಲ್ಲದೇ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯಲ್ಲಿಯೂ ಸಹ ಕೃತಿರಚನೆ ಮಾಡಿದ್ದಾರೆ. ಭಾವಗೀತೆಗಳ ರಚನೆ, ಅನುವಾದ ಕಾರ್ಯ ಹಾಗೂ ಶಿಶು ಸಾಹಿತ್ಯ ಅವರಿಗೆ ಪ್ರಿಯವಾದ ಸಾಹಿತ್ಯ ಪ್ರಕಾರಗಳಾಗಿದ್ದವು. ದೀಪಿಕಾ, ಭಾವ ಸಂಗಮ, ನೀಲಾಂಜನ, ಬಾರೋ ವಸಂತ, ಕವಿತಾ, ಮಾಧುರಿ, ಮಂದಾರ, ಬಂದೆ ಬರತಾವ ಕಾಲ, ಅರುಣಗೀತೆ, ಮೊದಲಾದ **ಕವನ ಸಂಕಲನಗಳನ್ನು** ರಚಿಸಿದ್ದಾರೆ. ಸ್ವತಃ ಎನ್‌ಎಸ್‌ಎಲ್‌ರವರೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 'ಮನೆಯಂಗಳದ ಮಾತುಕತೆ ಕಾರ್ಯಕ್ರಮ' ದಲ್ಲಿ ಮಾತನಾಡುತ್ತಾ, " ಭಾವಗೀತೆಗಳಿಂದಲ್ಲೇ ನನಗೆ ಜನರ ಪ್ರೀತಿ ಗಳಿಸಲು ಕಾರಣವಾಯಿತ್ತೆಂದು" ಹೇಳಿದ್ದಾರೆ. 'ಊರ್ವಶಿ' ಎಂಬ ಕಾವ್ಯನಾಟಕವನ್ನು ರಚಿಸಿದ್ದಾರೆ.

ಮಕ್ಕಳಿಗಾಗಿ ಗದ್ಯ ಸಾಹಿತ್ಯದಲ್ಲಿಜಗನ್ನಾಥ ವಿಜಯ, ಮುದ್ರಾಮಂಜೂಷ, ಪೂರ್ವ ದಿಕ್ಕಿನಲ್ಲಿ ಕಾಮನಬಿಲ್ಲು, ಡಿವಿಜಿ, ಕುಂತಿ, ಕರ್ಣ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇನ್ನೂ ಕಾವ್ಯರೂಪದಲ್ಲಿ ನಂದನ, ಕಿಶೋರಿ, ಸತ್ಯವೇ ನಮ್ಮತಾಯಿತಂದೆ, ಕಿನ್ನರ ಲೋಕ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಅವರು ಬರೆದ'ಭಾಳ ಒಳ್ಳೇವ್ರ್ ನಮ್ ಮಿಸ್ಸು' ,'ಗೇರ್‌ಗೇರ್ ಮಂಗಣ್ಣ' ಮೊದಲಾದ ಕವಿತೆಗಳು ಬಹಳ ಜನಪ್ರಿಯವಾಗಿವೆ. ಭಟ್ಟರು ಪ್ರಾಣಿ ಸಮ್ಮೇಳನ, ಗಣಪತಿ ಕಥನಗೀತ ಮೊದಲಾದ ಮಕ್ಕಳ ದೀರ್ಘಕಥನ ಗೀತಗಳನ್ನು ಮತ್ತು 'ಸತ್ಯವೇ ನಮ್ಮ ತಾಯಿ ತಂದೆ' ಎಂಬ ಶೀರ್ಷಿಕೆಯಡಿಯಲ್ಲಿ ಗೋವಿನ ಹಾಡು ಕಥೆಯ ಗೀತನಾಟಕವನ್ನು ಬರೆದಿದ್ದಾರೆ.

## ಷೇಕ್ಸ್‌ಪಿಯರ್‌ನ ಸಾನೆಟ್ಟುಗಳ ಅನುವಾದ

ಎನ್‌ಎಸ್‌ಎಲ್‌ರನ್ನು ಜನಪ್ರಿಯಗೊಳಿಸುವಲ್ಲಿ ಅವರ ಅನುವಾದ ಸಾಹಿತ್ಯವು ಸಹ ಪ್ರಮುಖವಾದದು. ಇಂಗ್ಲಿಷ್ ಸಾಹಿತ್ಯದ ದೈತ್ಯ ಪ್ರತಿಭೆಯಾದ ಷೇಕ್ಸ್‌ಪಿಯರ್‌ನ ಸಾನೆಟ್ಟುಗಳು ಭಟ್ಟರಿಗೆ ಅತಿ ಪ್ರೀತಿ ಪಾತ್ರವಾದವು. ಹೀಗಾಗಿ 1982ರಲ್ಲಿ ' ಸುನೀತ : ಷೇಕ್ಸ್‌ಪಿಯರ್‌ನ ಸಾನೆಟುಗಳು' ಎಂದು 24 ಸಾನೆಟುಗಳ ಅನುವಾದವನ್ನು ಪ್ರಕಟಿಸಿದರು. ಆ ನಂತರದಲ್ಲಿ 1988ರಲ್ಲಿ ಪುನ: 26 ಷೇಕ್ಸ್‌ಪಿಯರ್‌ನ ಸಾನೆಟುಗಳನ್ನು ಅನುವಾದಿಸಿ ಪ್ರಕಟಿಸಿದರು. 'ಷೇಕ್ಸ್‌ಪಿಯರ್‌ನ ಸಾನೆಟ್‌ಚಕ್ರ' ಎಂದು ನೂರು ಸಾನೆಟ್ಟುಗಳ ಅನುವಾದವಿರುವ ಪರಿಷ್ಕೃತ ಆವೃತ್ತಿಯನ್ನು ಪ್ರಕಟಿಸಿದ್ದಾರೆ. ಈ ಅನುವಾದವನ್ನು ಕುರಿತುಜಿ.ಎಸ್, ಅಮೂರರವರು'ಇವು ಕನ್ನಡಕ್ಕೆ ವರದಾನಗಳು' ಎಂದಿದ್ದಾರೆ. ಅಡಿಗರು" ಷೇಕ್ಸ್‌ಪಿಯರ್ ಸಾನೆಟ್‌ಗಳ ಅನುವಾದ ಕುರಿತು ಇದಕ್ಕಿಂತ ಹೆಚ್ಚು ಉತ್ತಮ ಅನುವಾದ ಸಾಧ್ಯವಿಲ್ಲ" ಎಂದಿದ್ದಾರೆ. ಇನ್ನೂ ಕೆ.ವಿ. ತಿರುಮಲೇಶ್‌ರವರು "ಇಂಥ ವಿಶಿಷ್ಟ ಸಾನೆಟ್‌ಗಳನ್ನು ಕವಿ ಲಕ್ಷ್ಮೀನಾರಾಯಣ ಭಟ್ಟ ಅವರು ಕನ್ನಡಕ್ಕೆ ಅನುವಾದಿಸಿರುವ ಶೈಲಿ ಅಪೂರ್ವವಾಗಿದೆ ಹಾಗೂ ಮೂಲಕವಿಯ ಬಗ್ಗೆ ಕನ್ನಡ ಓದುಗರಿಗೆ ಪ್ರೀತಿ ಉಕ್ಕಿಸುವಂತಿದೆ "ಎಂದಿದ್ದಾರೆ. ಮುಂದುವರೆದು, "ಬಿಎಂಶ್ರೀಯವರ 'ಇಂಗ್ಲಿಷ್ ಗೀತಗಳು' ಮತ್ತು ಡಿವಿಜಿಯವರ''ಉಮರನ ಒಸಗೆ' ಈ ಎರಡೂ ಅನುವಾದಗಳು ಕನ್ನಡದಲ್ಲಿ ಕ್ಲಾಸಿಕ್ ಎನಿಸಿಕೊಂಡಿವೆ. ಭಟ್ಟರ 'ಸುನೀತ' ಅದೇ ಸಾಲಿನಲ್ಲಿ ನಿಲ್ಲುವಂಥದು. ಏಕೆಂದರೆ, ಬಿಎಂಶ್ರೀ ಮತ್ತು ಡಿವಿಜಿ ಅವರಿಗೆ ಇರುವ ಕನ್ನಡದ ಸುಭಗತೆ ಲಕ್ಷ್ಮೀನಾರಾಯಣ ಭಟ್ಟರಿಗೂ ಇದೆ" ಎಂದು ತಿರುಮಲೇಶ್‌ರವರು ಹೇಳಿದ್ದಾರೆ.

ಇದರ ಜೊತೆಗೆ ಯೇಟ್ಸ್‌ಕವಿಯ 50 ಮುಖ್ಯ ಕವಿತೆಗಳನ್ನು 'ಚಿನ್ನದ ಹಕ್ಕಿ' ಎಂದು ಹಾಗೂ ಎಲಿಯೆಟ್ ಕವಿಯ ಕೆಲವು ಶ್ರೇಷ್ಠ ಕವಿತೆಗಳ ಅನುವಾದವು ವಿಮರ್ಶಕರ ಮೆಚ್ಚುಗೆ ಗಳಿಸಿದೆ. ಇನ್ನೂ ಎಸ್. ಎಂ ಕತ್ರೇಯವರ 'ಇಂಟ್ರೊಡಕ್ಷನ್ ಟು ಇಂಡಿಯನ್ ಟೆಕ್ಸ್‌ಚುಯಲ್ ಕ್ರಿಟಿಸಿಸಂ'

– 32ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕೃಷಿ ಕ್ಷೇತ್ರದ ಕವಲು ದಾರಿಯಲ್ಲಿ ಮಹಿಳೆ

✍ **ಡಾ. ಲಕ್ಮೀದೇವಿ ವೈ.** ಸಹ ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.

ಕೃಷಿ ಕ್ಷೇತ್ರದಲ್ಲಿ ಗಂಡಸರಿಗಿಂತ ಗಣನೀಯ ಪ್ರಮಾಣದಲ್ಲಿ ತೊಡಗಿಸಿಕೊಂಡವರು ಹೆಣ್ಣು ಮಕ್ಕಳೆ. ಆದರೆ ಮಹಿಳೆಯರ ಕೆಲಸವನ್ನು ಸಮಾನವೆಂದು ಪರಿಗಣಿಸುವುದಿಲ್ಲವೆಂದು ಕೃಷಿ ಕಾಯ್ದೆಗಳ ವಿರುದ್ಧದ ರೈತರ ಪ್ರತಿಭಟನೆಯಲ್ಲಿ ಭಾಗಿಯಾದ ಹರಿಯಾಣಾದ ಸುನೀತಾ ರಾಣಿಯವರ ಅಭಿಪ್ರಾಯವಿದು. ಮಹಿಳೆಯರು ರೈತರೆಂದು ಜನರು ತಿಳಿಯಲಿ ಎಂಬ ಕಾರಣಕ್ಕೆ ಪ್ರತಿಭಟನೆಯಲ್ಲಿ ಭಾಗವಹಿಸುತ್ತೇನೆಂಬುದನ್ನು ಕೂಡ ಅವರು ಸಾರುತ್ತಾರೆ (ಪ್ರಜಾವಾಣಿ ಡಿಸೆಂಬರ್ 25/12/2020). ಆದರೆ ಮಹಿಳೆಯರನ್ನು ರೈತರಾಗಿ ಗುರುತಿಸುವುದಿರಲಿ ಬೆಂಬಲಿಸುವುದು ಇಲ್ಲ. ಪುರುಷರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಂತಹ ಕೃಷಿಯೇತರ ಕೆಲಸಗಳಿಗೆ ಸ್ಥಳಾಂತರಗೊಂಡರೆ ಮಹಿಳೆಯರು ಮಾತ್ರ ಕೃಷಿಯಲ್ಲಿಯೇ ಉಳಿದಿದ್ದಾರೆ.

ಲಕ್ಷಾನುಗಟ್ಟಲೆ ರೈತರುಗಳಾದ ನಾವು ಇಂದು ಪ್ರತಿಭಟನೆಯಲ್ಲಿ ತೊಡಗಿರುವುದರಿಂದ ಮನೆ ಮತ್ತು ಊರುಗಳಲ್ಲಿ ನಮ್ಮ ಸಹೋದರಿಯರು ಕೌಟುಂಬಿಕ ಜವಾಬ್ದಾರಿಯೊಂದಿಗೆ ಹೊಲ ಗದ್ದೆಗಳ ಕೆಲಸವನ್ನು ಅವರು ಸದ್ದಿಲ್ಲದೇ ನಿರ್ವಹಿಸುತ್ತಿರುವುದು ಎಂಬುದಾಗಿ ಸ್ಮರಿಸುತ್ತಾರೆ ಸುರಿಂದರ್ ಸಿಂಗ್ (ಪ್ರ. ವಾ. 25/12/2020). ಮಹಿಳೆಯರಿಗಿರುವ ಹೊಣೆಗಾರಿಕೆ ಹಲವು ಕೌಟುಂಬಿಕ ಕೆಲಸದ ಹೊರೆ, ಸಂಘಟನೆಯ ಕೊರತೆ, ಕಡಿಮೆ ಶಿಕ್ಷಣ, ಸೀಮಿತ ಹಕ್ಕುಗಳು, ಜಾನುವಾರು, ಭೂಮಿಯಂತಹ ಆಸ್ತಿಗಳ ಮೇಲೆ ನಿಯಂತ್ರಣ ಇಲ್ಲದೇ ಇದ್ದರೂ ಕೂಡ ಗಣನೀಯವಾಗಿ ಮಹಿಳೆಯರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಕೃಷಿಯ ಸ್ತ್ರೀಕರಣದೊಂದಿಗೆ ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರದ ಹೊರತಾಗಿಯು ಮಹಿಳೆಯರನ್ನು ರೈತರಾಗಿ ಗುರುತಿಸುವುದಕ್ಕೆ ಇವು ಯಾವುವು ಪೂರಕವೆಂದು ಅನಿಸಿಯೇ ಇಲ್ಲ. ಸರ್ಕಾರದ ಕೃಷಿನೀತಿಗಳು, ಯೋಜನೆಗಳು, ಕಾರ್ಯಕ್ರಮಗಳು ಮತ್ತು ಆಯ್ಯವ್ಯಯದಲ್ಲಿ ಮಹಿಳೆಯರು ಅಗೋಚರವಾಗಿಯೇ ಉಳಿದಿದ್ದಾರೆ ಎಂಬುದು ಸ್ಪಷ್ಟ. ಕ್ರೆಡಿಟ್ ವಿಸ್ತರಣೆ, ವಿಮೆ ಮತ್ತು ಮಾರ್ಕೆಟಿಂಗ್ ಸೇವೆಗಳಿಗೆ ಸಂಬಂಧಿಸಿದ ಔಪಚಾರಿಕ ಪದ್ಧತಿಯ ಬೆಂಬಲದಿಂದಲೂ ವಂಚಿತರಾಗಿದ್ದಾರೆ.

ಅಸಂಖ್ಯಾತ ರೈತ ಮಹಿಳೆಯರು ರಾಷ್ಟ್ರ ಮತ್ತು ಸಮಾಜದಿಂದ ಅಗೋಚರವಾಗಿ ಉಳಿಯಲು ಕಾರಣ ಕೃಷಿ ನೀತಿಗಳು ಮತ್ತು ಪುರುಷನಿಂದ ಹಂಚಿಕೆಯಾಗದೇ ಇರುವ ಮಾಹಿತಿಗಳು ರೈತರ ಬಿಕ್ಕಟಿನ ಪ್ರತಿಬಿಂಬವಾಗಿದೆ, ಮಹಿಳೆಯರ ಅವಿರತ ಶ್ರಮವು ಅಗೋಚರವಾಗಿದ್ದರೂ ಕುಟುಂಬದ ಆರ್ಥಿಕತೆಯನ್ನು ಎತ್ತಿಹಿಡಿಯುವಲ್ಲಿ ಮಹಿಳೆ ಪ್ರಮುಖ ಪಾತ್ರ ವಹಿಸುತ್ತಿದ್ದಾಳೆ. ಇದಕ್ಕೆ ಪೂರಕ ಎನ್ನುವಂತೆ ಎಷ್ಟೋ ಕುಟುಂಬಗಳು ಮನೆಯ ಯಜಮಾನ ಪುರುಷನನ್ನು ಕಳೆದುಕೊಂಡಾಗಲೂ ಕೃಷಿ ಚಟುವಟಿಕೆಗಳನ್ನು ಮುಂದುವರೆಸಿಕೊಂಡು, ಮಕ್ಕಳ ವಿದ್ಯಾಭ್ಯಾಸ ಇತರೆ ಕೌಟುಂಬಿಕ ಜವಾಬ್ದಾರಿಗಳನ್ನು ಸಶಕ್ತವಾಗಿ ಆಕೆ ನಿರ್ವಹಿಸುತ್ತಿದ್ದಾಳೆ.

ಭಾರತ ಜನಗಣತಿ 2011ರಲ್ಲಿ ರಾಷ್ಟ್ರೀಯ ಪ್ರತಿನಿಧಿ ಸಮೀಕ್ಷೆ (15ನೇ) ನಡೆಸಿದ ಭಾರತದ ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಇರುವಿಕೆಗೆ ಪುರಾವೆಯನ್ನು ಒದಗಿಸುತ್ತದೆ. ಶೇ. 65.18. ರಷ್ಟು ಮಹಿಳಾ ಕಾರ್ಮಿಕರು ಕೃಷಿಯನ್ನು ಅವಲಂಬಿಸಿದ್ದು, ಕೃಷಿಕರು ಅಥವಾ ಕೃಷಿ ಕಾರ್ಮಿಕರಾಗಿ ಪುರುಷರು ಶೇ. 49.8% ರಷ್ಟು ಕಾರ್ಮಿಕರಿದ್ದಾರೆ. ನ್ಯಾಷನಲ್ ಮಾದರಿ ಸಮೀಕ್ಷೆಯ ಕಛೇರಿ ವರದಿ ಪ್ರಕಾರ ಒಟ್ಟು ಮಹಿಳಾ ದುಡಿಮೆಗಾರರು ಶೇ.63.1. ಇದ್ದು, ಗ್ರಾಮೀಣ ಮಹಿಳಾ ದುಡಿಮೆಗಾರರು ಶೇ. 75ರಷ್ಟು ಕೃಷಿ ಕ್ಷೇತ್ರದಲ್ಲಿ ತೊಡಗಿದ್ದಾರೆಂದು ಹೇಳುತ್ತದೆ.

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ ಎಲ್ ಓ) ಯ ಅಧ್ಯಯನದ ಪ್ರಕಾರ ಒಟ್ಟು ಕೃಷಿಯಲ್ಲಿ ತೊಡಗಿಸಿಕೊಂಡ ಮಹಿಳೆಯರಲ್ಲಿ ಶೇ.81ರಷ್ಟು ದಲಿತ ಮತ್ತು ಆದಿವಾಸಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಎಂದು ವರದಿ ಹೇಳಿದೆ. ಆದರೆ ಗ್ರಾಮೀಣ ಮಹಿಳೆಯರ ಭೂಮಾಲೀಕತ್ವವು ಶೇ 6–11% ರ ನಡುವೆ ಇದೆ ಎಂದು ವಿವಿಧ ದತ್ತಾಂಶ ಮೂಲಗಳು ಬಹಿರಂಗ ಪಡಿಸುತ್ತವೆ. 2015–16 ರ ಇತ್ತೀಚಿನ ಕೃಷಿ ಜನಗಣತಿಯ ಅಂಕಿ –ಅಂಶಗಳು ಹೇಳುವಂತೆ ಭಾರತದ ಮಹಿಳೆಯರು ನಿರ್ವಹಿಸುತ್ತಿರುವ ಎಲ್ಲಾ ಹಿಡುವಳಿಗಳಲ್ಲಿ ಭೂಹಿಡುವಳಿ ಕೇವಲ ಶೇ.13.87 ರಷ್ಟು ಎಂದು ಹೇಳುತ್ತದೆ. ಭಾರತದ ಬಹುತೇಕ ಭಾಗಗಳಲ್ಲಿ ಪುರುಷ ಪ್ರಧಾನ್ಯತೆ ರೂಢಿಯಲ್ಲಿರುವ ಸಾಂಪ್ರದಾಯಿಕ ಮೌಲ್ಯಗಳು, ಸಂಕೀರ್ಣ ಸಾಮಾಜಿಕ ವ್ಯವಸ್ಥೆಯು ಮಹಿಳೆಯರನ್ನು ಭೂಒಡೆತನದಿಂದ ವಂಚಿತರಾಗುವಂತೆ ಮಾಡಲ್ಪಟಿವೆ.

ದುರಂತವೆಂದರೆ ಕೃಷಿ ಮತ್ತು ಸಂಬಂದಿತ ಕ್ಷೇತ್ರಗಳಲ್ಲಿ ಮಹಿಳೆಯರ ಕೆಲಸ ಮತ್ತು ಕೊಡುಗೆಯನ್ನು ಹೆಚ್ಚಾಗಿ ವರದಿ ಮಾಡುವುದಿಲ್ಲ. ಮತ್ತು ಅವರ ಬಗೆಗೆ ಅಂಕಿ ಅಂಶಗಳು ಸ್ಪಷ್ಟವಾಗಿ ದಾಖಲಾಗುವುದಿಲ್ಲ. ಕೃಷಿಗೆ ಸಂಬಂಧಿಸಿದ ಕೆಲಸಗಳಾದ ಬಿತ್ತುವುದು, ಕಳೆತೆಗೆಯುವುದು, ನೀರುಣಿಸುವುದು, ಬೀಜಗಳನ್ನು ಶೇಖರಿಸಿಡುವುದು ಇತ್ಯಾದಿ ಕೆಲಸಗಳನ್ನು ಹೆಚ್ಚಾಗಿ ನಿರ್ವಹಿಸುವುದು ಮಹಿಳೆಯರೆ. ಈ ಕೆಲಸಗಳ ಅವಧಿಯೂ ಸಹ ಹೆಚ್ಚು ಆದರೆ ಪುರುಷರಿಗೆ ಸರಿ ಸಮಾನವಾಗಿ ದುಡಿಯುವ ಮಹಿಳೆಯರಿಗೆ ದಿನಗೂಲಿಯಲ್ಲಿ ಗಣನೀಯ ವ್ಯತ್ಯಾಸವಿದೆ. ವೇತನದಲ್ಲಿ ಲಿಂಗ ಅಸಮಾನತೆ ಇದೆ. ಮಹಿಳೆಯರು ಅಸಂಘಟಿತರಾಗಿರುವುದರಿಂದ ಅವರ ಶ್ರಮಕ್ಕೆ ಪ್ರತಿಫಲವನ್ನು ಪಡೆಯಲು ಸಾಧ್ಯವಾಗಿಲ್ಲ. ಇದರೊಂದಿಗೆ ಇಂದಿನ ತಂತ್ರಜ್ಞಾನವು ಹಲವಾರು ಕೃಷಿ ಉಪಕರಣಗಳು ಕೃಷಿಯನ್ನು ಪ್ರವೇಶಿಸಿದ್ದರಿಂದ ಮಹಿಳೆಯರಿಗಿರುವ ಅಲ್ಪ ಆದಾಯವನ್ನು ಕಸಿಯುತ್ತಿವೆ.

ಅಲ್ಲದೆ ಬಹುಭಾಗವಾಗಿರುವ ಭಾರತದ ಕೃಷಿ ಕಾರ್ಮಿಕರು ಅತ್ಯಂತ ಕ್ರೂರ ಸಂದರ್ಭದಲ್ಲಿ ಬದುಕನ್ನು ಸವೆಸುತ್ತಿದ್ದಾರೆ. ವಾಣಿಜ್ಯೀಕರಣದ ಬೆಳೆಗಳಿಗೆ – ಮಾರುಹೋಗಿ ಆಹಾರವನ್ನು ವಿಷವನ್ನಾಗಿ ಮಾರ್ಪಡಿಸ ಲಾಗುತ್ತಿದೆ. ದಿನನಿತ್ಯ ತಿನ್ನುವ ಆಹಾರವು ಕೃಷಿಕರಿಂದಲೇ ಉತ್ಪಾದನೆಯಾಗುತಿದ್ದರೂ ಅವರಿಗೇ ಊಟವಿಲ್ಲ. ಸಣ್ಣ ಮತ್ತು ಅಂಚಿನಲ್ಲಿರುವ ಕೃಷಿಕರು ಭಾರತದಾದ್ಯಂತ ಕೃಷಿ ಬಿಕ್ಕಟ್ಟಿನ ಕರಿನೆರಳು ಅವರನ್ನು ಆವರಿಸಿದೆ. ಮಹಿಳಾ ಕೃಷಿಕರು ತಮ್ಮ ಕನಿಷ್ಠ ಬೇಡಿಕೆಯನ್ನು ಪೂರೈಸಿಕೊಳ್ಳಲು ಹೆಣಗಾಡಬೇಕಾದಂತ ಪರಿಸ್ಥಿತಿಯಲ್ಲಿದ್ದಾರೆ. ತಮ್ಮ ಕುಟುಂಬಕ್ಕೆ, ಆಹಾರ, ಶಿಕ್ಷಣ, ಅವರ ಮಕ್ಕಳಿಗೆ ಉದ್ಯೋಗ, ಮದುವೆಯ ಖರ್ಚು, ಆರೋಗ್ಯ ಸೇವೆ ಇತ್ಯಾದಿ. ತಾವು ಬೆಳೆದ ಆಹಾರದ

– 47ನೇ ಪುಟಕ್ಕೆ ಮುಂದುವರೆದುದು

SHIKSHAN SOUDHA 7th June 2021 Volume-XI Issue-I

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕುವೆಂಪು ಸಾಹಿತ್ಯದ ಮೇಲೆ ಪಾಶ್ಚಾತ್ಯ ಚಿಂತನೆಗಳ ಪ್ರಭಾವ

✍ **ಸತೀಶ ಜಿ. ಸಿ.** ಸಂಶೋಧನಾ ವಿದ್ಯಾರ್ಥಿ, ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

## ಕುವೆಂಪು ಸಾಹಿತ್ಯ ಮತ್ತು ಪಾಶ್ಚಾತ್ಯ ಪ್ರಭಾವಗಳು

ಕನ್ನಡ ಭಾಷೆಯು ಸುಮಾರು ಎರಡು ಸಾವಿರ ವರ್ಷಗಳ ತನ್ನ ಇತಿಹಾಸದಲ್ಲಿ ಮೊದಲ ಬಾರಿಗೆ ವಿದೇಶಿ ರಾಜಕೀಯ ಪ್ರಭುತ್ವವನ್ನು ಮತ್ತು ವಿದೇಶಿ ಸಾಂಸ್ಕೃತಿಕ ಯಜಮಾನ್ಯವನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಯಿತು. ಬ್ರಿಟಿಷ್ ವಸಾಹತೀಕರಣದ ಜೊತೆಜೊತೆಗೆ ಅನೇಕ ನೂತನ ಸಂಗತಿಗಳು ನಮ್ಮ ದೇಶ ಮತ್ತು ಭಾಷೆಯನ್ನು ಆಕ್ರಮಿಸತೊಡಗಿದವು. ನಮ್ಮ ಅನನ್ಯತೆಯನ್ನು ಬದಲಾಯಿಸತೊಡಗಿದವು. ಮುದ್ರಣ ಮಾಧ್ಯಮ, ನ್ಯಾಯಾಂಗ ವ್ಯವಸ್ಥೆ, ಸಾರಿಗೆ ಸಂಪರ್ಕ ಜಾಲ, ಇಂಗ್ಲೀಷ್ ಶಿಕ್ಷಣ ಕ್ರಮ ಇತ್ಯಾದಿಗಳು ನಮ್ಮ ಸಮಾಜವನ್ನು ಆಧುನೀಕರಣಗೊಳಿಸುವತ್ತ ಸಾಗಿ ಹಿಂದಿನ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡಲು ಮುಂದಾದವು. ಕನ್ನಡದ ಸಂದರ್ಭದಲ್ಲಿ ವಸಾಹತುವಿನಿಂದ ಬಂದ ವೈಚಾರಿಕತೆಯನ್ನು ಆಧುನೀಕತೆ ಎಂಬ ಹೆಸರಿನಲ್ಲಿ ನಮ್ಮ ಸಾಹಿತ್ಯ ಮತ್ತು ಭಾಷಾವಲಯ ಒಪ್ಪಿಕೊಳ್ಳಲು ಮುಂದಾಯಿತು. ಈ ಕಾರಣದಿಂದ ಲಿರಿಕ್ಸ್ ಸಾನೆಟ್ ಓಡ್ ಮುಂತಾದ ಕಾವ್ಯ ಪ್ರಭೇದಗಳನ್ನು ಸಣ್ಣಕಥೆ ಕಾದಂಬರಿ ಲಲಿತ ಪ್ರಬಂಧ ಮುಂತಾದ ಗದ್ಯ ಪ್ರಭೇದಗಳನ್ನು ಕನ್ನಡಕ್ಕೆ ತರಲಾಯಿತು. ವ್ಯಕ್ತಿವಾದ ಮತ್ತು ಉದಾರ ಮಾನವತಾವಾದ ವೈಚಾರಿಕತೆಗಳಾಗಿ ಬೆಳೆದು ನಿಂತವು. ಧಾರ್ಮಿಕ ವಲಯದಲ್ಲಿ ಏಕದೇವತಾರಾಧನೆ ಬಲಿಯ ನಿಷೇಧತೆಗಳ ಕಡೆ ಹೆಚ್ಚಿನ ಒಲವು ಹರಿಯಿತು. ಸಾಮಾಜಿಕವಾಗಿ ಜಾತಿಪದ್ಧತಿ, ಸ್ತ್ರೀಸಮಾನತೆ, ಮೇಲು–ಕೀಳೆಂಬ ತರತಮಗಳು ಕರಗತೊಡಗಿದವು. ಇದರಿಂದಾಗಿ ಬ್ರಿಟಿಷ್ ವಸಾಹತುಶಾಹಿಯ ಬಗ್ಗೆ ಗೌರವಾದರಗಳು ಬೆಳೆಯತೊಡಗಿದವು. ಪ್ರಭುತ್ವ ಮತ್ತು ಪರರ ಆಳ್ವಿಕೆಯ ಮೂಲಕ ನಮ್ಮ ಇಡೀ ವ್ಯವಸ್ಥೆ ಪ್ರಭಾವಗೊಂಡು ಬದಲಾಗುವತ್ತ ಸಾಗತೊಡಗಿತು.

ವಸಾಹತುಶಾಹಿ ಪ್ರಭಾವ ನಮ್ಮ ಭೌತಿಕ ಹಾಗೂ ಮಾನಸಿಕ ಸ್ಥಿತಿಗತಿಗಳ ಮೇಲೆ ಉಂಟುಮಾಡಿದ ಪರಿಣಾಮ ಅಗಾಧವಾದದ್ದು. ಇದರ ಬಗ್ಗೆ ಸ್ವಾತಂತ್ರಾನಂತರದ ಚಿಂತನಾಕ್ರಮಗಳು ಬದಲಾಗತೊಡಗಿದವು. ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯ–ಸಂಸ್ಕೃತಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿಡಿತಕ್ಕೆ ಸಿಲುಕಿಕೊಂಡಿತು. ಇದು ಕನ್ನಡದ ಸಾರಸತ್ವವನ್ನು ದುರ್ಬಲಗೊಳಿಸಿ ತನ್ನ ಸಿದ್ಧಾಂತ, ವಿಚಾರ, ಸಂಸ್ಕೃತಿಯನ್ನು ಹರಡತೊಡಗಿತು. ಆ ಕಾಲಕ್ಕೆ ಕನ್ನಡದಲ್ಲಿ ಬಂದ ನವೋದಯ ಸಾಹಿತ್ಯ ತನ್ನ ಸೃಜನಶೀಲತೆಯನ್ನು ಮೆರೆಯಿತು. ಪರಕೀಯ ಸಂಸ್ಕೃತಿಯನ್ನು ಒಪ್ಪುವ ಇಲ್ಲವೇ ತಿರಸ್ಕರಿಸುವ ಅನಿವಾರ್ಯತೆ ಕನ್ನಡದ ನೆಲೆಯನ್ನು ಕಾಣತೊಡಗಿತು. ಪರಕೀಯ ಸಂಸ್ಕೃತಿಯ ವಿರೋಧ ವಿಶ್ಲೇಷಣೆಯ ಜೊತೆಗೆ ಪ್ರಾದೇಶಿಕ ಸಂಸ್ಕೃತಿಯ ಮೂಲಸತ್ವವನ್ನು ಉಳಿಸುವ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಯಿತು. ಕನ್ನಡ ನವೋದಯ ಕಾವ್ಯವು ಪ್ರಾದೇಶಿಕ ಸಂಸ್ಕೃತಿಯಲ್ಲಿ ಮನೆಮಾಡಿಕೊಂಡಿದ್ದ ಅನಿಷ್ಟಗಳನ್ನು ಪ್ರತಿರೋಧಿಸತೊಡಗಿತು. ಜೊತೆಗೆ ಪರಕೀಯರ ದಬ್ಬಾಳಿಕೆಯಿಂದ ಹೇರಲ್ಪಟ್ಟ ವಿಚಾರಗಳನ್ನು ಕುರಿತು ಧ್ವನಿ ಹೊರಡಿಸಬೇಕಾದ ಸಂದರ್ಭ ಒದಗಿ ಬಂತು. ವಸಾಹತುಶಾಹಿಯ ಪರಿಣಾಮದಿಂದ ಜಗತ್ತಿನಾದ್ಯಂತ ಅದಕ್ಕೆ ಮುಖಾಮುಖಿಯಾಗುವ ತೀವ್ರತರ ಪ್ರಯತ್ನ ನಡೆಯಿತು. ಈ ಸಂಸ್ಕೃತಿ ತನ್ನ ವ್ಯಾಪ್ತಿಗೊಳಪಡುವ ದೇಶಗಳ ಪರಿಸರದ ಮೇಲೆ ಮಾಡಿದ ಆಘಾತಗಳು ಹೆಚ್ಚಾದ ಕಾರಣ ಸ್ಥಳೀಯ ಸಂಸ್ಕೃತಿಗಳು ಇದನ್ನು ದಿಕ್ಕರಿಸಿದವು. ಈ ಪ್ರತಿರೋಧಗಳ ಆಶಯಗಳು ರಾಷ್ಟ್ರೀಯವಾದ ದೇಶೀಯವಾದ ಪರಿಸರವಾದಗಳೆಂಬ ಕಲ್ಪನೆಗಳಾಗಿ ಬೆಳೆಯತೊಡಗಿದವು. ಹೀಗಾಗಿಯೂ ವಸಾಹತುಶಾಹಿ ಪ್ರಭಾವದಿಂದ ನಮ್ಮ ಹೊಸ ಸಾಂಸ್ಕ್ರತಿಕ ಚಿಂತನೆಗಳು ವಿಕಾಸಗೊಂಡವು. ಬ್ರಿಟಿಷರ ಆಳ್ವಿಕೆಗೆ ಒಳಗಾಗಿ ವಸಾಹತುವಾದ ಭಾರತ ರಾಜಕೀಯವಾಗಿ ಆರ್ಥಿಕವಾಗಿ ಕುಗ್ಗಿಹೋದರೂ ಮತ್ತೊಂದು ದೃಷ್ಠಿಯಲ್ಲಿ ಪಾಶ್ಚಾತ್ಯರ ಸಂಸ್ಕೃತಿ ಹಾಗೂ ವೈಜ್ಞಾನಿಕ ವಿಚಾರಧಾರೆಗಳು ನಮ್ಮಲ್ಲಿ ಕೆಲವು ಎಚ್ಚರವನ್ನುಂಟು ಮಾಡಿದವು. ನಮ್ಮ ಮತ ಮೌಢ್ಯತೆ, ಜಾತಿ, ಧರ್ಮ ಅನಿಷ್ಟ ಆಚಾರ–ವಿಚಾರಗಳು ಮೂಢನಂಬಿಕೆಗಳ ಬಗ್ಗೆ ಪ್ರಶ್ನೆ ಮಾಡುವಂತಾಯಿತು. ಪುರೋಹಿತಶಾಹಿಯ ಹಿಡಿತದೊಂದಿಗೆ ನಮ್ಮ ಧಾರ್ಮಿಕತೆ ಜನಸಾಮನ್ಯರ ಬದುಕನ್ನು ದಿಕ್ಕು ತಪ್ಪಿಸಿ ಸಾಗಿತೊಡಗಿತ್ತು. ಈ ಪುರೋಹಿತಶಾಹಿಯು ಕೇವಲ ಭಾರತದ ಜಾತಿ ಧರ್ಮಗಳಿಗಷ್ಟೇ ಸೀಮಿತವಾದುದಲ್ಲ. ಸಾಮ್ರಾಜ್ಯಶಾಹಿಗಳಲ್ಲಿಯೂ ಇದು ಬೇರೂರಿತ್ತು. ಮೂಲಶಕ್ತಿಯನ್ನು ಇಲ್ಲವಾಗಿಸುವ ಮಧ್ಯವರ್ತಿಗಳೆಲ್ಲರನ್ನು ಕಾಲ ದೇಶಗಳ ಮಿತಿಯಿಲ್ಲದೆ ಕುವೆಂಪು ದೂರೀಕರಿಸುತ್ತಾರೆ. ಲೋಕದ ಅನನ್ಯತೆಗಳನ್ನು ಸತ್ಯಗಳನ್ನು ಮರೆಮಾಚುವ ಅಂತಃಸತ್ವಗಳನ್ನು ವಿರೂಪಗೊಳಿಸುವ ಅವಿಚಾರಗಳೆಲ್ಲವನ್ನು ಕುವೆಂಪು ಪುರೋಹಿತಶಾಹಿ ಎಂದು ವ್ಯಾಖ್ಯಾನಿಸಿದ್ದಾರೆ. ಬ್ರಿಟಿಷರ ಇಂಗ್ಲೀಷ್ ಶಿಕ್ಷಣ ವ್ಯವಸ್ಥೆಯ ಪ್ರಭಾವ ಹೊಸ ಚೈತನ್ಯವನ್ನು ವೈಜ್ಞಾನಿಕ ಬುದ್ಧಿಶಕ್ತಿಯನ್ನು ಒದಗಿಸಿಕೊಡುವಲ್ಲಿ ನೆರವಾಯಿತು. ಆರಂಭಕಾಲದಲ್ಲಿ ಭಾರತದ ಜನರು ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಗೆ ಒಳಗಾದರೂ ಕ್ರಮೇಣ ಪ್ರಾಚ್ಯಮತಿಗಳಾಗಿ ಬೆಳೆದು ಭಾರತೀಯ ಸಂವೇದನೆ ಹೊಸ ಪರಿಸರವೊಂದನ್ನು ನಿರ್ಮಿಸಿಕೊಂಡಿತು. ಇದರಿಂದ ಹೊಸದೊಂದು ಸಾಂಸ್ಕೃತಿಕ ಕ್ರಾಂತಿಯೇ ಉಂಟಾಯಿತು ಎನ್ನಬಹುದು. ಇದೇ ಎಚ್ಚರ ಮುಂದೆ ನಾವು ಸ್ವಾತಂತ್ರವನ್ನು ಗಳಿಸುವ ಪರಿಯನ್ನು ಕುರಿತು ಚಿಂತನೆಯನ್ನು ಮಾಡಿದ್ದು. ಹಲವಾರು ಭಾಷೆಗಳ ವಿಭಿನ್ನ ಸಂಸ್ಕೃತಿಗಳ ತವರೂರಾದ ಭಾರತದಲ್ಲಿ ಬ್ರಿಟಿಷರು ಏಕಚಕ್ರಾಧಿಪತ್ಯ ಮತ್ತು ಏಕಭಾಷಾಧಿಪತ್ಯವನ್ನು ಸ್ಥಾಪಿಸಹೊರಟರು. ಇದರಿಂದಾಗಿ ಭಾರತೀಯರಿಗೆ ರಾಷ್ಟ್ರದ ಕಲ್ಪನೆ ಮೂಡಿತು. ಜಾತಿ, ಮತ, ದೇಶಗಳ ಅಂತರಗಳನ್ನು ಮರೆತು ಭಾರತಮಾತೆಯೇ ಮುಕ್ತಿಯೆಂದು ಪ್ರತಿಯೊಬ್ಬ ಭಾರತೀಯನೂ ತಿಳಿದು ಸ್ವಾತಂತ್ರ ಸಮರಕ್ಕೆ ಸಿದ್ಧರಾಗಬೇಕಾದ ಅನಿವಾರ್ಯತೆ ಈ ಸಂದರ್ಭದಲ್ಲಿ ಭಾರತೀಯರಲ್ಲಿ ಮೊಳೆಯತೊಡಗಿತು. ನಮ್ಮ ಮತ ಮೌಢ್ಯಗಳಿಂದ ಎದುರಾಗುವ ಸಾಮಾಜಿಕ ಅಸಮಾನತೆಗಳನ್ನು ತೊಡೆದು ಹಾಕಿ ಸರ್ವೋದಯದ ಹೆಜ್ಜೆ ಇಡುವುದೂ ಈ ಕಾಲದ ಮತ್ತೊಂದು ಸ್ವಾತಂತ್ರ ಹೋರಾಟ. ಈ ರೀತಿಯ ಹೋರಾಟ ನವೋದಯ ಸಾಹಿತ್ಯದಿಂದ ಮೊದಲಾಯಿತು. ಪುರೋಹಿತಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ಅವನತಿಯ ಹಾದಿ ಹಿಡಿದು ಪತನವಾಗಿ ಜನಸಾಮನ್ಯನಿಗೆ ಮನ್ನಣೆ ದೊರೆಯುವ ಹಂತಕ್ಕೆ ಈ ಕಾವ್ಯಧಾರೆ ನಮ್ಮನ್ನು ಪ್ರೋತ್ಸಾಹಿಸಿತು. ಕುವೆಂಪುರವರ ಕಲ್ಕಿ ಕವನವಂತೂ ಶತಮಾನದ ಸಮಸ್ಟೀ ಪ್ರಜ್ಞೆಯೆಲ್ಲವನ್ನು ನಿದ್ದೆಗೆಡಿಸಿತು. ಸಾಮಜಿಕ ಅಸಂಗತಗಳ ಕ್ರೌರ್ಯವನ್ನು ನಾಟಕೀಯವಾಗಿ ನಿರೂಪಿಸುವ ಈ ಕವನ ಅನಾದಿಕಾಲದಿಂದ ಬಂದ ಮತೀಯ ಮೌಢ್ಯತೆಯ ಎದುರಾಳಿ ಎನ್ನಬಹುದು. ಅಂತಹ ಮೌಢ್ಯತೆಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಒಳಗಾದ ಶೋಷಿತರ ದುರಾವಸ್ಥೆಗಳು ಕಲ್ಕಿಯಲ್ಲಿ ನಿರೂಪಿತವಾಗಿವೆ. ಮತ್ತು ಅಂತಹ ಮೌಢ್ಯತೆಯಿಂದ ಹೊಸತನದ ಕಡೆಗೆ ಕಣ್ತೆರೆಯುವಂತೆ ಕಲ್ಕಿ ಕವನ ಮಾಡಿದೆ.

ಕುವೆಂಪುರವರ ಕಾದಂಬರಿಗಳಲ್ಲಂತೂ ವಸಾಹತು ಪ್ರಜ್ಞೆ, ಆಧುನೀಕತೆಯ ಸ್ಪರ್ಶ ಸ್ಥಿತ್ಯಂತರಗಳು ಹೆಚ್ಚುಹೆಚ್ಚಾಗಿ ಕಾಣತೊಡಗಿದವು. ಬ್ರಿಟಿಷರು ಇಲ್ಲಿನ ಸಾಂಸ್ಕೃತಿಕ ಜೀವನದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದ ಕಾರಣದಿಂದ ಅದು ನಮ್ಮ ಸಮಾಜದ ಮೇಲೂ ಪರಿಣಾಮ ಬೀರಿತು. ನಮ್ಮ ಸಾಮಾಜಿಕ ಸಮಸ್ಯೆಗಳಾದ ಜಾತಿಪದ್ಧತಿ ಬಾಲ್ಯವಿವಾಹ ಸತೀಪದ್ಧತಿ ಜೀತಪದ್ಧತಿ ಮುಂತಾದ ಸಮಸ್ಯೆಗಳನ್ನು ಕುರಿತು ಈ ಕಾಲದಲ್ಲಿ ಮರುಚಿಂತನೆ ನಡೆಯಿತು. ಇಂಥ ಸಮಸ್ಯೆಗಳು ಜಡಗೊಂಡು ಸವಕಲಾಗಿದ್ದ ಧಾರ್ಮಿಕತೆ ಹೊಸ ಚಿಂತನೆಯ ಜೊತೆ ಮುಖಾಮುಖಿಯಾಯಿತು. ಇಂತಹ ಸಂಕೀರ್ಣ ಸಮಸ್ಯೆಗಳು ಕುವೆಂಪುರವರ ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಪ್ರಮುಖ ಚಿಂತನೆಯಾಗಿ ಅಭಿವ್ಯಕ್ತಗೊಂಡಿದೆ. ವಸಾಹತುಶಾಹಿಯ ಮುಖ್ಯ ಆಕ್ರಮಣಕಾರಿ ನೆಲೆಗಳಲ್ಲಿ ಅದು ಹೊತ್ತು ತಂದಿದ್ದ ಪ್ರಭಾವ ಪ್ರಮುಖವಾದದ್ದು. ಹೊಸ ಧರ್ಮವು ಆಳುವ ವರ್ಗದ ಬೆಂಬಲದಿಂದ ಇಲ್ಲಿ ಬಾಹುಳ್ಯವಾಗಿ ನೆಲೆಗೊಂಡಿತು. ಮಲೆನಾಡಿನ ರೋಗಗ್ರಸ್ತ ವಾತಾವರಣದಲ್ಲಿ ಕ್ರೈಸ್ತಧರ್ಮದ ಪ್ರಭಾವವನ್ನು ಸೂಕ್ಷ್ಮವಾಗಿ ಹಬ್ಬಿಸಲು ನಡೆದ ಪ್ರಯತ್ನ ಹಾಗೂ ಅದಕ್ಕೆ ಒದಗಿ ಬಂದ ಪ್ರತಿಕ್ರಿಯೆ ಪ್ರತಿಭಟನೆಯ ನೆಲೆಯಲ್ಲಿ ನಿಂತಿದೆ.

"ಆಗತಾನೆ ಹಳೆಯ ತರಹದ ಕೂಲಿಮಠಗಳ ಕಾಲವೂ ಹಳೆಯ ವಿದ್ಯಾಭ್ಯಾಸ ಪದ್ಧತಿಯೂ ಮುಕ್ತಾಯಗೊಂಡು ಆಂಗ್ಲೇಯರ ಆಡಳಿತ ರೀತಿಯೂ ಇಂಗ್ಲೀಷಿನ ಪ್ರಭಾವವೂ ಮೊಳೆದೋರುತಿದ್ದ ಸಂಧಿಸಮಯ. ಮಲೆನಾಡಿಗೆ ಆ ಹೊಸ ಪ್ರಭಾವದ ಮುಂಬೆಳಕನ್ನು ಮೊತ್ತಮೊದಲು ತರುವುದರಲ್ಲಿ ಕ್ರೈಸ್ತ ಪಾದ್ರಿಗಳ ಕಾರ್ಯ ಗಣನೀಯವಾಗಿತ್ತು. ಶ್ಲಾಘನೀಯವಾಗಿತ್ತು. ತಮ್ಮ ಮತಕ್ಕೆ ಜನರನ್ನು ಸೇರಿಸಿಕೊಳ್ಳುವ ಧಾರ್ಮಿಕ ಪ್ರಯತ್ನಕ್ಕೆ ಪೀಠಿಕೆಯಾಗಿತ್ತು. ಈ ಲೌಕಿಕ ಸೇವಾ ಕರ್ಮ. ಸಾಮಾನ್ಯ ಜನ ಬಹುಕಾಲದಿಂದಲೂ ಹಿಂದೂಧರ್ಮದ ಹೆಸರಿನಲ್ಲಿ ಬ್ರಾಹ್ಮಣರು ಒಡ್ಡಿದ್ದ ಮೂಢ ಮತಾಚಾರಗಳ ಕೂಣಿಗೆ ಸಿಕ್ಕಿಬಿದ್ದಿದ್ದರು. ಅವರನ್ನು ಆ ಕೂಣಿಯಿಂದ ತಪ್ಪಿಸಿ ರಕ್ಷಿಸುವ ನೆವದಲ್ಲಿ ಕ್ರೈಸ್ತ ಪಾದ್ರಿಗಳು ತಮ್ಮ ಮತದ ಬಲೆಯನ್ನು ಬೀಸಿ ಅದರೊಳಕ್ಕೆ ಹಾರಿಬೀಳುವ ಪ್ರಾಣಿಗಳನ್ನು ಭಕ್ಷಿಸುವ ಅಥವಾ ಅವರ ರೀತಿಯಲ್ಲಿ ಅಭಿಸಂಧಿಯನ್ನಿಟ್ಟುಕೊಂಡಿದ್ದರು".[1]

ಕುವೆಂಪುರವರು ಪಾಶ್ಚಾತ್ಯ ಮಹಾಕಾವ್ಯಗಳ ನಿರೂಪಣೆಯ ತಂತ್ರವನ್ನೇ ಶ್ರೀ ರಾಮಾಯಣದರ್ಶನಂಗೆ ಹೊಂದಿಸದೆ ಚಿರಂತನವಾದ ಆಧ್ಯಾತ್ಮಿಕ ಆದರ್ಶ ಸತ್ಯವೊಂದಕ್ಕೆ ಕಾವ್ಯದ ರೂಪವನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಇಂತಹ ಪ್ರಕ್ರಿಯೆ ಮಿಲ್ಟನ್ ನ ಕಾವ್ಯದಲ್ಲಿಯೂ ಕಂಡುಬರುತ್ತದೆ. ಆಧ್ಯಾತ್ಮಿಕ ಸತ್ಯಕ್ಕೆ ಕಾವ್ಯಶರೀರ ನೀಡಿದ ಮನುಷ್ಯನ ಚೇತನವನ್ನು ನಾಯಕನನ್ನಾಗಿ ಮಾಡಿದ ಡಾಂಟೆಯೂ ಕೂಡ ಕುವೆಂಪುರವರನ್ನು ಪ್ರಭಾವಿಸಿದ್ದಾನೆ. ಪಾಶ್ಚಾತ್ಯ ಮಹಾಕಾವ್ಯವು ನೀಡಿದ ಬಹುದೊಡ್ಡ ಕೊಡುಗೆಯೆಂದರೆ ಮಹೋಪಮೆ. ಕುವೆಂಪು ಮಹೋಪಮೆಯನ್ನು ಕುರಿತು ಬರೆದ ಲೇಖನದಲ್ಲಿ 'ಈ ಹೆಣ್ಣು ಕನ್ನಡದ ಮನೆಗೆ ಹೊಸ ಸೊಸೆ' ಎಂದರು. ಈ ಮಹೋಪಮೆ ಮಹಾಕಾವ್ಯದ ವಿಶಿಷ್ಟ ಪಾತ್ರಗಳ ಜಗತ್ತಿನಿಂದ ಸಾಮಾನ್ಯರ ಜಗತ್ತಿಗೆ ಸೇತುವೆಯಾಗಿದೆ. ಕುವೆಂಪುರವರು ಶ್ರೀ ರಾಮಾಯಣದರ್ಶನಂ ಕೃತಿಯಲ್ಲಿ ಬಳಸಿರುವ ಮಹೋಪಮೆಗಳು ಹೋಮರ್ ವರ್ಜಿಲ್ ಡಾಂಟೆಯರ ಮಹೋಪಮೆಗಳನ್ನು ನೆನಪಿಸುತ್ತವೆ. ಅದಕ್ಕೆಂದೇ "ಆಂಗ್ಲಕವಿಗಳಲ್ಲಿ ಮಿಲ್ಟನ್ ನನ್ನನ್ನು ಮರುಳುಗೊಳಿಸಿದಂತೆ ಇನ್ಯಾರೂ ಮರುಳುಗೊಳಿಸಿಲ್ಲ" ಎಂದು ಕುವೆಂಪು ಹೇಳಿರುವುದು ಸತ್ಯವಾಗಿದೆ. ರಾಷ್ಟ್ರಕವಿ ಗೋವಿಂದ ಪೈಗಳು "ಮಿಲ್ಟನ್ ಕವಿಯ ಪ್ಯಾರಡೈಸ್ ಲಾಸ್ಟ್ ಮತ್ತು ಪ್ಯಾರಡೈಸ್ ರೀಗೇನ್ಸ್ ಆದ ಮೇಲೆ ಯಾವ ಭಾಷೆಯಲ್ಲೇ ಆಗಲಿ ಈ ಪ್ರಮಾಣದ ಒಂದು ಮಹಾಕಾವ್ಯ ಬಂದುದ್ದನ್ನು ಕಾಣೆ" ಎಂದಿದ್ದಾರೆ. ಕುವೆಂಪುರವರು ತಮ್ಮ ಶ್ರೀ ರಾಮಾಯಣದರ್ಶನಂ ಕೃತಿಯನ್ನು ವಿಶ್ವಕಾವ್ಯ ಪರಂಪರೆಯದು ಎನ್ನುತ್ತಾರೆ. ಸಮಕಾಲೀನ ದರ್ಶನವಾದ ಅಹಿಂಸಾವ್ರತ ಮನಃಪರಿವರ್ತನೆಯ ಮೂಲಕ ಮಾನವೋದ್ಧಾರವನ್ನು ಸಾಧಿಸುವ ದಿಸೆಯಲ್ಲಿ ಸಾಗಿದ್ದಾರೆ. ಆದ್ದರಿಂದ ಶ್ರೀ ರಾಮಾಯಣದರ್ಶನಂ ಮಹಾಕಾವ್ಯ ವಾಲ್ಮೀಕಿ ರಾಮಾಯಣದ ಪ್ರತಿಕೃತಿ ಅಲ್ಲ. ಬದಲಾಗಿ ಅದರಿಂದ ಸ್ಫೂರ್ತಿಗೊಂಡದ್ದು. ಸರ್ವೋದಯದ ಬೆಳಕಲ್ಲಿ ಮಿಂದದ್ದು. ವಿಶ್ವಕವಿಗಳ ಕಾವ್ಯಪಾಕದಲ್ಲಿ ಹದಗೊಂಡದ್ದು. ಮತ್ತು ತನ್ನ ಸಮಕಾಲೀನ ದರ್ಶನದಿಂದ ದೀಕ್ಷೆಗೊಂಡದ್ದು. ತನ್ನ ಕಾವ್ಯ ಪರಂಪರೆಯ ಸಂಪ್ರದಾಯ ಮತ್ತು ಪ್ರಾಯೋಗಿಕತೆಗಳನ್ನು ಒಟ್ಟಿಗೆ ಬಳಸಿಕೊಳ್ಳುವುದರ ಜೊತೆಗೆ ಪಾಶ್ಚಾತ್ಯ ಮಹಾಕಾವ್ಯದೊಡನೆ ಸಮನ್ವಯವನ್ನು ಸಾಧಿಸುವ ಸಂಕಲ್ಪವನ್ನು ಕುವೆಂಪುರವರ ಶ್ರೀರಾಮಾಯಣದರ್ಶನಂ ಹೊಂದಿದೆ. ವಿ ಸೀತಾರಾಮಯ್ಯನವರು ಹೇಳುವಂತೆ "ಇಲ್ಲಿ ಇರುವ ಅತಿ ಪ್ರಾಕೃತಿಕ ಉದ್ದೇಶ, ದೃಷ್ಟಿ, ವಾಕ್ ಸಂಪತ್ತಿ, ಪ್ರಾಚೀನ ಮಹಾಕಾವ್ಯಗಳ, ಮಧ್ಯಯುಗದ ಇಂದಿನ ಕಾಲದ ಹೊರ ಒಳ ದೇಶಗಳ ಇತಿಹಾಸ ಕಾವ್ಯಗಳ ಕಳೆಗಳನ್ನೆಲ್ಲಾ ತುಂಬಿಸಿಕೊಂಡು ಸ್ವಪ್ರಜ್ಞಾಲಂಕೃತವಾಗಿದೆ."[2] ದರ್ಶನ ವೈರುಧ್ಯವೇ ಯುಗಧರ್ಮವಾಗಿರುವ ಇಪ್ಪತ್ತನೆಯ ಶತಮಾನವನ್ನು ಯಾವ ಒಂದು ಕೃತಿಯೂ ಸಂಪೂರ್ಣವಾಗಿ ಪ್ರತಿನಿಧೀಕರಿಸುವುದು ಅಸಾಧ್ಯವೆಂಬ ಮಾತನ್ನು ಒಪ್ಪಬಹುದಾದರೂ ಭಾರತೀಯ ಸಂಸ್ಕೃತಿಯ ಮೂಲಗಳಲ್ಲಿ ಒಂದಾದ ರಾಮಾಯಣದ ಕಥಾಮೂಲದಿಂದ ತನ್ನ ಸಮನ್ವಯ ದೃಷ್ಟಿಯ ಮೂಲಕ ಹೊಸ ಚೈತನ್ಯವನ್ನು ತುಂಬಲು ಶ್ರೀ ರಾಮಾಯಣದರ್ಶನಂ ಕೃತಿಯು ಮೂಡಿನಿಂತಿದೆ. ಆದ್ದರಿಂದ ಈ ಕೃತಿಯನ್ನು ಹೋಮರನ ಈಲಿಯಡ್‌ಗೆ ವ್ಯಾಸ ವಾಲ್ಮೀಕಿಯರ ಮಹಾಕಾವ್ಯಗಳಿಗೆ ಹೋಲಿಸಿದರೆ ಲಾಭವಿಲ್ಲ. ಡಾಂಟೆಯ ಡಿವೈನ್ ಕಾಮಿಡಿಗೆ ಹೋಲಿಸಬೇಕು. ಡಾಂಟೆ ಕ್ರಿಶ್ಚಿಯನ್ ದರ್ಶನವನ್ನು ಕಲೆಯಾಗಿ ಪರಿವರ್ತಿಸಲು ಮಾಡಿದ ಪ್ರಯೋಗಗಳನ್ನೇ ಹೆಚ್ಚುಕಡಿಮೆ ಕುವೆಂಪು ಅನುಸರಿಸುತ್ತಾರೆ. ಡಾಂಟೆಯ ದರ್ಶನವನ್ನು ಒಪ್ಪದೇ ಹೋದರೂ ಅವನ ಕಲೆಯನ್ನು ನಾವು ಮೆಚ್ಚಬೇಕು.

ಪಾಶ್ಚಾತ್ಯ ಸಾಹಿತ್ಯ ತತ್ವಶಾಸ್ತ್ರ ಸಂಸ್ಕೃತಿಗಳನ್ನು ಅರಿಯುವುದರ ಮೂಲಕ ಕುವೆಂಪು ಹೊಸ ದೃಷ್ಟಿಕೋನಗಳನ್ನು ಬೆಳೆಸಿಕೊಂಡವರು. ಇಂಗ್ಲೀಷ್ ಸಾಹಿತ್ಯದ ಅರಿವು ಹಳೆಯ ಸಂಪ್ರದಾಯಗಳನ್ನು ಮತ್ತು ಅದರಲ್ಲಿ ಬೇರೂರಿದ್ದ ಮೂಢನಂಬಿಕೆಗಳನ್ನು ಕರಗಿಸಲು ಸಹಾಯಕವಾಯಿತು. ನಮಗಿಂದು ಅಗತ್ಯವಾಗಿರುವುದು ನಮ್ಮನ್ನು ಮುಂದೊಯ್ಯುವಂಥ ಕ್ರಾಂತಿ ಎಂಬ ಅವರ ಮಾತು ಶಾಶ್ವತ ಮೌಲ್ಯಗಳ ಶೋಧನೆಯಲ್ಲಿ ಕುವೆಂಪು ಹೊರಟ ಹಾದಿಯನ್ನು ತಿಳಿಸುತ್ತದೆ. ವೈಚಾರಿಕತೆಯಿಂದ ಮತ್ತು ಶ್ರೇಷ್ಠ ನಿಲುವುಗಳಿಂದ ಕುವೆಂಪು ಎಂದೂ ಹಿಂದೆ ಸರಿದವರಲ್ಲ. ಹಳೆಯ ತಲೆಮಾರುಗಳ ಸನಾತನ ಸಂಸ್ಕೃತಿ ಪರಂಪರೆಗಳನ್ನು ಹೊಸಕಾಲದ ಪ್ರಜ್ಞೆಯ ಜೊತೆಯಲ್ಲಿ ಮೈಗೂಡಿಸಿ ನೂತನ ಕಾವ್ಯಪ್ರಯೋಗಗಳನ್ನು ಆವಿಷ್ಕರಿಸಿದವರು.

ವಸಾಹತುಶಾಹೀ ಸಂಸ್ಕೃತಿಗೆ ಇಡೀ ದೇಶವು ಅಧೀನವಾದ ಕಾಲಮಾನದಲ್ಲಿ ಕುವೆಂಪು ಸಾಹಿತ್ಯ ರಚನೆಯಲ್ಲಿ ತೊಡಗಿದ್ದು. ಈ ಕಾರಣದಿಂದಾಗಿಯೇ ಕುವೆಂಪು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಇಲ್ಲವೇ ದೇಶೀಯತೆಯನ್ನು ಉಳಿಸುವ ಸಂದಿಗ್ಧತೆಯಲ್ಲಿ ನಿಂತದ್ದು. ಆ ಕಾಲಮಾನದ ಚಾರಿತ್ರಿಕ ಸಂಗತಿಗಳು ಇಂತಹ ವಾಸ್ತವತೆಯನ್ನು ಒದಗಿಸಿಕೊಡುತ್ತವೆ. ಅಂದರೆ ವಸಾಹತುಶಾಹೀ ಸಂಸ್ಕೃತಿಯ ಹೊಸ ವಿಚಾರಗಳು ಕುವೆಂಪುರವರನ್ನು ಒಳಗೊಂಡಂತೆ ಹಲವರನ್ನು ಆಕರ್ಷಿಸಿತು. ಹಾಗಾಗಿ ಕುವೆಂಪು ವಸಾಹತು ಸಂಸ್ಕೃತಿ ಮತ್ತು ಸಾಂಪ್ರದಾಯಿಕ ವೈದಿಕ ಸಂಸ್ಕೃತಿಗಳಿಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಏಕಕಾಲದಲ್ಲಿ ಮುಖಾಮುಖಿಯಾಗಬೇಕಾಯಿತು. ಒಂದು ಕಡೆ ಪಾಶ್ಚಾತ್ಯ ಚಿಂತನಧಾರೆಯಾದರೆ ಮತ್ತೊಂದು ಕಡೆ ಪರಮಹಂಸ, ವಿವೇಕಾನಂದ, ತಿಲಕ್, ಗಾಂಧೀಜಿಯವರ ಚಿಂತನೆಗಳು ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ದೇಶದ ತುಂಬೆಲ್ಲಾ ಗಾಢವಾಗಿ ಹಬ್ಬಿದ್ದವು. ಇಂಥ ಸಂಕೀರ್ಣಾವಸ್ಥೆಯಲ್ಲಿ ಮೈತಳೆದ ಕುವೆಂಪು ಪೌರಾತ್ಯ ಮತ್ತು ಪಾಶ್ಚಾತ್ಯ ಚಿಂತನೆಗಳೊಂದಿಗೆ ಅಭಿವ್ಯಕ್ತಿಸಿದ್ದು. ಮನುಷ್ಯನ ಉದ್ಧಾರಕ್ಕೆ ಬಹುದೊಡ್ಡ ತೊಡಕಾದ ಮತವನ್ನು ಪುನರ್ ವ್ಯಾಖ್ಯಾನಿಸುವ ಸೃಷ್ಟಿಶೀಲತೆ ನವೋದಯದ ಸಾಹಿತ್ಯದ ವಿಶೇಷಗಳಲ್ಲೊಂದು. ಕುವೆಂಪು ಅವರ ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಎಂಬ ಕೃತಿ ಇಂತಹ ತಾತ್ವಿಕತೆಯನ್ನೇ ಪ್ರತಿಪಾದಿಸುತ್ತದೆ. ವೈದಿಕ ಸಂಸ್ಕೃತಿ ಯಾವ ಮತಿಯನ್ನು ಮತದೊಳಗೆ ಹೂತಿಟ್ಟು ಅಂತಃಸತ್ವವಿಲ್ಲದಂತೆ ಮಾಡಿತ್ತೋ ಅದೇ ಮತಿಗಳಿಗೆ ವೈಚಾರಿಕತೆಯನ್ನು ಅಳವಡಿಸುವ ಸಂವೇದನೆ ಕುವೆಂಪುರವರ ಕೃತಿಚಿಂತನೆಗಳಲ್ಲಿ ಕಂಡುಬರುತ್ತದೆ.

**ಕೊನೆಟಿಪ್ಪಣಿಗಳು**

1. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ ಮೈಸೂರು–1985, ಪುಟ 309–310
2. ಸೀತಾರಾಮಯ್ಯ ವಿ, ಸಾಹಿತ್ಯಾವಲೋಕನ, ಗೀತಾ ಬುಕ್ ಹೌಸ್ ಮೈಸೂರು–1979 ಪುಟ–419

## ಆಕರ ಗ್ರಂಥಗಳು


- **ಗುರುದತ್ತ ಪ್ರಧಾನ್ (2009) :** ಕುವೆಂಪು ಸಂಚಯ, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು
- **ಕುರ್ತಕೋಟಿ ಕೀರ್ತಿನಾಥ (2016) :** ರೊಮ್ಯಾಂಟಿಸಿಜಮ್, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು
- **ಮರಿಗುದ್ದಿ ಗುರುಪಾದ (1989) :** ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ ಮೈಸೂರು
- **ನಾಗೇಗೌಡ ಹೆಚ್.ಎಲ್. (2001) :** ಮಲೆನಾಡ ವಾಲ್ಮೀಕಿ, ಕನ್ನಡ ಜಾನಪದ ಪರಿಷತ್ತು, ಬೆಂಗಳೂರು
- **ಶಿವಶಂಕರ್ ಚಕ್ಕೆರೆ (2010) :** ಸಹ್ಯಾದ್ರಿ ಸೂರ್ಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
- **ಶಿವಾರೆಡ್ಡಿ ಕೆ.ಸಿ. (2003) :** ಕನ್ನಡದ ಹಾಡುಪಾಡು, ಅಧ್ಯಯನ ಮಂಡಲ, ಬೆಂಗಳೂರು
- **ವಿಕಿಪೀಡಿಯಾ, ಅಂತರ್ಜಾಲ, ಎಡ್ವರ್ಡ್ ಸೈದ್**
- **ವಸಾಹತೋತ್ತರ ಚಿಂತನೆ,** ಕಣಜ ಅಂತರ್ಜಾಲ ತಾಣ, ಇ ಪುಸ್ತಕ
- **ಉದ್ದಂಡಯ್ಯ (2004) :** ಕುವೆಂಪು ಕಥನ, ಅಧ್ಯಯನ ಮಂಡಲ, ಬೆಂಗಳೂರು


■■

~~~~~~~~~~~~~~~~~~~~~~~~~~~~~~~~~~~~~~~~

– 28ನೇ ಪುಟದಿಂದ ಮುಂದುವರೆದುದು

ಎಂಬ ಗ್ರಂಥವನ್ನು 'ಭಾರತೀಯ ಗ್ರಂಥ ಸಂಪಾದನಾ ಪರಿಚಯ' ಎಂಬ ಹೆಸರಿನಲ್ಲಿ ಆ ಕೃತಿಯನ್ನು ಭಾಷಾಂತರಿಸಿ ಹೊರ ತಂದಿದ್ದಾರೆ. ನಾಟಕ ಸಾಹಿತ್ಯದಲ್ಲಿ 'ಮೃಚ್ಛಕಟಿಕ', 'ಹಬ್ಬದ ಹನ್ನೆರಡನೆಯ ರಾತ್ರಿ', 'ಇಸ್ಪೀಟ್ ರಾಜ್ಯ' ಎಂಬ ನಾಟಕಗಳನ್ನು ಅನುವಾದಿಸಿರುವರು.

**ಶಾಸ್ತ್ರ ಸಾಹಿತ್ಯದಲ್ಲಿ** ಕನ್ನಡ ಮಾತು, ಶಾಸ್ತ್ರ ಭಾರತಿ ಮತ್ತು ಕಾವ್ಯ ಪ್ರತಿಮೆ ಎಂಬ ಕೃತಿಗಳನ್ನು ರಚಿಸಿರುವರು. ಇಂಗ್ಲಿಷಿನಲ್ಲಿ ರೀಡಿಂಗ್ಸ್ ಇನ್ ಕನ್ನಡ ಎಂಬ ಗ್ರಂಥ ರಚಿಸಿರುವರು. **ಜೀವನಚರಿತ್ರೆ** ಸಾಹಿತ್ಯದಲ್ಲಿ ಮಾಣಿಕ್ಯ ವಂದ್ಯೋಪಾಧ್ಯಾಯ (ಅನುವಾದ) ಮತ್ತು ರಮಣ ಮಹರ್ಷಿ ಎಂಬ ಕೃತಿಗಳನ್ನು ಹಾಗೂ ಕನ್ನಡ ಸಾಹಿತ್ಯ ಪರಂಪರೆಯ ಕುರಿತಾಗಿ 'ಸಾಹಿತ್ಯರತ್ನ ಸಂಪುಟ' ಎಂಬ **ವ್ಯಕ್ತಿಚಿತ್ರಗಳ** ಕೃತಿಯನ್ನು ರಚಿಸಿದ್ದಾರೆ.

**ಸಾಹಿತ್ಯ ವಿಮರ್ಶಾ ಕ್ಷೇತ್ರದಲ್ಲಿ** ಹೊರಳು ದಾರಿಯಲ್ಲಿ ಕಾವ್ಯ, ವಿವೇಚನ, ಸಾಹಿತ್ಯ ಸನ್ನಿಧಿ, ಕನ್ನಡ ಸಾಹಿತ್ಯಚರಿತ್ರೆ, ಪ್ರಾಯೋಗಿಕ ವಿಮರ್ಶೆ(ಸಂ), ಕಾವ್ಯಶೋಧ (ಸಂ) ಮತ್ತು ಅನನ್ಯ ಎಂಬ ಕೃತಿಗಳನ್ನು ರಚಿಸಿದ್ದಾರೆ. **"ನಿಲುವುಗನ್ನಡಿಯ ಮುಂದೆ"** ಎಂಬ ಹೆಸರಿನಡಿ ಎನ್‌ಎಸ್‌ಎಲ್‌ರವರು **ಆತ್ಮಚರಿತ್ರೆಯನ್ನು** ಬರೆದಿದ್ದಾರೆ.

## ವಿದೇಶಿ ಪ್ರವಾಸಗಳಲ್ಲಿ ಉಪನ್ಯಾಸ

ನಾಲ್ಕು ಬಾರಿ ಅಮೆರಿಕಕ್ಕೆ ಆಹ್ವಾನಿತರಾಗಿ ಹೋಗಿ ಅಲ್ಲಿನ ಕನ್ನಡ ಸಂಘಗಳಲ್ಲಿ ಕನ್ನಡ ಸಾಹಿತ್ಯ ಪರಂಪರೆಯ ಬಗ್ಗೆ 98 ಉಪನ್ಯಾಸಗಳನ್ನು ನೀಡುವ ಮೂಲಕ ನ್ಯೂಯಾರ್ಕ್, ನ್ಯೂಜೆರ್ಸಿ, ಶಿಕಾಗೋ, ಲಾಸ್‌ಎಂಜಲೀಸ್, ಸ್ಯಾನ್ ಫ್ರಾನ್ಸಿಸ್ಕೋ ಮುಂತಾದ ನಗರಗಳಲ್ಲಿ ಪ್ರಸಿದ್ಧರಾಗಿದ್ದಾರೆ.

## ಸುಗಮ ಸಂಗೀತಕ್ಕೆ ಎನ್‌ಎಸ್‌ಎಲ್‌ರ ಕೊಡುಗೆ

ಜನಸಾಮಾನ್ಯರಿಗೆ ಎನ್‌ಎಸ್‌ಎಲ್ ಅವರು ಚಿರಪರಿಚಿತರೂ ಮತ್ತು ಪ್ರಿಯರೂ ಆಗಿರುವುದು ಅವರ ಸುಮಧುರ ಭಾವಗೀತೆಗಳ ಮೂಲಕವೇ ಆಗಿದೆ. ಭಾವಗೀತೆಗಳಿಂದ ಪ್ರಸಿದ್ಧರಾದ ಭಟ್ಟರು ಗೀತ ಕಾವ್ಯಗಳನ್ನು ಸಿ.ಅಶ್ವಥ್, ಶಿವಮೊಗ್ಗ ಸುಬ್ಬಣ್ಣ, ಮೈಸೂರು ಅನಂತಸ್ವಾಮಿ, ಎಚ್.ಕೆ. ನಾರಾಯಣ ಮೊದಲಾದ ಸುಗಮ ಸಂಗೀತ ಗಾಯಕರಿಂದ ಹಾಡಿಸುವ ಮೂಲಕ ಸುಶ್ರಾವ್ಯ ಧ್ವನಿರೂಪ ನೀಡಿದ್ದಾರೆ. ಇವರ ದೀಪಿಕಾ, ಭಾವಸಂಗಮ, ನೀಲಾಂಜನ, ಬಾರೋ ವಸಂತ, ಅರುಣಗೀತೆ ಮೊದಲಾದವುಗಳು ಕ್ಯಾಸೆಟ್ ಮತ್ತು ಸಿಡಿ ರೂಪದಲ್ಲಿ ಜನಪ್ರಿಯವಾಗಿವೆ.

ಉತ್ತರ ಕರ್ನಾಟಕಕ್ಕೆ ಚಿರಪರಿಚಿತರಾಗಿದ್ದ ಸಂತ ಶಿಶುನಾಳ ಶರೀಫರ ಅನುಭಾವ ಗೀತೆಗಳನ್ನು **'ಶಿಶುನಾಳ ಶರೀಫ ಸಾಹೇಬರ ಗೀತೆಗಳು'** ಎಂಬ ಹೆಸರಿನಡಿ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದರು. ಅಷ್ಟೇ ಅಲ್ಲದೇ ಶರೀಫರ ಗೀತೆಗಳನ್ನು ಖ್ಯಾತನಾಮ ಗಾಯಕರ ಮೂಲಕ ಹಾಡಿಸಿ ಜನಮಾನಸದಲ್ಲಿ ಚಿರಾಯುಗೊಳಿಸಿದರು. ತಾವು ಹೋದಲ್ಲೆಲ್ಲ ಶರೀಫರ ಬಗ್ಗೆ ಮಾತಾಡಿ 'ಶರೀಫ್ ಭಟ್ಟ' ಎಂಬ ಬಿರುದನ್ನು ಗಳಿಸಿದ್ದು ಸಹ ಅವರ ವಿಶಿಷ್ಟ ಸಾಧನೆಯಾಗಿದೆ.

ಇವರ ಗಮನಾರ್ಹ ಸೇವೆಯನ್ನು ಕಂಡು **ಹಲವು ಪ್ರಶಸ್ತಿಗಳು** ಸಂದಿವೆ. ಇವರಿಗೆ 'ಬಾಲ ಸಾಹಿತ್ಯ ಪುರಸ್ಕಾರ', 'ಶಿವರಾಮ ಕಾರಂತ ಪ್ರಶಸ್ತಿ' 'ರಾಜ್ಯೋತ್ಸವ ಪ್ರಶಸ್ತಿ', 'ಮಾಸ್ತಿ ಪ್ರಶಸ್ತಿ', 'ವರ್ಧಮಾನ ಪ್ರಶಸ್ತಿ', 'ಅನಕೃ ಪ್ರಶಸ್ತಿ' ಮತ್ತು 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿವೆ.

**"ತಾಳಿದವರೇ ಗೆಲುವರು**
**ಆಳಗಳಿಗಿ ಇಳಿವರು**
**ನೋವು ಕಡೆದ ಮೆಟ್ಟಿಲೇರಿ**
**ಶಿಖರಗಳಲಿ ಹೊಳೆವರು"**

ಎಂದು ತಮ್ಮ ಕವಿತೆಯ ಮೂಲಕ ಸಾರಿದ ಸರಳ ಮತ್ತು ನಿರಾಳ ವ್ಯಕ್ತಿತ್ವದ ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ದಿನಾಂಕ 06–03–2021 ರಂದು ವಯೋಸಹಜ ಅನಾರೋಗ್ಯದಿಂದ ತಮ್ಮ 84ನೆಯ ವಯಸ್ಸಿನಲ್ಲಿ ನಮ್ಮೆಲ್ಲರನ್ನು ಭೌತಿಕವಾಗಿ ಅಗಲಿದ್ದಾರೆ. ಆದರೆ ತಮ್ಮ ಕನ್ನಡ ಸೇವೆಯ ಮೂಲಕ ಎಂದಿಗೂ ಕನ್ನಡಿಗರ ಮನೆಮನಗಳಲ್ಲಿ ಹೊಳೆಯುವ ಚಿರತಾರೆಯಾಗಿದ್ದಾರೆ.

## ಆಕರ ಗ್ರಂಥಗಳು


- ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರ ಸಾಹಿತ್ಯ ಕೃತಿಗಳು
- ಪ್ರಜಾವಾಣಿ. ವಿಜಯಕರ್ನಾಟಕ ಮತ್ತು ಉದಯ ವಾಣಿ ಪತ್ರಿಕೆಗಳ ವರದಿಗಳು
- ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ವಿಕೀಪಿಡಿಯ ಅಂತರಜಾಲದ ಮಾಹಿತಿ


■■
~~~~~~~~~~~~~~~~~~~~~~~~~~~~~~~~~~~~~~~~

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# “ಆಧುನಿಕ ಮಹಿಳಾ ಕಾವ್ಯದಲ್ಲಿ : ಸ್ತ್ರೀ ಸಂವೇದನೆಗಳ ನೆಲೆಗಳು”

✍ ಡಾ. ಅಣ್ಣಪ್ಪ ಬಿ. ರೊಟ್ಟಿಗವಾಡ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಕೆ. ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಲಕೋಟಿ.

## 1. ಪೀಠಿಕೆ

ಸಾಹಿತ್ಯವೆಂಬುದು ಅಭಿವ್ಯಕ್ತಿಯ ಒಂದು ಪ್ರಮುಖ ಸಾಧನ. ಅದು ಯಾವಾಗಲೂ ವ್ಯಕ್ತಿಗತವಾಗಿರುತ್ತದೆ. ಜೀವನವು ವ್ಯಕ್ತಿಯಿಂದ ಪ್ರಾರಂಭವಾದರೂ ಸಾಹಿತ್ಯ ಅವರನ್ನು ಮೀರಿದ ವೈಶಾಲ್ಯತೆಯನ್ನು ಹೊಂದಿರುತ್ತದೆ.ಜೀವನವನ್ನು ದರ್ಶಿಸುವ ಮಟ್ಟಿಗೆ ಅನುಭವವು ಸಾಹಿತಿಗೆ ಅವಶ್ಯಕ .ಆದರೆ ಬರೀ ಸ್ವಾನುಭವವೆ ಸಾಹಿತ್ಯದ ವಸ್ತುವಾಗುವುದಿಲ್ಲ. ಅದರೋಂದಿಗೆ ತಮ್ಮ ಸುತ್ತ ಮುತ್ತಲಿನ ಪರಿಸರ, ಉದ್ಯೋಗ,ಸಾಮಾಜಿಕತೆ ಎಲ್ಲವು ಸಾಹಿತ್ಯದ ಹುಟ್ಟಿಗೆ ಕಾರಣವಾಗುತ್ತವೆ. ಸಮಕಾಲೀನ ಸಾಮಾಜಿಕ ಮೌಲ್ಯಗಳು, ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು ಒಟ್ಟಾರೆ ಆ ಸಮಾಜದ ಸಾಂಸ್ಕೃತಿಕ ವ್ಯವಸ್ಥೆ ಸಾಹಿತ್ಯದ ರಚನೆ ಹಾಗೂ ಅಭಿವ್ಯಕ್ತಿಯನ್ನು ಪ್ರಭಾವಿಸುತ್ತದೆ.

ಕನ್ನಡ ಸಾಹಿತ್ಯವನ್ನೂ ಅವಲೋಕಿಸಿದಾಗ ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಮಹಿಳಾ ವಿಮೋಚನಾ ಚಳುವಳಿಯು ಒಂದು ಮಹತ್ವದ ಘಟ್ಟವಾಗಿದೆ. ಕಾರಣ ಈಗಾಗಲೇ ಸಾಹಿತ್ಯ ರಚನೆಯಲ್ಲಿ ತೊಡಗಿದ್ದ ಲೇಖಕಿಯರು ಸ್ತ್ರೀ ಸಂವೇದನೆಯ ನೆಲೆಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದರು. ತಮ್ಮ ಬರವಣಿಗೆ ಯುದ್ದಕ್ಕೂ ವರದಕ್ಷಿಣೆ, ಸಾವು, ಅತ್ಯಾಚಾರ, ಭ್ರೂಣಹತ್ಯೆ, ಸತಿಪದ್ಧತಿ, ಲೈಂಗಿಕ ಹಿಂಸೆ, ದುಡಿಯುವ ಹೆಣ್ಣಿನ ಸಮಸ್ಯೆಗಳು ಹಾಗೂ ಸಾಮಾಜಿಕ, ರಾಜಕೀಯ, ಆರ್ಥಿಕ ವಲಯಗಳಲ್ಲಿನ ಸಮಸ್ಯಗಳನ್ನು ಕೈಗೆತ್ತಿಕೊಂಡು ಕಾವ್ಯಗಳ ರಚನೆಯಲ್ಲಿ ತೊಡಗಿದ್ದೂಂಟು. ಈ ಎಲ್ಲ ಸಂವೇದನೆಯ ಮುಖಾಂತರ ಸಾಹಿತ್ಯ ಸೃಷಿಯಾಗತೊಡಗಿತು. ಅಲ್ಲದೆ ಸಂವೇದನಾತ್ಮಕ ನೆಲೆಗಟ್ಟಿನಲ್ಲಿ ಸಹೃದಯನಿಗೆ ತಿಳಿಸುವ ಪ್ರಯತ್ನ ನಡೆದಿರುವುದುಂಟ್ಟು.

ಆಧುನಿಕ ಶಿಕ್ಷಣ, ಉದ್ಯೋಗ, ಮೀಸಲಾತಿ ಮೊದಲಾದವುಗಳು ಹೇಗೆ ಸ್ಥಗಿತಗೊಂಡಿದ್ದ ಜಾತಿ, ವರ್ಗಗಳ ಸ್ಥಗಿತತೆಗೆ ಒಂದು ಚಾಲಕ ಶಕ್ತಿಯಾಗಿ ಒದಗಿ ಬಂದವೋ ಹಾಗೆ ಮಹಿಳೆಯರ ಪಾಲಿಗೂ ಒಂದು ಬಿಡುಗಡೆಯ ರಹದಾರಿಯಾಗಿ ತೆರಕೊಂಡವು. ಅದು ತನಕ ಪುರುಷ ನಿರ್ಮಿತ ಸೀಮಿತ ಪ್ರಪಂಚದಲ್ಲಷ್ಟೇ ಅರಳಬೇಕಾಗಿದ್ದ – ಬಾಳಬೇಕಾಗಿದ್ದ ಆಕೆ – ಈಗ ಹೊಸ ಅವಕಾಶಗಳ ಉಪಲಬ್ದತೆಯಿಂದ ತನ್ನ ವ್ಯಕ್ತಿತ್ವ ವಿಕಸನಕ್ಕೆ ಪಿತೃ ಪ್ರಧಾನ ಚೌಕಟ್ಟಿನಾಚೆಯೂ ತನ್ನ ಕೊರಳನ್ನ ಚಾಚಬಲ್ಲ ಶಕ್ತಿ ಪಡಕೊಂಡಳು. ಕಾಲದ ಹಾದಿಯಲ್ಲಿ ತನಗೆ ಆಗಿರುವ ಅನ್ಯಾಯವನ್ನು, ತಪ್ಪಿ ಹೋಗಿರುವ ಅನಂತ ಅವಕಾಶಗಳನ್ನ ಕುರಿತು ಚಾರಿತ್ರಿಕ ಮರು ಪರಿಶೀಲನೆಗೂ ಮುಂದಾದಳು. ಸಂಪ್ರದಾಯಗಳು, ಧರ್ಮ, ಜಾತಿಗಳು, ಕುಟುಂಬ, ಸಮಾಜ, ಅಲ್ಲದೆ ಗಂಡಸು–ಹೇಗೆ ತನ್ನ ವ್ಯಕ್ತಿತ್ವವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಒಂದು ‘ಪಡಿಯಚ್ಚಿನಂತೆ’ ನಿರ್ಮಿಸಿಕೊಂಡನೊ – ಆ ಪಡೆಯಚ್ಚಿನ ಬಾಳು ಹೇಗೆ ನಿರ್ಜೀವವೂ. ದುರ್ಬಲವೂ ಅಸಹಾಯಕವೂ ಆಗಿತ್ತು ಎಂಬ ಎಚ್ಚರ ಕೂಡ ಆಕೆಯುಲ್ಲಿ ಕಾಣಿಸಿಕೊಳ್ಳತೊಡಗಿತು.

ದೊರೆತ ಶಿಕ್ಷಣ, ಉದ್ಯೋಗದ ಅವಕಾಗಳಿಂದ, ಆರಂಭದಲ್ಲಿ ಲೇಖಕಿಯರು ಒಂದು ಬಗೆಯ ಹೊಂದಾಣಿಕೆಯ, ರಾಜಿಯ ಮಧ್ಯೆಯೂ ತಮ್ಮ ಭಿನ್ನ ದನಿಗಳನ್ನು ದಾಖಲು ಮಾಡಲು ಪ್ರಯತ್ನಿಸಿರುವುದನ್ನು ನಾವು ನೋಡಬಹುದು. ಸ್ವಾತಂತ್ರ್ಯ ಪೂರ್ವದ ಐವರು ಕನ್ನಡ ಲೇಖಕಿಯರಾದ, ನಂಜನಗೂಡು ತಿರುಮಲಾಂಬ, ಆರ್. ಕ್ಯಾಣಮ್ಮ, ಸರಸ್ವತಿಬಾಯಿ ರಾಜವಾಡೆ, ಕೊಡಗಿನ ಗೌರಮ್ಮ ಅವರುಗಳಲ್ಲಿ ಈ ಬಗೆಯ ದೃಷ್ಟಿಕೋನಗಳನ್ನ ಕಾಣಬಹುದು. ಅವರ ಸಾಹಿತ್ಯದ ಬಹುಪಾಲು ಕಥಾವಸ್ತು; ಬಾಲ್ಯವಿವಾಹ, ವಿಧವಾ ವಿವಾಹ, ಅಸಮ ವಿವಾಹದಿಂದ ಉದ್ಭವವಾಗುವ ವೈಪರೀತ್ಯ, ಬಿಕ್ಕಟ್ಟು, ಸ್ತ್ರೀ ಶಿಕ್ಷಣ –ಸ್ತ್ರೀಯರು ಉದ್ಯೋಗ ಮಾಡುವಾಗ ಎದುರಿಸಬೇಕಾದ ಸಮಸ್ಯೆಗಳು–ಮೊದಲಾದವುಗಳೇ ಪ್ರಧಾನವಾಗಿದ್ದವು. ಸಮಜದಲ್ಲಿ ಕಂಡುಬರುವ ಸಮಸ್ಯಗಳನ್ನು ಸಂವೇದನಾತ್ಮಕವಾಗಿ ಹೇಳಲು ಮುಂದಾದ ಲೇಖಕಿಯರು ತಮ್ಮೊಳಗಿನ ಅಳಲನ್ನು ಒಂದಾಗಿಟ್ಟುಕೊಂಡು ಸಂವೇದನೆಯ ನೆಲೆಗಳ ಮುಖಾಂತರ ಹೇಳಿದ್ದಾರೆ.

## 2. ಸ್ತ್ರೀ ಸಂವೇದನೆಗಳ ನೆಲೆಗಳು

ಮನುಷ್ಯ ಮನುಷ್ಯನ ನಡುವೆ ಇರಬೇಕಾದ ಸಮಾನತೆಯನ್ನು ಸಮರ್ಥಿಸಲು ಸಮಾನತೆಯನ್ನು ಸ್ಥಾಪಿಸಲು ಜಗತ್ತಿನಾದ್ಯಂತ ಎಷ್ಟೋ ಶತಮಾನಗಳಿಂದ ಅನೇಕ ಚಳವಳಿಗಳು ನಡೆದಿವೆ, ನಡೆಯುತ್ತಿವೆ. ಅಂಥ ಚಳವಳಿಗಳಲ್ಲಿ ಮಹಿಳಾ ಚಳವಳಿಯೂ ಒಂದು. ಅನೇಕ ಬಗೆಯ ಅಸಮಾನತೆಗಳು ನಮ್ಮನ್ನು ಸುತ್ತುವರಿದಿವೆ. ಅಂಥವುಗಳಲ್ಲಿ ಲಿಂಗಾಧಾರಿತ ಅಸಮಾನತೆಯೂ ಒಂದು. ಗಂಡಸಿಗಿಂತ ಹೆಂಗಸು ಕೀಳು, ಕಡಿಮೆ ಎಂಬ ಮನೋಭಾವ ನಮ್ಮ ದೈನಂದಿನ ಜೀನದ ಹಲವು ಸ್ತರಗಳಲ್ಲಿ ವ್ಯಕ್ತವಾಗುತ್ತಿದೆ. ಈ ದೃಷ್ಟಿಕೋನ ಇವತ್ತಿನದಲ್ಲ. ಅನೇಕ ಶತಮಾನಗಳಿಂದ ಬೇರೂರಿ ನಿಂತ ಈ ಮನೋಭಾವವನ್ನು ಬೇರು ಸಮೇತ ಕಿತ್ತೊಗೆಯುವುದೇ ಸ್ಥೂಲವಾಗಿ ಮಹಿಳಾ ವಿಮೋಚನಾ ಚಳುವಳಿಯ ಉದ್ದೇಶ. ಈ ಉದ್ದೇಶವನ್ನು ಅನೇಕ ದಿಕ್ಕುಗಳಿಂದ, ಅನೇಕ ರೀತಿಗಳಿಂದ ಸಾಧಿಸಬೇಕಾಗಿದೆ. ಈ ಹಿನ್ನಲೆಯಲ್ಲಿ ಸ್ತ್ರೀ ಸಂವೇದನೆಗಳು ಸಾಹಿತ್ಯದ ಮೂಲಕ ಹೊರಮೂಡ ತೊಡಗಿದವು. ಮುಖ್ಯವಾಗಿ ಆಧುನಿಕೋತ್ತರ ಮಹಿಳಾ ಸಾಹಿತ್ಯ ಸೃಷ್ಟೀಯಲ್ಲಿ ತಮ್ಮೊಳಗಿನ ಸಂವೇದನೆಯ ನೆಲೆಗಳು ಗರಿಬಿಚ್ಚಿ ಕುಣಿಯ ತೋಡಗಿದವು. ಅವುಗಳಲ್ಲಿ ಮುಖ್ಯವಾದವುಗಳು

**2.1. ಕೌಟುಂಬಿಕ ನೆಲೆ**

**2.2. ಶೋಷಣೆಯ ನೆಲೆ**

**2.3. ಸಾಂಸ್ಕೃತಿಕ ನೆಲೆ**

### 2.1. ಕೌಟುಂಬಿಕ ನೆಲೆ

ಪಿತೃಪ್ರಧಾನ ವ್ಯವಸ್ಥೆಯ ಸಕಲ ಲಕ್ಷಣಗಳನ್ನು ಪುರುಷ ಪ್ರಧಾನವಾದ ಎಲ್ಲಾ ಆಲೋಚನೆ ಮತ್ತು ಕಾರ್ಯ ನೀತಿಯ ಯಥಾವತ್ತಾದ ಜಾರಿ ವ್ಯವಸ್ಥೆಯನ್ನು ಹೊಂದಿರುವುದು ಕುಟುಂಬ. ಕುಟುಂಬದ ಸಂರಚನೆ ಯಲ್ಲಿಯೇ ಅದರ ಅಂಗ ರಚನೆಯಲ್ಲಿಯೇ – ಸ್ತ್ರೀಯರನ್ನು ಶೋಷಿಸುವ ಎಲ್ಲಾ ತಂತ್ರಗಳೂ ಬಹಳ ಸೂಕ್ಷ್ಮವಾಗಿ ಬೆರೆತು ಹೋಗಿದೆ ಎನ್ನುವ ಸ್ತ್ರೀವಾದ ಸ್ತ್ರೀಯರ ಬಿಡುಗಡೆಯಲ್ಲಿ ಕುಟುಂಬದ ಪಾತ್ರ ಬಹು ಗಣನೀಯವಾದದ್ದು ಎಂದು ಪರಿಭಾವಿಸುತ್ತದೆ. ಹೆಣ್ಣಿನ ಬಂಧನ ಮತ್ತು ಬಿಡುಗಡೆಯಲ್ಲಿ ಕುಟುಂಬದ ಪಾತ್ರ ಅದ್ವಿತೀಯವಾದದ್ದು. ಸ್ತ್ರೀ ತನ್ನ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವ್ಯಕ್ತಿತ್ವವನ್ನು ತಾನೆ ರೂಪಿಸಿಕೊಳ್ಳಬೇಕಾದಲ್ಲಿ ಕುಟುಂಬದ ಮೂಲ ರಚನೆಯಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಬೇಕಾದೆ. ಕುಟುಂಬದ ಪ್ರಧಾನ ಕೇಂದ್ರಿಕೃತ ವಸ್ತುವೇ ಮಹಿಳೆಯಾಗಬೇಕೆಂದು ಹಂಬಲಿಸಿದವರು ಸಾಕಷ್ಟು ಜನ. ಆದರೆ ಹೇಳಲು ಬಿಡಲೊಲ್ಲದ ಪುರುಷ ಪ್ರಧಾನ ಸಮಾಜದಲ್ಲಿ ಕಾವ್ಯದ ಮುಖಾಂತರ ತಮ್ಮ ಸಂವೇದನೆಯನ್ನು ಹೇಳತ್ತಿರುವುದ ಒಂದರ್ಥದಲ್ಲಿ ಒಳಿತೆ. ಸಂಸಾರದಲ್ಲಿ ತನ್ನ ವಿಮೋಚನೆ, ಸಹನೆ, ತ್ಯಾಗ, ಸ್ನೇಹಗಳಿಗೆ ಸವಾಲುಗಳಾಗಿ ಬರುವ ಸಂಧರ್ಬಗಳನ್ನು ನಿಭಾಯಿಸುವುದು ಹೇಗೆ, ಮನೆಯಿಂದಾಚೆ ಹೊಂಗಬಾರದು ಎಂದರೆ ಹೇಗೆ, ಎಂಬೆಲ್ಲಾ ಪ್ರಶ್ನೆಗಳಿಗೆ ಕಾವ್ಯ ಉತ್ತರಿಸಿತು. ಹೆಣ್ಣು ತನ್ನ ಶಕ್ತಿ –ಸಾಮರ್ಥ್ಯಗಳೆನ್ನಲ್ಲಾ ಅನ್ಯರ ಉದ್ದಾರ ಮತ್ತು ಸೇವೆಗೆ ಮೀಸಲಿಡುವ ವ್ಯವಸ್ಥೆ ಇರುವ ಕಾರಣಕ್ಕಾಗಿ ಹೆಣ್ಣಿನ ಬದುಕು ಒಂದು ವ್ಯರ್ಥ ಚಕ್ರ ಅನ್ನಿಸಲೂ ಬಹುದು. ಇಂಥ ವ್ಯರ್ಥವಾಗುವ ಬಾಳಿನ ಗೋಳು ಹೇಗಿರಬಲ್ಲದೆಂದರೆ –

**"ರಸ್ತೆಯಲ್ಲಿ ಬಿದ್ದರೂ ಯಾರು ಕದ್ದೊಯ್ಯದ**
**ಚಿನ್ನದ ಪದಕದಂತೆ ಹೊಳೆಯುವ ಚಂದ್ರ**
**ಹದಿನಾರರ ಹುಡುಗಿಯ ಕೆನ್ನೆಗೆಂಪಿನಂತೆ**
**ಆರಳಿದ ದಾಸವಾಳ**
**ನೂರು ಹಾಡಿನ ನೆನಪು ತರುವ ತಂಗಾಳಿ**
**ಗುರಿಯ ಆತಂಕವಿರದ ಮೋಡ**
**ಬೆಳಕಿನ ಗಗನ ವಿಸ್ತಾರವಿಡೀ**
**ತನ್ನದೆಂಬ ಗತ್ತಿನ ಹಕ್ಕಿ**
**ರಾಶಿ ರಾಶಿ ನಕ್ಷತ್ರ**
**ಇವೆಲ್ಲ ಮನೆಯ ಹೊರಗೆ"**[1]

ಇವುಗಳನ್ನು ನೋಡುವ ಆಸೆಯಿಂದ ಹೊರ ಬರಬೇಕಂದರೆ ಆಗದು 'ಹೊಸ್ತಿಲು' ಎಂಬ ಲಕ್ಷ್ಮಣ ರೇಖೆ ದಾಟಿ ಬರುವುದೆಂದರೆ ಸ್ತ್ರೀಗೆ ಏಳು ಕಡಲ, ಏಳು ಬೆಟ್ಟ, ಏಳು ಕೋಟೆಗಳ ದಾಟಿ ಬರುವುದಷ್ಟೇ ಕಷ್ಟದ್ದು. ಅದೇನು ಪರಿಮಳದ ಹಾದಿಯಲ್ಲ ಪರಿಶ್ರಮವನ್ನು ಬೇಡುವ ಹಾದಿ. ಹೆಣ್ಣನ್ನು ಪ್ರಕೃತಿ ಎಂದು ಕರೆದರೂ ನಿಜವಾದ ಕ್ಷಕೃತಿಯ ಉಲ್ಲಾಸ ಚೈತನ್ಯಗಳನ್ನು ಆಕೆಗೆ ನೋಡಲಾಗುತ್ತಿಲ್ಲವೆಂದು ಕವಿತೆಯ ಮುಖಾಂತರ ಕೆ. ಆರ್. ಸಂಧ್ಯಾರೆಡ್ಡಿಯವರು ತಮ್ಮಲ್ಲಿಯ ಕೌಟುಂಬಿಕ ಸಂವೇದನೆಯನ್ನು ಬಿಚ್ಚಿಡುತ್ತಾರೆ.

ಇಂದು ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತ ಹೆಣ್ಣ ಮಕ್ಕಳು ತಮ್ಮೆಲ್ಲಾ ಕನಸುಗಳನ್ನು ಹೊಸಕಿ ಹಾಕಿದ್ದಾರೆಂದು ಹೇಳಬೇಕಿಲ್ಲ. ಹಾಗಾಗಿ ವಿದ್ಯಾ ಕುಂದರಗಿಯುವರು ತಮ್ಮ ಕವಿತೆಯೊಂದರಲ್ಲಿ ಹೆಣ್ಣಿನೊಳಗಿನ ಸೃಜನಶೀಲತೆ ಹೇಗೆ ಬಂಧಿಯಾಗಿ ಬತ್ತಿ ಹೋಗುತ್ತಿದೆ ಎಂಬುದನ್ನು ಮಾರ್ಮಿಕವಾಗಿ ಸಮಾಜದ ಮುಂದಿಡುತ್ತಾರೆ.

**"ನಸುಕಿನ ಹಕ್ಕಿಯ ಚಿಲಿಪಿಲಿಯೊಡನೆ**
**ನನ್ನೊಳಗಿನ ಕವಿತೆ ಕಣ್ಬಿಡುತ್ತಾಳೆ**
**ಮುಸುರೆ ಶುಭ್ರಗೊಳಿಸಿ**
**ಚಹಾ ಕುದಿಸುವಾಗ**

**ಅವಳಿಗಿನ್ನೂ ಹೊಸ ಹುಮ್ಮಸ್ಸು**
**ಅನ್ನ ಕೊತ ಕೊತ ಕುದಿದರೂ**
**ಸಾರಿನೊಡನೆ ಗಮ ಗಮಿಸುತ್ತಾಳೆ**
**ರೊಟ್ಟಿಯ ಹೊಟ್ಟೆಯಂತೆ ಬುರಬುರನೆ ಉಬ್ಬುತ್ತಾಳೆ**
**ಬಸ್ ಕ್ಯೂನಲ್ಲಂತೂ ಕವಿತೆ ಕಳೆದು ಹೋಗುತ್ತಾಳ"**[2]

ಎಂದು ತನ್ನದಲ್ಲದರಲ್ಲಿ ಎಷ್ಟೊಂದು ಜೀವ ತೇಯಬೇಕೆಂದು ಹೇಳುವಾಗ ಕೌಟುಂಬಿಕ ಸಂವೇದನೆ ತಾನಾಗಿಯೇ ಹೊರಹೊಮ್ಮುತ್ತದೆ. ಅಲ್ಲದೆ ಕಳದು ಹೋಗುವ ಸಾಮಾಜಿಕ ವ್ಯವಸ್ಥೆಯನ್ನು ಈ ಕವಿತೆ ವಿಡಂಬಿಸುತ್ತದೆ.

ಅನಾದಿ ಕಾಲದಿಂದಲೂ ಹೆಣ್ಣಿನ್ನು ಕುಟುಂಬದ ಭಾಗವಾಗಿ ಕಾಣಲಾಗುತ್ತಿದೆ. ಅವಳು ಮನೆಯಲ್ಲಿ ಎಲ್ಲರಿಂದಲೂ, ಎಲ್ಲರಿಗೂ ಬೇಡವಾದವಳೆ. ಹಾಗಾಗಿ ತನ್ನಲ್ಲಿ ಬಚ್ಚಿಟ್ಟುಕೊಂಡ ದುಃಖವನ್ನೊಮ್ಮೆ ಹೊರಹಾಕಬೇಕಂದವಳು, ಅದೇ ಕಾವ್ಯವಾಗಿ ಮೂಡಿದೆ. ಅದು ತನ್ನೆಲ್ಲಾ ನೋವನ್ನು ಸಂವೇದನೆ ಗೊಳಸಿ ಸ್ಫೋಟಿಸಿದ್ದೂಂಟು. ಈ ಮೊದಲು ಹಿರಿಯ ಕವಿತ್ರಿಯರಾದ ಮಾಲತಿ ಪಟ್ಟಣಶೆಟ್ಟಿ, ಎಸ್. ಮಾಲತಿ, ಪ್ರತಿಭಾ ನಂದಕುಮಾರ, ಮಲ್ಲಿಕಾ ಘಂಟಿ. ಮುಂತಾದವರ ಬೆನ್ನಲ್ಲೆ ಕಿರಿಯ ಕವಿತ್ರಿಯರು ಬಂದು ಸೇರುತ್ತಾರೆ ಅಂತವರಲ್ಲಿ ಅನಸೂಯಾ ಕಾಂಬ್ಳೆಯವರು ಒಬ್ಬರು.

**"ಮೊಲೆ ಕುಡಿವ ಮಕ್ಕಳ ಅರೆಹೊಟ್ಟೆ ಮಲಗೀಸಿ**
**ಕೂಲಿ ಕುಂಬಳಿಗೋಗುವ ನನ್ನಕ್ಕ –ಅವ್ವರು**
**ಸೆರಗು ಜಾರಿಸಬೇಕಾಯ್ತು ಸಾವ್ಕಾರ ಹೊಲದಲ್ಲಿ**
**ಆಂಗೈಲಿ ಜೀವಿಡಿದು ಮುದುಡುತ ಮರುಳುವ ಚಿತ್ರ"**[3]

ಇಲ್ಲಿ ಕವಿಯತ್ರಿ ತಮ್ಮೊಳಗಿನ ನೋವನ್ನೆಲ್ಲ ಸ್ಫೋಟಿಸಿದ್ದಾರೆ. ಕುಟುಂಬದ ಬಾರ ಹೊರಬೇಕಾದ ಗಂಡಸು ಕೈಕಟ್ಟಿ ಕುಂತಾಗ ಹೆಣ್ಣಾದವಳು ಏನೆಲ್ಲಾ ನೋವನುಂಗಿದೂಂಟು. ಇಂದು ಅದಕ್ಕೆ ಸಂಪ್ರದಾಯದ, ಪರಂಪರೆಯ ಬಣ್ಣಬೇರೆ. ಕುಟುಂಬದ ಭಾರಕ್ಕೆ ತಾ ಹೋತ್ತ ಬಾರ ಮನಸ್ಸನ್ನೆ ಗಾಸಿಗೋಳಿಸಿದೇಂದು ಹೇಳುವಲ್ಲಿ ಸಹೃದಯನ ಮನ ಕರಗದಿರಲಾರದು. ಕುಟುಂಬ ಎಂದಾಕ್ಷಣ ಅಲ್ಲಿರುವ ತಾಯಿ, ತಂದೆ, ಬಂಧುತ್ವ, ಪರಿಸರ, ವ್ಯವಸ್ಥೆಯ ಬಗೆಗಿನ ವಿಷಾದ ತೀವ್ರವಾದ ಪ್ರತಿಭಟನೆ, ಮುಂತಾದವುಗಳೆಲ್ಲ ಬಂದುಹೋಗುವುದ ಸಹಜ. ಸುಜಾತಾ ಚಲವಾದಿಯವರು ಬರೆದ 'ಕೊರಗು'ಕವನ ಸಂಕಲನ ಇದಕ್ಕೆ ಸ್ಫೂರ್ತಿ ಎನಿಸುತ್ತದೆ. ಅವರ 'ರಾಜಕುಮಾರಿ' ಕವನದಲ್ಲಿ ಕೌಟುಂಬಿಕ ಸಂವೇದನೆಯನ್ನು ವ್ಯಕ್ತಪಡಿಸುತ್ತಾರೆ.

**"ಒಂಬತ್ತು ತಿಂಗಳು**
**ಕರಾಳ ಕತ್ತಲೆಯಲ್ಲಿ ನಾನು**
**ಬೆಳೆದು ಬಂದ 'ಸು'ಕನ್ಯ'**
**ಯವ್ವಾಯವ್ವಾ ಅನ್ನುವ ನನ್ನ ಧ್ವನಿಗೆ**
**ಕಾಗೆಗಳ ಬಳಗ ಬಳಿ ಸೇರಿ**
**ಯಾರೆಂದು ನೋಡುತಿಹರು**
**ಧ್ವನಿಯನು ದಾರಿಹೊಕರು ಕೇಳುತಿಹರು**
**ಪಾಪ ಕೂಸು ಎಂದು ಮರುಗುತಿಹರು**
**ಬಳಿಯಾರು ಬರದಿಹರು"**[4]

ಮೇಲಿನ ಸಾಲುಗಳಲ್ಲಿ ತಮ್ಮೊಡಲಿನ ಮಾತನ್ನು ಹಂಚಿಕೊಳ್ಳುಪ್ರಯತ್ನ ನಡೆದಿದೆ. ಇದನ್ನೆ ಶರೀಫಾಬಿ ಯವರು 'ಬೆಟ್ಟದ ಸಂಪಿಗೆ' ಕವನಸಂಕಲನದಲ್ಲಿ 'ತಂಗಿ ನೀನೆಷ್ಟು ಎಚ್ಚರ' ಪದ್ಯದಲ್ಲಿ ಇಂದಿನ ಪರಿಸ್ಥಿತಿಯನ್ನು ಸಹೋದರಿಯರಿಗೆ ಮರೆಮಾಚದೆ ಹೇಳುತ್ತಿದ್ದಾಳೆ.

**"ಹದ್ದುಗಳು ಹಾರಾಡುವವು**
**ತೋಳಗಳು ಓಡಾಡುವವು**
**ಸಿಂಹಗಳು ಘರ್ಜಿಸುವವು**
**ಹುಲಿ ಚಿರತೆಗಳು ಎರಗುವವು**
**ತಂಗಿ ನೀನೆಷ್ಟು ಎಚ್ಚರ?"**[5]

ಹೀಗೆ ಕುಟುಂಬ ತನ್ನ ಅಭಾದಿತ ಮುಂದುವರಿಕೆಗೆ ಹೆಣ್ಣನ್ನು ಪೂರ್ವನಿಶ್ಚಿತ ಚೌಕಟ್ಟುಗಳಿಗೆ ಹೊಂದಿಸುವ ಕೆಲಸವನ್ನು ಬಹುಚಿಕ್ಕ ವಯಸ್ಸಿನಿಂದಲೇ ಆರಂಭಿಸುತ್ತೆದೆ. ಇದನ್ನ ಅರಿತ ಲೇಖಕಿಯರು ತಮ್ಮ ಬರಹದ ಮುಖೇನ ಸಂವೇದನೆಯನ್ನು ಹೇಳತ್ತಿರುವುದು ಸಂತಷದ ಸಂಗತಿಯಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## 2.2. ಶೋಷಣೆಯ ನೆಲೆ

ಶೋಷಣೆಯೊಂಬುವುದು ಇಂದು ನಿನ್ನೆಯದಲ್ಲ. ಇದು ಮಾನವನ ಜನನದೊಂದಿಗೆ ಪ್ರಾರಂಭವಾಗಿರುವಂತಹದು. ಆದರೆ ರೂಪ ಮಾತ್ರ ಬೇರೆ ಬೇರೆಯಾಗಿದೆ. ಶೋಷಣೆಯಿಂದ ಮುಕ್ತವಾಗಬೇಕೆಂದರೆ ಶಿಕ್ಷಣ ಅವಶ್ಯಕವಾಗಿತ್ತು. ಮಹಿಳೆಯರು ಅಕ್ಷರ ಕಲಿಯಬೇಕು ಅವರೂ ಸಾಕ್ಷರಾಗಿರಬೇಕೆಂದು ದೊಡ್ಡ ಸಾಮಾಜಿಕ ಹಾಗೂ ಸುಧಾರಣಾವಾದಿ ಹೋರಾಟಗಳು ಈ ದೇಶದಲ್ಲಿ ನೆಡೆದವು. ಇಂಥ ಸಂಕೀರ್ಣ ಸಂದರ್ಭದಲ್ಲಿ ಮಹಿಳೆಯರು ಸಾಹಿತ್ಯ ಓದುವುದಿರಲಿ ಬರೆಯುವುದಂತೂ ದೂರದ ಮಾತಾಯಿತು. ಆದಾಗಿಯು ಈ ಅಧಿಕೃತ ಸಾಹಿತ್ಯ ಪರಂಪರೆಯಾಚೆ ಮಹಿಳೆಯರು ಜಾನಪದ ಸಾಹಿತ್ಯ, ಕಥೆ, ಒಗಟುಗಳು, ಮದುವೆ, ದಿಬ್ಬನ, ಶೀಮಂತ ಕಾರ್ಯ, ತೊಟ್ಟಿಲ ಪದಗಳು ಹೀಗೆ ಅವರೇದೆ ಆದ ಅಂತರ್ ಸೋತ್ರವಾದ ಮಾರ್ಗವನ್ನು ಕಂಡುಕೊಂಡು ತಮ್ಮ ಪ್ರತಿಭೆಯನ್ನು ಮೆರೆದರು.

ಆದರೆ ಶಿಷ್ಟ ಸಾಹಿತ್ಯವು ಇಂತಹ ಶ್ರೀಮಂತ ಸಾಹಿತ್ಯವನ್ನು ಸಾಹಿತ್ಯವೆಂದು ಮಾನ್ಯ ಮಾಡದೆ ಒಟ್ಟು ಸಾಹಿತ್ಯದ ಇತಿಹಾಸದಲ್ಲಿ ಅದಕ್ಕೆ ಸ್ಥಾನ ಕಲ್ಪಿಸುವಲ್ಲಿ ನಿರಾಸಕ್ತಿಯನ್ನು ತೋರಿತು. ಮಹಿಳೆಯರು ಸೃಷ್ಟಿಸಿರುವ ಈ ಜಾನ ಪದ ಸಾಹಿತ್ಯದಲ್ಲಿ ನಮ್ಮ ಗ್ರಾಮೀಣ ಹೆಣ್ಣು ಮಕ್ಕಳ ಪ್ರತಿಭಟನೆಯ ಧ್ವನಿಯನ್ನು, ಅವರ ನೋವುನಲಿವುಗಳನ್ನು ಹೆಕ್ಕಿ ತೆಗೆದು, ಶೋಷನೆಯನ್ನು ವ್ಯಕ್ತಪಡಿಸಿದರು. ಆದರೆ ಅದಕ್ಕೊಂದು ಮಾನ್ಯತೆ ದೊರೆಯಲಿಲ್ಲ. ಇದೆ ಸಂಧರ್ಬದಲ್ಲಿ ಬರೆಯುವ ಮಹಿಳೆ ಎದುರಿಸುವ ಸೃಜನಶೀಲತೆಯ ಬಿಕ್ಕಟ್ಟುಗಳನ್ನು ಆಕೆಯ ಅನುಭವ ಸೀಮಿತೆತೆಯನ್ನು ಕುರಿತು ಕೇಲ ಮೂಲ ಪ್ರಶ್ನೆಗಳು ಸಾಹಿತ್ಯ ವಿಮರ್ಶೆಯಲ್ಲಿ ಕಾಣಿಸಿಕೊಂಡವು. ಮಹಿಳೆಯರು ತಮ್ಮ ಬರಹಗಳಲ್ಲಿ ತಮ್ಮನ್ನು ಕಾಣಿಸಿಕೊಳ್ಳುವುದಕ್ಕಿಂತ ಅಡಕಿಸಿಕೊಳ್ಳುವುದರಲ್ಲಿಯೇ ಹೆಚ್ಚು ಕಷ್ಟ ಪಡಬೇಕಾಗಿತು. ಹೀಗೆ ಮಹಿಳಾ ಲೇಖಕರಿಯರು ಹಲವು ಪ್ರತಿರೋಧ, ಪ್ರತಿಕೂಲ ಪರಿಸ್ಥಿತಿ ನಡುವೆ ಶೋಷಣೆಯನ್ನು ಬರೆವಣಿಗೆಯ ಮೂಖಾಂತರ ಖಂಡಿಸಿದರು. ಹೆಣ್ಣೆಂದರೆ ನಾಲ್ಕು ಗೋಡೆಯ ಮಧ್ಯ ಇರಬೇಕಾದ ವಸ್ತು ಎಂದುಕೊಡವರಿಗೆ ಉತ್ತರ ಕೊಡವು ದೃಷ್ಟಿಯಿಂದ ಸಾಹಿತ್ಯ ಸೃಷ್ಠಿಯಾಯಿತು. ಹೆಣ್ಣಾಗಿ ಹುಟ್ಟುವುದು ಕೀಳು ಎಂಬ ಕಲ್ಪನೆ ಇರುವ ಸಮಾಜದಲ್ಲಿ ಅದನ್ನು ಪ್ರತಿಭಟಿಸಲು ಡಾ. ಮಲ್ಲಿಕಾ ಘಂಟಿಯವರು ಕಾವ್ಯಯೊಂದರಲ್ಲಿ ಹೀಗೆ ಹೇಳಿದ್ದಾರೆ.

**"ಹೆಣ್ಣಾಗಿ ಹುಟ್ಟಿದ್ದಕ್ಕೆ**
**ಹೆಮ್ಮೆ ಪಡು**
**ಅವರೀವರು ಮೂಗು ಮೂರಿದದ್ದನ್ನು**
**ಹುಬ್ಬು ಏರಿಸಿದ್ದನ್ನು**
**ಸುಣ್ಣದ ಬಟ್ಟೆಯಲ್ಲಿ**
**ನಿನ್ನ ಅದ್ದಿ ತೆಗೆದದ್ದನ್ನು**
**ಮೆರೆತು ಬಿಡು...."[6]**

ಎಂದು ಹೇಳುವಾಗ ಸಮಾಜದಲ್ಲಿ ಹೆಣ್ಣುಮಕ್ಕಳ ಬಗ್ಗೆ ಇರುವ ದೃಷ್ಠಿಕೋಣ ಎದ್ದು ಕಾಣುತ್ತದೆ. ಮೊದಲು ಸ್ತ್ರೀಗೆ ಕುಟುಂಬದಲ್ಲಿಯೇ ಶೋಷಣೆ ಆರಂಭವಾಗುತ್ತದೆ. ಮನೆಯವರಿಂದ ಆರಂಭಗೊಂಡ ಸಂವೇದನೆಯು ಸಮಾಜದುದ್ದಕ್ಕೂ ಬೆಳೆಯತೊಡಗಿತು. ಹೆಣ್ಣು ತನ್ನ ಶಕ್ತಿ ಸಾಮರ್ಥ್ಯಗಳನೆಲ್ಲ ಅನ್ಯ ಉದ್ಧಾರ ಮತ್ತು ಸೇವೆಗೆ ಮೀಸಲಿಡುವ ವ್ಯವಸ್ಥೆ ಇದ್ದರು ಶೋಷಣೆ ನಿಂತಿಲ್ಲ. ಒಂದೊಂದು ಸಾರಿ ಅವಳಿಗೆ ತನ್ನ ಬದುಕನ್ನು ಕುರಿತು ಒಂದು ವ್ಯರ್ಥ ಚಕ್ರ ಅನಿಸಲುಬಹುದು, ಇಂಥಹ ವ್ಯರ್ಥವಾಗುವ ಬಾಳಿನ ಗೋಳನ್ನು ಮೆಟ್ಟಿನಿಲ್ಲಬಲ್ಲಳು ಸ್ತ್ರೀ –

**"ಬಸುರಿ ಸೀತೆಯ ಅಗ್ನೀಯಂಥ ಅಡವಿಗೆ ಅಟ್ಟಿದ್ದು ಪ್ರಜೆಗಳಿಗಾಗಿ**
**ಗಂಡರೈವರು ಹೆಂಡತಿಯ ಪಣ್ಣಕ್ಕಿಟ್ಟಿದ್ದು ಧರ್ಮಕ್ಕಾಗಿ**
**ಹರೀಶ್ಚಂದ್ರ ಹೆಂಡತಿಯ ಮಾರಿದ್ದು ಸತ್ಯಕ್ಕಾಗಿ**
**ಬುದ್ಧ ಮಧ್ಯ ರಾತ್ರಿಯಲ್ಲಿ ಎದ್ದು ಹೆಂಡತಿಯ ಬಿಟ್ಟು ಹೋಗಿದ್ದು**
**ಜ್ಞಾನೋದಯಕ್ಕಾಗಿ**
**ದೇವಾನುದೇವತೆಗಳಿಂದ**
**ಹುರಿಗೊಂಡ ಸಂಕೋಲಯ ತುದಿ**
**ನಿಮ್ಮ ಕೈಯಲ್ಲಿರುವುದು ನಿಚ್ಚಳವಾಗಿ ಕಾಣುತ್ತಿದೆ"[7]**

ಎನ್ನುವ ಮಾತು ಕೇವಲ 'ಹೊಣೆಗಾರಿಕೆ' ಪದ್ಯದಲ್ಲಿನ ಮಾತುಗಳಲ್ಲ, ಶೋಷಣೆಗೆ ಒಳಗಾಗುತ್ತಿರುವ ಹೆಣ್ಣು ಮಗಳ ಆವೇಶದ್ದಾಗಿದೆ. ಚರಿತ್ರೆಯನ್ನು ಸ್ತ್ರೀ ಕಣ್ಣಿನಿಂದ ನೋಡುವ ಈ ಕವನ–ಪುರುಷರು ಮಹಿಳೆಯರನ್ನು ತಮ್ಮಗಳ ಕೀರ್ತಿ, ಕಾಮನೆ, ಧರ್ಮ, ಸ್ವಾರ್ಥಗಳಿಗಾಗಿ ಆಕೆಯನ್ನು ಜೀವ ರಹಿತ ಪ್ರಾಣಿಯನ್ನಾಗಿ ಬಳಸಿಕೊಂಡಿರುವರು ಎಂಬುವುದನ್ನು ತೆರೆದಿಡುತ್ತದೆ.

ಮನೆ, ಹೆಣ್ಣಿಗೆ ಹೇಗೆ ರಕ್ಷಣೆಯೋ, ಹಾಗೆಯೇ ಬಂಧನವೂ ಆಗಿಬಿಟ್ಟದೆ. ಈ ಬಂಧನದ ವಿವಿಧ ಶೋಷಣೆಯ ಮುಖಗಳನ್ನು ಮಹಿಳಾ ಸಾಹಿತ್ಯ ತೀವ್ರವಾಗಿ ಚಿಂತಿಸುತ್ತಲೇ ಬಂದಿದೆ. ಮನೆ ಎಂಬ ಪಂಜರ, ಗಂಡನೆಂಬ ಕಾವಲೂಗಾರ, ಅತ್ತೆ, ಮಾವ, ನಾದಿನಿಯೆರೆಂಬ ಗೂಡಾಚಾರರೂ ಹೊಸ್ತಿಲುದಾಟುವುದೇ ಮಹಾ ಅಪರಾದ ಇತ್ಯಾದಿ ನಂಬಿಕೆಗಳು ವಾಸ್ತವ ಸಂಗತಿಗಳು ಕಾವ್ಯವನ್ನು ರೂಪಿಸಿವೆ. ಶೋಷಣೆಯನ್ನು ಪ್ರತಿಭಟಿಸುವುದು ಅನಿವಾರ್ಯವಾದಾಗ ಸಂವೇದನೆಯು ಹೊರ ಹೊಮ್ಮಲಾರಂಬಿಸಿತು. ಡಾ ಅನೂಸೂಯಾ ಕಾಂಬಳೆಯವರು 'ಮತ್ಸ್ಯಗಂಧಿಯ ಹಾಡು' ಸಂಕಲನದಲ್ಲಿ ಹೆಣ್ಣು ಹಗಲಿರಳು ಶೋಷಣೆಗೊಳಗಾಗುವ ಪರಿಯನ್ನು ಹೇಳ ಹೊರಟ್ಟಿದ್ದಾರೆ.

**"ಹಗಲಿಂದ ಸಂಜೆಯವರೆಗೂ**
**ಹೊತ್ತಗರ್ಭವ ಉಳಿಸಲು**
**ಹೆತ್ತ ಹಸುಗೂಸನು ಅತ್ಯಾಚಾರದಿ ರಕ್ಷಿಸಲು**
**ಕುಡಿದು ತೂರಾಡುತ್ತ ಬರುವ**
**ಗಂಡನ ಹುಚ್ಚನು ಸಹಿಸಿ**
**ನೆಲ್ಲವಿಲ್ಲದೆ, ನೆಲೆ ಇಲ್ಲದೆ**
**ತುತ್ತು ಅನ್ನಕ್ಕೂ ಪರದಾಡುತ್ತ**
**ಬೆಳಕ ಬಯಸಿ ಬೆಳಕಾಗ ಹೊರಟ ನಾನು**

..................................................................

**ನನ್ನ ಧ್ವನಿಗೆ ನಿನ್ನ ಧ್ವನಿಯೂ ಸೇರಿ**
**ಧಿಕ್ಕಾರ ಧಿಕ್ಕಾರ, ಎಂದಿಂದಿಗೂ ಧಿಕ್ಕಾರ ಶೋಷಕಕರಿಗೆ ಹೇಳೋಣ ಗೆಳತಿ"[8]**

ಪ್ರತಿನಿತ್ಯ ಪ್ರತಿಗಳಿಗೆಯು ಮತ್ತೊಬ್ಬರ ಏಳ್ಗೆ ಬಯಸುವ ಹೆಣ್ಣು ಮಗಳ ಏಳ್ಗೆಯಾಗದೇ ಶೋಷಣೆಯಾಗುತ್ತಿದೆ. ಹಸಿವಿದ್ದರೂ ಹಸನ್ಮೂಖಿಯಾಗಿ ದಿನಕಳೆದವಳು ಹೆಣ್ಣು, ಅದರ ಫಲಮಾತ್ರ ಶೋಷಣೆಯಲ್ಲವೆ. ಹೆಣ್ಣೆಂದಾಕ್ಷಣ ಮನಕ್ಕೆ ಮೂಡುವ ಪ್ರಶ್ನೇಯೆ.. ಶೋಷಣೆ. ಅಂತಹದೊಂದು ಪ್ರಸಂಗವನ್ನು ಡಾ. ಸುಮಂಗಲಾ ಅತ್ತಿಗೇರಿಯವರ 'ಮುಸುಕಿನೊಳಗಿನ ಕನಸುಗಳು' ಸಂಕಲನದಲ್ಲಿ ಇಂದು ಸಮಾಜದೊಳಗೆ ಹೆಣ್ಣಿಗಿರುವ ಸ್ಥಾನ ಎಂತದ್ದು ಎಂಬುದನ್ನ ಹೇಳಿದ್ದಾರೆ.

**"ಒಂದರ ಮೇಲೆ ಒಂದು**
**ಅದರ ಮೇಲೆ ಮತ್ತೊಂದು ಹೆಣ್ಣಂತೆ**
**ಅದಕ್ಕೆ,**
**ಅವರ ಮನೆಯಲ್ಲೀಗ**
**ಬರೀ ಲೋಚ ಲೋಚ......................ಪಿಚ ಪಿಚ**
**ಮನ ಮನೆಗಳಲ್ಲೆಲ್ಲ ಮೌನ......................ಬರಿ ಮೌನ"[9]**

ಮಕ್ಕಳಿರಲವ್ವ ಮನೆತುಂಬ ಎಂದು ಹೇಳುವ ಜನ ಲಿಂಗ ಬೇದವನ್ನು ಮಾತ್ರ ಮರೆತಿಲ್ಲ, ಹೆಣ್ಣು ಮಗುವನ್ನು ಅನಿಷ್ಟವೆಂದು, ಶನಿಯೆಂದು, ಅದೊಂದು ಮಾಯಾಲಾರದ ಹುಣ್ಣು ಎಂದೆಲ್ಲಾ ಶೋಷಿಸುವ ಪ್ರವೃತ್ತಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬೆಳೆದು ಬಿಟ್ಟಿದೆ ಎಂಬುವುದನ್ನು ಕವಿತೆ ಹೇಳ ಹೊರಟಿದೆ. ಕುಟುಂಬ ಸಾರ್ವಭೌಮ ಸ್ಥಾನದಲ್ಲಿ ಹೆಣ್ಣು ಕೇಂದ್ರವೇ ಆದರೂ ಆಕೆಯ ಸ್ಥಾನ ಹೆರುವ, ಸಾಕುವ, ಪಾಲಿಸುವ ಕೆಲಸಗಳಿಗಷ್ಟೇ ಸೀಮಿತವಾಗಿಟ್ಟಿದ್ದು ಅಥವಾ ಮೀಸಲಾಗಿಟ್ಟಿದ್ದು ಒಂದರ್ಥದಲ್ಲಿ ಶೋಷಣೆಯಾಗಿದೆ.

ಈ ಸಾಮಾಜಿಕ ವ್ಯವಸ್ಥೆಯು ಹಿನ್ನಲೆಯುಲ್ಲಿ ಇಂದಿನ ಔದ್ಯೋಗೀಕರಣದ ಜಗತ್ತಿನಲ್ಲಿ ಹೆಣ್ಣು ಸ್ವತಂತ್ರಳಾಗಿ ಬದುಕುವ ಅವಶ್ಯಕತೆ ತೀವ್ರವಾಗಿ ಕಂಡು ಬರುತ್ತಿದೆ. ಆದರೂ ಕೂಡಾ ಪುರುಷ ಪ್ರಧಾನ ಸಂಸ್ಕೃತಿಯು ನಮ್ಮ ಹೆಣ್ಣು ಮಕ್ಕಳನ್ನು ಕ್ರೂರವಾಗಿ ಕಾಣುತ್ತಿದೆ. ದೇಶದ ಪಟ್ಟಣ, ಮೇಟ್ರೋಪೋಲಿಟಿಯನ್ ನಗರಗಳಲ್ಲಿ ಶೋಷಣೆಯುಕ್ತ ಹೆಣ್ಣು ಮಕ್ಕಳ ಸಂವೇದನೆಗಳು ಹಳ್ಳಿಗಾಡಿನಗಿಂತ ಹೆಚ್ಚು ಕಾಣುತ್ತವೆ. ಎಷ್ಟೇ ಎಚ್ಚರದ ಘಂಟೆ ಬಾರಿಸಿದರು ಶೋಷಣೆಗಳು ಸರಾಗವಾಗಿ ನೆಡೆಯುತ್ತಿವೆ. ಇವುಗಳನ್ನು ತಡೆಗಟ್ಟಲು ಹಿರಿಯ ಮತ್ತು ಕಿರಿಯ ಲೇಖಕಿಯರು ತಮ್ಮ ಹರಿತವಾತ ಲೇಖನಿಯಿಂದ ಆಧುನಿಕೋತ್ತರ ಕಾವ್ಯಗಳಲ್ಲಿ ಶೋಷಣೆಯ ಸಂವೇದನೆಗಳನ್ನು ಬರೆಯುತ್ತಾರೆ ಆದರೆ ಅವುಗಳು ತಳಮಟ್ಟದವರೆಗೂ ಮುಟ್ಟುವ ಅವಶ್ಯಕತೆಬೇಕಾಗಿದೆ. ಮುಟ್ಟಿದಾಗ ಮಾತ್ರ ಶೋಷಣೆಯ ನಿರ್ಮೂಲನೆ ಸಾಧ್ಯ.

## 2.3. ಸಾಂಸ್ಕೃತಿಕ ನೆಲೆ

ಆರಂಭದಲ್ಲಿ ಯಾವಾಗ ಸಮಾಜದಲ್ಲಿ ಮಾತೃ ಪ್ರಧಾನವಾದ ಸಂಸ್ಕೃತಿಯಿತ್ತೋ- ಆಗ ಹೆಣ್ಣು ಸಮಾಜದ ಕೇಂದ್ರವಾಗಿದ್ದಳು. ಆಗ ಆ ಸಮಾಜದ ಸಂಸ್ಕೃತಿ ಮಾತೃ ಸಂಸ್ಕೃತಿಯಾಗಿತ್ತು. ಇವೊತ್ತು ನಮ್ಮ ಸಂಸ್ಕೃತಿಯ ಆಚರಣೆಗಳನ್ನು ಕೂಲಂಕುಷ ವಿಶ್ಲೇಷಣೆಗೆ ಒಳಪಡಿಸಿದರೆ, ಈ ಸೂಕ್ಷ್ಮ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ ಇವತ್ತಿಗೂ ನಮ್ಮ ಆದಿವಾಸಿ ಮತ್ತು ಬುಡಕಟ್ಟು ಜನಾಂಗದಲ್ಲಿ ಹೆಣ್ಣೇ ಕೇಂದ್ರ ಬಿಂದುವಾಗಿದ್ದಾಳೆ. ಆದರೆ ಯಾವಾಗ ಮಾತೃ ಪ್ರಧಾನ ಸಂಸ್ಕೃತಿ ನಶಿಸಿ, ಪುರುಷ ಪ್ರಧಾನ ಸಂಸ್ಕೃತಿ ಹಾಗೂ ಕುಟುಂಬಗಳು ಅಸ್ತಿತ್ವಕ್ಕೆ ಬಂದವೋ ಆಗ ಹೆಣ್ಣು ಹಿಂದಕ್ಕೆ ತಳ್ಳಲ್ಪಟ್ಟು ಆಕೆಯ ಅವನತಿಯ ಆರಂಭ ಶುರುವಾಯಿತು. ಪ್ರಧಾನ ಸಂಸ್ಕೃತಿಯಾಗಬೇಕಿದ್ದ ಹೆಣ್ಣಿನ ಸಂಸ್ಕೃತಿ ಕಿರು ಸಂಸ್ಕೃತಿ ಹಾಗೂ ಉಪ ಸಂಸ್ಕೃತಿಯಾಗಿದ್ದು ಆಕೆಯು ತನಗೆ ಗೊತ್ತಿಲ್ಲದೆಯೇ ತಾನು ಶೋಷಣೆಗೆ ಪಕ್ಕಾಗಿರುವ ಪುರುಷ ಸಂಸ್ತ್ರತಿಯನ್ನ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹೊತ್ತೋಯ್ಯುವ ವಾಹಕವು ಆಗಿದ್ದಾಳೆ ಸಂಸ್ಕೃತಿಯೆಂದರೆ ವಿಶಾಲಾರ್ಥದಲ್ಲಿ-ಉಣ್ಣುವ, ಉಡುವ, ಜನನ, ಮರಣ, ಮದುವೆ, ಮುಂಜಿ, ಸಂಸ್ಕಾರ, ಹಬ್ಬ-ಹುಣ್ಣಿವೆ, ಜಾತ್ರೆ- ಮುಂತಾದ ಸಂಸ್ಕಾರಗಳೆಲ್ಲಾ ಸೇರುತ್ತವೆ. ಈ ಎಲ್ಲಾ ಆಚಾರ-ವಿಚಾರಗಳಲ್ಲಿ ಹೆಣ್ಣಿಗೆ ಎರಡನೇಯ ಸ್ಥಾನವನ್ನು ಮೀಸಲಾಗಿರಿಸಿದೆ.

ಹೆಣ್ಣುಮಗಳು ಅಡುಗೆ ಮಾಡಿದರೂ ಗಂಡಸರೆಲ್ಲಾ ಊಟ ಮಾಡಿದ ಮೇಲೆ ಊಟ ಮಾಡಬೇಕೆಂಬ ನಿಯಮ, ಹೆಣ್ಣು ಕೂಸು ಹುಟ್ಟಿದಾಗ ನಮ್ಮಲ್ಲಿ ಆಚರಿಸುವ ವಿಧಿವಿಧಾನಗಳು, ಗಂಡಸತ್ತಾಗ, ಹೆಣ್ಣಿಗೆ ಉಂಟು ಮಾಡುವ ಅಮಂಗಲ ಕ್ರಿಯೆಗಳು ಹಬ್ಬ-ಹುಣ್ಣಿಮೆಗಳಲ್ಲಿ ಆಕೆಗೆ ಇರುವ ನಿಷೇಧ, ಈ ಎಲ್ಲವೂ ಆಕೆಯನ್ನ ನಮ್ಮ ಸಂಸ್ಕೃತಿಯಿಂದ ಕೀಳಾಗಿ ನಡೆಸಿಕೊಳ್ಳುವ ರೀತಿಯದ್ದಾಗಿದೆ. ಇಂಥ ಸಂಸ್ಕೃತಿ ಹಾಗೂ ಸನಡತೆಯನ್ನು ಬಿಂಬಿಸುವ ಸಾಲುಗಳು ಡಾ. ಮಲ್ಲಿಕಾ ಘಂಟಿಯವರ ಹೆಣ್ಣು ಕವನ ಸಂಕಲನದಲ್ಲಿವೆ.

**"ಹೆಣ್ಣು ಚಪ್ಪಲಿ**
**ಎಂದರು**
**ಬೇಕೆಂದಾಗ**
**ತಲೆಯ ಮೇಲಿಟ್ಟುಕೊಂಡು**
**ಮೆರವಣಿಗೆ ಗೈದರು**
**ಬೇಡವೆಂದಾಗ**
**ಬಾಗಿಲ ಹೊರಗಿಟ್ಟು**
**ಅನಿಷ್ಟವೆಂದು**
**ಅಸಹ್ಯ ಪಟ್ಟರು"**[10]

ಹೆಣ್ಣನ್ನು 'ದೇವಿ' ಎಂದು ರಾಕ್ಷಸಿ, ಎಂದ ಪುರುಷರ ಇಬ್ಬಗೆಯ ನೀತಿಯನ್ನು ಪದ್ಯ ಕಟುವಾಗಿ ವಿಮರ್ಶಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಇರುವ ಸ್ಥಾನವನ್ನು ಸಂಸ್ಕೃತಿಯುದ್ದಕ್ಕೂ ಹೇಳುತ್ತದೆ. ಇಂಥದ್ದೆ ಆಶಯಗಳನ್ನು ಕವಯತ್ರಿಯರು ಬೇರೆ ಬೇರೆ ರೂಪಕ, ಪ್ರತಿಮೆ, ಸಂಕೇತ, ಶಿಲ್ಪ ಚಿತ್ರಗಳ ಮೂಲಕ ಸಾಕಷ್ಟು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಹೇಮಾ ಪಟ್ಟಣಶೆಟ್ಟಿ ತಮ್ಮ 'ಹೂ ಮಗಳಿಗೊಂದು ಹಾರೈಕೆ' ಕವನದಲ್ಲಿ ಸಂವೇದನೆಯ ಮನಸ್ಸಿನ ಚಿತ್ರಿವನ್ನು ಕಟ್ಟಿಕೊಟ್ಟಿದ್ದಾರೆ.

**"ಹೆಣ್ಣಿನ ಸ್ವಾತಂತ್ರ್ಯ ನಿಷದ್ದ**
**ನಮ್ಮ ನಾಡಿನ ನೆಲಗುಣ ಜಲಗುಣ**
**ಮಾಡೀ ಕಾಪಾಡಿದೀ ಭಾರತೀ ಪುತ್ರರು**
**ಇಂದು ಸಾವಿರದ ಜಾತಿ-ಭಾಷೆಗಳಲ್ಲಿ**
**ಹರಿದು ಹಂಚಿದ್ದಾರೆ ದೇಶವನ್ನು**
**ಸಂಸ್ಕೃತಿಯ ಕೋಶವನ್ನು, ಹೆತ್ತ ತಾಯಿಯನ್ನು"**[11]

ಎಚೆತ್ತ ತಾಯಿ-ತನ್ನ ಮಗಳಿಗೆ ಈ ನೆಲದ ಸಂಸ್ಕೃತಿಯ ಪರಿಕಲ್ಪನೆಗಳನ್ನು ಕಾವ್ಯದ ಮೂಲಕ ಹೇಳಿಕೊಡುವ ವಿಭಿನ್ನ ಧ್ವನಿ ಅಡಗಿದೆ.

ಇಪ್ಪತ್ತೊಂದನೆಯ ಶತಮಾನದಲ್ಲಿ ನಮ್ಮ ದೇಶದ ತುಂಬಾ ಬದಲಾವಣೆಗಳಾಗಿ, ಸ್ವರ್ಗಸುಖದ ಅನುಭವ ನೀಡುವುದಷ್ಟೇ ಬಾಕಿ ಎಂದು ವಿಜೃಂಭಿಸಿದ ಜಾಗತೀಕರಣ ಸನ್ನಿವೇಶದಲ್ಲೂ, ಹಿಂದಿನ ಸಂಕಟಗಳು ದೂರವಾಗುವುದಿರಲಿ ಕಡಿಮೆಯಾಗಿಲ್ಲ ಎಂಬ ಕಟುವಾಸ್ತವದ ವೇದನೆಯಿಂದ ನಮ್ಮ ಸಂಸ್ಕೃತಿಯು ಅದೋಗತಿಗೆ ಹೋಗುತ್ತಿದೆ ಎಂಬುದನ್ನು ಡಾ. ಅನಸೂಯ ಕಾಂಬಳೆಯವರು 'ಸವಾಲು' ಪದ್ಯದಲ್ಲಿ ಗುರುತಿಸಿದ್ದಾರೆ.

**"ಹಸ್ತ ರೇಖೆಯ ತುಂಬ**
**ಮಣ್ಣು ಸೆಗಣಿಯು ತುಂಬಿ**
**ಶಂಖ ಚಕ್ರ ರತ್ನಗಳಿರದ ಬೆರಳು**
**ಸೆಗಣಿ ಬಳಿವ ಕೈ ಕಸವೆತ್ತುವ ಕೈಯುವಳು**
**ಇವಳು**
**ಜೋತಿಷ್ಯಕ್ಕೆ ಸವಾಲು"**[12]

ಮನೆಯಂದಾಕ್ಷಣ ಮಹಿಳೆ ನೆನಪಾಗುತ್ತಾಳೆ, ಮನೆಯ ಸಂಪೂರ್ಣ ಕೆಲಸ ಕಾರ್ಯಗಳಲ್ಲಿ ಅವಳ ಹಸ್ತಕ್ಷೇಪ ಇರುತ್ತದೆ ಮನೆಯಲ್ಲಿ ಆಳಾಗಿ ದುಡಿದು ದುಡಿದು ದೇಹ ಬಾಗಿ ಬೆಂಡಾಗಿದರಿಂದ ಅವಳು ಜೋತಿಷ್ಯಕೆ ಸವಾಲಾಗಬಲ್ಲಳು. ಕೈನೋಡಿ ಜಾತಕ ಹೇಳಬೇಕೆಂದಿರುವ ನಮಗೆ ಅವಳ ಕೈ ರೇಖೆಗಳು ಮಾಸಿಹೋಗಿರುವುದನ್ನು ಕವಿತೆ ಹೇಳುತ್ತದೆ. ಕೇವಲ ರೇಖೆಗಳು ಮಾಸಿಲ್ಲ ಮನಸ್ಸು ಮಾಸಿ ಹೇಸಿಗೆ ತಂದುಕೊಂಡಿದೆ ಹೆಣ್ಣು ಜನ್ಮಪಡೆದದ್ದಕ್ಕೆ ಎನ್ನುತ್ತಾರೆ ಲೇಖಕಿಯರು. ಇಂದು ನಮ್ಮ ಸಾಂಸ್ಕೃತಿಕ ಮೌಲ್ಯಗಳತ್ತ, ಮಕ್ಕಳಲ್ಲಿ ನಾವು ಬೇರೂರಿಸಬೇಕಾದ ಹೊಸ ಮೌಲ್ಯಗಳತ್ತಲೂ ಗಮನ ಹರಿಯಬೇಕಾಗುತ್ತದೆಂಬುದು ಮಹಿಳಾ ಸಂವೇದನೆಯ ಆಶೆಯವಾಗಿದೆ.

ಆಧುನಿಕೋತ್ತರ ಕನ್ನಡ ಕಾವ್ಯದಲ್ಲಿ ಮತ್ತೆ ಮತ್ತೆ ನೆನಪಾಗುವ ಸಂವೇದನೆ ಎಂದರೇ ಸಾಂಸ್ಕೃತಿಕತೆ. ಇದನ್ನೆ ಕೆಲ ಲೇಖಕಿಯರು ತಮ್ಮ ಕಾವ್ಯದ ವಸ್ತುವಿಗೆ ಆಯ್ದುಕೊಂಡುರು. ಚರಿತ್ರೆಯ ಮತ್ತು ಪರಂಪರೆಯ ಪುನರ್ ಶೋಧ ಹಾಗು ಪುನರ್ ನಿರ್ಮಾಣ ನಡೆಯುತ್ತದೆ. ಅದು

ಸಾಂಸ್ಕೃತಿಕ ನೆಲೆಯಲ್ಲಿ ಆಧುನಿಕರಣಗೊಳ್ಳುತ್ತಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಇಂಥಹ ವಿಚಾರವನ್ನು ಹೊಸ ತಲೆಮಾರಿನ ಕವಿಯತ್ರಿಯರಾದ ಸುಜಾತಾ ಚಲವಾದಿಯವರು 'ಕೊರಗು' ಕವನಸಂಕಲನಲ್ಲಿ ವ್ಯಕ್ತಪಡಿಸಿದ್ದುಂಟು.

**"ಹಬ್ಬ ಹರಿದಿನಗಳಲ್ಲಿ ಸಂಸ್ಕೃತಿಯ ವಿಕೃತಿಗಳು ಎಲ್ಲೆಲ್ಲ**
**ಮಾಧ್ಯಮಗಳ ವ್ಯಭಿಚಾರ ಪತ್ರಿಕೆಗಳ ದುರಹಂಕಾರದಲ್ಲಿ**
**ಕಳೆದು ಹೋದ ಅವಶೇಷಗಳ ಪಲಾಯನವಾದದಲ್ಲಿ**
**ಅನಂತ, ಶಾಶ್ವತ, ಚಿರಕಾಲದ ಸಂಸ್ಕೃತಿ**
**ಮಾರಣಾಂತಿಕ ವಿದೇಶಿ ವಿಕೃತಿ"**[13]

ಹೆಣ್ಣು ಮಕ್ಕಳು ಆಯಾಕಾಲದ ಪುರುಷರಿಂದ ತೀವ್ರವಾದ ಶೋಷಣೆಗೆಳಿಗೆ ಒಳಪಟ್ಟಿದ್ದರೂ, ಅವರುಗಳನ್ನೆ ವೈಧವೀಕರಿಸಿ, ಅತಿರಯಕತೆಗೊಳಿಸಿ, ನಮ್ಮ ಸಂಸ್ಕೃತಿಯ ಪ್ರಾತಿನಿಧಿಕತೆಯನ್ನು ಬಿಂಬಿಸುವುದು ಕಂಡುಬರುತ್ತದೆ.

## 4. ಸಮಾರೋಪ

ಒಟ್ಟಿನಲ್ಲಿ ಆಧುನಿಕೋತ್ತರ ಕನ್ನಡ ಕಾವ್ಯ ರಚನೆಯಲ್ಲಿ ಹೊಸ ಗಾಳಿ ಬೀಸತೊಡಗಿದೆ. ದಲಿತ– ಬಂಡಾಯ ಸಾಹಿತ್ಯ ಹೇಗೆ ಸಂಘಟನೆಗೆ ಮುಂದಾಯಿತೊ ಆದರ ಬೆನ್ನಲ್ಲಿ ಹುಟ್ಟಿಕೊಂಡ ಲೇಖಕಿಯರ ಹೋರಾಟ ಹೊಸ ಬಗೆಯ ಆಸ್ತಿತ್ವ ಕಂಡುಕೊಳ್ಳುತ್ತಿದೆ. ಅಲ್ಲದೆ ತಮ್ಮದೆ ಆದ ಸ್ವತಂತ್ರ ಆಸ್ಮಿತೆಗೆ ಆಸ್ತಿಭಾರ ಹಾಕುವ ಪ್ರಯತ್ನದಲ್ಲಿದ್ದಾರೆ. ಹಾಗೆಯೇ ಮಹಿಳಾ ಕಾವ್ಯ ಸಾಹಿತ್ಯದಲ್ಲಿಯು ಮಾರ್ಕ್ಸವಾದಿ, ಲೋಹಿಯಾವಾದಿ ಸುಧಾರಣಾವಾದಿ ಲೇಖಕಿಯರೂ ಇದ್ದು ಭಿನ್ನಮತಗಳ ನಡುವೆ ಏಕ ಆಶಯದ ತುಡಿತವಿದೆ. ಹಾಗೆಯೇ ಹೊಸಬಗೆಯ ನಲಿವು ಎದ್ದುಕಾಣುತ್ತದೆ. ಹಿಂದಿನದನ್ನೆಲ್ಲ ಮೆಟ್ಟಿನಿಂತು ನವೀನತೆಯನ್ನು ಬಯಸುತ್ತಿದೆ ಕಾವ್ಯ .ಇದಕ್ಕೆ ಸಾಕ್ಷೀಯಂಬಂತೆ ಶೈಲಜಾ ಉಡಚಣ ಅವರ ಸಂವೇದನೆಯ ನೆಲೆ ಮಹಿಳಾ ಸಂವೇದನೆಯ ನೆಲೆಯಾಗಿದೆ.

**"ಅಂದು ಇತ್ತು ಹಲವರ ತುತ್ತುಂಡು ತೃಪ್ತಿಗೊಳ್ಳುಮನಸ್ಸು**
**ಇಂದು ಬೆಳೆದು ನನಗೆ ನಾನೆ ನಿರ್ಮಿಸಬೇಕು**
**ನನ್ನ ಲೋಕದ ಕನಸು"**

ಆಧುನೀಕೋತ್ತರ ಕನ್ನಡ ಕಾವ್ಯ ಸಾಹಿತ್ಯದಲ್ಲಿ ಮಹಿಳೆಯರು ತಮ್ಮದೇ ಆದ ಧನಿಯನ್ನು ರೂಪಿಸಿಕೊಳ್ಳುವ ಆರಂಭದ ಕುರುಹುಗಳು ಚುಟುಕಿನಲ್ಲಿ ಕಾಣಿಸುತ್ತಿವೆ. ಮಹಿಳಾ ಕಾವ್ಯದ ಆಶಯ ಅಭಿವ್ಯಕ್ತಿ ದಾಟಿ ಧೋರಣೆಗಳನ್ನ ವಿಸ್ತೃತ ತಳಹದಿಯ ಮೇಲೆ ಸಂವೇದನಾತ್ಮಕ ನೆಲೆಯ ಆಶಯ ಕಂಡಬರುತ್ತದೆ.


## ಅಡಿಟಿಪ್ಪಣಿ

1. ಕವಿತೆ–1994. ಸಂ.ಮೃತ್ಯುಂಜಯ ಹೊಸಕೇರಿ ಸಾಹಿತ್ಯ ಆಕಾಡೆಮಿ – 96 ಬೆಂಗಳೂರು ಪು.ಸಂ. 143.
2. ಅದೇ ಪು.ಸಂ. 205
3. 'ಮುಳ್ಳ ಕಂಟಿಯ ನಡುವೆ' ಅನಸೂಯ ಕಾಂಬಳೆ ಹೊಸದಿಕ್ಕು ಪ್ರಕಾಶನ 1999, ಪು.ಸಂ. 09
4. 'ಕೊರಗು' ಸಜಾತಾ ಲವಾದಿ ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ 2011 ಪು.ಸಂ. 05
5. 'ಬೆಟ್ಟದ ಸಂಪಿಗೆ' ಶರೀಫಾಬಿ ಮಲ್ಲಿಕಾ ಪ್ರಕಾಶನ ಚಿತ್ರದುರ್ಗ 2009, ಪು.ಸಂ.09
6. ಕವಿತೆ 1994 ಡಾ. ಮಲ್ಲಿಕಾ ಘಂಟಿ. ಸಂ.ಮೃತ್ಯುಂಜಯ ಹುರಕೇರಿ ಕ. ಸಾ. ಅಕಾಡೆಮಿ–1996
7. 'ಹೊಣೆಗಾರಿಕೆ 'ಡಾ. ಮಲ್ಲಿಕಾ ಘಂಟಿ ಗೌತಮ ಪ್ರಕಾಶನ ಬಳ್ಳಾರಿ – 2000
8. 'ಮತ್ತಗಂಧಿಯ ಹಾಡು' ಡಾ. ಅನಸೂಯ ಕಾಂಬಳೆ ಕೆಂಗುಲಾಬಿ ಪ್ರಕಾಶನ 2011 ಪು.ಸಂ.51
9. 'ಮುಸುಕಿನೊಳಗಿನ ಕನಸುಗಳು' ಡಾ. ಸುಮಂಗಲಾ ಅತ್ತಿಗೇರಿ ಜಿ.ಕ.ಸಾ.ಪರಿಷತ್ತು 2011
10. 'ಹೆಣ್ಣು' ಡಾ. ಮಲ್ಲಿಕಾ ಘಂಟಿ ಗೌತಮ ಪ್ರಕಾಶನ ಬಳ್ಳಾರಿ–2000
11. 'ಕಣ್ಣುಗಳು ಕನಸು ತುಂಬಿ' ಹೇಮಾ ಪಟ್ಟಣಶೆಟ್ಟಿ ಅನನ್ಯ ಪ್ರಕಾಶನ 1993 ಪು.ಸಂ.31
12. 'ಮತ್ತಗಂಧಿಯ ಹಾಡು' ಡಾ. ಅನಸೂಯ ಕಾಂಬಳೆ ಕೆಂಗುಲಾಬಿ ಪ್ರಕಾಶನ 2011 ಪು ಸಂ.62
13. 'ಕೊರಗು' ಸುಜಾತಾ ಚಲವಾದಿ ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ 2011 ಪು ಸಂ . 29

## ಆಕರ ಗ್ರಂಥಗಳು


- **ಮುಳ್ಳ ಕಂಟಿಯ ನಡುವೆ** (1999) : ಅನಸೂಯ ಕಾಂಬಳೆ ಹೊಸದಿಕ್ಕು ಪ್ರಕಾಶನ.
- **ಕೊರಗು** (2011) : ಸುಜಾತಾ ಚಲವಾದಿ ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ
- **ಬೆಟ್ಟದ ಸಂಪಿಗೆ** (2009) : ಶರೀಫಾ ಬಿ. ಚಿತ್ರದುರ್ಗ ಮಲ್ಲಿಕಾ ಪ್ರಕಾಶನ.
- **ಕವಿತೆ** (1996) : ಡಾ.ಮಲ್ಲಿಕಾ ಘಂಟಿ. ಸಂ. ಮೃತ್ಯುಂಜಯ ಹುರಕೇರಿ ಕ. ಸಾ. ಅಕಾಡೆಮಿ.
- **ಹೊಣೆಗಾರಿಕೆ** (2000) : ಡಾ. ಮಲ್ಲಿಕಾ ಘಂಟಿ, ಬಳ್ಳಾರಿ ಗೌತಮ ಪ್ರಕಾಶನ.
- **ಮತ್ತಗಂಧಿಯ ಹಾಡು** (2011): ಡಾ. ಅನಸೂಯ ಕಾಂಬಳೆ ಕೆಂಗುಲಾಬಿ ಪ್ರಕಾಶನ
- **ಮುಸುಕಿನೊಳಗಿನ ಕನಸುಗಳು**(2011) : ಡಾ ಸುಮಂಗಲಾ ಅತ್ತಿಗೇರಿ ಜಿ.ಕ.ಸಾ. ಪರಿಷತ್ತು.
- **ಕಣ್ಣುಗಳು ಕನಸು ತುಂಬಿ** (1993): ಹೇಮಾ ಪಟ್ಟಣಶೆಟ್ಟಿ ಅನನ್ಯ ಪ್ರಕಾಶನ.






ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ,
ಗದಗ-582 101
ದೂರವಾಣಿ : 08372–237527, 277527
e-mail : vidyanidhiprakashana@gmail.com. www. vidyanidhionline.com

ISSN : 2249-2429 ಸಂಶೋಧನೆ RNI REG.NO.KARKAN/2011/38712

# "ಶಿಕ್ಷಣದಲ್ಲಿ ಭಾಷೆ –ಬೋಧನೆ ಮತ್ತು ಭಾಷೆ ಕಲಿಸುವಿಕೆಯಲ್ಲಿ ಶಿಕ್ಷಕನ ಪಾತ್ರ"

✍ **ನಾಗೇಶ್ವರಿ ಪಿ.ಎನ್.** ಸಹಾಯಕ ಪ್ರಾಧ್ಯಾಪಕರು, ಸಂತ. ಜೋಸೆಫರ ಶಿಕ್ಷಣ ಮಹಾವಿದ್ಯಾಲಯ, ಜಯಲಕ್ಷ್ಮಿಪುರಂ, ಮೈಸೂರು.

**ತಿರುಳು**

*ಮಗುವಿನ ಒಳಗೆ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಹೊರ ಎಳೆಯುವುದೇ ಶಿಕ್ಷಣ.ಭಾವನೆಗಳ, ವಿಚಾರಗಳ, ಅಭಿಪ್ರಾಯ, ಆಲೋಚನೆಗಳ ಮೂಲವೇ ಭಾಷೆ. ಮಗು ಶಿಕ್ಷಣದಲ್ಲಿ ನಿಷ್ಕ್ರೀಯ ಕೇಳುಗನಾಗದೆ, ಬೋಧನೆ ಕಲಿಕೆಯು ಸುಗಮವಾಗಿ ನೆರವೇರುವಲ್ಲಿ ಶಿಕ್ಷಣದಲ್ಲಿ ಮಾಧ್ಯಮವಾಗುವ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ.'ಮಗು ಅರಿವಿನ ಗ್ರಾಹಕರಾಗದೆ ಅರಿವಿನ ಉತ್ಪಾದಕರಾಗಲು', ಸ್ವ–ಕಲಿಕೆ, ಸೃಜನಾತ್ಮಕ ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸಿ, ಶಿಶು ಕೇಂದ್ರಿತ ವ್ಯವಸ್ಥೆಯಲ್ಲಿ ಬೋಧಿಸಲು, ಮಾರ್ಗದರ್ಶನಕಾರನಾಗಿ ಎರಡನೇ ಪೋಷಕನಾಗಿ, ಸ್ನೇಹಿತನಾಗಿ, ಅನುಕೂಲಕರನಾಗಿ ಶಿಕ್ಷಕ ಕಾರ್ಯನಿರ್ವಹಿಸಲು ಇರುವ ಪ್ರಮುಖ ಸಾಧನವೇ ಭಾಷೆ. ಶಿಕ್ಷಣದ ಮೂಲಧ್ಯೇಯಗಗಳು ಮಕ್ಕಳಲ್ಲಿ ಈಡೇರುವಲ್ಲಿ ಭಾಷೆಯು ವಾಹನವಾಗಿ ಕಾರ್ಯನಿರ್ವಹಿಸುತ್ತಿದೆ. ಭಾಷೆಯನ್ನು ಕಲಿಸುವ ಜವಾಬ್ದಾರಿ ಕೇವಲ ಭಾಷಾ ಶಿಕ್ಷಕರಲ್ಲದೆ ಎಲ್ಲಾ ಶಿಕ್ಷಕರ ಜವಾಬ್ದಾರಿ (NCF– 2005). ಭಾಷಾ ಪ್ರಭುತ್ವದಿಂದ ವಿಷಯ ಕಲಿಕೆ ಸುಲಭವಾಗುತ್ತದೆ, ಪಠ್ಯಕ್ರಮವನ್ನು ವರ್ಗಾಯಿಸಿದರೆ ಸಾಲದು ಮಗುವಿನ ಅನ್ವಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಇದಕ್ಕಾಗಿ ಬೋಧನೆಯಲ್ಲಿ ಬಳಸುವ ಭಾಷೆ, ಭಾಷೆ ಪ್ರಭುತ್ವಗಳಿಸಲು ನೀಡುವ ಕಲಿಕಾನುಭವಗಳು, ಅಭ್ಯಾಸಗಳು ಶಿಕ್ಷಣದ ಮೂಲ ಬಹುವ್ಯಾಪಿ ಧ್ಯೇಯಗಳನ್ನು ಭವಿಷ್ಯದ ನಾಗರೀಕರಲ್ಲಿ ಅಳವಡಿಸಲು ನೆರವಾಗುತ್ತವೆ. ಭಾಷೆಯು ವ್ಯಕ್ತಿತ್ವ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಕ್ಷಣದಲ್ಲಿ ಬಳಸುವ ಭಾಷೆಯು ಮಗುವಿನ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸುವಂತಿರಬೇಕು.*

*ಪ್ರಮುಖ ಪದಗಳು : ಶಿಕ್ಷಣ, ಭಾಷೆ, ಮಾತೃಭಾಷಾ ಮಾಧ್ಯಮ, ಶಿಕ್ಷಕರ ಪಾತ್ರ.*

"ಭಾಷೆ ಎಂಬ ಜ್ಯೋತಿ ಬೆಳಗದಿದ್ದರೆ ಇಡೀ ಲೋಕವೇ ಗಾಡಾಂಧಕಾರದಲ್ಲಿ ಮುಳುಗುತ್ತಿತ್ತು." ಪೃಥ್ವಿಯ ಮೇಲೆ ಮನುಷ್ಯನ ಎಲ್ಲಾ ಸಾಹಸ ಸಿದ್ದಿಯನ್ನು ಸಾರುವ ವಿಜಯ ವೈಜಯಂತಿಯೇ ಭಾಷೆ" ಭಾವನೆಗಳು, ವಿಚಾರಗಳು, ಅನಿಸಿಕೆಗಳು, ಆಲೋಚನೆಗಳನ್ನು ಮತ್ತೊಬ್ಬರಿಗೆ ಧ್ವನಿ ಸಂಕೇತಗಳ ಮೂಲಕ ಅಭಿವ್ಯಕ್ತಗೊಳಿಸುವ ಸಾಧನವೇ ಭಾಷೆ. ಭಾಷೆಯು ಸಂವಹನ, ಅಭಿವ್ಯಕ್ತಿ, ಮಾಹಿತಿ ಸಂಗ್ರಹ, ಸಾಮಾಜೀಕರಣ, ಸಂಸ್ಕೃತೀಕರಣ, ವ್ಯಾವಹಾರಿಕ, ಆಡಳಿತ, ಬೋಧನೆ ಸಂಗ್ರಹ ಮಾಧ್ಯಮವಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಭಾಷೆ ಭಾವ ವಾಹಕವೂ, ಪ್ರಚೋದಕವೂ ಹೌದು.ವ್ಯಕ್ತಿಯ ವ್ಯಕ್ತಿತ್ವ ವಿಕಾಸದಲ್ಲಿ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ.

ಶಿಕ್ಷಣ – ಮಗುವಿನಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಗಳನ್ನು ಹೊರ ತೆಗೆದು ಚಾರಿತ್ರ್ಯವುಳ್ಳ ವ್ಯಕ್ತಿಗಳನ್ನಾಗಿಸುವುದೇ ಶಿಕ್ಷಣ.ಮಕ್ಕಳು ಮತ್ತು ಪ್ರೌಢರನ್ನು ಸಬಲಗೊಳಿಸಿ ಕಲಿಕಾರ್ಥಿಯು ಸಮಾಜದ ಪರಿವರ್ತನೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದೇ ಶಿಕ್ಷಣ.ಬಹುಸಂಸ್ಕೃತಿ ಮತ್ತು ವೈವಿಧ್ಯತೆಯುಳ್ಳ ವಿಶ್ವದಲ್ಲಿ ಸಹಬಾಳ್ವೆಯಿಂದ ಜೀವಿಸುವುದನ್ನು ಕಲಿಸಿ, ಕಲಿಕಾರ್ಥಿಗಳಲ್ಲಿ ಮೌಲ್ಯಗಳು, ನಡವಳಿಕೆ, ವರ್ತನೆಗಳನ್ನು ಅಭಿವೃದ್ಧಿಪಡಿಸುವುದನ್ನು ಕಲಿಕೆಯು ಪ್ರಮುಖವಾಗಿ ಗಮನ ಹರಿಸಬೇಕು. (UNESCO)

"ಸಾಕ್ಷರತೆ ಶಿಕ್ಷಣವಲ್ಲ, ಮಗುವಿನಲ್ಲಿ ಸರ್ವತೋಮುಖ ಬೆಳವಣಿಗೆ ಉಂಟುಮಾಡುವುದೇ ಶಿಕ್ಷಣ." **– ಗಾಂಧೀಜಿ**

ಜ್ಞಾನದ ಅರ್ಜನೆ, ಕೌಶಲಗಳ ಅಭಿವೃದ್ಧಿ ಅಪೇಕ್ಷಿತ ವರ್ತನೆಗಳ ಅಭ್ಯಾಸದಿಂದ ಉತ್ತಮ ಜೀವನ ನಡೆಸುವಂತೆ ತರಬೇತಿ ನೀಡುವುದೇ ಶಿಕ್ಷಣ. ಶಿಕ್ಷಣವು ಮನುಷ್ಯನನ್ನು ಸುಸಂಸ್ಕೃತ ಮತ್ತು ನಾಗರೀಕನನ್ನಾಗಿಸುತ್ತದೆ. ಅಜ್ಞಾನದ ಅಂಧಕಾರದಿಂದ ಬಿಡುಗಡೆಗೊಳಿಸಿ ಸಾಕ್ಷಾತ್ಕಾರದೆಡೆಗೆ ತರುತ್ತದೆ.ಹೀಗಾಗಿಯೇ ಶಿಕ್ಷಣವು ಸಾಮಾಜಿಕ ಬದಲಾವಣೆಯ ಪ್ರಮುಖ ಅಸ್ತ್ರವಾಗಿದೆ.ಆದ್ದರಿಂದ ಶಿಕ್ಷಣವು ಮೂಲಭೂತ ಹಕ್ಕಾಗಿದ್ದು, ರಾಷ್ಟ್ರದ ಪ್ರತಿಯೊಂದು ಮಗುವಿಗೆ (ಭಾಷೆ, ಜನಾಂಗ, ಸಂಸ್ಕೃತಿ, ಲಿಂಗ, ದೈಹಿಕ, ಸಾಮಾಜಿಕ, ಆರ್ಥಿಕ, ನೈತಿಕ, ಬೌದ್ಧಿಕ, ವರ್ಣ ಇತ್ಯಾದಿ ಪರಿಗಣಿಸದೆ) ಶಿಕ್ಷಣವನ್ನು ನೀಡುವುದು ರಾಷ್ಟ್ರದ, ರಾಜ್ಯದ ಕರ್ತವ್ಯವಾಗಿದೆ.ಈ ಸಾಂವಿಧಾನಿಕ ಜವಾಬ್ದಾರಿಯನ್ನು ಈಡೇರಿಸುವುದಕ್ಕಾಗಿ ಹಲವಾರು ನೀತಿಗಳು, ಕಾರ್ಯಕ್ರಮಗಳು, ತರಬೇತಿಗಳನ್ನು ಜಾರಿಗೆ ತಂದಿದ್ದರೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಮೂಲ ಧ್ಯೇಯ ಇನೂ ಈಡೇರಿಲ್ಲ.

- ಮಕ್ಕಳ ಕಲಿಕೆಯು ನಿರೀಕ್ಷಿತ ಮಟ್ಟಕ್ಕಿಂತ ಕೆಳಗಿರುವುದೇಕೆ?
- ಹಲವು ಮಕ್ಕಳು ಶಾಲೆಯನ್ನು ಪೂರ್ಣಗೊಳಿಸದೆ ಅನುತ್ತೀರ್ಣ ವಾಗುತ್ತಿರುವುದೇಕೆ ?
- ಶಿಕ್ಷಣದ ಬಹುಮುಖಿ ಗುರಿಗಳು ಭವಿಷ್ಯದ ಪ್ರಜೆಗಳಲ್ಲಿ ಈಡೇರುತ್ತಿಲ್ಲವೇಕೆ?
- ಶಿಕ್ಷಣವು ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸಿ ಅಂಕ ಪಡೆದು ವೃತ್ತಿ ಪಡೆದುಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿರುವುದೇಕೆ?
- ಉನ್ನತ ಶಿಕ್ಷಣ ಪಡೆದು ಪದವೀಧರರಾಗಿರುವರಲ್ಲಿಯೂ ಜೀವನ ಕೌಶಲಗಳು ಅಳವಡಿಕೆಯಾಗದೆ ಪಠ್ಯದಲ್ಲಿಯೇ ಉಳಿದವೇಕೆ?

ಇತ್ಯಾದಿ ಹಲವು ಪ್ರಶ್ನೆಗಳಿಗೆ ಹಲವು ಶಿಕ್ಷಣ ತಜ್ಞರು, ಸಂಶೋಧಕರ ವಾದವೆಂದರೆ–"ಶಾಲೆಯಲ್ಲಿ ಪಠ್ಯಕ್ರಮವನ್ನು ವರ್ಗಾಯಿಸುವಲ್ಲಿ ಬಳಸುವ ಭಾಷೆ ಕೆಳಮಟ್ಟದಲ್ಲಿರುವುದು" ಎಂದಿರುವುದು ಪ್ರಮುಖವಾಗಿ ಗಮನಿಸ ಬೇಕಾದ ಅಂಶವಾಗಿದೆ. ಶಿಕ್ಷಣದ ಬಹುವ್ಯಾಪಿ ಗುರಿಗಳನ್ನು ಈಡೇರಿಸುವಲ್ಲಿ ಭಾಷೆಯು ಪ್ರಮುಖ ಪಾತ್ರ ನಿರ್ವಹಿಸುತ್ತದೆ.ಶೈಕ್ಷಣಿಕವಾಗಿ ಯಶಸ್ಸು ಮತ್ತು ಅಪಯಶಸ್ಸು ಗಳಿಸಲು ಭಾಷೆ ಪ್ರಮುಖ ಕಾರಣವಾಗುತ್ತದೆ ಎಂಬುದು ಹಲವು ಸಂಶೋಧನೆಗಳಿಂದ ರುಜುವಾತಾಗಿದೆ.

ಶಾಲಾ ಪಠ್ಯಕ್ರಮವನ್ನು ವರ್ಗಾಯಿಸುವ ಭಾಷೆಯು ಮಗುವು ಮನೆಯಲ್ಲಿ ಬಳಸದ ಭಾಷೆಯಾಗಿದೆ. ಹಾಗೂ ಶಾಲೆಯ ಹೊರತಾದ ಪರಿಸರದಲ್ಲಿ ಬಳಸದ ಭಾಷೆಯಾಗಿರುವುದು ಪ್ರಮುಖ ಋಣಾತ್ಮಕ ಪ್ರಭಾವನ್ನು ಶೈಕ್ಷಣಿಕ ಸಾಧನೆ ಮೇಲೆ ಬೀರಿದೆ. ಬೋಧನೆ ಮತ್ತು ಕಲಿಕೆಯಲ್ಲಿ ಬಳಸುವ ಭಾಷೆಯು ಪ್ರಮುಖ ಅಡೆತಡೆಯಾಗಿದೆ.ಭಾಷಾ ಅಡ್ಡಿಯನ್ನು ತಡೆಗಟ್ಟಿ ಮಗು ಶಿಕ್ಷಣದ ಮೂಲಕ ಅಭಿವೃದ್ಧಿ ಹೊಂದುವಂತಾಗಬೇಕೆಂದು ಹಲವು ಆಯೋಗಗಳು ಸಂಶೋಧನಾ ವರದಿಗಳು ತಿಳಿಸಿವೆ.

ಮಗುವಿನ ಮನೆ ಅಥವಾ ಪ್ರಾದೇಶಿಕ ಭಾಷೆಯ ಹೊರತಾಗಿ ಬೇರೊಂದು ಭಾಷೆ ಶಿಕ್ಷಣದ ಮಾಧ್ಯಮವಾಗಿದ್ದಾಗ ಮಗುವಿಗೆ ಕಲಿಕೆ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಹೊರೆಯಾಗಿ ಪರಿಣಮಿಸುತ್ತದೆ.ಸೃಜನಶೀಲತೆ ಮತ್ತು ಧಾರಾಳ ಸಂತಸ ಬಾಲ್ಯದ ಕೀಲಿಕೈ.ಮಗುವಿನ ಮನೆ ಭಾಷೆಯನ್ನು ಗೌರವಿಸುವುದು ಕರ್ತವ್ಯ. ಕನಿಷ್ಠ ಪ್ರಾಥಮಿಕ ಶಿಕ್ಷಣವನ್ನಾದರೂ ಮಗುವಿನ ಮಾತೃಭಾಷೆಯಲ್ಲಿ ನೀಡುವುದು ಪ್ರತಿ ರಾಜ್ಯಗಳ ಕರ್ತವ್ಯ. ( NCF-2005) ಇವುಗಳನ್ನು ಗಾಳಿಗೆ ತೂರಿದಂತಾಗಿದೆ.

ಕಲಿಕೆಯಲ್ಲಿ ಮಗುವು ಸಕ್ರಿಯವಾಗಿ ಭಾಗವಹಿಸಿ ತನ್ನ ಚಿಂತನೆಗಳು, ಅನುಭವಗಳು, ವಿಚಾರಗಳನ್ನು ಹೊರಹಾಕಿ ಜ್ಞಾನವನ್ನು ಸೃಷ್ಟಿಸಿಕೊಳ್ಳಲು ಭಾಷೆಯು ಪ್ರಮುಖ ಮಾಧ್ಯಮ. ಬೋಧನೆಯ ಸಮಯದಲ್ಲಿ ಏರ್ಪಡುವ ಸಂವಹನ, ಸಂಭಾಷಣೆ, ಚರ್ಚೆ, ಟಿಪ್ಪಣಿ, ಪ್ರಶ್ನಿಸುವಿಕೆ, ವಿವರಣೆ, ಉದಾಹರಣೆ, ಸಲಹೆ, ಹಿಮ್ಮಾಹಿತಿ ಇತ್ಯಾದಿ ಎಲ್ಲಾ ಕಲಿಕಾ ಚಟುವಟಿಕೆಯಲ್ಲಿ ಮಗುವು ಸಕ್ರಿಯವಾಗಿ ಭಾಗವಹಿಸಲು ಭಾಷೆಯ ಸ್ವಾಮಿತ್ವ ಬೇಕು.ಮನೆಯ ಭಾಷೆಯ ಹೊರತಾಗಿ ವಿದೇಶಿ ಭಾಷೆಯಲ್ಲಿ ಮಗುವಿಗೆ ಆ ಮಟ್ಟದ ಸ್ವಾಮಿತ್ವ ಸಿದ್ದಿಸಿರುವುದಿಲ್ಲ. ಹಾಗಾಗಿ ಮಗು ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಿಷ್ಕ್ರೀಯ ಕೇಳುಗನಾಗಿ, ನಿರಾಸಕ್ತನಾಗಿ ಬಾಯಿ ಪಾಠಕ್ಕೆ ಜೋತು ಬೀಳುತ್ತದೆ. ಅನಿವಾರ್ಯವಾಗಿ ಮಗುವಿನಲ್ಲಿ ಬಾಯಿಪಾಠವನ್ನು ಪ್ರೋತ್ಸಾಹಿಸುವಂತಾಗುತ್ತಿದೆ. ಇದರಿಂದ ಸೃಜನಶೀಲತೆ ಪ್ರತಿಭೆಗಳನ್ನು ನಿರ್ಲಕ್ಷಿಸಿದಂತಾಗಿ, ಕಲಿಯುವ ಅವಧಾನ ಕುಂಠಿತವಾಗಿ, ನಿಲುಗಡೆ, ಕಡಿಮೆ ಶೈಕ್ಷಣಿಕ ಸಾಧನೆಗೆ ದಾರಿ ಮಾಡಿಕೊಟ್ಟಂತಾಗುತ್ತಿದೆ. ಶಿಕ್ಷಣದ– ಅಮೂಲ್ಯ ಧ್ಯೇಯಗಳು ಪಠ್ಯದಲ್ಲಿ ಉಳಿದು ಮಗುವಿನಲ್ಲಿ ಕೌಶಲ, ವಿಕಾಸ, ಅನ್ವಯಿಕ ಜ್ಞಾನಗಳು ಕಡಿಮೆಯಾಗುತ್ತಿವೆ.

ತಾಯ್ನುಡಿಯಿಂದ ಕಲಿತ ವಿದ್ಯೆ ನಿಜವಾದ ವಿದ್ಯೆ, ಪರರ ಎಂಜಲು ಯಾವಾಗಲೂ ಸವಿಯಲ್ಲ. (ಗೋವಿಂದ ಪೈ) ಮಗುವಿನ ಪ್ರಾಥಮಿಕ ಶಿಕ್ಷಣ ಮನೆಯ ಭಾಷೆಯಲ್ಲಿ ಇರಬೇಕು. (ವುಡ್ಸ್, ಕೊಠಾರಿ 1986 ರ ರಾಷ್ಟ್ರೀಯ ಶಿಕ್ಷಣ ನೀತಿ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟುಗಳು).

ಶಿಕ್ಷಣ ಮತ್ತು ಭಾಷೆಯ ನಡುವೆ ಅವಿನಾಭಾವ ಸಂಬಂಧವಿದೆ. "ಮಗು ಅರಿವಿನ ಗ್ರಾಹಕರಾಗದೆ ಅರಿವಿನ ಉತ್ಪಾದಕರಾಗಬೇಕು". ಜ್ಞಾನವನ್ನು ಅರ್ಥೈಸಿಕೊಳ್ಳದೆ ಜ್ಞಾನವನ್ನು ಸಂರಚನೆ ಮಾಡಬೇಕು. ವ್ಯಕ್ತಿತ್ವ ವಿಕಾಸ, ಸರ್ವತೋಮುಖ ವಿಕಾಸ, ವಿಮರ್ಶಾತ್ಮಕ ಚಿಂತನೆ, ಪರಿಶೋಧಿಸುವಿಕೆ, ಅಭಿವ್ಯಕ್ತಿ, ಸೃಜನಶೀಲತೆ, ಸಮಸ್ಯಾ ಪರಿಹಾರ, ಸ್ವ ಅರಿವು, ಪರಿಣಾಮಕಾರಿ ಸಂವಹನ, ಕೌಶಲಗಳ ಗಳಿಕೆ, ಸ್ವಕಲಿಕೆ, ಪ್ರತಿಫಲನ ಸಾಮಾಜೀಕರಣ ಮುಂತಾದವುಗಳ ವೃದ್ಧಿಯಲ್ಲಿ ಭಾಷಾ ಪ್ರಭುತ್ವ ಅತ್ಯಗತ್ಯ.

ಶಿಕ್ಷಣದ ವಿಶಾಲ ಧ್ಯೇಯಗಳು ಭವಿಷ್ಯದ ನಾಗರೀಕರಲ್ಲಿ ಈಡೇರಲು ಭಾಷೆ ಅತ್ಯಗತ್ಯ. ಶಿಕ್ಷಣದಲ್ಲಿನ ಪಠ್ಯಕ್ರಮ ರಚನೆ, ಬೋಧನೆ, ಕಲಿಕೆ, ಮೌಲ್ಯಮಾಪನ, ಹಿಮ್ಮಾಹಿತಿಗಳಲ್ಲಿ ಭಾಷೆ ಮಾಧ್ಯಮವಾಗಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಕಲಿಕೆಯು ಯಾವಾಗಲೂ ಸಾಮಾಜಿಕ–ಸಾಂಸ್ಕೃತಿಕ ಸಂದರ್ಭದಲ್ಲಿ ಉಂಟಾಗುತ್ತದೆ.ವ್ಯಕ್ತಿಯ ಮಾತಿನಲ್ಲಿ ಬರವಣಿಗೆಯಲ್ಲಿ ಸ್ಪಷ್ಟತೆ ಇದ್ದರೆ ಆಲೋಚನೆಯಲ್ಲಿ ಪ್ರಕ್ರಿಯೆಯಲ್ಲಿಯೂ ಸ್ಪಷ್ಟತೆ ಇರುತ್ತದೆ.

ಶಿಕ್ಷಣ ಮತ್ತು ಭಾಷೆಯ ಸಂಬಂಧವನ್ನು 3 ರೀತಿಯಲ್ಲಿ ವಿಭಾಗಿಸಿ ನೋಡಬಹುದು.

1. ಭಾಷಾ ಕಲಿಕೆ
2. ಭಾಷೆಯ ಮೂಲಕ ಕಲಿಕೆ
3. ಭಾಷೆಯ ಬಗ್ಗೆ ಕಲಿಕೆ

## 1. ಭಾಷಾ ಕಲಿಕೆ

ಭಾಷಾ ಶಾಸ್ತ್ರಜ್ಞರ ಪ್ರಕಾರ ಮಾನವನು ಹುಟ್ಟಿನಿಂದಲೇ ವಯಸ್ಸಿಗನುಗುಣವಾಗಿ ಭಾಷಾ ಕೌಶಲಗಳನ್ನು ಪಡೆದೆ ಹುಟ್ಟಿರುತ್ತಾನೆ. ಭಾಷಾ ಅರ್ಜನೆಯ ಸಾಧನವು ಮಗುವಿನಲ್ಲಿ ಭಾಷಾ ಕಲಿಕೆಗೆ ಸಹಾಯ ಮಾಡುತ್ತದೆ. ಸೂಕ್ತ ಮತ್ತು ಸಾಕಷ್ಟು ಶ್ರೀಮಂತ ಭಾಷಾ ಪರಿಸರವನ್ನು ಶಿಕ್ಷಣದಿಂದ ಅಭಿವೃದ್ಧಿಗೊಳಿಸಬೇಕು.

ಶೈಕ್ಷಣಿಕ ನೀತಿ ನಿರೂಪಕರು, ಪಠ್ಯವಸ್ತು ರಚನೆಕಾರರಿಂದ ಪೂರ್ವ ಯೋಜಿತ ಕಟ್ಟಿನಿಂದ ಜ್ಞಾನ ಕೌಶಲಗಳು ವಿದ್ಯಾರ್ಥಿಗಳಿಗೆ ವರ್ಗಾವಣೆ ಯಾಗುತ್ತಿವೆ. ಬೋಧನೆ ಮೂಲಕ ಕಲಿಕಾರ್ಥಿಗೆ ವರ್ಗಾವಣೆ ಯಾಗಿ ಪರೀಕ್ಷೆಯಲ್ಲಿ ಉತ್ತರಪತ್ರಿಕೆ ಮೂಲಕ ಮತ್ತೆ ಶಿಕ್ಷಕರಿಗೆ ವರ್ಗಾವಣೆ ಯಾಗುತ್ತಿವೆ.

ಭಾಷಾ ಕಲಿಕೆಯು ಭಾಷೆಯ ಮೂಲಕ ಕಲಿಕೆಗಿಂತ ಭಿನ್ನವಾಗಿರಬೇಕು.ಭಾಷಾ ಕಲಿಕೆಯಲ್ಲಿ ಶಿಕ್ಷಕರು ಪಠ್ಯವಸ್ತುವಿಗೆ ಜೋತು ಬೀಳದೆ ಭಾಷಾ ಕೌಶಲಗಳ ಅಭಿವೃದ್ಧಿಗೆ ಗಮನ ಹರಿಸಬೇಕು.ಶಿಶು ಕೇಂದ್ರಿತ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಮಗುವಿನ ಸಕ್ರಿಯ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಬೇಕು. ಭಾಷಾ ಬೋಧನಾ ಉದ್ದೇಶಗಳಾದ ಶಬ್ದ ಭಂಡಾರ, ಸ್ಪಷ್ಟ ಉಚ್ಚಾರಣೆ, ವಾಕ್‌ಚಾತುರ್ಯ, ಸೃಜನಶೀಲ ಅಭಿವ್ಯಕ್ತಿ, ಹಾಡುಗಾರಿಕೆ, ಅಭಿನಯ, ರಸಾಸ್ವಾದನೆ, ಕಲ್ಪನಾಶಕ್ತಿ, ವಿಮರ್ಶಾತ್ಮಕ, ತಾರ್ಕಿಕ ಚಿಂತನೆ, ಜೀವನ ಮೌಲ್ಯಗಳು, ಸಾಹಿತ್ಯಾಭಿರುಚಿ, ಸಂಸ್ಕೃತಿ, ನಾಡುನುಡಿಯ ಅಭಿಮಾನ ಮುಂತಾದವುಗಳನ್ನು ವೃದ್ಧಿಸುವ ನಿಟ್ಟಿನಲ್ಲಿ ಬೋಧನೆ ಸಾಗಬೇಕು– ಬೋಧನೆಯಲ್ಲಿ ಹೆಚ್ಚಿನ ನಿಯಂತ್ರಣ, ಶಿಸ್ತಿಗೆ ಪ್ರಾಶಸ್ತ್ಯ ಕೊಡದೆ, ಭಾಷಾ ಬಳಕೆಗೆ ಅವಕಾಶ ಕಲ್ಪಿಸಬೇಕು. ವಿದ್ಯಾರ್ಥಿಗಳೇ ವಿಷಯವಸ್ತುವನ್ನು ಪರಿಶೋಧಿಸಲು ಸಹಾಯಕವಾಗುವಂತೆ ಕಲಿಕಾ ಅನುಭವಗಳನ್ನು ಸೃಷ್ಟಿಸಬೇಕು. ಚರ್ಚೆ, ಸಂಭಾಷಣೆ, ಸಂವಹನ, ಪಾತ್ರಾಭಿನಯ, ನಾಟಕೀಕರಣ, ಸಂದರ್ಶನ, ಪ್ರತಿಫಲನಾತ್ಮಕ ಚಿಂತನೆ, ವಿಮರ್ಶಾತ್ಮಕ ವಿಶ್ಲೇಷಣೆ, ಪ್ರಶ್ನೋತ್ತರ ಸಂಭಾಷಣೆ, ಗುಂಪು ಚಟುವಟಿಕೆ, ಸೃಜನಾತ್ಮಕ ಅಭಿವ್ಯಕ್ತಿ ಮುಂತಾದವುಗಳ ಮೂಲಕ ಬೋಧನೆಯಲ್ಲಿ ಮಗುವಿನ ಭಾಷಾ ಬಳಕೆಗೆ ಅನುವು ಮಾಡಿಕೊಡಬೇಕು.ಶಬ್ದ ಭಂಡಾರ, ಪದಗಳ ಸಂದರ್ಭಾನುಸಾರ ಬಳಕೆಯ ಬಗ್ಗೆ ನಿದರ್ಶನ ಸಹಿತ ಅರ್ಥೈಸಬೇಕು.ಪಠ್ಯ ವಸ್ತುವನ್ನು ಆಧಾರವಾಗಿಟ್ಟುಕೊಂಡು ಭಾಷಾ ಕೌಶ್ಯಲಗಳ ಅಭಿವೃದ್ಧಿಗೆ ಪುಷ್ಟಿಕೊಡುವ ನಿಟ್ಟಿನಲ್ಲಿ ಸಾಹಿತ್ಯಾಭಿರುಚಿ, ಸೃಜನಾತ್ಮಕ ಅಭಿವ್ಯಕ್ತಿಗೆ ವೇದಿಕೆ ಕಲ್ಪಿಸಬೇಕು.ಹೆಚ್ಚಿನ ಮಾಹಿತಿ ಸಂಗ್ರಹಣೆಗೆ, ಆತ್ಮ ಸಂತೋಷದ ಓದಿಗೆ ಪ್ರೋತ್ಸಾಹ ನೀಡಬೇಕು. ಭಾಷಾ ಶಿಕ್ಷಕರು ಮಾದರಿಯಾಗಿ ಕಲಿಕಾರ್ಥಿಗೆ ಸ್ಫೂರ್ತಿಯಾಗಬೇಕು. ವಿವಿಧ, ನವೀನ, ಮಾಹಿತಿ ತಂತ್ರಜ್ಞಾನದ ಕಲಿಕೋಪಕರಣಗಳನ್ನು ಬಳಸಿ, ವಿದ್ಯಾರ್ಥಿಗಳೆ ವಿಷಯ ವಸ್ತುವನ್ನು ಅರ್ಥೈಸುವಂತೆ ಪ್ರೇರೆಪಿಸಬೇಕು. ಕಲಿಕೆಯು ಹೊರೆ, ನಿಷ್ಕ್ರೀಯವಾಗದೆ ಅವಧಾನ ಕೇಂದ್ರೀಕರಿಸಿ ಸಂತಸದ ಪರಿಸರ ಸೃಷ್ಟಿಸಬೇಕು.

ಭಾಷಾ ಮೌಲ್ಯಮಾಪನವು ಸಾಧನೆಗೆ ಬೆಸೆದುಕೊಂಡಿರಬಾರದು. ಭಾಷಾ ಪ್ರಭುತ್ವವನ್ನು ಅಳೆದು ತಪ್ಪುಗಳನ್ನು ತಿದ್ದುವ, ಸರಿಪಡಿಸಿ ಕೊಳ್ಳುವಿಕೆಯ ಅವಕಾಶವನ್ನು ನೀಡಬೇಕು. ಯಾವ ಕೌಶಲದ ಗಳಿಕೆಯನ್ನು ಪರೀಕ್ಷಿಸುತ್ತಿದ್ದೇವೆಯೋ ಅದಕ್ಕೆ ಸೂಕ್ತವಾದ ಪರೀಕ್ಷಾಂಶಗಳನ್ನು ನಿರ್ದಿಷ್ಟ ಗೊಳಿಸಿಕೊಳ್ಳಬೇಕು. ಭಾಷಾ ಮೌಲ್ಯಮಾಪನ ಮತ್ತು ಕಲಿಕೆ ಜೊತೆ ಜೊತೆಯಾಗಿ ಸಾಗಬೇಕು. ಉತ್ತರಿಸಲು ಸ್ವಾತಂತ್ರ್ಯ, ಸ್ವತಂತ್ರ ಅಭಿವ್ಯಕ್ತಿಗೆ ಹೆಚ್ಚಿನ ಆದ್ಯತೆ ನೀಡುವುದು ಭಾಷಾ ಗಳಿಕೆಯ ದೃಷ್ಟಿಯಿಂದ ಪ್ರಮುಖವಾದದ್ದಾಗಿದೆ. ಮೌಲ್ಯಮಾಪನ ಪರೀಕ್ಷಾಂಶಗಳು ಪಠ್ಯವಸ್ತುವಿನ ವಿಷಯದ ಜೊತೆಗೆ ನಾಲ್ಕು ಭಾಷಾ ಕೌಶಲಗಳ ಗಳಿಕೆಯನ್ನು ಪರೀಕ್ಷಿಸಲು ವಿವಿಧತೆ ಇರುವಂತೆ ನೋಡಿಕೊಳ್ಳಬೇಕು.

ಭಾಷಾ ಬೋಧನೆಯಲ್ಲಿ ಜ್ಞಾನ ಅರ್ಥಗ್ರಹಿಕೆ, ಉದ್ದೇಶಗಳಿಗಿಂತ ಅಭಿವ್ಯಕ್ತಿ ಮತ್ತು ಪ್ರಶಂಸೆಗೆ ಹೆಚ್ಚಿನ ಮಾನ್ಯತೆ ನೀಡಬೇಕು. ಭಾಷಾ ಪಠ್ಯ

ISSN : 2249-2429 ಸಂಶೋಧನೆ RNI REG.NO.KARKAN/2011/38712

ವಸ್ತುವಿನಲ್ಲಿರುವ ವಿಷಯ ವಸ್ತುಗಳು ಮಗುವಿನ ಸಂಸ್ಕೃತಿ, ಸಮಾಜ, ಜೀವನಾನುಭವಗಳಾಗಿರುವುದರಿಂದ ಹೆಚ್ಚಿನ ಶ್ರಮವಿಲ್ಲದೆ ಅರ್ಥಗ್ರಹಿಕೆ ಉಂಟಾಗುತ್ತದೆ.ಕಲಿಕಾರ್ಥಿಗಳಲ್ಲಿ ಸ್ವತಂತ್ರ ಅಲೋಚನೆ, ವೈಚಾರಿಕತೆ, ಕಲ್ಪನಾಶಕ್ತಿ, ಸೃಜನಾತ್ಮಕತೆಗಳನ್ನೊಳಗೊಂಡ ಉನ್ನತ ಆಲೋಚನಾ ಸಾಮರ್ಥ್ಯ, ಶುದ್ಧ, ಗ್ರಾಂಥಿಕ ಭಾಷಾ ಬಳಕೆಗೆ ಹೆಚ್ಚಿನ ಅವಕಾಶ ಒದಗಿಸಿ ಸ್ವತಂತ್ರ ಅಭಿವ್ಯಕ್ತಿಗೆ ಪ್ರೋತ್ಸಾಹ ನೀಡಬೇಕು. ಸಾಹಿತ್ಯಾಭಿರುಚಿ, ಸಾಹಿತ್ಯ ಕೃಷಿಗೆ ಅಭಿಪ್ರೇರಣೆ ನೀಡಲು ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸುವುದು ಅವಶ್ಯಕ.

ಪ್ರಶಂಸೆ – ಭಾಷಾ ಬೋಧನೆಯಲ್ಲಿ ಪ್ರಶಂಸೆ ಪ್ರಮುಖವಾದದ್ದು. ಮೆಚ್ಚುಗೆ ಗೌರವ, ಅಭಿಮಾನ ಹೊಂದುವುದೇ ಪ್ರಶಂಸೆ, ಭಾಷೆಯಲ್ಲಿರುವ ಆಕರಗಳು, ಸಂತೋಷ, ಸೌಂದರ್ಯ, ಹೊಸತನ, ಮೌಲ್ಯಗಳನ್ನು ಒಳಗೊಂಡಿರುತ್ತವೆ. ಈ ಎಲ್ಲಾ ಅಂಶಗಳನ್ನು ಮೆಚ್ಚಿಕೊಳ್ಳುವುದನ್ನು, ಆಸ್ವಾಧಿಸುವುದನ್ನು ಮಕ್ಕಳಲ್ಲಿ ಬೆಳೆಸಬೇಕು. ಮೆಚ್ಚುಗೆಯಾದ ವಿಷಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ, ಗೌರವಿಸುವುದಕ್ಕೆ, ಪ್ರೀತಿಸುವುದಕ್ಕೆ ಸಾಧ್ಯವಾಗುತ್ತದೆ. ಪರಸ್ಪರ ಸಂಸ್ಕೃತಿ, ವ್ಯಕ್ತಿಗಳು, ರಾಷ್ಟ್ರ, ಭಾಷೆಗಳ ನಡುವೆ ಗೌರವ ಸೌಹಾರ್ದತೆ ಭಾವನೆ ಇದರಿಂದ ಬೆಳೆಯುತ್ತದೆ. ಶಿಕ್ಷಕರು ಗಮನವಿಟ್ಟು ಈ ಉದ್ದೇಶ ಸಾಧ್ಯವಾಗುವಂತೆ ಬೋಧನೆಯನ್ನು ಯೋಜಿಸಬೇಕು.

ಭಾಷಾ ಶಿಕ್ಷಕರಲ್ಲಿ ಕಲ್ಪನಶೀಲತೆ, ನಾವಿನ್ಯತೆ, ಸಹೃದಯತೆ, ಸ್ವಚಿಂತನೆಗಳಿರಬೇಕು. ಬೋಧನೆಯಲ್ಲಿ ಉಪನ್ಯಾಸ ವಿಧಾನಕೆ ಜೋತು ಬೀಳದೆ, ಕ್ರೀಡಾ ವಿಧಾನ, ಶಿಶು ಕೇಂದ್ರಿತ ವಿಧಾನಗಳನ್ನು ಪ್ರಯೋಗಿಸಬೇಕು. ಭಾಷಾ ಸಂಘ, ಸಹಪಠ್ಯ, ಚಟುವಟಿಕೆಗಳಲ್ಲಿ ಭಾಷಾ ಗಳಿಕೆ, ಬಳಕೆಗೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ಆಯೋಜಿಸಬೇಕು.ಭಾಷಾ ಕಲಿಕೆಗೆ ಹೆಚ್ಚಿನ ಅಭ್ಯಾಸವನ್ನು ನೀಡಬೇಕು.

ಭಾಷಾ ಪಠ್ಯ ಪುಸ್ತಕದಲ್ಲಿನ ಸಾಹಿತ್ಯ, ಪದ್ಯ, ಗದ್ಯ, ನಾಟಕ, ವ್ಯಾಕರಣ ಬೋಧನೆಗಳನ್ನು ವಿಷಯಾನುಸಾರ ಸೂಕ್ತ ವಿಧಾನ, ತಂತ್ರ, ಕಲಿಕೋಪಕರಣಗಳನ್ನು ಬಳಸಿಕೊಂಡು ವಿವಿಧತೆಯಿಂದ ಕೂಡಿರುವಂತೆ ನೋಡಿಕೊಳ್ಳುವುದು ಭಾಷಾ ಶಿಕ್ಷಕನ ಕರ್ತವ್ಯ, ಭಾಷೆಯ ಶುದ್ಧ ಪ್ರಯೋಗದ ದೃಷ್ಟಿಯಿಂದ ವ್ಯಾಕರಣ ಬೋಧನೆಯನ್ನು ರಸವತ್ತಾಗಿಸುವುದು ಹೆಚ್ಚು ಆಕರ್ಷಕ ಉದಾಹರಣೆಗಳನ್ನು ನೀಡುವುದು ಶಿಕ್ಷಕನ ಕೌಶಲವನ್ನು ಅವಲಂಭಿಸಿದೆ.

## 2. ಭಾಷೆಯ ಮೂಲಕ ಕಲಿಕೆ

ಕಲಿಕೆ ಸಾಗುವುದೇ ಭಾಷೆಯ ಮೂಲಕ ವಿಷಯ ಪರಿಕಲ್ಪನೆ ಅರ್ಥೈಸಿಕೊಳ್ಳುವುದು.ಸಮಸ್ಯೆ ಪರಿಹಾರ, ಹೇಳಿಕೆ ವಿಸ್ತರಿಸುವುದು, ಚರ್ಚೆ, ಸಂಭಾಷಣೆ, ಅಂತರಜಾಲ ಮಾಹಿತಿ ಸಂಗ್ರಹಣೆ, ನಿಯೋಜಿತ ಕಾರ್ಯನಿರ್ವಹಣೆ, ಪ್ರಶ್ನೆಗೆ ಉತ್ತರ ನೀಡುವುದು, ಓದುವುದು, ಬರೆಯುವುದು, ಪ್ರಸ್ತುತ ಪಡಿಸುವುದು, ಪ್ರತಿಫಲನ ಚಿಂತನೆ, ಆಲೋಚನೆ ಈ ಎಲ್ಲಾ ಚಟುವಟಿಕೆಗೆ ಭಾಷೆಯೇ ಜೀವಾಳ.ಭಾಷೆಯ ಪ್ರಭುತ್ವವಿದ್ದಾಗ ಮಾತ್ರ ವಿಷಯ ಕಲಿಕೆ ಸರಾಗವಾಗುತ್ತದೆ.ವೇಗವಾಗಿ ಅರ್ಥಗ್ರಹಿಕೆ ಉಂಟಾಗುತ್ತದೆ. ಪ್ರಶ್ನೆಗಳಿಗೆ, ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳ ಬಹುದು. ಬೋಧನೆಯಲ್ಲಿ ನೆರವೇರುವ ಈ ಎಲ್ಲಾ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಮಗುವಿಗೆ ಭಾಷೆಯ ಹಿಡಿತ ಅತಿ ಅವಶ್ಯಕ.

ಭಾಷಾತಜ್ಞ **ವಾಯ್‌ಗೋಟ್ಸಿ** – ಕಲಿಕೆಯ ಸಾಧನವಾಗಿ ಭಾಷೆ ಅರ್ಥೈಸಿಕೊಳ್ಳುವಲ್ಲಿ ಸಲಕರಣೆಯಾಗುತ್ತದೆ. ಮಕ್ಕಳು ತಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಮಾತಿನಿಂದ, ಭಾಷೆಯು ಬಳಕೆ ಮಾಡುವ ಸಾಮರ್ಥ್ಯದಿಂದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಾಧನವಾಗುತ್ತದೆ. ವಿಶ್ವವನ್ನು ವ್ಯಕ್ತಿ ಏಕಾಂಗಿಯಾಗಿ ಅರ್ಥೈಸಿಕೊಳ್ಳಲು ಪ್ರಯತ್ನಿಸಲು ಭಾಷೆಯು ವಾಹನವಾಗಿ ಕಾರ್ಯ ನಿರ್ವಹಿಸುತ್ತದೆ. ಕಲ್ಪನೆ ಮತ್ತು ಜ್ಞಾನಾರ್ಜನೆಯಲ್ಲಿ ಭಾಷೆ ಪ್ರಮುಖವಾಗಿದೆ. ಮುಂದುವರಿದು ಸಮವಯಸ್ಕರ ಸಂಭಾಷಣೆ ಮತ್ತು ಸಹಕಾರದಿಂದ ಜ್ಞಾನವು ರಚನೆಯಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರು ಎಲ್ಲಾ ಕಲಿಕೆಯ ಸನ್ನಿವೇಶದಲ್ಲಿ ಸಹಯೋಗಿಯಾಗಿ, ತರಬೇತಿಗಾರರಾಗಿ ಕಾರ್ಯ ನಿರ್ವಹಿಸಬೇಕು. ಕಲಿಕಾರ್ಥಿಯ ಅಥಗ್ರಹಿಕೆಯನ್ನು ಹೆಚ್ಚಿಸಲು ತಳಪಾಯ ಅಥವಾ ವೇದಿಕೆಯನ್ನು (ಸ್ಯಾಫೋಲ್ಡಿಂಗ್) ನಿರ್ಮಾಣ ಮಾಡಿಕೊಡಬೇಕು. (Hawisher 1994)

ಶಾಲೆಯಲ್ಲಿ ಗ್ರಹಿಕೆಯನ್ನು ಖಾತರಿ ಪಡಿಸುವುದರ ಹೊರತಾಗಿ ಹೆಚ್ಚು ಸಮಯ ಮಾಹಿತಿಯನ್ನು ರವಾನಿಸುವುದೇ ಆಗಿದೆ.ಸಂವಹನಕ್ಕೆ ಮಾತುಗಾರಿಕೆಯನ್ನು ಪ್ರೋತ್ಸಾಹಿಸಲು, ಪರಿಶೋಧನೆ, ತಾತ್ಕಾಲಿಕ ಚಿಂತನೆ, ನಿಯೋಜಿತ ಕಾರ್ಯಗಳಲ್ಲಿ ಚರ್ಚಿಸುವುದು ಮತ್ತು ಗೊಂದಲಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಶಿಕ್ಷಕರು ತರಗತಿಯಲ್ಲಿ ಮಾತನಾಡುವುದನ್ನು ಪ್ರೋತ್ಸಾಹಿಸುವುದರ ಅವಶ್ಯಕತೆ ಇದೆ. ಭಾಷೆಯನ್ನು ಕಲಿಸುವುದು ಪ್ರತಿಯೊಬ್ಬ ಶಿಕ್ಷಕರ ಜವಾಬ್ದಾರಿ (NCF – 2005)

ಭಾಷೆಯನ್ನು ವಿಷಯವಾಗಿ ಕಲಿಯುವುದಕ್ಕೂ, ಮಾಧ್ಯಮವಾಗಿ ಕಲಿಯುವುದಕ್ಕೂ ಬಹಳಷ್ಟು ಅಂತರವಿದೆ.

ದಿನನಿತ್ಯ ಜೀವನದಲ್ಲಿ ಸ್ಥಳೀಯ ಸಮುದಾಯಗಳು ಬಳಸುವ ಭಾಷೆಯು ಶಿಶುವಿಹಾರ ಮತ್ತು ಪ್ರಾಥಮಿಕ ಶಿಕ್ಷಣ ಬೋಧನಾ ಮಾಧ್ಯಮವಾಗಿರಬೇಕು. ಸಾಕ್ಷರತೆ ಮತ್ತು ಗರಿಷ್ಠ ತಿಳುವಳಿಕೆಗಾಗಿ–

- ಪರಿಚಿತ ಭಾಷೆಯಲ್ಲಿ ಓದುವುದನ್ನು ಮೊದಲು ಕಲಿಯಬೇಕು.
- ಸಂಜ್ಞಾನಾತ್ಮಕ ವಿಕಾಸದೊಂದಿಗೆ ಮಗುವಿನ ಮಾತೃ ಭಾಷೆಯು ವಿಕಾಸವಾಗಬೇಕು
- ಮಗುವಿನ ಭಾಷೆ ಮತ್ತು ಸಂಸ್ಕೃತಿಯ ಹಿನ್ನೆಲೆಯ ತಿಳುವಳಿಕೆ ಇರಬೇಕು

ಬೋಧನೆಯು ಪರಿಣಾಮಕಾರಿಯಾಗಿದ್ದರೆ ಕಲಿಕೆಯು ಪರಿಣಾಮ ಕಾರಿಯಾಗುತ್ತದೆ. ಬೋಧನೆಯಲ್ಲಿ ಬಳಸುವ ಭಾಷೆ ಕಲಿಕೆಯ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ.ಈ ನಿಟ್ಟಿನಲ್ಲಿ ಶಿಕ್ಷಕರು ಬೋಧನೆಯಲ್ಲಿ ಮೂರು ರೀತಿಯಾಗಿ ಭಾಷೆಯನ್ನು ಬಳಸಬೇಕು.

**1. ಮೌಖಿಕ ಭಾಷೆ :** ಸರಳ, ಸ್ಪಷ್ಟ ಉಚ್ಚಾರಣೆ, ನಿರ್ಗಳತೆ, ನಿರಂತರತೆ, ಸೂಕ್ತ ಪದಗಳ ಬಳಕೆ, ಧ್ವನಿಏರಿಳಿತ, ಘಟ್ಟಿಧ್ವನಿ, ವೇಗ, ಸೂಕ್ತ ನಿಲುಗಡೆ, ಸಂಭಾಷಣೆ ಶೈಲಿಯ ಬದಲಾವಣೆ, ಮುಂತಾದವುಗಳನ್ನು ಸಂದರ್ಭೋಚಿತವಾಗಿ ಬಳಸಿ ಮಗುವಿನಲ್ಲಿ ಕಲಿಕೆ ಉಂಟಾಗಲು ಸಹಾಯಕವಾಗುವಂತೆ ಯೋಜಿಸಬೇಕು.

**2. ಶಾರೀರಿಕ ಭಾಷೆ :** ಚಲನೆ, ಹಾವಭಾವ, ನಿಲುವು, ದೃಷ್ಟಿ ಸಂಪರ್ಕ, ಮುಖಭಾವ, ಆಂಗಿಕ ಚಲನೆ, ಮುಂತಾದವುಗಳು ವಿಷಯದ ಅರ್ಥಗ್ರಹಿಕೆಗೆ ಬೋಧನೆಯಲ್ಲಿ ಅವಧಾನ ಕೇಂದ್ರೀಕರಿಸಲು, ತರಗತಿ ನಿಯಂತ್ರಣಕ್ಕೆ ಕಲಿಕೆಯೆಡೆಗೆ ಆಸಕ್ತಿ ಗಳಿಸಲು ಸಹಾಯಕವಾಗಿವೆ. ಬೋಧನೆಯಲ್ಲಿ ಶಾರೀರಿಕ ಭಾಷೆಯು ಪ್ರಮುಖ ಪಾತ್ರ ನಿರ್ವಹಿಸುತ್ತದೆ.

**3. ಲಿಖಿತ ಭಾಷೆ :** ಕೈ ಬರವಣಿಗೆ ಸ್ಪುಟವಾಗಿರಬೇಕು. ಅಕ್ಷರಗಳ ಗಾತ್ರ, ಆಕಾರ, ಅಂತರ, ನೇರವಾಗಿ ಬರೆಯಬೇಕು. ವಿವಿಧ ಬಣ್ಣಗಳ ಬಳಕೆ ಮಾಡಬೇಕು. ಕಪ್ಪು/ಬಿಳಿ ಹಲಗೆಯಲ್ಲಿ ವಿಷಯಾಂಶಗಳು, ಚಿತ್ರಗಳು, ಅಂಕಿ ಸಂಖ್ಯೆಗಳು, ನಕ್ಷೆಗಳನ್ನು ಸ್ಪಷ್ಟವಾಗಿ ರಚಿಸಬೇಕು.

ಈ ಮೇಲ್ಕಂಡ ಭಾಷಾ ಮಾಧ್ಯಮಗಳು ಕಲಿಕಾ ವಿಷಯವನ್ನು ಅರ್ಥೈಸಿಕೊಳ್ಳುವಲ್ಲಿ ಹೆಚ್ಚಿನ ಸಹಾಯವನ್ನು ಮಾಡುತ್ತವೆ.

– 51ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಮಂಗಳಮುಖಿಯರ ಜೀವನ ಮತ್ತು ಸ್ಥಿತಿಗತಿಗಳು : ಸಮಾಜಶಾಸ್ತ್ರೀಯ ಅಧ್ಯಯನ

✍ **ಡಾ. ಗಿರಿಧರ್. ಎಸ್.,** ಪೋಸ್ಟ್ ಡಾಕ್ಟೋರಲ್ ಫೆಲೋ, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ, ಕರ್ನಾಟಕ.

*ಸಾರಾಂಶ:*

*ಮಾನವ ಸಮಾಜದಲ್ಲಿ ಮನುಷ್ಯರೆಂದರೆ ಎರಡೇ ಲಿಂಗಗಳು. ಅದು ಗಂಡು ಮತ್ತು ಹೆಣ್ಣು. ಅತ್ತ ಗಂಡು ಅಲ್ಲದ ಇತ್ತ ಹೆಣ್ಣು ಅಲ್ಲದ ಮಂಗಳಮುಖಿಯರನ್ನು ಸಾಮಾಜಿಕವಾಗಿ ಸ್ವೀಕರಿಸುವ ಮನಃಸ್ಥಿತಿಯೇ ನಮ್ಮಲ್ಲಿಲ್ಲ. ನಾವು ಬದುಕುತ್ತಿರುವ ಪ್ರಪಂಚವು ನಾನಾ ರೀತಿಯ ಅಸಮಾನತೆಗಳು ಮತ್ತು ಭೇದಗಳಿಂದ ಕೂಡಿರುವಂಥದ್ದು. ವರ್ಗ, ವರ್ಣ, ಜಾತಿ, ಲಿಂಗ, ಜನಾಂಗ ಹೀಗೆ ಹತ್ತು ಹಲವು ಸಂಗತಿಗಳು ಮನುಷ್ಯರನ್ನು ಮನುಷ್ಯರಿಂದ ಬೇರ್ಪಡಿಸಿವೆ. ಇವುಗಳಲ್ಲಿ ಲಿಂಗಭೇದವು ಒಂದು ಮೂಲಭೂತ ಸಮಸ್ಯೆಯಾಗಿದೆ. ಮಂಗಳಮುಖಿಯರು ಮನುಷ್ಯರು ಎಂದು ಒಪ್ಪಿಕೊಳ್ಳದ ಸಮಾಜ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ನಾಗರಿಕನೊಬ್ಬ ಪಡೆಯುವಂಥ ಮೂಲಭೂತ ಸೌಲಭ್ಯಗಳನ್ನು ಕೊಡದೆ ವಂಚಿಸುತ್ತಿದ್ದೇವೆ. ಹಾಗಾಗಿ ಮನುಷ್ಯರಾಗಿರುವ ಇವರುಗಳು ಮನುಷ್ಯರಿಂದಲೇ ಬೇರೆಯಾಗಿ ಜೀವಿಸುವಂತ ಪರಿಸ್ಥಿತಿಯಲ್ಲಿ ಬದುಕುವಂತಾಗಿದೆ. ಲಿಂಗಭೇದ ನೀತಿಯಿಂದ ಏರ್ಪಟ್ಟಿರುವ ಅಸಮಾನತೆಯೂ ಮಂಗಳಮುಖಿಯರ ಬದುಕನ್ನು ಹಾಳು ಮಾಡುತ್ತಿದೆ. ಇಲ್ಲಿ ಲಿಂಗಭೇದ ನೀತಿಯ ಆಧಾರವಾಗಿಟ್ಟುಕೊಂಡು ಅತ್ತ ಗಂಡೂ ಅಲ್ಲದ ಇತ್ತ ಹೆಣ್ಣೂ ಅಲ್ಲದ ವಿಲಕ್ಷಣ ಸ್ವರೂಪಿಗಳಾದ ಮಂಗಳಮುಖಿಯರ ಯಾತನಮಯ ಬದುಕು ಹಾಗೂ ಸಮಾಜದಲ್ಲಿ ಅಸ್ತಿತ್ವವಿಲ್ಲದೆ ಅಪಹಾಸ್ಯಕ್ಕೀಡಾಗಿ ಕುಟುಂಬದಿಂದಲೇ ಬಹಿಷ್ಕೃತರಾಗಿರುವ ಮಂಗಳಮುಖಿಯರ ಕುರಿತು ಸಮಾಜಶಾಸ್ತ್ರೀಯ ಮಹತ್ವತೆಯನ್ನು ತಿಳಿಸುವ ಉದ್ದೇಶದಿಂದ ಪ್ರಸ್ತುತ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.*

*ಪ್ರಮುಖ ಪದಗಳು : ಮಂಗಳಮುಖಿ, ಲಿಂಗಭೇದ, ಸಮಾಜಶಾಸ್ತ್ರೀಯ ಅಧ್ಯಯನ.*

## ಪೀಠಿಕೆ

ಮಾನವನ ನಾಗರಿಕತೆಯುದ್ದಕ್ಕೂ ಸಂಸ್ಕೃತಿ, ಆಚಾರ-ವಿಚಾರ, ಜೀವನ ಶೈಲಿ, ಧರ್ಮ, ಭಾಷೆ, ಜನಾಂಗ ಇತ್ಯಾದಿಗಳಲ್ಲಿ ವಿಭಿನ್ನತೆಯನ್ನು ಗಮನಿಸಬಹುದಾಗಿದೆ. ಇವುಗಳ ಜೊತೆಗೆ ಲಿಂಗತ್ವ (Gender) ಎನ್ನುವ ಪ್ರಮುಖ ಸ್ತರವಿನ್ಯಾಸ ಅಸಮಾನತೆಯನ್ನು ಸೃಷ್ಟಿಸಿದೆ. ಪ್ರಾಚೀನ ಕಾಲದಿಂದಲೂ ಲಿಂಗ ತಾರತಮ್ಯ ಪ್ರಪಂಚದಾದ್ಯಂತ ಕಾಣಬಹುದಾಗಿದೆ. ಸಮಾಜ ಉದ್ಭವವಾದಾಗಿನಿಂದಲೂ ಪ್ರಾರಂಭವಾದ ಲಿಂಗಾಧಾರಿತ ಅಸಮಾನತೆ, ತಾರತಮ್ಯ, ಶೋಷಣೆ ವಂಚಿತತೆ ಮತ್ತು ಹಿಂದುಳಿದಿರುವಿಕೆಗಳು ಇಂದೂ ಮುಂದುವರಿದಿವೆ. ಸಮಾಜದ ದೃಷ್ಟಿಯಲ್ಲಿ ಮನುಷ್ಯ ಎಂದರೆ, ಒಂದು ಗಂಡು ಮತ್ತೊಂದು ಹೆಣ್ಣು ಅಷ್ಟೆ. ಆದರೆ ಗಂಡು ಹೆಣ್ಣಾಗುವ ಹೆಣ್ಣು ಗಂಡಾಗುವ ವಿಚಾರ ಬಂದರೆ ಮನುಷ್ಯರ ನೋಟ ವಿಭಿನ್ನವಾಗುತ್ತದೆ. ಅಲ್ಲದೆ ಅವರುಗಳನ್ನು ಅವಮಾನಕರ ಸ್ಥಿತಿಯಲ್ಲಿ ಗುರುತಿಸುವ ಕೀಳು ಮನೋಭಾವದಲ್ಲಿ ಪರಿಭಾವಿಸುವ ರೀತಿ ಹೆಚ್ಚಾಗಿ ಕಂಡುಬರುತ್ತದೆ. ಕುಟುಂಬದವರು ಸಹ ಸಮಾಜದೊಂದಿಗೆ ಕೈ ಜೋಡಿಸಲು ಪ್ರಾರಂಭಿಸುತ್ತಾರೆ. ಹೀಗೆ ಇವರುಗಳು ಕುಟುಂಬದಿಂದ ಹೊರಬಂದು ಅತಂತ್ರ ಸ್ಥಿತಿಯಲ್ಲಿ ಆಶ್ರಯಕ್ಕಾಗಿ ಸಮಾನ ಮನಸ್ಕರ ಸಾಂಗತ್ಯ ಅರಸಿ ನಗರ ಪ್ರದೇಶಗಳಿಗೆ ಬಂದು ಅವರದೇ ಆದ ಜನಾಂಗದೊಂದಿಗೆ ಸೇರಿಕೊಳ್ಳುತ್ತಾರೆ. ಅಲ್ಲಿಂದ ಪ್ರತ್ಯೇಕವಾದ ಸಂಸ್ಕೃತಿಗಳೊಂದಿಗೆ ಜೀವನ ಕ್ರಮವನ್ನು ಮುನ್ನಡೆಸಲು ಪ್ರಾರಂಭಿಸುವರು. ಹೀಗೆ ಜೀವನದುದ್ದಕ್ಕೂ ಲಿಂಗ ತಾರತಮ್ಯದ ಶೋಷಣೆಗೊಳಗಾಗಿ ಅಸಹಾಯಕತೆಯಿಂದ ನರಳುತ್ತಿರುವ ಮಂಗಳಮುಖಿಯರ ಈ ಸ್ಥಿತಿಗೆ ಕಾರಣವಾದ ಸಂಗತಿಗಳ ಬಗ್ಗೆ ಸಂಶೋಧನೆಯ ಹಿನ್ನಲೆಯಲ್ಲಿ ಗುರುತಿಸುವುದು ಹಾಗೂ ಅವರ ಬದುಕಿನ ವಿವಿಧ ಮಜಲುಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ನೋಡುವ ಅಗತ್ಯತೆಯಿದೆ.

ಮಂಗಳಮುಖಿ ಅಥವಾ ಮಧ್ಯಲಿಂಗಿಗಳು ಎಲ್ಲರಂತೆ ಆತ್ಮ ಗೌರವದಿಂದ ಬದುಕುವ ಆಸೆ ಮತ್ತು ಕನಸುಗಳನ್ನು ಇಟ್ಟುಕೊಂಡವರು. ಆದರೆ ಹೆಣ್ಣಾಗಿ ಬದುಕಲು ಬಯಸುವವರು. ಇಂತಹ ಬಯಕೆಯಿಂದಾಗಿಯೇ ಅವರು ಸಾಮಾನ್ಯ ಸಮಾಜದಿಂದ ಅನುಭವಿಸುವ ಅವಮಾನ, ತಾರತಮ್ಯ ಅವಗಣನೆ, ಹಿಂಸೆ, ದೌರ್ಜನ್ಯ ಬೆಚ್ಚಿಬೀಳಿಸುವಂತಹದ್ದು. ಜಗತ್ತಿನ ಎಲ್ಲಾ ಭಾಗಗಳಲ್ಲೂ ತಮ್ಮದೇ ಆದ ಗುರುತಿಸುವಿಕೆ, ರೀತಿ ರಿವಾಜುಗಳನ್ನು ಇಟ್ಟುಕೊಂಡು ಮಂಗಳಮುಖಿಯರು ಬದುಕುತ್ತಾ ಬಂದಿದ್ದಾರೆ. ಫಿಲಿಪೈನ್ಸ್‌ನಲ್ಲಿ ಬಕ್ಲಾ ಎಂದು, ಅಮೆರಿಕಾದಲ್ಲಿ ಒಡ್ಡಾಕೇಸ್, ಆಫ್ರಿಕಾದಲ್ಲಿ ಸೆರರ್ಸ್ ಎಂದು ಮಂಗಳಮುಖಿ (ಹಿಜ್ಡಾ) ಸಮುದಾಯದವರು ಕರೆಸಿಕೊಳ್ಳುತ್ತಾರೆ. ಇವರು ಭಾರತದಲ್ಲಿ ಹಿಜ್ಡಾ, ಜೋಗಪ್ಪ, ಜೋಗತಿ, ಶಿವಶಕ್ತಿ, ಶಿಖಂಡಿ, ಹೆಣ್ಣಿಗ, ಕೋಜಾ, ಒಂಬತ್ತು ಮುಂತಾದ ಹೆಸರುಗಳಲ್ಲಿ ಕರೆಸಿಕೊಳ್ಳುವರು. ಮಂಗಳಮುಖಿ (ಹಿಜ್ಡಾ)ಗಳು ತಮ್ಮ ಉಗಮವನ್ನು ರಾಮಾಯಣ ಮತ್ತು ಮಹಾಭಾರತದಲ್ಲಿ ಗುರುತಿಸಿಕೊಂಡಿರುವ ಉಲ್ಲೇಖಗಳಿವೆ (ಗುರುಲಿಂಗಯ್ಯ ಎಂ., 2016:101). ಮಂಗಳಮುಖಿಯರು ಒಂದು ನಿರ್ದಿಷ್ಟ ಸಾಮಾಜಿಕ ಗುಂಪನ್ನು ಪ್ರತಿನಿಧಿಸದಿದ್ದರೂ, ಭಾರತೀಯ ಸಮಾಜದಲ್ಲಿ ಅವಕಾಶ ವಂಚಿತ ಮತ್ತು ಲಿಂಗ ತಾರತಮ್ಯಕ್ಕೆ ಒಳಗಾದ ಗುಂಪಾದ್ದರಿಂದ ಇವರು ಒಂದು ಹಿಂದುಳಿದ ಗುಂಪಾಗಿದ್ದಾರೆ. ಈ ರೀತಿಯ ಹಿಂದುಳಿದ ಗುಂಪಾಗಿರುವುದರಿಂದಲೇ ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಇದಕ್ಕೆ ಸಮಾಜ ಕಾರಣವಾಗಿದ್ದರೂ, ಸಮಾಜದ ಸ್ವರೂಪ ಮತ್ತು ಸಂಸ್ಕೃತಿ ಕಾರಣೀಭೂತ ಅಂಶಗಳಾಗಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂದರ್ಭದಲ್ಲಿ ಮಂಗಳಮುಖಿಯರ ಜೀವನ ಸ್ಥಿತಿಗತಿಗಳನ್ನು ವಿವಿಧ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವುದು ಸೂಕ್ತವಾದದ್ದು.

## ಮಂಗಳಮುಖಿಯರು

'ಮಂಗಳಮುಖಿ' ಎಂದರೆ ಹೆಣ್ಣು ಅಲ್ಲದ, ಗಂಡು ಅಲ್ಲದ ಒಂದು ವ್ಯಕ್ತಿಯ ಮನಃಸ್ಥಿತಿ, ತೃತೀಯ ಲಿಂಗ ಅಥವಾ ಮಂಗಳಮುಖಿ ಎನ್ನುವ ಪರಿಭಾಷೆಗಳು ಇತ್ತೀಚೆಗೆ ಅಧಿಕೃತವಾಗಿ ಮತ್ತು ಹೆಚ್ಚಾಗಿ ಬಳಕೆಯಾಗುತ್ತಿವೆ. ಈ ಪದಗಳ ಬಳಕೆಗಿಂತ ಮುಂಚೆ ನಪುಂಸಕ, ಚಕ್ಕ, ಕೋಜಾ, ಹಿಜಡಾ, ಹಿಜರಾ, ದ್ವಿಲಿಂಗಿ, ಶಿಖಂಡಿ ಮುಂತಾದ ಪದಗಳು ಬಳಕೆಯಾಗುತ್ತಿದ್ದವು. ಹಿಜರಾ ಎನ್ನುವುದಕ್ಕೆ ಪರ್ಷಿಯನ್ ಭಾಷೆಗಳಲ್ಲಿ ವಲಸೆ ಹೋಗುವವರು ಎನ್ನುವ ಅರ್ಥವಿದೆ. ಗಂಡಾಗಿ ಹುಟ್ಟಿದವರು ಪುರುಷರಾಗಬೇಕು, ಹೆಣ್ಣಾಗಿ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಹುಟ್ಟಿದವರು ಮಹಿಳೆಯರಾಗಬೇಕೆಂದು ನಮ್ಮ ಸಮಾಜ ಇಲ್ಲಿಯವರೆಗೂ ನಂಬಿಕೊಂಡು ಬಂದ ಮೌಲ್ಯವಾಗಿದೆ. ಹುಟ್ಟುವಾಗ ದೈಹಿಕ ಗಂಡಾಗಿ ಹುಟ್ಟಿ ಭಾಗಶಃ ಅಥವಾ ಪೂರ್ತಿಯಾಗಿ ಮಹಿಳೆಯಾಗಿ ಗುರುತಿಸಿಕೊಳ್ಳಲು ಇಚ್ಛಿಸಿಕೊಳ್ಳುವವರನ್ನು ಮಂಗಳಮುಖಿಯರು ಎನ್ನುತ್ತೇವೆ. ಮಂಗಳಮುಖಿ ಎಂದರೆ ಗಂಡಾಗಿ ಹುಟ್ಟಿ ಹೆಣ್ಣಿನ ಭಾವನೆಯೊಂದಿಗೆ ಜೀವಿಸುವವರು. ಇವರಲ್ಲಿ ಕೋಥಿಗಳು, ಹಿಜ್ರಾಗಳು, ಜೋಗಪ್ಪಗಳು, ಈಜಡಾಗಳು (ಹೆಣ್ಣಾಗಿ ಹುಟ್ಟಿ ಗಂಡಾಗುವವರು) ಈಚೆಗೆ 'ಮಂಗಳಮುಖಿ'ಯರೆಂದು ಗುರುತಿಸಿಕೊಂಡವರು ಒಳಗೊಳ್ಳುತ್ತಾರೆ (ಗುರುಲಿಂಗಯ್ಯ ಎಂ., 2016:99).

## ಅಧ್ಯಯನದ ಪ್ರಾಮುಖ್ಯತೆ

ಮಂಗಳಮುಖಿಯರ ಬದುಕು ಇಂದು ಅತ್ಯಂತ ದಯನೀವಾಗಿದೆ. ಇವರ ಮೇಲೆ ವ್ಯಾಪಕ ಮಾನವ ಹಕ್ಕುಗಳ ಉಲ್ಲಂಘನೆಗಳಾಗುತ್ತಿದೆ. ಎಲ್ಲಾ ಸ್ಥರಗಳಲ್ಲಿ ಈ ಸಮುದಾಯ ವ್ಯಾಪಕ ದೌರ್ಜನ್ಯ ಮತ್ತು ಅವಹೇಳನಕ್ಕೆ ತುತ್ತಾಗುತ್ತಿದೆ. ತಾನು ಹುಟ್ಟಿದ ಮನೆಯಲ್ಲಿ ಹೆತ್ತವರಿಂದ, ಒಡಹುಟ್ಟಿದವರಿಂದ ಆರಂಭವಾಗುವ ಕಿರುಕುಳ, ನೆರೆಹೊರೆಯವರ ಅವಹೇಳನ, ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಪೊಲೀಸರಿಂದ ಕಿರುಕುಳ, ಮತ್ತು ದೌರ್ಜನ್ಯಗಳ ಸರಮಾಲೆಯಲ್ಲಿ ಮಂಗಳಮುಖಿ (ಹಿಜ್ಡಾ)ಗಳ ಬದುಕು ಯಾತನಮಯ ವಾಗಿದೆ. ಸಂವಿಧಾನಬದ್ಧ ಹಕ್ಕುಗಳಿಂದಲೂ ವಂಚಿತರಾಗಿ ಸರಕಾರದಿಂದ ದೊರೆಯಬೇಕಾದ ರಕ್ಷಣೆ, ಸೌಲಭ್ಯಗಳು ಇವರಿಗಿಲ್ಲವಾಗಿದೆ. ಮಂಗಳಮುಖಿಯರು ಬದುಕಲು ಒಂದು ಲೈಂಗಿಕ ವೃತ್ತಿಗೆ ಇಳಿಯಬೇಕು ಇಲ್ಲವೇ ಭಿಕ್ಷೆ ಬೇಡಿ ಬದುಕಬೇಕು ಎಂಬ ಎರಡೇ ಆಯ್ಕೆಗಳಿಗೆ ಸಮಾಜ ಈ ಸಮುದಾಯವನ್ನು ಸೀಮಿತಗೊಳಿಸಿದ್ದು, ಇವರನ್ನು ಮನುಷ್ಯರೆಂದು ಪರಿಗಣಿಸಲಾರದಂತಹ ದುಃಸ್ಥಿತಿಗೆ ಇಂದಿನ ನಾಗರಿಕ ಸಮಾಜ ತಲುಪಿದೆ. ಈ ಹಿನ್ನೆಲೆಯಲ್ಲಿ ಮಂಗಳಮುಖಿಯರುಗಳ ಜೀವನ ಚಿತ್ರಣವನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಕಂಡಿರುವ ಬಗೆಯನ್ನು ಅನಾವರಣಗೊಳಿಸುವುದರೊಂದಿಗೆ, ಭಿನ್ನವಾದ ಚಿಂತನೆಗಳಿಂದ ವ್ಯಾಖ್ಯಾನಿಸಿರುವುದು ಸಂಶೋಧನೆಯ ಆಶಯವಾಗಿದೆ.

ಈವರೆಗಿನ ಅಧ್ಯಯನಗಳು ಮಂಗಳಮುಖಿಯರನ್ನು ವೇಶ್ಯಾವೃತ್ತಿಯ ಒಂದು ಗುಂಪಿನಲ್ಲಿ ಚಿತ್ರಿಸುತ್ತಾ ಬಂದಿದ್ದಾರೆ. ಮಂಗಳಮುಖಿಯರು ಇಂದು ವೇಶ್ಯೆಯರಾಗಿ ಮಾರ್ಪಟ್ಟಿರುವುದು ಒಂದು ವಿಶೇಷ. ಕೌಟುಂಬಿಕ ಹಾಗೂ ಸಾಮಾಜಿಕ ಉಪೇಕ್ಷೆಗೊಳಪಡುವ ಇವರು ಇಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಲಿಂಗತಾರತಮ್ಯದಿಂದಾಗಿ ಕುಟುಂಬದ ಆಸರೆಯಿಲ್ಲದ, ಸಮಾಜದ ನಿರ್ಲಕ್ಷ್ಯದಿಂದ ಅಕ್ಷರಶ: ಬೀದಿ ಪಾಲಾದ ಮಂಗಳಮುಖಿಯರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಹಿನ್ನೆಲೆಯಲ್ಲಿ ಅವರ ಕುರಿತು ಕಳೆದೆರಡು ದರಕಗಳಿಂದಲ್ಲೇ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗಳು ಆರಂಭಗೊಂಡು, ಕೆಲವು ರಾಷ್ಟಗಳು ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಒದಗಿಸಿವೆ. ಆದರೆ, ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಮಂಗಳಮುಖಿಯರ ಸಮಸ್ಯೆಗಳು ನಿರೀಕ್ಷಿತ ಮಟ್ಟದಲ್ಲಿ ಪರಿಹಾರಗೊಂಡಿಲ್ಲ. ಸೂಕ್ತ ಪ್ರಾತಿನಿಧ್ಯತೆಯ ಕೊರತೆ ಹಾಗೂ ಪುರುಷ ಪ್ರಧಾನ ಸಮಾಜದ ಇಚ್ಛಾಶಕ್ತಿಯ ಕೊರತೆಯಿಂದ ಇವರುಗಳು ಮೂಲೆ ಗುಂಪಾಗಿರುವುದು ಇಂದು ಗೌಪ್ಯವಾಗಿ ಏನೂ ಉಳಿದಿಲ್ಲ. ಈ ನಿಟ್ಟಿನಲ್ಲಿ ಪ್ರಸ್ತುತ ಸಂಶೋಧನೆಯು ಮಂಗಳಮುಖಿಯರ ಜೀವನ ವಿಧಾನದ ಮೇಲೆ ಬೆಳಕನ್ನು ಚೆಲ್ಲುವುದರೊಂದಿಗೆ ಅವರ ಸಾಮಾಜಿಕ ಸ್ಥಾನಮಾನ ಮತ್ತು ಸಮಸ್ಯೆಗಳನ್ನು ತಿಳಿಯುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ.

## ಅಧ್ಯಯನದ ಉದ್ದೇಶಗಳು

- ಮಂಗಳಮುಖಿಯರ ಹಿನ್ನೆಲೆಯನ್ನು ಕುರಿತು ಅಧ್ಯಯನ ಮಾಡುವುದು.
- ಮಂಗಳಮುಖಿಯರ ಜೀವನ ಕ್ರಮ ಮತ್ತು ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ಅಭ್ಯಸಿಸುವುದು.
- ಮಂಗಳಮುಖಿಯರ ಸಮಸ್ಯೆಗಳು ಮತ್ತು ಕ್ಷೇಮಾಭಿವೃದ್ಧಿ ಯೋಜನೆಗಳನ್ನು ವಿಶ್ಲೇಷಿಸುವುದು.
- ಮೂಲಭೂತ ಹಕ್ಕುಗಳಿಗಾಗಿ ಮಂಗಳಮುಖಿಯರ ಸಂಘಟನಾ ಚಟುವಟಿಕೆಗಳನ್ನು ತಿಳಿಯುವುದು.

## ಅಧ್ಯಯನದ ಮಾದರಿ

ಪ್ರಸ್ತುತ ಸಂಶೋಧನೆಗೆ ಶಿವಮೊಗ್ಗ ತಾಲ್ಲೂಕಿನಲ್ಲಿ ನೆಲೆಸಿರುವ ಮಂಗಳಮುಖಿಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಅಧ್ಯಯನಕ್ಕಾಗಿ ಸರಳ ಯಾದೃಚ್ಛಿಕ ಮಾದರಿ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಶಿವಮೊಗ್ಗ ನಗರದಲ್ಲಿ ನೊಂದಾಯಿತ (ರಕ್ಷಾ ಸಮುದಾಯ ಸಂಘ) ಮಂಗಳಮುಖಿಯರ ಸಂಘದಲ್ಲಿ ಸದಸ್ಯತ್ವ ಪಡೆದಿರುವ 100 ಜನ ಮಂಗಳಮುಖಿಯರಲ್ಲಿ 40 ಜನರನ್ನು ಅಧ್ಯಯನಕ್ಕೆ ಒಳಪಡಿಸಿ, ಕ್ಷೇತ್ರಕಾರ್ಯ ಕೈಗೊಂಡು ಮಂಗಳಮುಖಿಯರನ್ನು ಸಂದರ್ಶಿಸಿ ಪ್ರಾಥಮಿಕ ಮಾಹಿತಿ ಸಂಗ್ರಹಿಸಲಾಗಿದೆ. ಹಾಗೆಯೇ, ಇದುವರೆಗೆ ಮಂಗಳಮುಖಿಯರ ಕುರಿತು ಪ್ರಕಟಗೊಂಡಿರುವ ಸಾಹಿತ್ಯ, ಕೃತಿ ಹಾಗೂ ವಿವಿಧ ದಿನ ಪತ್ರಿಕೆ, ನಿಯತಕಾಲಿಕೆಗಳಲ್ಲಿನ ಲೇಖನಗಳನ್ನು ಸಂಗ್ರಹಿಸಿ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

## ಜೀವನ ವಿಧಾನ

ಮಂಗಳಮುಖಿಯರು ಒಂದು ರೀತಿಯಲ್ಲಿ ಜಾತ್ಯಾತೀತರು, ಕಾರಣ ಕುಟುಂಬ ಮತ್ತು ಸ್ಥಳೀಯರು ಕೊಡುವ ಹಿಂಸೆಯನ್ನು ಭರಿಸಲಾರದೇ ತಮ್ಮ ಲಿಂಗ ಅಸ್ಮಿತೆಯ ಬಗ್ಗೆ ಅರಿವು ಮೂಡಿಸಿ ಮನೆ ಮಠ ಬಿಟ್ಟು ಹೊರಬಂದು ತಮ್ಮಂತೆಯೇ ಇರುವ ಜನಗಳನ್ನು ಕಂಡಾಗ ಅಂದರೆ ಆಸೆಗಳು, ಅವಶ್ಯಕತೆಗಳು, ಅವಮಾನಗಳು, ನೋವು, ಒಂಟಿತನ ಎಲ್ಲವೂ ತಮ್ಮಂತೆಯೇ ಇರುವ ಅವರುಗಳೊಂದಿಗೆ ಅಸ್ಥಿತ್ವ ಕಂಡು ಜೀವಿಸಲು ಪ್ರಾರಂಭಿಸುವರು ಅದಕ್ಕೆಲ್ಲಾ ಹಿಜಡಾ ಸಮುದಾಯ ಬಾಗಿಲು ತೆರೆದು ಸಹಕಾರ ನೀಡುತ್ತದೆ. ಇವರುಗಳು ದಾರಿಯಲ್ಲಿ ನಡೆಯುವ ಸಂದರ್ಭದಲ್ಲಿ ಸಮಾಜ ನಮ್ಮನ್ನು ಗುರುತಿಸಲಿ ಎಂಬ ಕಾರಣವಾಗಿ ಜೋರಾಗಿ ನಗುವ, ಸಾಂಪ್ರದಾಯಿಕ ವಿಧಾನದಲ್ಲಿ ಒಂದಾದ ಚಪ್ಪಾಳೆ ತಟ್ಟುವ ಮೂಲಕ ಜನರನ್ನು ತಮ್ಮ ಕಡೆ ಸೆಳೆದುಕೊಳ್ಳುತ್ತಾರೆ. ತಮ್ಮ ಸೌಂದರ್ಯವನ್ನು ಪ್ರದರ್ಶಿಸಿಕೊಳ್ಳುವ ಕಾರಣಕ್ಕಾಗಿ ಅಲಂಕಾರಿಕ ವಸ್ತುಗಳಿಗೆ ತುಂಬಾ ಹಣ ಖರ್ಚು ಮಾಡುತ್ತಾರೆ. ಕಾರಣ ಅದು ಅವರ ಬಂಡವಾಳವಾಗಿರುತ್ತದೆ. ಮಂಗಳಮುಖಿಯವರದೇ ಆದ ಪ್ರತ್ಯೇಕ ಸಮುದಾಯವಿದೆ. ಹಲವು ಧರ್ಮಗಳಿಂದ ಬಂದ ಜನರು ಈ ಸಮುದಾಯಕ್ಕೆ ಸೇರಿಕೊಳ್ಳುವ ಮೂಲಕ ಯಾವುದೇ ಭೇದ ಭಾವವಿಲ್ಲದೆ ನಾವೆಲ್ಲಾ ಹಿಜ್ರಾ ಜಾತಿಯವರು ಎಂಬುದಾಗಿ ಪ್ರತ್ಯೇಕಿಸಿಕೊಳ್ಳುವರು. ಇವರ ವೇಷಭೂಷಣ ಗಮನಿಸಿದರೆ, ಮಂಗಳಮುಖಿಯರು ಗಂಡಾಗಿ ಹುಟ್ಟಿದರೂ ಹೆಣ್ಣಿನ ಭಾವನೆಯನ್ನು ಹೊಂದಿರುವ ಕಾರಣವಾಗಿ ಸ್ತ್ರೀ ರೀತಿಯಲ್ಲಿ ಉಡುಗೆ–ತೊಡುಗೆ ಧರಿಸುವರು. ಮಂಗಳಮುಖಿಯರು ಕುಟುಂಬದಿಂದಲೂ, ಸಮಾಜದಿಂದಲೂ ಬಹಿಷ್ಕೃತವಾಗಿ ಬೀದಿಗೆ ಬರುವ ತಮ್ಮಂತೆಯೇ ಇರುವವರ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಒಂದಲ್ಲ ಒಂದು ಹಂತದಲ್ಲಿ ಹಿಜಡಾಗಳ ಗುಂಪಿಗೆ ಸೇರಿ ಅಲ್ಲಿ ತಮ್ಮ ಅಸ್ಥಿತ್ವ ಕಂಡುಕೊಳ್ಳಲು ಆರಂಭಿಸುವರು. ಅದಕ್ಕೆಲ್ಲಾ ಇವರದೇ ಆದ ಸಮುದಾಯ ಸಹಕಾರ ನೀಡುತ್ತದೆ. ಸಾಮಾನ್ಯವಾಗಿ ಮಂಗಳಮುಖಿಯರು ನಾವು ಹಿಜಡಾಗಳು ಎಂದು ಬಂದರೆ ತಕ್ಷಣವಾಗಿ ಅವರನ್ನು ಹಿಜಡಾಗಳ ಗುಂಪಿಗೆ

ಸೇರಿಸಿಕೊಳ್ಳುವುದಿಲ್ಲ. ಕೇಲವು ವಿಶೇಷ ಆಚರಣೆಗಳ ಮೂಲಕ ಗುಂಪಿನ ಸದಸ್ಯರನ್ನಾಗಿ ಮಾಡಿಕೊಳ್ಳುವರು.

## ಸಾಮಾಜಿಕ-ಆರ್ಥಿಕ ಸ್ಥಾನಮಾನ

ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಪ್ರತಿಯೊಬ್ಬ ಪ್ರಜೆಗೂ ಸ್ವಾತಂತ್ರ್ಯ, ಸಮಾನತೆ ಮತ್ತು ಕೆಲವು ಬಾಧ್ಯತೆಗಳನ್ನು ನೀಡಿದೆ. ಹೀಗಿರುವಾಗ ಲಿಂಗ ತಾರತಮ್ಯ ಎಂಬ ಸಾಮಾಜಿಕ ವ್ಯವಸ್ಥೆಯಲ್ಲಿ ಮಂಗಳಮುಖಿಯರು ಹಲವಾರು ಶೋಷಣೆ, ಹಿಂಸೆ, ದೌರ್ಜನ್ಯಗಳನ್ನು ಅನುಭವಿಸುತ್ತಿದ್ದಾರೆ. ಆದರೆ ಒಂದು ರೀತಿಯಲ್ಲಿ ನೋಡುವುದಾದರೆ ಸಮಾನತೆಯಿಲ್ಲದಿರುವುದು ಪ್ರಜಾಪ್ರಭುತ್ವವೇ ಅಲ್ಲ. ಕಾರಣ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ವ್ಯಕ್ತಿತ್ವವನ್ನು, ತನ್ನ ತನವನ್ನು, ಅಸ್ತಿತ್ವವನ್ನು ವೃದ್ಧಿಪಡಿಸಿಕೊಳ್ಳಲು ಸಮಾನ ಅವಕಾಶಗಳಿರಬೇಕು. ಆದರೆ ಮಂಗಳಮುಖಿಯರು ಇವುಗಳಿಂದ ವಂಚಿತರಾಗಿ ದೂರ ನಿಲ್ಲಬೇಕಾದ ವ್ಯವಸ್ಥೆಗಳಿವೆ. ಇತ್ತೀಚೆಗೆ ಮಂಗಳಮುಖಿಯರಿಗೆ ಕೆಲವೊಂದು ಅವಕಾಶಗಳು ದೊರೆಯುತ್ತಿದ್ದರೂ, ಪೂರ್ಣ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ಮಂಗಳಮುಖಿಯರು ಎದುರಿಸುತ್ತಿರುವ ಸಮಸ್ಯೆಗಳು ತುಂಬ ವಿಚಿತ್ರವಾದವುಗಳಾಗಿವೆ. ಸಾಮಾಜಿಕ ಕ್ಷೇತ್ರದಲ್ಲಿ ಇವರುಗಳ ಸ್ಥಾನಮಾನ ನಗಣ್ಯ. ನಮ್ಮ ಸಮಾಜ ಅನೇಕ ಬಗೆಗಳಲ್ಲಿ ಮಂಗಳಮುಖಿಯರನ್ನು ಅಗತ್ಯಕ್ಕನುಗುಣವಾಗಿ ಬಳಸಿಕೊಳ್ಳುತ್ತಿದೆ. ತನಗೆ ಬೇಕಾದ ರೀತಿಯಲ್ಲಿ ಅವರನ್ನು ಚಿತ್ರಿಸುತ್ತದೆ. ವಾಸ್ತವವಾಗಿ ಅವರುಗಳಲ್ಲಿ ಗ್ರಹಿಕೆಗೆ ಹೊರತಾದ ಮನಸ್ಸು, ಬುದ್ಧಿಶಕ್ತಿ, ವಿವೇಕಗಳು ಎಲ್ಲಾ ಮನುಷ್ಯರಂತೆಯೇ ಇದೆ ಎಂಬುದನ್ನು ಇದುವರೆಗೂ ಗುರುತಿಸಲಾರದೆ ಇರುವುದು ದುರಂತವೇ ಸರಿ. ಇವರುಗಳ ಮೇಲೆ ದಿನದಿಂದ ದಿನಕ್ಕೆ ನಡೆಯುತ್ತಿರುವ ಕ್ರೌರ್ಯ ಎಲ್ಲ ರೀತಿಯಲ್ಲಿಯೂ ಸಾಂಸ್ಕೃತಿಕ ಮತ್ತು ಭೌಗೋಳಿಕ ಎಲ್ಲೆಗಳನ್ನು ಮೀರಿ ನಡೆಯುವಂತಹ ಲಿಂಗಾಧಾರಿತ ಕ್ರೌರ್ಯವೇ ಆಗಿದೆ. ಇದರಿಂದ ಮಂಗಳಮುಖಿಯರು ದೈಹಿಕವಾಗಿ, ಲೈಂಗಿಕವಾಗಿ, ಮಾನಸಿಕವಾಗಿಯೂ ನೋವನ್ನು ಅನುಭವಿಸುತ್ತಿದ್ದಾರೆ.

ಉದ್ಯೋಗ ಕ್ಷೇತ್ರದಲ್ಲಿ ಮಂಗಳಮುಖಿಯರ ಪಾಲು ಇಲ್ಲವೆಂದೇ ಹೇಳಬೇಕು. ಸಂಪ್ರದಾಯಸ್ತ ಭಾರತೀಯ ಸಮಾಜದಲ್ಲಿ ಮಂಗಳಮುಖಿಯರು ಉದ್ಯೋಗ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರೆ ಅದನ್ನು ಕಳಂಕದಿಂದ ನೋಡುವ ದೃಷ್ಟಿಕೋನವಿದೆ. ನಾಗರಿಕ ಸಮಾಜದಲ್ಲಿ ಮಂಗಳಮುಖಿಯರಿಗೆ ಅಸ್ಥಿತ್ವವೇ ಇಲ್ಲ. ಸಮಾಜದಲ್ಲಿ ಇವರುಗಳಿಗೆ ದುಡಿಯಲು ಕೆಲಸವಿಲ್ಲ. ಪ್ರಯತ್ನಿಸಿದರೂ ಸಮಾಜದಿಂದ ಹಲವಾರು ರೀತಿಯಲ್ಲಿ ತೊಂದರೆಗಳನ್ನೇ ಎದುರಿಸುತ್ತಿರಬೇಕು. ಜೀವನದ ಸ್ಥಿತಿ ಅಥವಾ ಆಯ್ಕೆ ಬಹಳ ಇಕ್ಕಟ್ಟಿನದು. ಇಂತಹ ಸಂದರ್ಭದಲ್ಲಿ ವೇಶ್ಯಾವೃತ್ತಿ ಮತ್ತು ಭಿಕ್ಷಾಟನೆಯ ಮೂಲಕ ಜೀವನವನ್ನು ನಡೆಸಬೇಕು. ಇದು ಮಂಗಳಮುಖಿಯರಿಗೆ ಅನಿವಾರ್ಯ ಹಾಗೂ ಅವಶ್ಯಕವಾದ ಕಾರ್ಯವಾಗಿದೆ. ಮಂಗಳಮುಖಿಯರಲ್ಲಿ ಕೆಲವರು ಸರ್ಕಾರಿ ನೌಕರಿಗಳಲ್ಲಿದ್ದು, ಖಾಸಗಿ ಕೆಲಸಗಳಲ್ಲಿಯೂ ದುಡಿಯುವವರಿದ್ದಾರೆ. ಕೆಲವೊಮ್ಮೆ ಮಾನಸಿಕವಾದ ತೊಳಲಾಟದಿಂದ ನರಳಿ ಕೊನೆಗೆ ಕೆಲಸ ಬಿಟ್ಟು ಭಿಕ್ಷೆ ಬೇಡುವವರ ಉದಾಹರಣೆಗಳು ಸಾಕಷ್ಟಿವೆ. ಅವರುಗಳನ್ನು ಸಂದರ್ಶಿಸಿದ ಸಂದರ್ಭದಲ್ಲಿ ಕೆಲಸ ಬಿಡಲು ಕಾರಣವೇನು ಎಂದು ಕೇಳಿದಾಗ ಹೀಯಾಳಿಕೆ, ಟೀಕೆ, ಟಿಪ್ಪಣಿಗಳಿಂದ ಒಂದು ದಿನ ಸಹಿಸಿಕೊಳ್ಳಬಹುದು. ಆದರೆ ಪ್ರತಿ ದಿನ ಮುಂದುವರಿಯುವಾಗ ಯಾರು ತಾನೇ ಸಹಿಸಿಕೊಳ್ಳುವರು. ನಾವು ಮನುಷ್ಯರು, ನಮಗೂ ನೋವು ಸಂಕಟಗಳಿವೆ. ಅಲ್ಲದೆ ಈ ಉದ್ಯೋಗಗಳಲ್ಲಿಯೂ ಮಾನಸಿಕ ಹಿಂಸೆ, ನಿಂದನೆ ಕೆಲವು ರೀತಿಯ ಒತ್ತಡಗಳನ್ನು ಹಲವಾರು ರೀತಿಯಲ್ಲಿ ನಿಭಾಯಿಸಬೇಕು. ಕೆಲವೊಮ್ಮೆ ಸಾಧ್ಯವಾಗದೇ ಆತ್ಮಹತ್ಯೆಯ ಕಡೆಗೂ ಮುಖ ಮಾಡುವುದುಂಟು ಎಂದಿದ್ದಾರೆ. ಭಿಕ್ಷೆ ಬೇಡುವ ಕಾರ್ಯವನ್ನು ದೇವರ ಕಾರ್ಯವೆಂದು ತಿಳಿದು ನೀಯತ್ತಿನಿಂದ ಭಿಕ್ಷೆ ಬೇಡುವುದರೊಂದಿಗೆ ಜೀವನ ಮಾಡುವವರಿದ್ದಾರೆ. ಕೆಲವರು ವೇಶ್ಯಾ ವೃತ್ತಿಯೊಂದಿಗೆ ಭಿಕ್ಷೆ ಬೇಡುವವರು ಕಂಡುಬರುತ್ತಾರೆ. ಹಾಗಾಗಿ ಮಂಗಳಮುಖಿಯರು ವೇಶ್ಯಾವೃತ್ತಿ, ಭಿಕ್ಷಾಟನೆ ಕಾನೂನುಬಾಹಿರವೆಂದು ಸಾರಿದ ಮೇಲೂ ಈ ಪದ್ಧತಿಯನ್ನು ಮುಂದುವರೆಸಿಕೊಂಡು ಬರುವುದಕ್ಕೆ ಕಾರಣವಾದಂತಹ ಅಂಶಗಳನ್ನು ಗುರುತಿಸುವ ಮೂಲಕ ಪರಿಹಾರವನ್ನು ಕಂಡುಕೊಳ್ಳುವುದು ಉಚಿತ. ಅದಕ್ಕಾಗಿ ಎಲ್ಲರೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಹಾಯಕರಾಗಬೇಕು.

## ಶೈಕ್ಷಣಿಕ ಸ್ಥಾನಮಾನ

ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ, ಲಿಂಗ ಭೇದವನ್ನು ನಿಷೇಧಿಸಿತಾದರೂ ವಾಸ್ತವ್ಯದಲ್ಲಿ ಮಂಗಳಮುಖಿಯರ ಶಿಕ್ಷಣ ನಾವೆಣಿಸಿದಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ಇತ್ತೀಚೆಗೆ ಮಂಗಳಮುಖಿಯರ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿರುವ ರಾಜ್ಯ ಸರ್ಕಾರ, ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಪ್ರತಿ ಪದವಿಯಲ್ಲಿಯೂ (ಕೋರ್ಸಿನಲ್ಲಿ) ಒಂದು ಸೀಟನ್ನು ಮಂಗಳಮುಖಿಯರ ವರ್ಗಕ್ಕೆ ಮೀಸಲಿಡುವಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಆದೇಶಿಸಿದೆ. ಆದರೆ ಮಂಗಳಮುಖಿಯರು ಶಾಲಾ ಅವಧಿಯ ದಿನಗಳಲ್ಲೇ ಮನೆ ಬಿಟ್ಟು ಬಂದು ಬಿಡುತ್ತಾರೆ. ಅಂಥವರಿಗೂ ಓದಲು ಅವಕಾಶ ಮಾಡಿಕೊಡಬೇಕು. ಶಾಲೆಗಳಲ್ಲಿ ಅವಕಾಶಗಳನ್ನು ಕಲ್ಪಿಸಿಕೊಡುವುದರ ಜೊತೆಗೆ ಎಲ್ಲಾ ರೀತಿಯ ವ್ಯವಸ್ಥೆಗಳು ನೀಡುವುದು ಅವಶ್ಯಕವಾಗಿರುತ್ತದೆ. ಶಾಲೆಗೆ ನಿರ್ಭಯವಾಗಿ ಬರುವುದರಿಂದ ಹಿಡಿದು ಕಲಿಯಲು ಇತರರೊಂದಿಗೆ ಬೆರೆಯಲು ಅಗತ್ಯ ವಾತಾವರಣ ಕಲ್ಪಿಸುವುದರ ಜೊತೆಗೆ ಮಂಗಳಮುಖಿಯರ ಕುರಿತು ಕೊಡುಗೆ, ಸಾಧನೆಗಳ ಬಗ್ಗೆ ಪಠ್ಯಕ್ರಮಗಳಲ್ಲಿಯೂ ಅಳವಡಿಸುವುದರಿಂದ ಹಾಗೂ ಇವರುಗಳ ಕುರಿತು ಕೃತಿ, ಕಥೆಗಳ ರಚನೆಗೊಳ್ಳುವುದರಿಂದ ಜನಗಳಲ್ಲಿ ಬೇರೂರಿರುವ ಕೀಳುಮನಸ್ಥಿತಿಯನ್ನು ಕಿತ್ತೊಗೆಯಲು ಸಹಾಯಕವಾಗುವುದು. ಇಂದು ಶಿಕ್ಷಣ ಸಂಸ್ಥೆಗಳು ಸೇರಿದಂತೆ, ಹಲವು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸಂಘಟನೆಗಳಲ್ಲಿ ಮಂಗಳಮುಖಿಯರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ವಿಶೇಷ ಸವಲತ್ತುಗಳನ್ನು ಕೊಡುವ ಮೂಲಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಗುತ್ತದೆ. ವೃತ್ತಿಪರ ಹಾಗೂ ಉನ್ನತ ಶಿಕ್ಷಣಕ್ಕೆ ಪೂರಕವಾಗುವ ಅವಕಾಶವನ್ನು ಕಲ್ಪಿಸುವ ಪ್ರಕ್ರಿಯೆಯನ್ನು ನಾವು ಇತ್ತೀಚಿನ ದಿನಗಳಲ್ಲಿ ನೋಡಬಹುದಾಗಿದೆ. ಉದ್ಯೋಗದ ಅವಕಾಶಗಳಲ್ಲಿ ಗಣನೀಯ ಬದಲಾವಣೆಗಳು ಗೋಚರಿಸುತ್ತಿದ್ದು, ಎಲ್ಲಾ ರೀತಿಯ ಉದ್ಯೋಗ ಅವಕಾಶಗಳು ಇಂದು ಮಂಗಳಮುಖಿಯರ ದೊರೆಯಲಾರಂಭಿಸಿವೆ.

## ಸಾಂಪ್ರದಾಯಿಕ ಉದ್ಯೋಗ

ಮಂಗಳಮುಖಿಯರು ಸಾಂಪ್ರದಾಯಿಕವಾಗಿ ಪಾಲಿಸಿಕೊಂಡು ಬಂದಂತಹ ವೃತ್ತಿಯಲ್ಲಿ ಭಿಕ್ಷಾವೃತ್ತಿಯು ಒಂದಾಗಿದೆ. ಮಂಗಳಮುಖಿಯರಲ್ಲಿ ಆಕರ್ಷಣೆಯಿಂದ ಹಿಂದುಳಿದವರು ಭಿಕ್ಷೆಯನ್ನು ವೃತ್ತಿಯಾಗಿ ಮಾಡಿಕೊಳ್ಳುವರು. ಅದನ್ನು ಅಂಗಡಿ ಕೇಳುವುದು ಎಂದು ಕರೆಯುತ್ತಾರೆ. ಅಂಗಡಿ ಅಂಗಡಿಗೂ ಹೋಗಿ ಭಿಕ್ಷೆ ಕೇಳುವುದನ್ನೇ 'ಅಂಗಡಿ ಕೇಳುವುದು' ಅಥವಾ ಬಜಾರ ಕೇಳುವುದು ಎನ್ನಲಾಗುತ್ತದೆ. ರೈಲಿನಲ್ಲಿ ಭಿಕ್ಷೆ ಬೇಡಿದರೆ ಆಗ ಅದು 'ಟ್ರೈನ್ ಕೇಳುವುದು', ಟ್ರಾಫಿಕ್ ಸಿಗ್ನಲ್‌ನಲ್ಲಿ ಭಿಕ್ಷೆ ಕೇಳಿದರೆ 'ಟ್ರಾಫಿಕ್ ಕೇಳುವುದು', ಒಟ್ಟಿನಲ್ಲಿ ಮೂರು ಬಗೆಯ ಭಿಕ್ಷೆಗಳಿವೆ. ಜನ ಸಂದಣಿಯಿಂದ ತುಂಬಿರುವ ಬೀದಿಯಲ್ಲಿ ಒಬ್ಬ ಹಿಜಡಾ ಇನ್ನೊಬ್ಬ ಹಿಜಡಾನನ್ನು ಗುರುತು ಹಿಡಿದರೆ ಹೆಸರಿಡಿದೋ ಅಥವಾ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಹತ್ತಿರ ಓಡಿ ಹೋಗಿಯೋ ಕರೆಯಬೇಕಾಗಿಲ್ಲ. ಕೈ ತಟ್ಟಿ ಚಪ್ಪಾಳೆ ರೀತಿಯಲ್ಲಿ ಶಬ್ದ ಎಬ್ಬಿಸಿದರೆ ಸಾಕು, ಆ ಸದ್ದು ಹಿಜಡಾಗಳು ಎಲ್ಲಿದ್ದರೂ ಹಿಂದಿರುಗಿ ನೋಡುವಂತೆ ಮಾಡುತ್ತದೆ. ಹಾಗೆಯೇ, ಮಂಗಳಮುಖಿಯರು ನಡೆಸಿಕೊಂಡು ಬಂದಂತಹ ವೃತ್ತಿಗಳಲ್ಲಿ ಬದಾಯಿ ವೃತ್ತಿಯೂ ಒಂದಾಗಿದೆ. ಬದಾಯಿ ಎಂದರೆ ಆಶೀರ್ವಾದವನ್ನು ಪಡೆಯುವುದು ಅಥವಾ ನೀಡುವುದು ಎಂದರ್ಥ. ಇವರು ಮದುವೆಗಳಲ್ಲಿ ಹಾಗೂ ಮಗು ಹುಟ್ಟಿದಾಗ ಆಶೀರ್ವಾದ ಮಾಡಿ ಕುಣಿಯುವುದರೊಂದಿಗೆ ಬದಾಯಿ ಪಡೆಯುವರು. ಆ ಸಂದರ್ಭದಲ್ಲಿ ಜನ ಅಕ್ಕಿ, ಗೋಧಿ, ಸೀರೆ ಹೀಗೆ ಏನು ಸಾಧ್ಯವೋ ಅದನ್ನು ಕೊಡುವರು. ಅಲ್ಲದೆ ವಿಶೇಷವಾದ ದಿನಗಳಲ್ಲಿ ಬೀದಿ ಬೀದಿಯಲ್ಲಿ ನೃತ್ಯ ಮಾಡುತ್ತಾ ಮನೆ ಮನೆಗೆ ಹೋಗಿ ಆಶೀರ್ವಾದವನ್ನು ಮಾಡುವುದರೊಂದಿಗೆ ದೃಷ್ಟಿಯನ್ನು ತೆಗೆಯುವ, ಜೊತೆಗೆ ಹಾರೈಸಿ, ಅವರುಗಳು ಕೊಟ್ಟ ಹಣದಿಂದ ಒಂದು ರೂಪಾಯಿಯನ್ನು ತಲೆಯ ಸುತ್ತ ನೀವಳಿಸಿ, ಪುನಃ ಹಿಂತಿರುಗಿಸುತ್ತಾರೆ. ಈ ರೀತಿ ಮಾಡುವುದರಿಂದ ಯಾವುದೇ ದೃಷ್ಟಿದೋಷವೂ ಬರುವುದಿಲ್ಲವೆಂಬ ನಂಬಿಕೆಯೂ ಇದೆ. ಮಂಗಳಮುಖಿಯರನ್ನು ಹಣ ನೀಡಿ ಸಮಾರಂಭಗಳಿಗೆ ಕರೆಸಿಕೊಂಡು ಅವರಿಂದ ಆಶೀರ್ವಾದ ಪಡೆಯುವ ಮೂಲಕ ಹಾಡಿಸಿ, ಕುಣಿಸಿ ಸಂತೋಷಪಡಿಸುವರು. ಕೆಲವರು ಬದಾಯಿಯಲ್ಲಿ ಯಾವುದೇ ಸಂಪಾದನೆ ಇಲ್ಲದ ಸಂದರ್ಭದಲ್ಲಿ ವೇಶ್ಯಾವೃತ್ತಿಯನ್ನು ಕೈಗೊಳ್ಳುವವರು ಇದ್ದಾರೆ.

## ರಾಜಕೀಯ ಸ್ಥಾನಮಾನ

ರಾಜಕೀಯವಾಗಿಯೂ ಸಹ ಮಂಗಳಮುಖಿಯರು ಅಂಚೀಕೃತ ಗುಂಪಾಗಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಮಂಗಳಮುಖಿಯರು ರಾಜಕೀಯ ಪ್ರವೇಶಿಸದಂತೆ ವ್ಯವಸ್ಥಿತ ಕಾರ್ಯತಂತ್ರವನ್ನು ರೂಪಿಸಿಕೊಂಡಿದ್ದಾರೆ. ಹಿಂದಿನಿಂದಲೂ ಮಂಗಳಮುಖಿಯರು ರಾಜಕೀಯ ಅವಕಾಶ ವಂಚಿತರಾಗಿ ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ರಾಜಕೀಯ ಅವಕಾಶವಿಲ್ಲದೆ ಸಮುದಾಯಗಳ ಆರ್ಥಿಕ ಪ್ರಗತಿ ಸಾಧ್ಯವಿಲ್ಲ ಎನ್ನುವ ಇವತ್ತಿನ ಸಂದರ್ಭದಲ್ಲಿ ಮಂಗಳಮುಖಿಯರು ಒಂದು ನಿರ್ದಿಷ್ಟ ಸಮೂಹವನ್ನು ಪ್ರತಿನಿಧಿಸುವುದರಿಂದ ಅವರಿಗೆ ರಾಜಕೀಯ ಅವಕಾಶವಿಲ್ಲದೆ ಅವರ ಆರ್ಥಿಕ ಪ್ರಗತಿ ಸಾಧ್ಯವಿಲ್ಲವೆಂದೇ ಹೇಳಬಹುದು. ಭಾರತದ ಸಂವಿಧಾನದ ಭಾಗ 3 ಮೂಲಭೂತ ಹಕ್ಕುಗಳ ವಿಭಾಗದ ಅನುಚ್ಛೇದ 15ರಲ್ಲಿ 'ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮ ಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧ' ಒಂದು ರಾಜ್ಯವು ಯಾರೇ ನಾಗರಿಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ತಾರತಮ್ಯವನ್ನು ಮಾಡತಕ್ಕದ್ದಲ್ಲ ಎಂದು ಹೇಳಿದ್ದಾದರೂ ನಮ್ಮಲ್ಲಿ ಇನ್ನು ತಾರತಮ್ಯಗಳು ಜರುಗುತ್ತಲೇ ಇವೆ.

ಇತ್ತೀಚೆಗೆ ಮಂಗಳಮುಖಿಯರು 'ಮತದಾರರ ಚೀಟಿ ಬೇಕು' ಎಂದು ಬೇಡಿಕೆಯಿಟ್ಟು ಹೋರಾಟ ಮಾಡಿದ ಕಾರಣವಾಗಿ ಕೆಲವರು ಗುರುತಿನ ಚೀಟಿಯನ್ನು ದೊರಕಿಸಿಕೊಂಡಿದ್ದಾರೆ, ಅಲ್ಲದೆ ಮತದಾರರ ಪಟ್ಟಿಯಲ್ಲಿ ಇವರುಗಳ ಹೆಸರು ಸೇರ್ಪಡೆಗೊಂಡಿದೆ. ಈ ಒಂದು ಉಪಯೋಗದಿಂದ ಮುಂದೆ ವಿಧಾನಸಭೆಯ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಪಡೆದಿರುವರು. ಆದರೆ ಈ ಅವಕಾಶ ಎಲ್ಲ ಮಂಗಳಮುಖಿಯರಿಗೂ ದೊರೆತಿಲ್ಲ. ಭಾರತದ ಜನಗಣತಿಯಲ್ಲಿಯೂ ಕೂಡ ಮೂರನೇಯ ಲಿಂಗದವರ ಅಸ್ಥಿತ್ವದ ಪ್ರಸ್ತಾಪವೇ ಇಲ್ಲ. ಅಲ್ಲದೆ ಮಂಗಳಮುಖಿಯರು ತಾವು ತೃತೀಯ ಲಿಂಗಕ್ಕೆ ಸೇರಿದವರು ಎಂದು ಸಾರ್ವಜನಿಕವಾಗಿ ಗುರುತಿಸಿಕೊಳ್ಳುವವರ ಸಂಖ್ಯೆ ಭಾರತದಲ್ಲಿ ಗಣನೀಯ ಸಂಖ್ಯೆಯಲ್ಲಿದೆ. ಭಾರತದ ಸಂವಿಧಾನದ ಭಾಗ 3 ಮೂಲಭೂತ ಹಕ್ಕುಗಳ ವಿಭಾಗದ ಅನುಚ್ಛೇದ 15ರಲ್ಲಿ 'ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮ ಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧ' ಒಂದು ರಾಜ್ಯವು ಯಾರೇ ನಾಗರಿಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ತಾರತಮ್ಯವನ್ನು ಮಾಡತಕ್ಕದ್ದಲ್ಲ ಎಂದು ಹೇಳಿದ್ದಾದರೂ ನಮ್ಮಲ್ಲಿ ಇನ್ನು ತಾರತಮ್ಯಗಳು ಜರುಗುತ್ತಲೇ ಇವೆ.

## ಮಂಗಳಮುಖಿಯರು ಮತ್ತು ಸಂಘಟನೆ

ಸ್ವತಂತ್ರ ನಂತರ ಮಂಗಳಮುಖಿಯರ ಸಬಲೀಕರಣಕ್ಕಾಗಿ ಹಲವಾರು ಕಾರ್ಯತಂತ್ರಗಳನ್ನು ಕೇಂದ್ರ ಸರ್ಕಾರ ರೂಪಿಸಿದೆ. ಜೊತೆಗೆ ಹಲವು ಸಂಘಟನೆಗಳು ಹೋರಾಟ ಮಾಡುತ್ತಲೇ ಬಂದಿವೆ. ಮಂಗಳಮುಖಿಯರ ಹಕ್ಕುಗಳನ್ನು ರಕ್ಷಿಸಲು ಹಲವಾರು ಕಾನೂನುಗಳು ಅಸ್ಥಿತ್ವಕ್ಕೆ ಬಂದಿವೆ. ಇಂದು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿರುವ ಮಂಗಳಮುಖಿಯರು ಇಂದು ಸಂಘಟಿತರಾಗುತ್ತಿದ್ದಾರೆ. ಆರ್ಥಿಕವಾಗಿ ಸಬಲೀಕರಣಗೊಳ್ಳುವುದರ ಜೊತೆಗೆ ಹಲವಾರು ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಿದ್ದಾರೆ. ರಾಜ್ಯ ಮಟ್ಟದಲ್ಲಿ ಸಂಗಮ, ಪಯಣ, ಸಾರಥ್ಯ, ಅನನ್ಯ, ಜೀವ, ಒಂದೆಡೆಯಂತಹ ಮಂಗಳಮುಖಿಯರ ಸಂಘಟನೆಗಳು ಇವರೆನ್ನೆಲ್ಲಾ ಒಂದುಗೂಡಿಸಿ ಸಂಕಷ್ಟಗಳನ್ನು ಆಲಿಸಿ, ಅವರ ಬೇಡಿಕೆಗಳಿಗೆ ದನಿಗೂಡಿಸಿ ಅವರ ಬೆಂಗಾವಲಾಗಿ ನಿಂತಿವೆ. ಇತ್ತೀಚೆಗೆ ಅಖಿಲ ಕರ್ನಾಟಕ ಮಂಗಳಮುಖಿಯರ ವೇದಿಕೆಯವರು ಹಾಗೂ ಸರಕಾರ ಕೆಲವೊಂದು ಯೋಜನೆಗಳನ್ನು ರೂಪಿಸಿಕೊಡುವ ಮೂಲಕ ಮಂಗಳಮುಖಿಯರಿಗೆ ಅನುಕೂಲಕರವಾದ ರೀತಿಯಲ್ಲಿ ಸಹಾಯ ಮಾಡುತ್ತಿದ್ದಾರೆ. ಮಂಗಳಮುಖಿಯರ ಅಥವಾ ಲೈಂಗಿಕ ಅಲ್ಪಸಂಖ್ಯಾತರ ಏಳ್ಗೆಗೆಂದು ಶಿವಮೊಗ್ಗದಲ್ಲಿ ಕಂಡುಬರುವ ಏಕೈಕ ಸಂಘ ಎಂದರೆ ರಕ್ಷಾ ಸಮುದಾಯ ಸಂಘ. ಇದರ ಅಧ್ಯಕ್ಷರು ಸ್ವಯಂ ಸೇವೆಯಿಂದ ಮಂಗಳಮುಖಿಯರ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ್ದಾರೆ. ಇತ್ತೀಚೆಗೆ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲರಿಗೂ ಇರುವ ಮಾದರಿಯಲ್ಲಿ ಇವರಿಗೂ ಕೆಲವೊಂದು ಅವಕಾಶಗಳು ದೊರೆತಿವೆ. ರೇಷನ್ ಕಾರ್ಡ್ (ಪಡಿತರ ಚೀಟಿ) ದೊರಕಿದ್ದು ಇನ್ನು ಕೆಲವರಿಗೆ ಸಂಘಟನೆಗಳು ಕೆಲವೊಂದು ಉಪಯೋಗಗಳನ್ನು ಮಾಡಿಕೊಡುವುದರ ಜೊತೆಗೆ ಅವರಲ್ಲಿ ಮನುಷ್ಯತ್ವದ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸುತ್ತಿದ್ದಾರೆ.

## ಮಾಹಿತಿ ವಿಶ್ಲೇಷಣೆ

ಸಂಶೋಧನೆಯಲ್ಲಿ ಪ್ರಾಥಮಿಕ ಮಾಹಿತಿ ಸಂಗ್ರಹಣೆಗಾಗಿ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಂಡ ನೇರವಾಗಿ ಭೇಟಿಮಾಡಿ ಸಂದರ್ಶಿಸಿ ಅವರೊಳಗೆ ನಡೆಯುವ ಗುಂಪು ಚರ್ಚೆಗಳಲ್ಲಿ ಭಾಗವಹಿಸಲಾಗಿದೆ. ಅಲ್ಲದೆ, ಅವರ ಪರವಾಗಿ ಹೋರಾಟ ಮಾಡುವ ಸಂಘಟನೆಗಳ ಜೊತೆಗೂ ಚರ್ಚಿಸಲಾಗಿದೆ. ಅವರ ಆಚರಣೆಗಳು ಸಭೆ–ಸಮಾರಂಭಗಳಲ್ಲಿ ಪಾಲ್ಗೋಳ್ಳುವುದರ ಮೂಲಕ ಮಾಹಿತಿ ಕಲೆಹಾಕಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಮುಂದಿನ ಕೋಷ್ಟಕದ ಸಹಾಯದಿಂದ ವಿಶ್ಲೇಷಿಸಲಾಗಿದೆ.

ಕೋಷ್ಟಕ–01ರಲ್ಲಿ ಕಂಡುಬಂದಂತೆ ಸಂದರ್ಶಿತ ಮಂಗಳ ಮುಖಿಯರಲ್ಲಿ ಹೆಚ್ಚಿನವರು ಅಂದರೆ ಶೇಕಡ 50ರಷ್ಟು ಮಂಗಳಮುಖಿಯರು 26–30 ವಯಸ್ಸಿನವರಿರುವುದು ತಿಳಿದುಬರುತ್ತದೆ. ಶೇಕಡ 50ರಷ್ಟು ಮಂಗಳಮುಖಿಯರ ಜೊತೆಗೂಡಿ ಇತರೆ ಸ್ಥಳಗಳಲ್ಲಿ ವಾಸಿಸುತ್ತಿರುವುದನ್ನು ನೋಡಬಹುದು. ಇವರಲ್ಲಿ ಅವಿವಾಹಿತೆಯರೇ ಹೆಚ್ಚಿನವರು ಅಂದರೆ ಶೇಕಡ 90ರಷ್ಟಿರುವುದು ಕಂಡುಬರುತ್ತದೆ. ಸಂದರ್ಶಿತರಲ್ಲಿ ಶೇಕಡ 50ರಷ್ಟು ಪ್ರತ್ಯೇಕ ಸ್ಥಳಗಳಲ್ಲಿ ಹಾಗೂ ಶೇಕಡ 15ರಷ್ಟು ಮಂಗಳಮುಖಿಯರ

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಕೋಷ್ಟಕ : 01.**
**ಮಂಗಳಮುಖಿಯರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು**

| ಕ್ರ ಸಂ. | ಪ್ರತಿಕ್ರಿಯೆ | ಆವೃತ್ತಿ (ಓ=40) | ಶೇಕಡಾವಾರು |
|---|---|---|---|
| 01. | ವಯೋರಚನೆ | | |
| | 21–25 | 08 | 20.00 |
| | 26–30 | 20 | 50.00 |
| | 31–35 | 08 | 20.00 |
| | 41–45 | 02 | 05.00 |
| | 46ಕ್ಕಿಂತ ಹೆಚ್ಚು | 02 | 05.00 |
| 02. | ವಾಸಸ್ಥಳ | | |
| | ತಂದೆ/ತಾಯಿಯ ಮನೆ | 14 | 35.00 |
| | ಪ್ರತ್ಯೇಕವಾಗಿ/ಇತರೆ ಸ್ಥಳ | 20 | 50.00 |
| | ಮಂಗಳಮುಖಿಯರ ಜೊತೆ | 06 | 15.00 |
| 03. | ವೈವಾಹಿಕ ಅಂತಸ್ತು | | |
| | ವಿವಾಹಿತರು | 04 | 10.00 |
| | ಅವಿವಾಹಿತರು | 36 | 90.00 |
| 04. | ಶೈಕ್ಷಣಿಕ ಮಟ್ಟ | | |
| | ಅನಕ್ಷರಸ್ಥರು | 02 | 05.00 |
| | ಪ್ರಾಥಮಿಕ | 18 | 45.00 |
| | ಪ್ರೌಢ | 14 | 35.00 |
| | ಪದವಿಪೂರ್ವ | 04 | 10.00 |
| | ಪದವಿ | 02 | 05.00 |
| 05. | ಉದ್ಯೋಗದ ಸ್ಥಾನಮಾನ | | |
| | ಭಿಕ್ಷೆ/ಬದಾಯಿ ಬೇಡುವುದು | 30 | 75.00 |
| | ವ್ಯಾಪಾರ | 02 | 05.00 |
| | ಸ್ವ–ಉದ್ಯೋಗ | 08 | 20.00 |
| 06. | ವಾರ್ಷಿಕ ಆದಾಯ (ರೂ.) | | |
| | 10,000ಕ್ಕಿಂತ ಕಡಿಮೆ | 08 | 20.00 |
| | 10,000–20,000 | 26 | 65.00 |
| | 20,000–30,000 | 02 | 5.00 |
| | 40,000–50,000 | 04 | 10.00 |
| 07. | ಕುಟುಂಬ ಮತ್ತು ಸಮಾಜದಲ್ಲಿ ಗೌರವ ಸ್ಥಾನಮಾನ | | |
| | ಉನ್ನತ | 02 | 05.00 |
| | ಮಧ್ಯಮ | 02 | 05.00 |
| | ಕೆಳಸ್ಥಾನ | 36 | 90.00 |

*ಮೂಲ : ಕ್ಷೇತ್ರಾಧ್ಯಯನದ ಮಾಹಿತಿ*

ಜೊತೆಯಲ್ಲಿ ವಾಸಿಸುತ್ತಿರುವುದನ್ನು ನೋಡಬಹುದು. ಸಂದರ್ಶಿಸಿದ ಒಟ್ಟು 40 ಮಂಗಳಮುಖಿಯರಲ್ಲಿ ಹೆಚ್ಚಿನವರು ಅಂದರೆ ಶೇಕಡ 45ರಷ್ಟು ಪ್ರಾಥಮಿಕ ಶಿಕ್ಷಣ ಪಡೆದವರಿರುವುದು ತಿಳಿದುಬರುತ್ತದೆ. ಅಧ್ಯಯನದಲ್ಲಿ ಸಂದರ್ಶಿತರು ತಿಳಿಸಿರುವಂತೆ ಮಂಗಳಮುಖಿ ಎಂದು ತಿಳಿದ ಮೇಲೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಇಷ್ಟವಾಗಲಿಲ್ಲ ಎಂದು ತಿಳಿಸಿದರೆ ಬಹುಪಾಲು ಮಂಗಳಮುಖಿಯರು ತಿಳಿಸಿರುವಂತೆ ನಾನೊಬ್ಬ ತೃತೀಯ ಲಿಂಗಿಯಾದ ಕಾರಣ ನನ್ನ ವರ್ತನೆಯಲ್ಲಿನ ಭಿನ್ನತೆಯನ್ನು ಕಂಡು ನನ್ನ ಸ್ನೇಹಿತರು ಮತ್ತು ಶಿಕ್ಷಕರು ನನ್ನನ್ನು ದೂರ ಇಟ್ಟರು. ಅಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಮನ ನೋಯಿಸಿದರು. ನನ್ನನ್ನು ಹೀಯಾಳಿಸಿದರು ಇದರಿಂದ ಮನನೊಂದು ಸಹಿಸಲಾಗದೆ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ಕೈಬಿಡಲಾಯಿತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಧ್ಯಯನದಲ್ಲಿ ಮಂಗಳಮುಖಿಯರ ಉದ್ಯೋಗವನ್ನು ಗಮನಿಸಿದಾಗ ಶೇಕಡ 75ರಷ್ಟು ಭಿಕ್ಷೆ/ಬದಾಯಿ ಬೇಡುತ್ತಿರುವುದು ತಿಳಿದುಬರುತ್ತದೆ. ಇವರ ವಾರ್ಷಿಕ ಆದಾಯವನ್ನು ಗಮನಿಸಿದಾಗ ಬಹುತೇಕ ಮಂಗಳಮುಖಿಯರು ಅತ್ಯಲ್ಪ ಪ್ರಮಾಣದ ವಾರ್ಷಿಕ ಆದಾಯವನ್ನು ಹೊಂದಿದ್ದಾರೆ. ಮಂಗಳಮುಖಿಯರು ಕುಟುಂಬದಿಂದ ಮತ್ತು ಸಮಾಜದಿಂದ ಮನನೊಂದವರು. ನಮ್ಮ ಸಮಾಜದಲ್ಲಿ ಎಲ್ಲರಿಗೂ ಬದುಕುವ ಅವಕಾಶ ಇದೆ. ಅದೇ ರೀತಿ ಮಂಗಳಮುಖಿಯರು ಅವರಿಗೆ ಇಷ್ಟ ಬಂದ ಹಾಗೆ ವಾಸಿಸಲು ಬಿಡದೆ ಅವರನ್ನು ವಂಚಿತರನ್ನಾಗಿ ಮಾಡಲಾಗುತ್ತಿದೆ. ಹಾಗೆಯೇ ಕುಟುಂಬ, ನೆರೆಹೊರೆ ಹಾಗೂ ಸಮಾಜದಲ್ಲಿ ಯಾವುದೇ ಗೌರವಗಳು ದೊರಕದೇ ಶೇಕಡ 90ರಷ್ಟು ಕೆಳ ಸ್ಥಾನವನ್ನು ಹೊಂದಿದ್ದಾರೆಂದು ತಿಳಿದುಬರುತ್ತದೆ.

## ಸಂಶೋಧನೆಯಲ್ಲಿ ವ್ಯಕ್ತವಾದ ಅಂಶಗಳು

ಮಂಗಳಮುಖಿಯರ ಸ್ಥಿತಿಗತಿಗಳನ್ನು ಕುರಿತು ಅಧ್ಯಯನವನ್ನು ಕೈಗೊಂಡ ಫಲವಾಗಿ ಸಂಶೋಧನೆಯಿಂದ ವ್ಯಕ್ತವಾದ ಕೆಲವು ಅಂಶಗಳನ್ನು ಈ ಕೆಳಕಂಡಂತೆ ಗಮನಿಸಬಹುದಾಗಿದೆ.

- ಸಂದರ್ಶಿತರಲ್ಲಿ ಕನ್ನಡ ಭಾಷೆಯನ್ನು ತಮ್ಮ ಮಾತೃಭಾಷೆಯನ್ನಾಗಿ ಹೊಂದಿರುವವರು ಶೇಕಡ 60ರಷ್ಟು, ಶೇಕಡ 20ರಷ್ಟು ತೆಲುಗು ಭಾಷೆಯನ್ನು, ಶೇಕಡ 15ರಷ್ಟು ತಮಿಳು ಭಾಷೆಯನ್ನು ಮತ್ತು ಶೇಕಡ 05ರಷ್ಟು ಮಾಹಿತಿದಾರರರು ಹಿಂದಿ ಭಾಷೆಯನ್ನು ತಮ್ಮ ಮಾತೃಭಾಷೆಯನ್ನಾಗಿ ಹೊಂದಿರುವವರು ಕಂಡುಬರುತ್ತಾರೆ.
- ಅಧ್ಯಯನದಲ್ಲಿ ಕಂಡುಬಂದಂತೆ ಮಂಗಳಮುಖಿಯರು ಹೆಣ್ಣು ದೇವರ ಆರಾಧಕರು. ಮಂಗಳವಾರ ಮತ್ತು ಶುಕ್ರವಾರದಂದು ಇವರು ಪೂಜೆ ಸಲ್ಲಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಸವದತ್ತಿ ಎಲ್ಲಮ್ಮ, ಹುಲಿಗೆಮ್ಮ ಹಾಗೂ ಉಚ್ಚೆಂಗೆಮ್ಮ ದೇವರನ್ನು (ಅರ್ಧನಾರೀಶ್ವರ ದೇವರು) ಇವರು ಆರಾಧಿಸುತ್ತಾರೆ.
- ಮಂಗಳಮುಖಿಯರಲ್ಲಿ ಮುತ್ತು ಕಟ್ಟಿಸಿಕೊಳ್ಳುವ ಸಂಪ್ರದಾಯವಿದೆ. ಕರ್ನಾಟಕದಲ್ಲಿ ಇವರನ್ನು ಜೋಗಪ್ಪ, ಜೋಗತಿಯರು ಎಂದು ಕರೆಯುವರು. ಮುತ್ತು ಕಟ್ಟಿಸಿಕೊಂಡವರು ಹಳ್ಳಿಗಳಲ್ಲಿ ಭಿಕ್ಷಾಟನೆ ಮಾಡಿ ಜೀವನ ಮಾಡುತ್ತಾರೆ. ಕರ್ನಾಟಕದ ಸವದತ್ತಿ, ಬಳ್ಳಾರಿ, ಧಾರವಾಡ, ಹುಬ್ಬಳ್ಳಿ, ಶಿವಮೊಗ್ಗ ಮತ್ತು ದಾವಣಗೆರೆ ಮುಂತಾದ ಕಡೆಗಳಲ್ಲಿ ಈ ಸಂಪ್ರದಾಯ ಇಂದಿಗೂ ಇದೆ.
- ಅಧ್ಯಯನದಲ್ಲಿ ಕಂಡುಬಂದಂತೆ, ಮಂಗಳಮುಖಿಯರನ್ನು ಶುಭಕಾರ್ಯಗಳಿಗೆ ಕರೆದು ಹಾಡಿಸಿ, ಕುಣಿಸಿ ಹಣ ನೀಡುವ ಪರಿಪಾಠವನ್ನು ಕಾಣಬಹುದು. ಆದರೆ ಸಾರ್ವಜನಿಕರಿಗೆ ಹಣಕ್ಕಾಗಿ ಪೀಡಿಸುವುದರಿಂದ ಜನರಿಗೆ ಕಿರಿಕಿರಿಯುಂಟಾಗುತ್ತದೆ.
- ಅಧ್ಯಯನದಲ್ಲಿ ಮಂಗಳಮುಖಿಯರನ್ನು ಕೌಟುಂಬಿಕ ಜೀವನದ ಬಗ್ಗೆ ಕೇಳಿದಾಗ ಬಹುತೇಕ ಮಂದಿ ತಮ್ಮ ಮನೆಯವರ ಸಂಪರ್ಕವನ್ನೇ ಕಡಿದುಕೊಂಡು ಜೀವನ ಮಾಡುತ್ತಿದ್ದಾರೆ. ಇನ್ನೂ ಕೆಲವರು ಮನೆಯಿಂದ ಹೊರಗಿದ್ದರೂ ಅಪರೂಪಕ್ಕೊಮ್ಮೆ ಮನೆಗೆ ಹೋಗಿಬರುವುದನ್ನು ಕಾಣಬಹುದು.
- ಅಧ್ಯಯನದಲ್ಲಿ ಕಂಡುಬಂದಂತೆ, ಮಂಗಳಮುಖಿಯರು ಎಂಬ ಕಾರಣಕ್ಕೆ ಕುಟುಂಬ, ನೆರೆಹೊರೆ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ನಿಂದನೆಗೆ ಒಳಗಾಗುವ ಘಟನೆಗಳಿವೆ. ಈ ಕಾರಣಕ್ಕಾಗಿಯೇ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿರುವವರ ಪ್ರಮಾಣ ಇವರಲ್ಲಿ ಹೆಚ್ಚಿದೆ.

- ಮಂಗಳಮುಖಿಯರು ತಮ್ಮ ದೈನಂದಿನ ಚಟುವಟಿಕೆಗಳಾದ ಅಂಗಡಿ ಕೇಳುವುದು, ಭಿಕ್ಷಾಟನೆ ಹಾಗೂ ಸಭೆ–ಸಮಾರಂಭಗಳಲ್ಲಿ ಸ್ಥಳೀಯರೊಂದಿಗೆ ಅನೇಕ ಬಾರಿ ಸಂಘರ್ಷಕ್ಕಿಳಿದ ಸನ್ನಿವೇಶಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.
- ಅಧ್ಯಯನದಲ್ಲಿ ಕಂಡುಬಂದಂತೆ, ಇವರು ಬದಾಯಿ ಬೇಡುವ ಸಂದರ್ಭದಲ್ಲಿ ಭಿಕ್ಷೆ ನೀಡದಿದ್ದರೆ, ಶಪಿಸುವುದು, ಬೈದಾಡುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಬಟ್ಟೆ ಎತ್ತಿ ಅಸಹ್ಯವಾಗಿ ವರ್ತಿಸುವುದು ಇವೆಲ್ಲಾ ನಿತ್ಯ ಜೀವನದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.
- ಸಂದರ್ಶಿತರಲ್ಲಿ ಸರ್ಕಾರದಿಂದ ಕೆಲವರು ಧನ ಸಹಾಯ ಬೇಡಿದರೆ, ಮತ್ತೆ ಕೆಲವರು ನೌಕರಿ ನೌಕರಿನೀಡಿ ಬದುಕಲು ಅವಕಾಶಕೊಡಿ ಎಂದಿದ್ದಾರೆ. ಬಹುತೇಕ ಶೇಕಡ 95ರಷ್ಟು ಮಂಗಳಮುಖಿಯರು ನಮಗೆ ವಿಶೇಷ ಮೀಸಲಾತಿ ಅವಶ್ಯಕತೆ ಇದೆ ಎಂದು ತಿಳಿಸಿರುವುದು ಕಂಡುಬರುತ್ತದೆ.
- 18 ರಿಂದ 64 ವರ್ಷದವರೆಗಿನ ಮಂಗಳಮುಖಿಯರಿಗೆ ಮೈತ್ರಿ ಪಿಂಚಣಿ ಯೋಜನೆಯನ್ನು 2013ರಿಂದ ಜಾರಿಗೊಳಿಸಿ ಮಾಸಿಕ 600ರೂ ಪಿಂಚಣಿ ನೀಡುತ್ತಿದೆ. ಆದರೆ ಶಿವಮೊಗ್ಗ ನಗರದಲ್ಲಿರುವ 31ಮಂದಿ ಮಾತ್ರ ಯೋಜನೆಯ ಫಲಾನುಭವಿಗಳಾಗಿರುವುದು ಅಧ್ಯಯನದಲ್ಲಿ ಕಂಡುಬಂದಿದೆ.
- ಒಟ್ಟಾರೆ ಅಧ್ಯಯನದಲ್ಲಿ ಕಂಡುಬಂದಂತೆ ಇವರ ಸಂಪ್ರದಾಯ, ಆಚಾರ–ವಿಚಾರಗಳೇ ಕೆಲವೊಮ್ಮೆ ಇವರನ್ನು ಸಮಾಜದಿಂದ ಪ್ರತ್ಯೇಕಗೊಳಿಸಿದೆ. ನಾಗರಿಕ ಸಮಾಜವನ್ನು ಈ ಸಮುದಾಯ ಒಳಗೊಳ್ಳಬೇಕಾದರೆ ಇವರ ಜೀವನವಿಧಾನದಲ್ಲಿ ಬದಲಾವಣೆ ಹೊಂದಬೇಕಾದ ಅನಿವಾರ್ಯತೆಯಿದೆ.

## ಸಲಹೆಗಳು

- ಸರ್ಕಾರವು ಮಂಗಳಮುಖಿಯರಿಗೆ ಮೂಲಭೂತ ಸೌಕರ್ಯಗಳನ್ನು ನೀಡಿ ಮಂಗಳಮುಖಿಯರ ಸಂಘ ಸಂಸ್ಥೆಗಳಿಗೆ ಹೆಚ್ಚಿನ ಆರ್ಥಿಕ ಅನುದಾನವನ್ನು ನೀಡಬೇಕು. ಮಂಗಳಮುಖಿಯರಿಗೆ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಮುಕ್ತವಾದ ವಾತಾವರಣ ಕಲ್ಪಿಸಿಕೊಡಬೇಕು. ಸರ್ಕಾರದ ವಸತಿ ಯೋಜನೆಗಳಲ್ಲಿ ಮಂಗಳಮುಖಿಯರಿಗೆ ಉಚಿತ ನಿವೇಶನ ನೀಡಬೇಕು.
- ಸಮಾಜದಲ್ಲಿ ಮಂಗಳಮುಖಿಯರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು ಮತ್ತು ಅವರನ್ನು ಎಲ್ಲರಂತೆ ಸಮಾನವಾಗಿ ಕಾಣಬೇಕು.
- ಮಂಗಳಮುಖಿಯರಲ್ಲಿ ಅರ್ಧದಲ್ಲಿ ಶಾಲೆ ಬಿಟ್ಟು ಬರುವವರ ಸಂಖ್ಯೆಯೇ ಜಾಸ್ತಿ ಸಹಪಾಠಿಗಳ, ಮನೆಯವರ, ನೆರೆಹೊರೆಯವರ ಮೂದಲಿಕೆಗೊಳಗಾಗಿ ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದಾರೆ. ಇವರ ಮನವೊಲಿಸಿ ಮತ್ತೆ ಶಿಕ್ಷಣ ಒದಗಿಸುವ ವಾತಾವರಣ ನಿರ್ಮಾಣವಾಗಬೇಕು. ಶಾಲೆಯಲ್ಲಿ ತೃತೀಯ ಲಿಂಗಿ ಮಗು ಸ್ನೇಹಿ ವಾತಾವರಣವಿರಬೇಕು.
- ಶಾಲೆ, ಆಸ್ಪತ್ರೆ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ತೃತೀಯ ಲಿಂಗಿಗಳಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆಯಿರಬೇಕು. ಶಾಲೆಗಳಲ್ಲಿ ಹಾಗೂ ಸಾರ್ವಜನಿಕವಾಗಿ ತೃತೀಯ ಲಿಂಗಿಗಳೂ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಬೇಕು.
- ಮಂಗಳಮುಖಿಯರಿಗಾಗಿ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಕೇಂದ್ರ ಸ್ಥಾಪನೆಯಾಗಬೇಕು. ಹಾಗೂ ಇವರ ಸಮಗ್ರ ದಾಖಲೆಯನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಅಧ್ಯಯನಗಳಾಗಬೇಕು.
- ಮಂಗಳಮುಖಿಯರು ಬಾಲ್ಯದಿಂದಲೇ ತಾರತಮ್ಯಕ್ಕೊಳಗಾಗುತ್ತಾರೆ. ಇದರಿಂದ ಅವರು ಮಾನಸಿಕವಾಗಿ ಕುಗ್ಗಿಹೋಗುತ್ತಾರೆ. ಪ್ರತಿ ಶಾಲೆಯಲ್ಲಿ ಇವರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿ ಆಪ್ತ ಸಮಾಲೋಚಕರನ್ನು ನೇಮಿಸುವ ಅವಶ್ಯಕತೆಯಿದೆ ಇದೆ.
- ಮಂಗಳಮುಖಿಯರ ಹಕ್ಕು ಹಾಗೂ ಗೌರವಯುತ ಜೀವನಕ್ಕಾಗಿ ಸಾಕಷ್ಟು ಅನುದಾನವನ್ನು ಮೀಸಲಿಡಬೇಕು. ಇದಕ್ಕಾಗಿ ರಾಜ್ಯ ಹಾಗೂ ಕೇಂದ್ರದಲ್ಲಿ ಪ್ರತ್ಯೇಕ ಬಜೆಟ್ ಮಂಡಿಸಬೇಕು.
- ಸಂವಿಧಾನದ ಪ್ರಕಾರ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಂಗಳಮುಖಿಯರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಕಡ್ಡಾಯಗೊಳಿಸಬೇಕು.
- ಪ್ರತಿ ಜಿಲ್ಲೆಯಲ್ಲೂ ಮಂಗಳಮುಖಿಯರಿಗಾಗಿ ವಿಶೇಷ ಘಟಕ ಸ್ಥಾಪನೆ ಮಾಡಬೇಕು. ಅವರ ಜೀವನೋಪಾಯಕ್ಕಾಗಿ ನಡೆಸುವ ಸ್ವಉದ್ಯೋಗಕ್ಕೆ ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ಕಾಲಾನುಕಾಲಕ್ಕೆ ನೀಡುವಂತಾಗಬೇಕು.
- ಮಂಗಳಮುಖಿಯರ ಆರ್ಥಿಕ ಮಟ್ಟವನ್ನು ಸುಧಾರಿಸಲು ಅವರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಬರುವ ಮಾಸಿಕ ಸಹಾಯ ಧನವನ್ನು ಹೆಚ್ಚಿಸಬೇಕು.

## ಕೊನೆಮಾತು

ಮಂಗಳಮುಖಿಯರು ಇಂದು ಎಲ್ಲಾ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಸಮಾಜದಲ್ಲಿ ಇವರು ಅನೇಕ ಹಿಂಸಾಚಾರಗಳನ್ನು ಎದುರಿಸುತ್ತಿದ್ದಾರೆ. ಮಂಗಳಮುಖಿಯರ ಬದುಕು ವೇದನೆಯಿಂದ ತುಂಬಿಕೊಂಡಿರುವುದೇ ಹೆಚ್ಚಾಗಿ ಕಂಡುಬರುತ್ತದೆ. ಸಮಾಜದಲ್ಲಿ ಅವರಿಗೂ ಜನ ಜೀವನದಲ್ಲಿ ಸಹಜವಾಗಿ ಸಹಬಾಳ್ವೆ ನಡೆಸಲು ನಾಗರಿಕ ಸಮಾಜ ಒಪ್ಪಬೇಕು. ಎಲ್ಲರಂತೆ ಅವರಲ್ಲಿಯೂ ತನ್ನದೇ ಆದ ಲೈಂಗಿಕ ಭಾವನೆಗಳು, ವರ್ತನೆಗಳು, ನಂಬಿಕೆಗಳು ಮತ್ತು ಅವುಗಳ ಅಭಿವ್ಯಕ್ತಿಸುವ ಸ್ವಾತಂತ್ರ್ಯ ನೀಡಬೇಕು ಹಾಗೂ ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿಗತವಾದ ವೈಯಕ್ತಿಕ ಅನುಭವಗಳು ಸುತ್ತಮುತ್ತಲಿನ ಪರಿಸರದ ಸಮಾಜದ ಪ್ರಭಾವವನ್ನು ಅವಲಂಬಿಸಿರುವ ಕಾರಣವಾಗಿ ಎಲ್ಲರಿಗೂ ಸಿಗುವ ಮರ್ಯಾದೆ, ಘನತೆ–ಗೌರವಗಳು, ಪ್ರಶಸ್ತಿ–ಪುರಸ್ಕಾರಗಳು ಅವರವರ ಪ್ರತಿಭೆಗೆ ತಕ್ಕಂತೆ ನೀಡುವ ವ್ಯವಸ್ಥೆಗಳಾಗಬೇಕು.

## ಆಕರ ಗ್ರಂಥಗಳು


- **Agrawal A. (1997) :** *Gendered bodies* : The case of the Third Gender in India, Contributions to Indian Sociology, 31 (2), 273-297, www.academia.edu.
- **Bhatta, D.N. (2014) :** HIV- related Sexual Risk Behaviours among Male to Female Transgender people in Nepal, International Journal of Infectious diseases, 22: 11-15.
- **Chakrapani V. (2011) :** HIV among Men who Have Sex With Men and Hijras (Transgender people) in India: Current Situation and National Responses, Retrieved from http://cira.med.yale.edu/bulletin/ Archives/04_26_11.html.

ISSN : 2249-2429 ಸಂಶೋಧನೆ RNI REG.NO.KARKAN/2011/38712


- **Kamala Bhasin (2000) :** Understanding Gender, New Delhi, Women Unlimited.
- **Kenagy, G.P. (2002) :** HIV among Transgendered People, AIDS Care, Taylor and Francis.
- **Mal Sibasakar. (2008) :** Hidden Truth About Ethnic Life Style of Indian Hijras, Research Journal of Humanities and Social Sciences, Vol 9- Issue 03.
- **Whittle, Stephen. (2002) :** Respect and Equality: Transsexual and Transgender Rights, London, Portland, Routledge-Cavendish.
- ಅನೇಕ, ಧ್ವನಿಯನ್ನು ಆಲಿಸುವುದು, ಭಾರತದಲ್ಲಿ ಟ್ರಾನ್ಸ್‌ಜೆಂಡರ್ ನೀತಿ ಮತ್ತು ವಾಸ್ತವಿಕತೆ, ಬೆಂಗಳೂರು, 2017, ಅನೇಕ ಸಂಸ್ಥೆ.
- ಒಂದೆಡೆ, ಕೌಟುಂಬಿಕ ಮತ್ತು ಲೈಂಗಿಕ ದೌರ್ಜನ್ಯ ಧ್ವನಿ, ಹಕ್ಕುಗಳು ಮತ್ತು ಘನತೆಗಾಗಿ ಹಕ್ಕೊತ್ತಾಯ, ಒಂದೆಡೆ, ಬೆಂಗಳೂರು, ಏಪ್ರಿಲ್ – 2018.
- **ಗುರುಲಿಂಗಯ್ಯ, ಎಂ. (2016) :** *"ಅಂಚಿನ ಗುಂಪುಗಳ ಸಮಾಜಶಾಸ್ತ್ರ"*, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ತುಮಕೂರು ದೀವಿತ ಪ್ರಕಾಶನ.
- **ಜ್ಯೋತಿ ಶಶಿಕುಮಾರ, (2007) :** *"ಮಹಿಳಾ ಸಾಮಾಜಿಕತೆ", ಮಹಿಳಾ ಅಧ್ಯಯನ ಕೇಂದ್ರ, ಹಂಪಿ ಕನ್ನಡ ವಿಶ್ವವಿದ್ಯಾಲಯ.*
- **ರೇವತಿ, ಎ. (2011) :** ಸರಸ್ವತಿ ದು. (ಅನುವಾದ), *"ಬದುಕು ಬಯಲು: ಹಿಜ್ರಾ ಒಬ್ಬಳ ಆತ್ಮಕಥೆ"*, ಬೆಂಗಳೂರು ಲಂಕೇಶ ಪ್ರಕಾಶನ.
- **ಸರಸ್ವತಿ ದು., ಎ. ರೇವತಿ ಬದುಕು ಬಯಲು (2011) :** ಹಿಜ್ರಾ ಒಬ್ಬಳ ಆತ್ಮಕಥೆ, ಬೆಂಗಳೂರು ಲಂಕೇಶ್ ಪ್ರಕಾಶನ.
- **ಸೆಲ್ವಿ ತಮಿಳ್ ಡಾ. ನಾನು ಅವನಲ್ಲ; ಅವಳು (2008) :** ಲಿವಿಂಗ್ ಸ್ಮೈಲ್ ವಿದ್ಯಾ ಅವರ ಆತ್ಮಕಥೆ, ಮುದ್ರಣಕಾರರು ಡಾ. ಎಂ. ಬೋರೆಗೌಡ, ಬೆಂಗಳೂರು ಪ್ರಗತಿ ಗ್ರಾಫಿಕ್ಸ್.
- **ಸುಜಾತ ದಾಸ್, ಕನ್ನಡ ಸಾಹಿತ್ಯದಲ್ಲಿ ಮಂಗಳಮುಖಿಯರು (2015) :** ಒಂದು ಅಧ್ಯಯನ, ಜೈನ್ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಒಪ್ಪಿಸಲಾದ ಮಹಾಪ್ರಬಂಧ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ವಿಶ್ವವಿದ್ಯಾಲಯ.
- **ಶಿವರಾಮಯ್ಯ (2012) :** *"ವೇಶ್ಯೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು ನಡೆದು ಬಂದ ದಾರಿ"*, ಬೆಂಗಳೂರು ಸೃಷ್ಟಿ ಪಬ್ಲಿಕೇಷನ್.


■■

– 29ನೇ ಪುಟದಿಂದ ಮುಂದುವರೆದುದು

ಉತ್ಪಾದನೆಗಳು ದುಪ್ಪಟ್ಟು ಬೆಲೆಗೆ ಮಾರಾಟವಾಗುತ್ತಿರುವುದಕ್ಕೆ ದಂಗಾಗಿ ಹೋಗಿದ್ದಾರೆ. ಕಾರಣ ಬೆಳೆದ ಬೆಳೆಗೆ, ದುಡಿದ ಶ್ರಮಕ್ಕೆ ಬೆಲೆ ಸಿಗದೆ ತಮ್ಮ ಇಡೀ ಜೀವನವೇ ಸಾಲದಲ್ಲಿ ಅಂತ್ಯ ಕಾಣುತ್ತದೆ. ಸಾಲದ ಹೊರೆ, ಅತೀವೃಷ್ಟಿ-ಅನಾವೃಷ್ಟಿ, ವಿಫಲ ಬೆಳೆಗಳು, ಕೃತ್ರಿಮ ಬೀಜಗಳು, ಇತರ ಅಂಶಗಳು ಅವರ ಬದುಕನ್ನು ಇನ್ನಷ್ಟು ದುಃಸ್ಥಿಗೆ ತಳ್ಳಿವೆ.

ದುಡಿಮೆಯು ಲಿಂಗತ್ವ ತಾರತಮ್ಯದಿಂದ ಕೂಡಿದ್ದು, ಸಾರ್ವಜನಿಕ ಮತ್ತು ಖಾಸಗಿ ಜೀವನವು ಪರಸ್ಪರ ಭಿನ್ನವಾಗಿದ್ದು ಮಹಿಳೆಯರ ದುಡಿಮೆಯ ಮೇಲೆ ತೀವ್ರತರವಾದ ಪ್ರಭಾವವನ್ನು ಬೀರುತ್ತವೆ. ಮಹಿಳೆಯರ ಬಗೆಗಿರುವ ಗ್ರಹಿಕೆಗಳು, ಮನೋಭಾವನೆಗಳು, ರೂಪಿತ ನೀತಿಗಳು ಹಾಗೂ ಕಾರ್ಯಕ್ರಮಗಳು ಅವರಿಗೆ ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ. ಸಂಪನ್ಮೂಲಗಳ ಹಂಚಿಕೆಗಳು ವ್ಯತ್ಯಾಸದಿಂದ ಕೂಡಿದ್ದು ಸಾಮಾಜಿಕ ,ಆರ್ಥಿಕ ಕೌಟುಂಬಿಕ ಮತ್ತು ಕೆಲಸದ ನಡುವಿನ ಇಬ್ಬಗೆಯ ನೀತಿಗಳು ಅವರ ಸುಸ್ಥಿರ ಬದುಕಿನ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿವೆ. ಸಾಮಾಜಿಕ ವಾಸ್ತವಗಳು ಮಹಿಳೆಯರನ್ನು ದುಃಸ್ಥಿತಿಗೆ ದೂಡಿವೆ. ಮಹಿಳಾ ದುಡಿಮೆಗಾರರ ಅಗೋಚರತೆ ಮತ್ತು ಕುಟುಂಬಕ್ಕೆ ಅವರ ಕೊಡುಗೆಗಳನ್ನು ಕಡೆಗಣಿಸಲಾಗುತ್ತದೆ. ಭಾರತದ ಶೇ.70% ರಷ್ಟು ಜನರು ದಿನಕ್ಕೆ 20 ರೂ.ಗಳಲ್ಲಿ ಬದುಕುತ್ತಾರೆನ್ನುವುದು ಅತ್ಯಂತ ಭೀಕರವಾದರೂ, ಸತ್ಯ.

ಮಹಿಳಾ ಸಬಲೀಕರಣಕ್ಕಿರುವ ಕುಂದು ಕೊರತೆಗಳನ್ನು ನೀಗಿಸಲು ಸರಕಾರಗಳು ಕೂಲಂಕುಶ ಅಧ್ಯಯನಗಳನ್ನು ಮಾಡಿ ಈ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಲು ಈಗಿರುವ ಕಾನೂನುಗಳೊಂದಿಗೆ ಇನ್ನೂ ಪರಿಣಾಮಕಾರಿಯಾದ ಕಾನೂನುಗಳನ್ನು ಜಾರಿಗೊಳಿಸುವುದರ ಮೂಲಕ ಮಹಿಳೆಯರ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಅಭಿವೃದ್ಧಿಯೆಂದು ಏಕೆ ಭಾವಿಸಬಾರದು ?

## ಆಕರ ಗ್ರಂಥಗಳು


- **Ranjana padhi (2012) :** Those who did not die, New Delhi Sage publications India Ltd .,
- **Agarwal Bina (1994) :** A field of one's own , gender and land rights in South Asia, New Deli ,Cambridge university press.
- **Malhotra Anshu (2002) :** Gender caste and religious identity, restructuring class in rural Punjab, New Delhi, Oxford University Press.
- **Deshpande, R. S.** and **Saroj Arora (eds)(2011) :** Agrarian crisis and farmer suicides ,New Delhi, Sage Publications.


■■


ವಿದ್ಯಾನಿಧಿ ಪ್ರಕಾಶನ® ಶ್ರೀ ಶಿವಕುಮಾರ ಏಜನ್ಸಿ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ-582 101

ದೂರವಾಣಿ : 08372-237527, 277527

e-mail : vidyanidhiprakashana@gmail.com. www. vidyanidhionline.com



ISSN : 2249-2429 ಸಂಶೋಧನೆ RNI REG.NO.KARKAN/2011/38712

# ಮಹಿಳಾ ಶಿಕ್ಷಣ : ಹೊರತಳ್ಳುವಿಕೆ ಮತ್ತು ಒಳಗೊಳ್ಳುವಿಕೆಯ ನೆಲೆಗಳು


✍ ಡಾ. ಯರ್ರಿಸ್ವಾಮಿ ಈ. ಸಹಾಯಕ ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–583 276.

ಭಾರತದ ಶಿಕ್ಷಣದಲ್ಲಿ ಮಹಿಳೆಯರನ್ನು ಒಳಗೊಳ್ಳದ ಸಂದರ್ಭದಲ್ಲಿ ಹುಟ್ಟಿದ ಚರ್ಚೆಗಳು ಹೇಗೆ ಮಹಿಳಾ ಶಿಕ್ಷಣವನ್ನು ಗ್ರಹಿಸಿದವು. ಇದಕ್ಕೆ ಒತ್ತಾಯಿಸಿದ ಸಮುದಾಯದ ಬೇಡಿಕೆಗಳನ್ನು ವಸಾಹತು ಮತ್ತು ಸ್ವತಂತ್ರ ಭಾರತದ ಸಂವಿಧಾನ; ಇತರ ಸಮಿತಿಗಳು ಮಹಿಳಾ ಶಿಕ್ಷಣವನ್ನು ಹೇಗೆ ವ್ಯಾಖ್ಯಾನಿಸಿದವು. ಇದರಕ್ಕಿರುವ ಅಡ್ಡಿಗಳಾವವು ಎಂಬುದನ್ನು ಈ ಲೇಖನ ವಿಶ್ಲೇಷಿಸುತ್ತದೆ.

ಭಾರತದಲ್ಲಿ 1813ರ ಚಾರ್ಟರ್ ಕಾಯ್ದೆ, ಈಸ್ಟ್ ಇಂಡಿಯಾ ಕಂಪನಿಯು ಮೊದಲ ಬಾರಿಗೆ ಭಾರತೀಯರು ಶಿಕ್ಷಣದ ಜವಾಬ್ದಾರಿಯನ್ನು ಸ್ವೀಕರಿಸುವಂತೆ ಸಂಯೋಜಿಸಿತು.ಆದರೆ ಆಡಳಿತಾಂಗದ ಜಾಣತನ ದಿಂದಾಗಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ನಿರ್ಲಕ್ಷಿಸಿತ್ತು. ಏಕೆಂದರೆ ಮಹಿಳಾ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡುವುದು ಸಾಮಾಜಿಕ ಕ್ಷೋಭೆಯನ್ನುಂಟು ಮಾಡುತ್ತದೆ ಎಂಬ ಭಾವನೆ ಮನೆ ಮಾಡಿತ್ತು. ಮಹಿಳಾ ಶಿಕ್ಷಣಕ್ಕೆ ಪ್ರಾಶಸ್ತ್ಯವನ್ನು ನೀಡಿರುವ ಕಾಣಿಕೆ ಕ್ರೈಸ್ತ ಮಿಶನರಿಗಳಿಗೆ ಸಲ್ಲುತ್ತದೆ. ಅವು ಆರಂಭದಲ್ಲಿ ಕ್ರೈಸ್ತ ಧರ್ಮಕ್ಕೆ ಯಾರು ಮತಾಂತರಗೊಳ್ಳುತ್ತಿದ್ದರೊ ಅವರ ಹೆಣ್ಣು ಮಕ್ಕಳಿಗೆ ಶಾಲೆಗಳನ್ನು ಪ್ರಾರಂಭಿಸಿದವು. ನಂತರ ಅದು ಇತರರಿಗೂ ವಿಸ್ತರಿಸಿತು. ವಿದೇಶಿಗರ ಅಗ್ರಗಣ್ಯ ಕೆಲಸದಿಂದಾಗಿ ಭಾರತೀಯ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆಯುವಂತಾಯಿತು. ಅಲ್ಲದೆ ಸಾಂಪ್ರದಾಯಿಕ ಮೌಲ್ಯ ವ್ಯವಸ್ಥೆಯನ್ನು, ಕಂದಾಚಾರಗಳನ್ನು ತೊಡೆದು ಹಾಕುವಲ್ಲಿ ನೆರವಾಯಿತು. ಮಹಿಳಾ ಶಿಕ್ಷಣದ ಬಗೆಗಿನ ಈ ಸ್ವರೂಪವು ಹಾಗೇ ಮುಂದುವರೆಯಿತು.

ಭಾರತ 1921ರಲ್ಲಿ ದ್ವಿಸರ್ಕಾರ ವ್ಯವಸ್ಥೆಗೆ ಬದಲಾಯಿತು ಮತ್ತು 1937ರಲ್ಲಿ ಪ್ರಾದೇಶಿಕ ಸ್ವಾಯತ್ತತೆ ಪ್ರಾರಂಭವಾಯಿತು. ಈ ಬದಲಾವಣೆಗಳು ಸ್ವಾತಂತ್ರ್ಯದ ರಾಜಕೀಯ ಹೋರಾಟಕ್ಕೆ ಮಹಿಳೆಯರು ಎಚ್ಚರಗೊಳ್ಳುವಂತೆ ಮಾಡಿತು.ಇದು ಬ್ರಿಟಿಷ ಸರ್ಕಾರದ ಮಹಿಳಾ ಶಿಕ್ಷಣದ ಯೋಜನೆಗಳಿಗೆ ಮಹಿಳೆಯರು ಕ್ರಿಯಾತ್ಮಕವಾಗಿ ತೆರೆದುಕೊಳ್ಳುವಂತೆ ಮಾಡಿತು. ಯುದ್ಧ ನಂತರದ ಶಿಕ್ಷಣ ಅಭಿವೃದ್ಧಿ ವರದಿ (1944)ಯು ಹುಡುಗರಿಗೆ ಏನು ಅಗತ್ಯವಿದೆಯೋ ಅದು ಹೆಣ್ಣುಮಕ್ಕಳಿಗೂ ಅಗತ್ಯವಿದೆ ಎಂದು ಹೇಳಿತು. ಇದು ಸ್ವಾತಂತ್ರ್ಯಪೂರ್ವ ಶಿಕ್ಷಣದ ಕೊನೆಯ ದಾಖಲಾತಿಯಾಗಿದೆ.ಈ ಎಲ್ಲ ಬೆಳವಣಿಗೆಯ ಹಿಂದೆ ಅನೇಕ ಭಾರತೀಯ ಚಿಂತಕರ ಪ್ರಭಾವವಿದೆ.

1950, ಜನವರಿ 26ರಂದು ಭಾರತದಲ್ಲಿ ಸಂವಿಧಾನವನ್ನು ಜಾರಿಗೊಳಿಸಿತು. 15(1) ಪರಿಚ್ಛೇದವು ರಾಜ್ಯವು ವ್ಯಕ್ತಿಗಳಿಗೆ/ ನಾಗರಿಕರಿಗೆ ಯಾವುದೇ ಕಾರಣಕ್ಕಾಗಿ ತಾರತಮ್ಯವನ್ನು ಮಾಡುವಂತಿಲ್ಲ. ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿತು. ನಂತರ ಮಹಿಳಾ ಶಿಕ್ಷಣದ ಸಮಸ್ಯೆಗಳನ್ನು ಅಧ್ಯಯನ ಮಾಡಲು ಹಲವಾರು ಕಮಿಟಿಗಳು ರಚನೆಯಾದವು, ರಾಷ್ಟ್ರೀಯ ಮಹಿಳಾ ಶಿಕ್ಷಣ ಆಯೋಗ (1958–59), ಹುಡುಗ ಮತ್ತು ಹುಡುಗಿಯರಿಗೆ ಪ್ರತ್ಯೇಕ ಪಠ್ಯಕ್ರಮ ಕಮಿಟಿ (1962) ಮತ್ತು ಭಕ್ತ ವತ್ಸಲ ಕಮಿಟಿ (1963)ಯಿಂದ ಹೊಸ ಶಿಕ್ಷಣ ನೀತಿ (1986)ಯವರೆಗಿನ ಎಲ್ಲ ಕಮಿಟಿಗಳು ಹೆಣ್ಣುಮಕ್ಕಳ ಶಿಕ್ಷಣ ಹಿಂದುಳಿಯುವಿಕೆಗೆ ಇರುವ ಕಾರಣ ಮತ್ತು ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ನೀಡಿವೆ ಹಾಗೆಯೇ ಅನೇಕ ಶಿಕ್ಷಣ ನೀತಿಗಳು ಮಹಿಳಾ ಶಿಕ್ಷಣ ಅಗತ್ಯತೆಯನ್ನು ಪ್ರತಿಪಾದಿಸುವುದ ರೊಂದಿಗೆ ಮಹಿಳೆಯರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದವು. ಪರಿಣಾಮ ಭಾರತದಲ್ಲಿ ಮಹಿಳಾ ಶಿಕ್ಷಣವು ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವಲ್ಲಿ ಹಾಗೂ ಅರ್ಥಮಾಡಿಕೊಳ್ಳುವಲ್ಲಿ ಶಿಕ್ಷಣ ಒಂದು ಮುಖ್ಯ ಸಂಗತಿಯಾಯಿತು.




ಆಕರ : http// www. Censusindia.gov.in ಯಲ್ಲಿನ ಭಾರತ ಜನಗಣತಿ ಸಂಬಂಧಿಸಿದ ಅಂಕಿ– ಸಂಖ್ಯೆಗಳ ಪ್ರಕಟಣೆ, ಭಾರತ ಸರ್ಕಾರ.

ಮಹಿಳೆಯರು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ರೇಖಾಚಿತ್ರ ಸ್ಪಷ್ಟವಾಗಿ ತೋರಿಸುತ್ತದೆ.ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣದಲ್ಲಿ ಗಣನೀಯ ಹೆಚ್ಚಳವಾದುದನ್ನು ತೋರಿಸುತ್ತದೆ.1971–2011 ದಶಕದಲ್ಲಿ ಮಹಿಳಾ ಸಾಕ್ಷರತೆ ಪುರುಷರ ಸಾಕ್ಷರತೆಗಿಂತ ತೀವ್ರಗತಿಯಲ್ಲಿ ಹೆಚ್ಚಿದೆ. 1975ನ್ನು ಅಂತಾರಾಷ್ಟ್ರೀಯ ಮಹಿಳಾ ವರ್ಷವೆಂದೂ 1975–1985ರ ಅವಧಿಯನ್ನು ಅಂತಾರಾಷ್ಟ್ರೀಯ ಮಹಿಳಾ ದಶಕವೆಂದೂ ಘೋಷಿಸಿದ್ದು, ಮಹಿಳೆಯರನ್ನು ಅಂಚಿನಿಂದ ಮುಂಚೂಣಿಗೆ ತರಲು ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡವು. ಅವುಗಳಲ್ಲಿ ಶಾಲಾ ದಾಖಲಾತಿ ಪ್ರಮಾಣ ಹೆಚ್ಚಿಸುವುದು ಮತ್ತು ಶಾಲೆ ಬಿಡುವ ಪ್ರಮಾಣವನ್ನು ಇಳಿಸುವುದು, ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ಆರಂಭಿಸುವುದು, ಮಹಿಳಾ ಶಿಕ್ಷಕರನ್ನು ನೇಮಿಸಿಕೊಳ್ಳುವುದು, ಮಹಿಳೆಯರಿಗೆ ತಾಂತ್ರಿಕ ಮತ್ತು ವೃತ್ತಿಪರ ಕೋರ್ಸುಗಳನ್ನು ತೆರೆಯುವುದು ಮತ್ತು ಮಹಿಳಾ ಶಿಕ್ಷಣಕ್ಕೆ ಉತ್ತೇಜನ ನೀಡಲು ಪ್ರೇರೇಪಿಸುವುದು ಇತ್ಯಾದಿ ಸೇರಿವೆ. ಈ ಮೂಲಕ ಮಹಿಳಾ ಶಿಕ್ಷಣ ಸಂವರ್ಧನೆಯಾಗಿದೆ.

2011ರ ಜನಸಂಖ್ಯೆಯು ಅಂಕಿ–ಅಂಶಗಳು ಕೇರಳವನ್ನು ಹೊರತುಪಡಿಸಿ ಬಹುತೇಕ ಉಳಿದೆಲ್ಲ ರಾಜ್ಯಗಳಲ್ಲಿ ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ ಮಹಿಳಾ ಸಾಕ್ಷರತಾ ಪ್ರಮಾಣ ತುಂಬಾ ಕಡಿಮೆ ಇರುವುದನ್ನು ತೋರಿಸುತ್ತದೆ. ಮಹಿಳಾ ಸಾಕ್ಷರತಾ ಬೆಳವಣಿಗೆ ಪ್ರಮಾಣಕ್ಕೆ ಹೋಲಿಸಿದರೆ ಪುರುಷ ಸಾಕ್ಷರತಾ ಬೆಳವಣಿಗೆ ಪ್ರಮಾಣ ಅಧಿಕವಿದೆ. ಶಿಕ್ಷಣದ ನ್ಯಾಯಸಮ್ಮತ ಪಾಲು ಪಡೆಯುವ ಹಾದಿಯಲ್ಲಿ ಮಹಿಳೆಯರನ್ನು ರಾಚನಿಕವಾಗಿ ತಡೆಯುವ ಸಾಮಾಜಿಕ–ಸಾಂಸ್ಕೃತಿಕ ಅಂಶಗಳು ಇದಕ್ಕೆ ಪ್ರಮುಖ ಕಾರಣಗಳಾಗಿವೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಕೋಷ್ಟಕ-1.**
**ಭಾರತದ ರಾಜ್ಯಗಳಲ್ಲಿ ಸಾಕ್ಷರತಾ ಪ್ರಮಾಣ-2011**

| ಕ್ರ. ಸಂ. | ರಾಜ್ಯ | ಸಾಕ್ಷರತಾ ಪ್ರಮಾಣ (2011ರ ಜನಗಣತಿ) | ಗಂಡು ಸಾಕ್ಷರತಾ ದರ (2011ರ ಜನಗಣತಿ) | ಹೆಣ್ಣು ಸಾಕ್ಷರತಾ ದರ (2011ರ ಜನಗಣತಿ) |
|---|---|---|---|---|
| 1. | ಅಂಡೋಮಾನ್ ಮತ್ತು ನಿಕೋಬರ್ | 86.3% | 90.1% | 81.8% |
| 2. | ಆಂಧ್ರಪ್ರದೇಶ | 67.7% | 75.6% | 59.7% |
| 3. | ಅರುಣಚಲ ಪ್ರದೇಶ | 67.0% | 73.7% | 59.6% |
| 4. | ಅಸ್ಸಾಂ | 73.2% | 78.8% | 67.3% |
| 5. | ಬಿಹಾರ | 63.8% | 73.5% | 53.3% |
| 6. | ಚಂಡಿಗಡ | 86.4% | 90.5% | 81.4% |
| 7. | ಚತ್ತಿಸಗಡ | 71.0% | 81.5% | 60.6% |
| 8. | ದಾದ್ರ ಮತ್ತು ನಾಗರಹವೇಲಿ | 77.7% | 86.5% | 65.9% |
| 9. | ಡಾಮಾನ್ ಮತ್ತು ಡ್ಯೂ | 87.1% | 91.5% | 79.6% |
| 10. | ದೆಹಲಿ | 86.3% | 91.0% | 80.9% |
| 11. | ಗೋವಾ | 87.4% | 92.8% | 81.8% |
| 12. | ಗುಜರಾತ್ | 79.3% | 87.2% | 70.7% |
| 13. | ಹರಿಯಾಣ | 76.6% | 85.4% | 66.8% |
| 14. | ಹಿಮಾಚಲ ಪ್ರದೇಶ | 83.8% | 90.8% | 76.6% |
| 15. | ಜಮ್ಮು ಮತ್ತು ಕಾಶ್ಮೀರ | 68.7% | 78.3% | 58.0% |
| 16. | ಜಾರ್ಖಂಡ್ | 67.6% | 78.5% | 56.2% |
| 17. | ಕರ್ನಾಟಕ | 75.6% | 82.8% | 68.1% |
| 18. | ಕೇರಳ | 93.9% | 96.0% | 92.0% |
| 19. | ಲಕ್ಷ್ಯದೀಪ | 92.3% | 96.1% | 88.2% |
| 20. | ಮಧ್ಯ ಪ್ರದೇಶ | 70.6% | 80.5% | 60.0% |
| 21. | ಮಹಾರಾಷ್ಟ್ರ | 82.9% | 89.8% | 75.5% |
| 22. | ಮಣಿಪುರ | 79.8% | 86.5% | 73.2% |
| 23. | ಮೇಘಾಲಯ | 75.5% | 77.2% | 73.8% |
| 24. | ಮೀಜರಂ | 91.6% | 93.7% | 89.4% |
| 25. | ನಾಗಲ್ಯಾಂಡ್ | 80.1% | 83.3% | 76.7% |
| 26. | ಒರಿಸ್ಸಾ | 73.5% | 82.4% | 64.4% |
| 27. | ಪುದುಚೇರಿ | 86.5% | 92.1% | 81.2% |
| 28. | ಪಂಜಾಬ | 76.7% | 81.5% | 71.3% |
| 29. | ರಾಜಸ್ಥಾನ | 67.1% | 80.5% | 52.7% |
| 30. | ಸಿಕ್ಕಿಂ | 82.2% | 87.3% | 76.4% |
| 31. | ತಮಿಳನಾಡು | 80.3% | 86.8% | 73.9% |
| 32. | ತ್ರಿಪುರ | 87.8% | 92.2% | 83.1% |
| 33. | ಉತ್ತರ ಪ್ರದೇಶ | 69.7% | 79.2% | 59.3% |
| 34. | ಉತ್ತರಖಾಂಡ | 79.6% | 88.3% | 70.7% |
| 35. | ಪಶ್ಚಿಮ ಬಂಗಾಳ | 77.1% | 82.7% | 71.2% |
| | ಭಾರತ | 74.04% | 82.14% | 65.46% |

ಆಕರ : http// www. Censusindia.gov.in ಯಲ್ಲಿನ ಭಾರತ ಜನಗಣತಿ ಸಂಬಂಧಿಸಿದ ಅಂಕಿ - ಸಂಖ್ಯೆಗಳ ಪ್ರಕಟಣೆ, ಭಾರತ ಸರ್ಕಾರ.

ಈ ಕುರಿತು ಮಾನವ ಸಂಪನ್ಮೂಲ ಇಲಾಖೆಯ ಸಿಎಬಿಇ ಸಮಿತಿ "ಪುರುಷರು ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣಗಳ ವಿಚಾರದಲ್ಲಿ ಪಟ್ಟಣ ಮತ್ತು ಹಳ್ಳಿಗಳ ನಡುವೆ ಭಾರೀ ಅಂತರ ಕೂಡಾ ಇದೆ. ಭಾರತದ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳು ಬಹುದೂರದಲ್ಲಿರುತ್ತದೆ. ಈ ಹೆಚ್ಚಿನ ಹಳ್ಳಿಗಳಲ್ಲಿ ಸೂಕ್ತ ಬಸ್ ಸಂಪರ್ಕಗಳಿರುವುದಿಲ್ಲ. ವಿಶೇಷವಾಗಿ ಕಿಶೋರ ಹರೆಯದ ಹುಡುಗಿಯರು ಶಾಲೆ ಬಿಡಲು ಒಂದು ಕಾರಣವೆಂದರೆ ಈ ಅಸಮರ್ಪಕ ಸಾರಿಗೆ ಸಂಪರ್ಕ, ಅಲ್ಲದೆ, ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಏಕೋಪಾಧ್ಯಾಯ ಶಾಲೆಗಳು ಹಾಗೂ ಶಿಕ್ಷಕಿಯರೇ ಇಲ್ಲದ ಶಾಲೆಗಳೂ ಇವೆ. ಅನೇಕ ಶಾಲೆಗಳಲ್ಲಿ ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ ಸೌಲಭ್ಯಗಳಿರುವುದಿಲ್ಲ. ಶಾಲೆಗೆ ಹಾಜರಾಗುವ ಹುಡುಗಿಯರಿಗೆ ಹಾಗೂ ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಬಯಸುವ ಪಾಲಕರಿಗೆ ಈ ಎಲ್ಲ ಅಂಶಗಳು ಒಂದು ತಡೆಯಾಗಿದೆ. ಶಾಲೆಗೆ ಸೇರುವುದು ಹಾಗೂ ಶಾಲೆ ಬಿಡದಿರುವ ವಿಚಾರದಲ್ಲಿ ಲಿಂಗ ಅಂತರಗಳು ಕಣ್ಣಿಗೆ ಹೊಡೆದು ಕಾಣುವಂತಿವೆ. ನಾನಾ ಸರಕಾರಿ ಮತ್ತು ಸರಕಾರೇತರ ಮಧ್ಯಸ್ಥಿಕೆಯ ಕಾರಣದಿಂದ ಹೆಣ್ಣುಮಕ್ಕಳ ಶಾಲಾ ದಾಖಲಾತಿಯಲ್ಲಿನ ಹೆಚ್ಚಳ ಪ್ರಮಾಣ ಬಾಲಕರ ಹೆಚ್ಚಳ ಪ್ರಮಾಣಕ್ಕಿಂತ ಅಧಿಕವಾಗಿದೆ. ಆದರೂ ಅಂತರಗಳು ಇನ್ನೂ ಉಳಿದುಕೊಂಡಿವೆ. ಬಾಲಕರಿಗೆ ಹೋಲಿಸಿದರೆ ಬಾಲಕಿಯರು ಶಾಲೆ ಬಿಡುವ ಪ್ರಮಾಣ ಹೆಚ್ಚಾಗಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಪ್ರಾಥಮಿಕ ಶಾಲೆಗೆ ದಾಖಲಾದ ನಗಣ್ಯ ಭಾಗದಷ್ಟು ಬಾಲಕಿಯರು ಮಾತ್ರ ಕಾಲೇಜು ಅಧ್ಯಯನ ಮುಗಿಸುತ್ತಾರೆ. ಲಿಂಗ ತಾರತಮ್ಯ ಅಸ್ತಿತ್ವದಲ್ಲಿರುವುದಕ್ಕೆ ಇದೂ ಒಂದು ಮಹತ್ವದ ಸೂಚಕವಾಗಿದೆ. ಬಡತನದ ಕಾರಣವಾಗಿ ಅನೇಕ ಸಲ ಮನೆವಾರ್ತೆ ಕೆಲಸ ಮಾಡಲು ತಮ್ಮ ಕಿರಿಯರ ಲಾಲನೆ ಪಾಲನೆ ಮಾಡಲು ಹುಡುಗಿಯರು ಶಾಲೆ ಕಾಲೇಜು ತೊರೆಯಬೇಕಾಗಿ ಬರುತ್ತದೆ ಎಂದು ಉಲ್ಲೇಖಿಸಿದೆ".

ಸರ್ಕಾರಿ ದಾಖಲೆ ಪ್ರಕಾರ ಬಾಲಕರಿಗೆ ಹೋಲಿಸಿದರೆ ಬಾಲಕಿಯರ ಶಾಲೆ ಬಿಡುವ ಪ್ರಮಾಣ ಅಧಿಕ ಎನ್ನುವುದು ಸ್ಪಷ್ಟವಿದೆ. 1990ರ ಬಳಿಕ ಮೂಲಸೌಲಭ್ಯ ಉತ್ತಮಪಡಿಸುವಲ್ಲಿ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಜಂಟಿ ಯತ್ನದ ಫಲವಾಗಿ ಬಾಲಕಿಯರು ಶಾಲೆ ಬಿಡುವ ಪ್ರಮಾಣ ಗಣನೀಯವಾಗಿ ಇಳಿಮುಖವಾಯಿತು.ಆದರೂ ಮಧ್ಯಮ ಹಂತದಲ್ಲಿರುವ ದತ್ತಾಂಶಗಳು ಅಷ್ಟೊಂದು ಆಶಾದಾಯಕವಾಗಿಲ್ಲ. ಇಲ್ಲಿ ಬಾಲಕಿಯರು ಶಾಲೆ ಬಿಡುವ ಪ್ರಮಾಣ ಹೆಚ್ಚು ಇದೆ. ಋತುಮತಿಯಾದ ಬಾಲಕಿಯರು ಶಿಕ್ಷಣ ಮುಂದುವರಿಸದಂತೆ ತಡೆಯುವುದು ಇದಕ್ಕೆ ಕಾರಣವಾಗಿದೆ. ಅವರನ್ನು ಮನೆಕೆಲಸ ಮಾಡಲು ಒತ್ತಾಯಿಸಲಾಗುತ್ತದೆ. ರಾಜಸ್ಥಾನದಂತಹ ರಾಜ್ಯಗಳಲ್ಲಿ ಅವರನ್ನು ಮದುವೆ ಮಾಡಿ ಕೊಡಲಾಗುತ್ತದೆ. ಮಗ ಶಾಲೆ ಬಿಡುವುದಕ್ಕಿಂತ ಮಗಳು ಶಾಲೆ ಬಿಡುವುದನ್ನು ಪಾಲಕರು ಹೆಚ್ಚು ಒಪ್ಪುತ್ತಾರೆ. ಮಗಳ ಶಿಕ್ಷಣ ಅವರಿಗೆ ಮುಖ್ಯವೆನಿಸುವುದಿಲ್ಲ. ಇದಕ್ಕೆ ಭಿನ್ನವಾಗಿ ಮಗನನ್ನು ಓದಿಸುವುದು. ಭವಿಷ್ಯದಲ್ಲಿ ತಮಗೆ ಗರಿಷ್ಟ ಆದಾಯ ತರುವ ಮತ್ತು ತಮಗೆ ಇಳಿವಯಸ್ಸಿನಲ್ಲಿ ಹೆಚ್ಚು ಭದ್ರತೆ ಖಾತರಿಪಡಿಸುವ ಹೂಡಿಕೆಯೆಂದು ಪಾಲಕರು ಭಾವಿಸುತ್ತಾರೆ. ಮದುವೆ ರೂಢಿಗಳು ಮಗಳ ಶಿಕ್ಷಣದ ಮೇಲಣ ಹೂಡಿಕೆಯನ್ನು ಅಪಮೌಲ್ಯಗೊಳಿಸ ಬಹುದು ಮತ್ತು ಮಕ್ಕಳ ಶಿಕ್ಷಣ ವಿಚಾರದಲ್ಲಿ ಪಾಲಕರ ನಿರ್ಧಾರದ ಮೇಲೆ ಪರಿಣಾಮ ಬೀರಬಹುದು.ಭಾರತದ ಹೆಚ್ಚಿನ ಸಮಾಜಗಳಲ್ಲಿ ಮದುವೆಯ ಬಳಿಕ ಹೆಣ್ಣು ಮಕ್ಕಳು ತಮ್ಮ ತವರಿನಿಂದ ದೂರ ಹೋಗುತ್ತಾರೆ ಮತ್ತು ತಮ್ಮ ನಿಷ್ಠೆಯನ್ನು ಗಂಡನ ಮನೆಗೆ ಬದಲಾಯಿಸುತ್ತಾರೆ. ಹಾಗಾಗಿ ಮಗಳ ಶಿಕ್ಷಣದ ಮೇಲಣ ಹೂಡಿಕೆಯನ್ನು ಕಳೆದುಕೊಳ್ಳುತ್ತೇವೆಂದು ಪಾಲಕರು ಭಾವಿಸುವ ಪರಿಣಾಮವಾಗಿ ಬಾಲಕಿಯರಿಗೆ ಶಾಲೆಯಲ್ಲಿ ಉಳಿದುಕೊಳ್ಳಲು ಅಥವಾ ವಿಶೇಷ ಸಾಧನೆ ಮಾಡಲು ಕುಟುಂಬದ ಒತ್ತಾಸೆ ದೊರೆಯುವ ಸಾಧ್ಯತೆ ಕಡಿಮೆಯಿದೆ. ಹೆಣ್ಣು ಮತ್ತು ಗಂಡು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮಕ್ಕಳ ನಡುವಣ ಶೈಕ್ಷಣಿಕ ವ್ಯತ್ಯಾಸ ಲಿಂಗ ತಾರತಮ್ಯದ ಅತ್ಯಂತ ನಿರ್ಣಾಯಕ ಸಂಗತಿಯಾಗಿದೆ.

ಮಹಿಳಾ ಶಿಕ್ಷಣಕ್ಕಿರುವ ಸಾಮಾಜಿಕ ತೊಡಕುಗಳಲ್ಲಿ ಕುಟುಂಬವು ಒಂದು.ಗ್ರಾಮಾಂತರ ಮತ್ತು ನಗರ ಪ್ರದೇಶದ ಹೆಣ್ಣು ಮಕ್ಕಳು ಶಾಲೆ ಬಿಡುವುದಕ್ಕೆ ಕುಟುಂಬವೇ ಮುಖ್ಯ ಕಾರಣ. ಅವರು ಕಿರಿಯ ವಯಸ್ಸಿನಲ್ಲಿ ತಮ್ಮ ಮನೆಗಳಲ್ಲಿ ಕಸಗುಡಿಸುವ, ಮುಸುರೆ ಪಾತ್ರೆಗಳನ್ನು ತೊಳೆಯುವ ಕೆಲಸಗಳನ್ನು ಮಾಡಬೇಕಾಗುತ್ತದೆ. ಅವರೇ ಮನೆಗೆ ಉರುವಲನ್ನು ತರಬೇಕಾಗುತ್ತದೆ. ದೂರದಿಂದ ಮನೆಗೆ ನೀರು ತರಬೇಕಾಗುತ್ತದೆ. ಅಷ್ಟೆ ಅಲ್ಲ, ಅವರ ತಂದೆ ತಾಯಿಗಳು ಕೆಲಸ ಮಾಡುವ ಸ್ಥಳಗಳಿಗೆ ಅನ್ನ, ನೀರು ಕೊಂಡೊಯ್ಯಬೇಕಾಗುತ್ತದೆ. ಮನೆಯ ಇತರ ಕೆಲಸ ಕಾರ್ಯಗಳ ಜೊತೆಗೆ ಎಳೆಯ ಮಕ್ಕಳನ್ನು ನೋಡಿಕೊಳ್ಳಬೇಕಾಗುತ್ತದೆ. ಇಂತಹ ಸೇವಾವಲಯಕ್ಕೆ ಮೀಸಲಿರಿಸುವ ಕಾರಣದಿಂದ ಬಾಲಕಿಯರು ಶಿಕ್ಷಣ ಪಡೆಯಲು ಆಗುತ್ತಿಲ್ಲ.

ಹೆಣ್ಣುಮಕ್ಕಳು ಶಿಕ್ಷಣವನ್ನು ಪಡೆಯಲು ಆಗುತ್ತಿಲ್ಲ ಎನ್ನುವ ಕಾರಣಗಳಲ್ಲಿ 'ವಿವಾಹ'ವು ಕೇಂದ್ರ ಸಂಸ್ಥೆ. ಮಹಿಳಾ ಶಿಕ್ಷಣವು ವಿವಾಹ ವಯಸ್ಸಿನ ಮೇಲೆ ಅವಲಂಬಿಸಿದೆ.ಚಿಕ್ಕ ವಯಸ್ಸಿನಲ್ಲಿ ಹೆಣ್ಣುಮಕ್ಕಳಿಗೆ ಮದುವೆ ಮಾಡಿದರೆ ಅವರು ಶಿಕ್ಷಣದಲ್ಲಿ ಭಾಗವಹಿಸುವುದು ನಿಂತು ಬಿಡುತ್ತದೆ. ಸಾಮಾನ್ಯವಾಗಿ ವಿವಾಹವೆನ್ನುವುದು ಹೆಣ್ಣಿಗೆ ಅನಿವಾರ್ಯ, ಸ್ವತಃ ತಂದೆ ತಾಯಿಗೂ ಅನಿವಾರ್ಯ. ಏಕೆಂದರೆ ವಿವಾಹ ಮಾಡದಿದ್ದರೆ ತಂದೆ ತಾಯಿ ನರಕಕ್ಕೆ ಹೋಗುತ್ತಾರೆ ಎಂಬ ಸಾಮಾಜಿಕ ಕಲ್ಪನೆ ಇದೆ. ಈ ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ತಾಯಿ ಮತ್ತು ಹೆಂಡತಿ ಎನ್ನುವ ಸ್ಥಿರ ಮಾದರಿಗಳಿವೆ. ಹೆಣ್ಣು ಹುಟ್ಟಿದ್ದೆ ಅವಳ ಮಕ್ಕಳಿಗೆ ತಾಯಿಯಾಗುವುದಕ್ಕಾಗಿ. ಹೆಣ್ಣಿನ ಜೈವಿಕ ಸ್ಥಿತಿಗತಿಯನ್ನು ಸಮಾಜ ತನಗೆ ತಕ್ಕಂತೆ ಹೊಂದಿಸಿಕೊಳ್ಳಲು ಬಯಸುತ್ತದೆ. ಏನೇ ಇದ್ದರೂ ಹೆಣ್ಣಿನ ಬಗೆಗಿನ ಎಲ್ಲ ಸಂಗತಿಗಳನ್ನು ಸಮಾಜ ನಿರ್ಧಾರ ಮಾಡುತ್ತದೆ. ಈ ವ್ಯವಸ್ಥೆ ಬಾಲ್ಯದಿಂದಲೇ ಅವಳ ಮನಸ್ಸಿನಲ್ಲಿ ಸ್ವಂತ ಕಲ್ಪನೆಗಳಿಗೆ ಅವಕಾಶ ಇಲ್ಲದಂತಾಗಿಸಿ, ಅನ್ಯಭಾವನೆ ಮೂಡಿಸಿ, ಅವಳಿಗೆ ಯಾವುದು ಮುಖ್ಯ, ಯಾವುದು ಅಮುಖ್ಯ ಎಂಬ ಮಾಪನ ಮಾಡಿದೆ. ಇದರಲ್ಲಿ ಮಹಿಳೆಗೆ ನೀಡುವ ಶಿಕ್ಷಣದಲ್ಲಿ ಆಕೆಯ ಕರಿಯರ್ ಮುಖ್ಯವಾಗದೆ; ವಿವಾಹ, ಗಂಡ, ಮಕ್ಕಳಲ್ಲಿ ಮಗ ಮುಖ್ಯವಾಗುತ್ತಾರೆ. ಈ ಹಿನ್ನೆಲೆಯಲ್ಲಿ ವ್ಯವಸ್ಥೆಯು ಹೆಣ್ಣನ್ನು ಕುಟುಂಬದ ರಾಚನಿಕ ಮತ್ತು ಕಾಲ್ಪನಿಕ ಚೌಕಟ್ಟಿನಲ್ಲಿ ಹೊಂದಿಸಲು ಬಯಸುತ್ತದೆ. ಹೆಣ್ಣು ಬಾಹ್ಯ ಜಗತ್ತಿಗೆ ಕಾಲಿಡದಂತಹ ನಿರ್ಬಂಧಗಳನ್ನು ಹೇರಿ, ಅವಳು ಶಿಕ್ಷಣ ಜಗತ್ತಿಗೆ ಹೋಗದಂತೆ ನಿಯಂತ್ರಿಸುತ್ತದೆ. ಆರ್ಥಿಕವಾಗಿ ಕುಟುಂಬವು ಶಕ್ತವಾಗಿದ್ದರೂ ಸಹ, ಸಾಮಾಜಿಕ ಸಂಗತಿಗಳು ವಿವಾಹಕ್ಕೆ ಹೆಚ್ಚಿನ ಒಲವು ತೋರಿಸುತ್ತಾ, ಹೆಣ್ಣಿನ ಶಿಕ್ಷಣಕ್ಕೆ ಆಸ್ಪದ ಕೊಡುವುದಿಲ್ಲ ಹಾಗೂ ಹೆಣ್ಣಾಗಿ ಹುಟ್ಟಿದ್ದಕ್ಕೆ ಆಕೆ ವೈವಾಹಿಕ ಚೌಕಟ್ಟಿಗೆ ಒಳಪಡಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಆಕಸ್ಮಾತ್ ಅವಿವಾಹಿತಳಾಗಿ ಉಳಿದರೆ ಅಂತಹ ಮಹಿಳೆಯರ ಸ್ಥಿತಿ ಇನ್ನೂ ಗಂಭೀರ. ಹಾಗಾಗಿ ಮಹಿಳೆಯರು ಶಿಕ್ಷಣ ಲೋಕಕ್ಕೆ ಬರಲು ಸಾಮಾಜಿಕ ಸಂಗತಿಗಳು ಬಿಡುವುದಿಲ್ಲ.

ಸಾಂಪ್ರದಾಯಿಕ ಹಿಂದೂ ಸಮಾಜದಲ್ಲಿನ ಜಾತಿ ಪದ್ಧತಿಯಿಂದಾಗಿ ಕಲುಷಿತ ಕಟ್ಟು ಪಾಡುಗಳಿಂದಾಗಿ ಬಹುತೇಕ ಜಾತಿ, ಉಪ ಜಾತಿಗಳ ಜನರು ಶಿಕ್ಷಣದಿಂದಲೇ ಶತ-ಶತಮಾನಗಳವರೆಗೆ ವಂಚಿಸಲ್ಪಟ್ಟಿದರ ಪರಿಣಾಮ ಬಹುತೇಕ ಮಂದಿ ಭಾರತೀಯರಿಗೆ ಶಿಕ್ಷಣದ ಮಹತ್ವ ಮನವರಿಕೆಯಾಗಿಲ್ಲ. ಪ್ರಾಚೀನ ಕಾಲದ ವರ್ಣ ವ್ಯವಸ್ಥೆ ಶಿಕ್ಷಣವನ್ನು ಕೆಲವೇ ಜಾತಿಗಳಿಗೆ ಸೀಮಿತಗೊಳಿಸಿತು. ಜನರನ್ನು ವೃತ್ತಿಯ ಮೂಲಕ ಗುರುತಿಸುತ್ತಿದ್ದು ಅದು ತಲೆಮಾರಿನಿಂದ ತಲೆಮಾರಿಗೆ ಅನ್ವಯವಾಗುತ್ತಿತ್ತು. ಬ್ರಾಹ್ಮಣರು ಓದಬೇಕು, ಉಳಿದವರು ಕೇಳಬೇಕು. ಆದರೆ ಮಹಿಳಾ ಸಂದರ್ಭದ ಕೆಳಜಾತಿ ಕುಟುಂಬಗಳಲ್ಲಿ ಹೆಣ್ಣುಮಕ್ಕಳು ಓದಿ ರಾಜ್ಯವಾಳಬೇಕೆಂದಿಲ್ಲ ಎಂಬ ಮಾತುಗಳು, ಇನ್ನೂ ತಾವು ಕೀಳು ಜಾತಿಯವರು ಶಿಕ್ಷಣ ಪಡೆದರೆ ದೇವರು ಕೋಪಗೊಳ್ಳುತ್ತಾನೆಂಬ ನಂಬಿಕೆಗಳು ಪೋಷಕರಲ್ಲಿ ಹೆಣ್ಣಮಕ್ಕಳನ್ನು ಶಿಕ್ಷಣದಿಂದ ದೂರ ತಳ್ಳುವಂತೆ ಮಾಡುತ್ತವೆ. ಒಂದು ವೇಳೆ ಪೋಷಕರು ಧೈರ್ಯ ಮಾಡಿ ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಿದರೆ, ಆಗ ತಮ್ಮ ಜಾತಿಯ ವಿದ್ಯಾವಂತ ಯುವಕರ ಕೊರತೆಯಿಂದ ಅವಳನ್ನು ಅವಿವಾಹಿತಳನ್ನಾಗಿಸುತ್ತದೆ. ಅವರ ಕುಟುಂಬಕ್ಕೆ ಅಗೌರವ ಎಂದು ಭಾವಿಸಿಕೊಳ್ಳುತ್ತಾರೆ. ಈ ಬಗೆಯ ಸಾಮಾಜಿಕ ಒತ್ತಡದಿಂದ ಪೋಷಕರು ತಮ್ಮ ಮಗಳಿಗೆ ಶಿಕ್ಷಣ ನೀಡುವುದಕ್ಕಿಂತ ವಿವಾಹ ಮಾಡಲು ಮುಂದಾಗುತ್ತಾರೆ. ಹಾಗಾಗಿ, ತಾವು ಮಾಡದ ತಪ್ಪಿಗೆ ಕೆಳಜಾತಿಯ ಹೆಣ್ಣುಮಕ್ಕಳು ಶಿಕ್ಷಣ ಪಡೆಯಲು ಆಗದೆ ಅಜ್ಞಾನ, ಬಡತನ, ಶೋಷಣೆಯಲ್ಲಿ ಬೆಂದು ಕರಕಲು ಆಗಿದ್ದಾರೆ.

ಮೇಲ್ವರ್ಗಗಳ ಮತ್ತು ಮಧ್ಯಮ ವರ್ಗಗಳ ಹೆಣ್ಣುಮಕ್ಕಳು ಹೆಚ್ಚು ವಿದ್ಯಾವಂತರಾದರೆ, ಅವರಿಗೆ ವಿವಾಹ ಮಾರುಕಟ್ಟೆಯಲ್ಲಿ ತುಂಬಾ ಬೇಡಿಕೆಯಿದೆ.ಆದ್ದರಿಂದ ಆ ವರ್ಗಗಳು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಬಯಸುತ್ತಾರೆ. ಆದರೆ ಕೆಳವರ್ಗದ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿದರೆ, ಅವರ ಶಿಕ್ಷಣಕ್ಕೆ ಅನುಗುಣವಾಗಿ ವರ ಸಿಗುವುದು ಕಷ್ಟವಾದ್ದರಿಂದ ಕೆಳವರ್ಗಗಳು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಹಿಂಜರಿಯುತ್ತಿವೆ. ಹಲವು ಮಕ್ಕಳು ಕಡ್ಡಾಯವಾಗಿ ಹಣಕ್ಕಾಗಿ ಅಥವಾ ಹಣವಿಲ್ಲದೆ ಕೆಲಸ ಮಾಡಬೇಕಾಗುತ್ತದೆ. ಗಂಡು ಮಕ್ಕಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಚಿಕ್ಕವಯಸ್ಸಿನಲ್ಲಿ ಕೆಲಸಗಳಿಗೆ ಹೋಗುತ್ತಾರೆ. ಬಾಲಕಾರ್ಮಿಕರ ಬಗೆಗೆ ನಡೆಸಿದ ಕೆಲವು ಅಧ್ಯಯನಗಳು ಹಲವಾರು ಕುಟುಂಬಗಳು ಬದುಕಿ ಉಳಿಯುವಲ್ಲಿ ತಮ್ಮ ಹೆಂಗಸರು ಮತ್ತು ಮಕ್ಕಳ ದುಡಿಮೆಯ ಮೇಲೆ ಅವಲಂಬಿಸಿವೆ ಎಂದು ತಿಳಿಸಿವೆ. ಹಾಗಾಗಿ, ಇಂತಹ ಸಂಕೀರ್ಣ ಸ್ಥಿತಿಯನ್ನು ಮೀರಿ ಶಿಕ್ಷಣ ಪಡೆಯುವುದು ಕೆಲವು ಹೆಣ್ಣುಮಕ್ಕಳಿಗೆ ಮಾತ್ರ ಸಾಧ್ಯವಾಗಿದೆ.

ಮಹಿಳೆಯರು ಶಿಕ್ಷಣ ಪಡೆಯುವಲ್ಲಿ ಇರುವ ತೊಡಕುಗಳಲ್ಲಿ ಪ್ರಾದೇಶಿಕತೆಯೂ ಪ್ರಮುಖವಾದುದು. ಕೆಳವರ್ಗ, ಮೇಲ್ವರ್ಗದ ಅಂತರಕ್ಕೆ ಕಾರಣವಾಗಿರುವುದರ ಪರಿಣಾಮ ಶಿಕ್ಷಣದ ಮೇಲೂ ಬೀರಿದೆ. ಏಕೆಂದರೆ ಪ್ರಾದೇಶಿಕತೆಗೂ ಶಿಕ್ಷಣಕ್ಕೂ ನೇರವಾದ ಸಂಬಂಧವಿದೆ. ಪ್ರಾದೇಶಿಕ ಅಭಿವೃದ್ಧಿಯಿಂದಾಗಿ, ಅಲ್ಲಿನ ಜನರಿಗೆ ತಮ್ಮಷ್ಟಕ್ಕೆ ತಮಗೆ ಜಾಗೃತಿ ಬರುತ್ತದೆ.ಆಗ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಆದರೆ ಅಭಿವೃದ್ಧಿ ಹೊಂದದ, ಪ್ರಜ್ಞೆಗೊಳ್ಳದ ಪ್ರದೇಶಕ್ಕೆ ಪ್ರಭುತ್ವವು ಸೌಲಭ್ಯ ನೀಡಿ, ಶಿಕ್ಷಣ ಪಡೆಯಿರಿ ಎಂದು ಒತ್ತಾಯಿಸಿದರೂ ಸಹ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಜೊತೆಗೆ ತಮ್ಮ ಮಕ್ಕಳನ್ನು ತಾವೇ ಕೂಲಿಗೆ ಕರೆದುಕೊಂಡು ಹೋಗುತ್ತಾರೆ.

ನಗರಗಳಲ್ಲಿ ಶಾಲೆಗಳಿರುವುದರಿಂದ ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದು ಸುಲಭ. ಆದರೂ ರ್ಯಾಗಿಂಗ್, ಏಡ್ಸಿನ ಹಾವಳಿಯಿಂದಾಗಿ ಕೆಲವು ಹೆಣ್ಣುಮಕ್ಕಳು ಶಿಕ್ಷಣ ಪಡೆಯಲು ಆಗುತ್ತಿಲ್ಲ. ಇನ್ನೂ ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳು ಶಿಕ್ಷಣ ಪಡೆಯಲು ಮೂಲಭೂತ ಸೌಕರ್ಯಗಳಾದ ಶಾಲೆ ಕಟ್ಟಡಗಳು, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯ ಕೊರತೆ ಇರುವುದರಿಂದ ಪೋಷಕರು ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಹೆದರುತ್ತಾರೆ. ಹಳ್ಳಿ ಪ್ರದೇಶದಿಂದ ನಗರಗಳಿಗೆ ವಿದ್ಯಾಭ್ಯಾಸಕ್ಕೆ ಹೋಗಲು ಸಾರಿಗೆ ಕೊರತೆ, ನಡೆದು ಹೋಗಲು ಭದ್ರತೆಯ ಕೊರತೆಯಿದೆ. ಇದರ ಜೊತೆಗೆ, ಹಳ್ಳಿ ಶಾಲೆಗಳಿಗೆ ಶಿಕ್ಷಕಿಯರ ಕೊರತೆ ಇದ್ದು, 'ಪುರುಷ' ಶಿಕ್ಷಕರ ಬಗೆಗಿನ ಪೋಷಕರ ಸಂಶಯವು ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದಿರಲು, ಕಲಿಯುತ್ತಿರುವ ಹೆಣ್ಣುಮಕ್ಕಳನ್ನು ಶಾಲೆಯಿಂದ ಬಿಡಿಸಲು ಕಾರಣವಾಗಿದೆ. ಕೆಲವು ಸಮೀಕ್ಷೆಗಳ ಪ್ರಕಾರ ಗ್ರಾಮಗಳಲ್ಲಿ ಶಿಕ್ಷಣದ ಪ್ರಚಾರಕ್ಕಾಗಿ ಹೆಚ್ಚಿನ ಹಣವನ್ನು ಸರ್ಕಾರ ವೆಚ್ಚ ಮಾಡಲಾಗುತ್ತಿದ್ದರೂ,

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸರಿಯಾದ ಪ್ರತಿಫಲ ದೊರಕುತ್ತಿಲ್ಲ. ಏಕೆಂದರೆ ಸಾಮಾಜಿಕ ಶಿಕ್ಷಣದ ಬಗ್ಗೆ ಗ್ರಾಮೀಣ ಜನರಿಗೆ ತಪ್ಪು ಕಲ್ಪನೆಗಳಿವೆ.

ಮಕ್ಕಳು ಬಹಳ ಸಣ್ಣವರಿದ್ದಾಗ ತಮ್ಮ ಕೆಲಸಗಳ ನಡುವೆ ಹೊರೆಯಾಗದಿರಲೆಂದು, ತಂದೆ–ತಾಯಿಗಳು ಶಾಲೆಗೆ ಕಳುಹಿಸುತ್ತಾರೆ. ಮಕ್ಕಳು 8–9 ವರ್ಷದವರಾದ ಮೇಲೆ ತಮ್ಮೊಂದಿಗೆ ಹೊಲಗದ್ದೆಗಳಲ್ಲಿ ದುಡಿಯಲೆಂದು ಮಧ್ಯದಲ್ಲಿ ಬಿಡುವುದು ಗ್ರಾಮೀಣ ಪ್ರದೇಶದಲ್ಲಿ ಸರ್ವೇಸಾಮಾನ್ಯವಾಗಿದೆ. ಮಕ್ಕಳು ರೈತರಿಗೆ ಉಪಯುಕ್ತವಾಗಿ ಅವರು ಬೇರೆಯವರಿಗೆ ನೀಡಬೇಕಾದ ಕೂಲಿ ಹಣವನ್ನು ಉಳಿಸುವರು.ದುಡಿಮೆಗೆ ಇದು ಸಹಾಯಕವಾಗುತ್ತದೆ. ಈ ದೃಷ್ಟಿಯಿಂದ ಶಾಲೆಗೆ ಮಕ್ಕಳು ಬರುವುದು ತಪ್ಪುತ್ತದೆ. ಮುಂದೆ ಶಾಲೆಗೆ ಬಂದರೂ ಓದಿಕೊಳ್ಳಲು ವೇಳೆ ಸಿಗದೆ ಅನುತ್ತೀರ್ಣರಾಗುತ್ತಾಳೆ. ಇದನ್ನೆ ನೆಪಮಾಡಿಕೊಂಡು ಶಾಲೆ ಬಿಡಿಸುತ್ತಾರೆ. ಹೊಟ್ಟೆಗೆ ಹಿಟ್ಟಿಲ್ಲದಾಗ ಮಕ್ಕಳನ್ನು ಏನು ಓದಿಸುವುದು ಎನ್ನುವವರು ಇದ್ದರೆ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರ ಬಹು ಸೌಕರ್ಯಗಳಾದ ಪುಸ್ತಕ, ಚೀಲ, ಶಿಷ್ಯವೇತನ, ಬಟ್ಟೆ, ಊಟ ಒದಗಿಸಿದರೂ ರೈತರು ಗದ್ದೆ ಕೆಲಸದ ಕಾಲದಲ್ಲಿ ಶಾಲೆಗೆ ರಜೆ ನೀಡಿಸಿ ಮಕ್ಕಳನ್ನು ಕೃಷಿ ಕೆಲಸಕ್ಕೆ ಉಪಯೋಗಿಸಿಕೊಳ್ಳುವಂತೆ ಮಾಡಿದಲ್ಲಿ ಆರ್ಥಿಕ ಸಹಾಯ ಪೋಷಕರಿಗೆ ಆಗುತ್ತದೆ. ಇದಕ್ಕೆ ಕಾರಣ ಅಜ್ಞಾನ ಮತ್ತು ಬಡತನಗಳಾಗಿವೆ.

ಪುರಾತನ ಕಾಲದಿಂದಲೂ ಬಂದಿರುವ ಪೂರ್ವಗ್ರಹಗಳು ಮತ್ತು ನಂಬಿಕೆಗಳು ಹೆಣ್ಣುಮಕ್ಕಳು ಸಾಮಾಜಿಕ ಶಿಕ್ಷಣವನ್ನು ಸ್ವೀಕರಿಸಲು ಬಿಡುತ್ತಿಲ್ಲ. ಮನುಷ್ಯ ತಾನು ಬದುಕುವದರೊಂದಿಗೆ ಭೌತಿಕ ಸಂಸ್ಕೃತಿಗೆ ಸಂಬಂಧಿಸಿದ ವಿಚಾರಗಳಲ್ಲಿ ಹಲವನ್ನು ಬದಲಾವಣೆ ಮಾಡಿಕೊಳ್ಳಲು ಸಹಜವಾಗಿಯೇ ಇಷ್ಟಪಡುತ್ತಾರೆ. ಉದಾಹರಣೆಗೆ ಮಣ್ಣಿನ ಮಡಿಕೆ ಬದಲು ಸಿಲ್ವರ್, ಸ್ಟೀಲ್, ನಾನ್ ಸ್ಟಿಕ್, ಪಿಂಗಾಣಿ ಮುಂತಾದ ಪಾತ್ರೆಗಳನ್ನು ಬಳಸುವುದು. ಆದರೆ ಅಭೌತಿಕ ಸಂಸ್ಕೃತಿಯಲ್ಲಿ ಬರುವ ಸಂಗತಿಗಳ ಬಗೆಗೆ, ಮೂಢ ನಂಬಿಕೆಗಳನ್ನು ಭಾರತೀಯರು ಬೆಳೆಸಿಕೊಂಡಿದ್ದು, ಅಂತಹ ಹಳೆ ಸಂಪ್ರದಾಯಗಳನ್ನು ಜನರು ಕಟ್ಟುನಿಟ್ಟಾಗಿ ಪಾಲಿಸುವ ಸ್ವಭಾವವಿದೆ. ಆಲೋಚನೆಯ ತರ್ಕಬದ್ಧ ವಿಚಾರದ ಅಭಾವವಿರುವುದರಿಂದ ಹೆಣ್ಣುಮಕ್ಕಳು ಋತುಮತಿಯಾದ ಮೇಲೆ ಬಹುದಿನಗಳವರೆಗೆ ಮನೆಯಲ್ಲಿ ಇರಬೇಕು, ಹೊರಗಡೆ ಹೋಗಬಾರದು, ಹೋದರೆ ಶೀಲಕಳೆದುಕೊಳ್ಳುತ್ತಾರೆಂಬ ಶೀಲದ ಬಗೆಗಿನ ನಂಬಿಕೆಗಳು, ವಿವಾಹದ ನಂತರ ತಾಯಿ ಆಗಲೇಬೇಕೆಂಬ ಧಾರ್ಮಿಕ ನಂಬಿಕೆಗಳು, "ಗಂಡು ಮಗನಿಂದಲೇ ಮೋಕ್ಷ" ಎಂಬ ನಾಣ್ಣುಡಿಗಳು ಸಂಸ್ಕೃತಿಯಲ್ಲಿ ಬೇರೂರಿವೆ. ಇವು ಅವಳ ಸಾಮಾಜಿಕ ಅಸ್ತಿತ್ವವನ್ನೆ ನಿರಾಕರಿಸುತ್ತವೆ. ಶಿಕ್ಷಣವು ವಿವಾಹದ ಆಯ್ಕೆ ತಿಳುವಳಿಕೆಯನ್ನು ಬೆಳೆಸುತ್ತದೆ. ಈ ಬಗೆಗೆ ತಿಳುವಳಿಕೆ ನೀಡುವ ಶಿಕ್ಷಣ ಬೇಡವೆಂಬ ಪುರುಷ ನಿರಾಕರಣ ರಾಜಕಾರಣವು ಹೆಣ್ಣುಮಕ್ಕಳು, ಮಹಿಳೆಯರು ಶಿಕ್ಷಣ ಜಗತ್ತಿಗೆ ಬಂದು ತಮ್ಮ ಸಮಾನರಾಗಿರುವುದನ್ನು ಬಯಸದೆ ಅವರನ್ನು ಶಿಕ್ಷಣ ಕ್ಷೇತ್ರದಿಂದ ದೂರ ತಳ್ಳುತ್ತಿದೆ.

ಒಟ್ಟಿನಲ್ಲಿ ಮಹಿಳಾ ಶಿಕ್ಷಣಕ್ಕೆ ಇರುವ ತೊಡಕುಗಳು ಸಂಕೀರ್ಣವಾಗಿದ್ದು, ಗೆರೆಕೊರೆದು ಗುರುತಿಸುವುದು ಅಸಾಧ್ಯ.ಆದರೂ ಸಮಾಜದ ವಿವಿಧ ಸ್ತರಗಳಾದ ಕುಟುಂಬ, ವಿವಾಹ, ಜಾತಿ, ವರ್ಗ, ಸಂಸ್ಕೃತಿ, ಪ್ರಭುತ್ವದಲ್ಲಿ ಲಿಂಗ ಪೂರ್ವಗ್ರಹಗಳು ಸೇರಿಕೊಂಡಿವೆ. ಅವನ್ನು ಗುರುತಿಸಿ ಬಗೆಹರಿಸುವ ಮೂಲಕ ಶಿಕ್ಷಣಕ್ಕೆ ಮಹಿಳೆಯರನ್ನು ಒಳಗೊಳ್ಳಬೇಕಾದ ಸವಾಲು ನಮ್ಮ ಮುಂದಿದೆ.

## ಆಕರ ಗ್ರಂಥಗಳು


- **ಚಂದ್ರ ಪೂಜಾರಿ ಎಂ., (2016) :** ದಲಿತ ಅಭಿವೃದ್ಧಿ, ಉತ್ತರಕನ್ನಡ ಚಿಂತನ ರಂಗ ಅಧ್ಯಯನ ಕೇಂದ್ರ (ರಿ),.
- **ಚಂದ್ರ ಪೂಜಾರಿ ಎಂ., (2018) :** ಅಭಿವೃದ್ಧಿ ಪರಿಭಾಷೆ, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- **ಜೆರಾಲ್ಡಿನ್ ಪೋರ್ಬ್ಸ್ (ಮೂಲ), ಎಚ್.ಎಸ್. ಶ್ರೀಮತಿ (ಕನ್ನಡಕ್ಕೆ), 2001,** ಆಧುನಿಕ ಭಾರತದಲ್ಲಿ ಮಹಿಳೆ, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- **ಚಂದ್ರಶೇಖರ್ ಟಿ. ಆರ್., (2010) :** ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- **ಪ್ರಶಾಂತ್ ಎಚ್.ಡಿ., (2010) :** ಶೈಕ್ಷಣಿಕ ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- **ವಿನಯ ಲಾಲ್ ಮತ್ತು ಅಶೀಶ್ ನಂದಿ, (2010) :** ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು, ಹೆಗ್ಗೋಡು (ಸಾಗರ) ಅಕ್ಷರ ಪ್ರಕಾಶನ (ಕರ್ನಾಟಕ)


■■

– 40ನೇ ಪುಟದಿಂದ ಮುಂದುವರೆದುದು

## ಉಪಸಂಹಾರ

ಶಿಕ್ಷಣದಲ್ಲಿ ಭಾಷೆಯು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಮಗುವಿಗೆ ಈಗಾಗಲೆ ತಿಳಿದಿರುವ ಭಾಷೆಯಲ್ಲಿ ಶಿಕ್ಷಣ ನೀಡಿದಾಗ ಕಲಿಕೆಯು ಸರಾಗವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರು ವಿದೇಶಿ ಅಥವಾ ರಾಷ್ಟ್ರ ಭಾಷೆಗೆ ಅಷ್ಟು ತೆರೆದುಕೊಂಡಿರುವುದಿಲ್ಲ. ಬಾಲ್ಯವು ಭಾಷಾ ವಿಕಾಸದಲ್ಲಿ ಪ್ರಮುಖವಾದ ಹಂತ. ಮಗುವಿಗೆ ಬಹು ಭಾಷೆಯನ್ನು ಕಲಿಯುವ ಸಾಮರ್ಥ್ಯವಿದೆ ಎಂದು ಸಂಶೋಧನೆಗಳಲ್ಲಿ ಹೇಳಲ್ಪಟ್ಟಿದ್ದರೂ ಕಲಿಕಾ ಪರಿಸರದಲ್ಲಿ ಭಾಷೆ ಇಲದಿದ್ದಾಗ ಅದನ್ನು ಕಲಿಯಲು ಹೆಚ್ಚು ಸಮಯ ಬೇಕಾಗುತ್ತದೆ. ಆದ್ದರಿಂದ ಮಾತೃ ಭಾಷೆಯಶಿಕ್ಷಣ ಮಾಧ್ಯಮವಿದ್ದಾಗ ಕಲಿಕೆ ಸುಲಭವಾಗುತ್ತದೆ.ಕಲಿಕೆ ಪರಿಣಾಮಕಾರಿ ಯಾಗುವುದು ಭಾಷೆಯನ್ನಷ್ಟೆ ಅವಲಂಭಿಸದೆ, ಶಿಕ್ಷಕ, ಶಾಲಾ ಪರಿಸರ, ಕಲಿಕೋಪಕರಣಗಳು, ಸುರಕ್ಷಿತ ವಾತಾವರಣ ಇತ್ಯಾದಿಗಳನ್ನು ಅವಲಂಭಿಸಿದೆ. ಶಿಕ್ಷಣದ ಅಮೂಲ್ಯ ಧ್ಯೇಯಗಳು ಈಡೇರಿಕೆಗಾಗಿ, ಮಗುವಿನ ಸರ್ವತೋಮುಖ ಬೆಳವಣಿಗೆಯಾಗಿ, ಸಮಾಜಕ್ಕೆ, ರಾಷ್ಟ್ರಕ್ಕೆ ಕೊಡುಗೆಯಾಗಲು ಶಿಕ್ಷಣದಲ್ಲಿ ಬಳಸುವ ಭಾಷೆ ಪ್ರಮುಖವಾದದ್ದು, ಸಮಾಜ ಬದಲಾವಣೆಯ ಕನಸು ನನಸಾಗಬೇಕಾದರೆ ಮಾತೃಭಾಷೆ ಮತ್ತು ಶ್ರಮ ಆಧಾರಿತ ಶಿಕ್ಷಣ ಅತಿ ಅಗತ್ಯ ಎಂದು ಗಾಂಧೀಜಿ ಅಂದೇ ಅಭಿಪ್ರಾಯಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ನೀತಿ ರೂಪಕರು, ಶಿಕ್ಷಣ ತಜ್ಞರು, ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು ಸಹಕಾರಯುತವಾಗಿ ಚರ್ಚಿಸಿ ಉತ್ತಮ ನಿರ್ಧಾರಕ್ಕೆ ಬಂದು ಶಿಕ್ಷಣವನ್ನು ಪ್ರಬಲ ಅಸ್ತ್ರವಾಗಿಸಿ ಸುಶಿಕ್ಷಿತ ಸಮಾಜದ ನಿರ್ಮಾಣ ಮಾಡಬೇಕು.

## ಆಕರ ಗ್ರಂಥಗಳು


- **Helen pinnock :** Language and education : The missing link of BT Education Trust.
- **Dr. R. Obalesha Gatti, (2007) :** ಭಾಷೆ ಮತ್ತು ಕನ್ನಡ ಭಾಷಾ ಬೋಧನೆ ಗದಗ ವಿದ್ಯಾನಿಧಿ ಪ್ರಕಾಶನ.
- **Gambell R.J. (1992) :** Deloping the Primary School Curriculum, Falmer Press.
- **Lumturic Bajrami (2015) :** Teacher's New Role in Language Learning and in Promoting Learner Autonomy South East European University.
- www.unesco.org.education
- www.ncert.nic.in.NCF-2005


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಕನ್ನಡ ಕೈಬರಹದ ಮೂಲಕ ಬುದ್ಧಿಶಕ್ತಿಯ ಅಧ್ಯಯನ

✍ **ಡಾ. ಗಿರೀಶ್ ಟಿ.,** ಪ್ರಾಂಶುಪಾಲರು, ಎಸ್.ಎಸ್.ಕೆ.ಎಸ್. ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ.

## ಪೀಠಿಕೆ

ಗ್ರಾಫಾಲಜಿಯು ಕೈಬರಹವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ಕ್ಯಾಮಿಲ್ಲೊ ಬಾಲ್ಡಿ ಎಂಬಾತ 'ಗ್ರಾಫಾಲಜಿ'ಯನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ, 1622ರಲ್ಲಿ 'ಗ್ರಾಫಾಲಜಿಕಲ್' ಲೇಖನವನ್ನು ಬರೆದರು. ಇದು 'ಗ್ರಾಫಾಲಜಿ' ಕುರಿತು ಬರೆದ ಮೊದಲ ಲೇಖನವಾಗಿದೆ. ಮೊಟ್ಟಮೊದಲು ಗ್ರಾಫಾಲಜಿಯನ್ನು ಆಳವಾಗಿ ಅಧ್ಯಯನ ಮಾಡಿದ ಕ್ಯಾಮಿಲ್ಲೊ ಬಾಲ್ಡಿಯನ್ನು (Camillo Baldi) 'ಗ್ರಾಫಾಲಜಿಶಾಸ್ತ್ರದ ಪಿತಾಮಹ' ಎಂದು ಕರೆಯಲಾಗಿದೆ. ಕ್ಯಾಮಿಲ್ಲೊ ಬಾಲ್ಡಿಯ ನಂತರ 1897ರಲ್ಲಿ 'ಅಭ್‌ಜಾನ್ ಹಿಪ್ಪೊಲೈಟ್ ಮಿಕೊನ್‌ನು' 'ಸೊಸೈಟಿ ಆಫ್ ಗ್ರಾಫಾಲಜಿ'ಯನ್ನು ಸ್ಥಾಪಿಸಿದರು. ಇವರು ಗ್ರಾಫಾಲಜಿ ವೈಜ್ಞಾನಿಕ ಅಧ್ಯಯನವನ್ನು ಪ್ರಾರಂಭಿಸಿದ ಮೊದಲಿಗರಾಗಿದ್ದಾರೆ. ಗ್ರಾಫಾಲಜಿ ಪದವನ್ನು ಪರಿಚಯಿಸಿದವರೂ ಸಹ ಮಿಕೊನ್. ಗ್ರಾಫಾಲಜಿ ಪದವು ಎರಡು ಗ್ರೀಕ್ ಪದಗಳಿಂದ ಸಂಯೋಜಿತವಾಗಿದೆ. 'graphein' (to write–ಬರೆಯುವುದು), and 'logos' (science-ವಿಜ್ಞಾನ) ಎಂಬ ಅರ್ಥ ನೀಡುತ್ತದೆ. ಮಿಕೊನ್‌ನ ಗ್ರಾಫಾಲಜಿಯ ಅಧ್ಯಯನದ ಅಂಶಗಳನ್ನು ಅಳವಡಿಸಿಕೊಂಡ ಇವನ ಅನುಯಾಯಿಯಾದ ಕ್ರೇಪಿಯೂಕ್ಸ್ ಜೆಮಿಯನ್ ಗ್ರಾಫಾಲಜಿಯ ಅಧ್ಯಯನಕ್ಕೆ ಮೂಲಭೂತವಾದ ಅಂಶಗಳನ್ನು 7 ವಿಭಾಗಗಳಾಗಿ ವಿಂಗಡಿಸಿದ, ಅವು ಬರವಣಿಗೆಯ ವೇಗ, ಒತ್ತಡ, ರೂಪ, ಆಯಾಮ, ನಿರರ್ಗಳತೆ, ಮಾರ್ಗ ಮತ್ತು ವ್ಯವಸ್ಥಿತ ಬರವಣಿಗೆ, (speed, pressure, form, dimension, continuity, direction, and order,) ಎಂದು ವರ್ಗೀಕರಿಸಲಾಗಿದೆ. 1890ರ ದಶಕದಲ್ಲಿ ಜರ್ಮನಿಯ ತತ್ವಶಾಸ್ತ್ರಜ್ಞ ಮತ್ತು ಗ್ರಾಫೊಲಾಜಿಸ್ಟ್ ಆದ 'ಕ್ಲ್ಯಾಜಸ್' ಗ್ರಾಫಾಲಜಿಗೆ ಗೆಸ್ಟಾಲ್ಟ್ ಸಿದ್ಧಾಂತವನ್ನು ಅನ್ವಯಿಸಿದರು. ಇದರಿಂದಾಗಿ ಗ್ರಾಫಾಲಜಿಯ ವ್ಯಾಪ್ತಿಯನ್ನು ವಿಸ್ತಾರವಾಗಿ ಬೆಳೆಯಿತು.

ಮಾನವನ ಇತಿಹಾಸದ ಕುರುಹುಗಳಲ್ಲಿ ಗ್ರಾಫಾಲಜಿ ಶಾಸ್ತ್ರದ ಬಳಕೆ ಆದಿಕಾಲದಿಂದಲೂ ಇತ್ತೆಂದು ತಿಳಿದುಬರುತ್ತದೆ. ಆದರೆ ಇದರ ವೈಜ್ಞಾನಿಕ ಅಧ್ಯಯನವು ಸುಮಾರು ನಾಲ್ಕುನೂರು ವರ್ಷಗಳ ಹಿಂದೆಯೆ ಪ್ರಾರಂಭವಾಯಿತೆಂದು ಹೇಳಲಾಗುತ್ತದೆ. ಮನುಷ್ಯನು ಗುಹೆಗಳಲ್ಲಿ ವಾಸಮಾಡುವಾಗ ವಿವಿಧ ರೇಖಾವಿನ್ಯಾಸ, ಚಿತ್ರ ಬರಹಗಳನ್ನು ಬರೆಯುವುದನ್ನು ರೂಢಿಸಿಕೊಂಡಿದ್ದನೆಂದು ಇತಿಹಾಸದಿಂದದಾಖಲೆಗಳು ದೊರೆತಿದೆ. ಜಗತ್ತಿನ ವಿವಿಧ ನಾಗರೀಕತೆಗಳ ಕಾಲದಿಂದಲೂ ಬರವಣಿಗೆ, ಚಿತ್ರಕಲೆಗಳು ಹಾಗೂ ವಿವಿಧ ರೇಖಾ ವಿನ್ಯಾಸಗಳ ಮೂಲಕಮಾನವ ತನ್ನ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾನೆಂದು ತಿಳಿದುಬಂದಿದೆ. ಆರು ಸಾವಿರ ವರ್ಷಗಳ ಹಿಂದೆ ಗ್ರಾಫಾಲಜಿಶಾಸ್ತ್ರ ಆವಿರ್ಭವಿಸಿತೆಂದು ಹಲವು ಶಾಸ್ತ್ರಜ್ಞರು ಹೇಳುತ್ತಾರೆ.ಕೈ ಬರವಣಿಗೆಯ ಮೂಲಕ ಮನಸ್ಸಿನ ಸ್ಥಿತಿ ಹಾಗೂ ವ್ಯಕ್ತಿತ್ವವನ್ನು ಪರೀಕ್ಷಿಸುವ ವಿದ್ಯೆಯನ್ನು ಮೊಟ್ಟಮೊದಲು ಕಂಡುಕೊಂಡವರು ಚೀನಿಯರು, ನಂತರ ಅರಿಸ್ಟಾಟಲ್ ಈ ಶಾಸ್ತ್ರವನ್ನು ಇನ್ನಷ್ಟು ವಿಸ್ತೃತಗೊಳಿಸಿದನು. ಪ್ರೆಂಚ್ ಶಾಸ್ತ್ರಜ್ಞರು ಈ ಶಾಸ್ತ್ರಕ್ಕೆ ನಿಯಮಗಳನ್ನು ರೂಪಿಸಿ ಬಳಸುವುದನ್ನು ರೂಢಿಸಿಕೊಂಡರು. ಅಮೇರಿಕಾದಲ್ಲಿ ಒಂದು ವಿಜ್ಞಾನವಾಗಿ ಹಾಗೂ ಇತರೆ ಐರೋಪ್ಯ ರಾಷ್ಟ್ರಗಳ ಕಾಲೇಜು ಮತ್ತು ವಿಶ್ವವಿದ್ಯಾಲಯದ ಪಠ್ಯವಾಗಿ ಅಳವಡಿಸಲಾಗಿದೆ, ಡಿಗ್ರಿ,ಮಾಸ್ಟರ್ ಡಿಗ್ರಿ, ಹಾಗೂ ದೂರ ಶಿಕ್ಷಣದ ಕೋರ್ಸ್‌ಗಳ ಮೂಲಕವಾಗಿ ಗ್ರಾಫಾಲಜಿಯನ್ನು ಅಧ್ಯಯನ ಮಾಡಲಾಗುತ್ತಿದೆ.

ಗ್ರಾಫಾಲಜಿಯು ನಾವು ಬರೆಯುವ ಗ್ರಾಫಿಕ್ ಚಟುವಟಿಕೆಗಳನ್ನು ಅಧ್ಯಯನ ಮಾಡುವುದಾಗಿದೆ. ಗ್ರಾಫಾಲಜಿಯು ರೇಖಾಚಿತ್ರ, ಶಿಲ್ಪಾಕೃತಿಗಳನ್ನು ಅಧ್ಯಯನ ಮಾಡುತ್ತದೆ. ಈ ಅಧ್ಯಯನವು ಬರಹಗಾರರ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಸ್ಥಿತಿಗಳ ಬಗ್ಗೆ ಒಳನೋಟವನ್ನು ನೀಡುತ್ತದೆ. 'ಗ್ರಾಫಾಲಜಿ'ಯು ಬರವಣಿಗೆಯನ್ನು ಅಧ್ಯಯನ ಮಾಡುವ ವಿಜ್ಞಾನಗಳಲ್ಲಿ ಒಂದಾಗಿದೆ.ಇದರಿಂದಾಗಿ ವ್ಯಕ್ತಿಯ ಬರವಣಿಗೆಯ ವ್ಯಕ್ತಿತ್ವದ ಗುಣ ಲಕ್ಷಣಗಳನ್ನು ಅಳೆಯ ಬಹುದಾಗಿದೆ. ಗ್ರಾಫಾಲಜಿ ವ್ಯಕ್ತಿಯ ಮಾನಸಿಕ, ಸಾಮಾಜಿಕ, ಔದ್ಯೋಗಿಕ ಮತ್ತು ಆರೋಗ್ಯ ಸಂಬಂಧಿತ ಲಕ್ಷಣಗಳನ್ನು ನಿರ್ಧರಿಸುತ್ತದೆ ಎಂದು ಬಯರ್‌ಸ್ಟಿನ್ (1996) ನಿರೂಪಿಸಿದ್ದಾರೆ. **ಆಧುನಿಕ ಜಗತ್ತಿನಲ್ಲಿ ಗ್ರಾಫಾಲಜಿಯನ್ನು ಒಂದು ವ್ಯವಸ್ಥಿತವಾಗಿ ಅಧ್ಯಯನ ಹಲವು ಶಾಸ್ತ್ರಜ್ಞರುಗಳು ಅಧ್ಯಯನ ನಡೆಸಿದ್ದಾರೆ.** ಮೆಯೆರ್ (1901) ರಲ್ಲಿ ಕೈಬರವಣಿಗೆಯಲ್ಲಿನ ನಿರ್ದಿಷ್ಟ ಪಾತ್ರ, ತಾರ್ಕಿಕ ಲಕ್ಷಣಗಳನ್ನು ಗುರುತಿಸುವ ವ್ಯವಸ್ಥಿತ ಅಧ್ಯಯನವನ್ನು ಕೈಗೊಂಡರು. ಪ್ರಖ್ಯಾತ ಮನೋಶಾಸ್ತ್ರಜ್ಞ ಬಿನೆಟ್ (1904) ಬುದ್ಧಿಶಕ್ತಿ ಪರೀಕ್ಷಿಸಲು ಕೈಬರವಣಿಗೆ ವಿಶ್ಲೇಷಣೆ ಉತ್ತಮವಾದ ವಿಧಾನವೆಂದು ಹೇಳಿದ್ದಾನೆ ಹಾಗೂ ಬರೆಯುವವರ ಕೆಲವು ಲಕ್ಷಣಗಳು ಅಕ್ಷರದ ಮೂಲಕ ಪ್ರತಿಬಿಂಬಿಸುತ್ತವೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಬಂಕರ್ (1915) 'ಅಮೆರಿಕನ್ ಹ್ಯಾಡ್‌ರೈಟಿಂಗ್ ವಿಶ್ಲೇಷಣೆ–ಗ್ರಾಫ್–ವಿಶ್ಲೇಷಣೆಯ' ಹಕ್ಕು ಸ್ವಾಮ್ಯವನ್ನು ಅಭಿವೃದ್ಧಿಪಡಿಸಿದರು. ಬಂಕರ್‌ರವರು 1929ರಲ್ಲಿ –'ಅಮೆರಿಕನ್ ಗ್ರಾಫೊ ಅನಾಲಿಸಿಸ್ ಸೊಸೈಟಿಯನ್ನು' ಸ್ಥಾಪಿಸಿದರು. ಸ್ವಿಸ್ ದೇಶದ ಪ್ರಾಧ್ಯಾಪಕರಾಗಿದ್ದ ಪುಲ್ವರ್ಗ್ (1955) ಇವರು ಜುರಿಕ್ ವಿಶ್ವವಿದ್ಯಾಲಯದಲ್ಲಿ ಗ್ರಾಫಾಲಜಿಯ ಕುರಿತು ಮೊದಲ ಉಪನ್ಯಾಸ ನೀಡಿದರು.ಮೊಟ್ಟಮೊದಲಬಾರಿಗೆ ಮನೋ ವಿಶ್ಲೇಷಣೆಗೆ ಗ್ರಾಫಾಲಜಿಯನ್ನು ಬಳಸಿದರು. ಕೋಲ್‌ರವರು ವಿದ್ಯಾರ್ಥಿಗಳಿಗೆ ಸರಣಿಯೋಪಾದಿಯಲ್ಲಿ ಹ್ಯಾಂಡ್ ರೈಟಿಂಗ್ ಕಾರ್ಯಗಾರಗಳು, ಉಪನ್ಯಾಸಗಳನ್ನು ಆಯೋಜಿಸಿದರು. ಇವರು ಬರವಣಿಗೆ ವಿಶ್ಲೇಷಣೆಯನ್ನು ವ್ಯಕ್ತಿತ್ವ ವಿಶ್ಲೇಷಣೆಯ ವಿಧಾನವಾಗಿ ಸಂಶೋಧಕರಿಂದ ವಿಶ್ವಾಸಾರ್ಹತೆಯನ್ನು ಕಂಡುಕೊಳ್ಳಲಾಯಿತು.

ಗ್ರಾಫಾಲಜಿ ವಿಶ್ಲೇಷಣೆಯು ವ್ಯಕ್ತಿಯ ಶಕ್ತಿ–ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಅರ್ಥಮಾಡಿಕೊಳ್ಳಲು ಅತ್ಯಂತ ಶಕ್ತಿಶಾಲಿಯಾದ ವಿಜ್ಞಾನವಾಗಿದೆ, (ರವೀಂದ್ರನೇಗಿ, 2014). ಕೈಬರಹ ವಿಶ್ಲೇಷಣೆಯು ವ್ಯಕ್ತಿಗಳ ವ್ಯಕ್ತಿತ್ವದ ಗುಣಲಕ್ಷಣಗಳನ್ನು ಕಂಡುಹಿಡಿಯಲು ಬಳಸಬಹುದಾಗಿದೆ. ನಮಗೆ ಗೊತ್ತಿಲ್ಲದ, ಅಂದರೆ ಮನಸ್ಸಿನ ಅಜಾಗೃತ ಪ್ರಜ್ಞಾವಸ್ಥೆಯಲ್ಲಿ ಮನಸ್ಸಿನಲ್ಲಿರುವ ಭಾವನೆಗಳನ್ನು ತಿಳಿಯಪಡಿಸುತ್ತದೆ. ನೀವು ಬರೆಯುವ ಕೈಬರಹವು ನಮ್ಮ ಪ್ರಜ್ಞಾವಸ್ಥೆಯ ಪ್ರಜ್ಞಾಪೂರ್ವಕ ಕ್ರಿಯೆಯಾದರೂ, ನೀವು ಹೇಗೆ ಬರೆಯುತ್ತೀರಿ ಎಂಬುದು ನಿಮ್ಮ ಅಜಾಗೃತ ಮನಸ್ಸಿನಿಂದ ನಿರ್ಧರಿಸಲ್ಪಡುತ್ತದೆ. ಹಾಗಾಗಿ ನಿಮ್ಮ ಕೈಬರಹವು ನಿಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಕೈಬರಹ ವಿಶ್ಲೇಷಣೆಯಿಂದ ಅಂತರ್ಮುಖಿಗಳು ಯಾರು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮತ್ತು ಬಹಿರ್ಮುಖಿಗಳು ಯಾರು ಎಂದು ತಿಳಿದುಕೊಳ್ಳಬಹುದಾಗಿದೆ ಹಾಗೂ ನಿಮ್ಮ ವ್ಯಕ್ತಿತ್ವದಲ್ಲಿರುವ ಧನಾತ್ಮಕ ಮತ್ತು ಋಣಾತ್ಮಕ ಗುಣ ಲಕ್ಷಣಗಳನ್ನು ತಿಳಿಯಬಹುದಾಗಿದೆ. ಕೈಬರಹ ವಿಶ್ಲೇಷಣೆಯು ವ್ಯಕ್ತಿಯ ವ್ಯಕ್ತಿತ್ವ ಮತ್ತು ಗುಣಲಕ್ಷಣಗಳನ್ನು ಗುರುತಿಸುವುದು. ಕೈಬರಹ ವಿಶ್ಲೇಷಣೆಯು ಜಗತ್ತಿಗೆ ಹೊಸತಲ್ಲ, ಇಟಲಿ, ಜರ್ಮನಿ, ಬ್ರಿಟನ್, ಮತ್ತು ಅಮೆರಿಕಾ ದೇಶಗಳಲ್ಲಿ ಹಿಂದೆಯೇ ಅಸ್ತಿತ್ವದಲ್ಲಿತ್ತು ಎಂಬುದರ ಬಗ್ಗೆ ಹಲವು ವರದಿಗಳಿಂದ ತಿಳಿದುಬಂದಿದೆ, (ಲೋವೆ, 1999). ಕೈಬರಹ ವಿಶ್ಲೇಷಣೆ ಎನ್ನುವುದು ಕೈಬರಹದ ಮೂಲಕ ವ್ಯಕ್ತಿತ್ವವನ್ನು ಗುರುತಿಸುವುದು, ಮೌಲ್ಯಮಾಪನ ಮಾಡುವುದು ಮತ್ತು ಗ್ರಹಿಸುವ ಒಂದು ವೈಜ್ಞಾನಿಕ ವಿಧಾನವಾಗಿದೆ. ಕೈಬರಹವು ವ್ಯಕ್ತಿಯ ಭಾವನಾತ್ಮಕತೆ, ಭಯ, ಪ್ರಾಮಾಣಿಕತೆ, ಇತ್ಯಾದಿಗಳನ್ನು ಬಹಿರಂಗಪಡಿಸುವುದಾಗಿದೆ, (ಚಂಪ ಮತ್ತು ಆನಂದ ಕುಮಾರ್, 2010).

ಕೈಬರಹದ ಗುರಿ ಕಾರ್ಯಾರ್ತ್ಮಕ ಸಂವಹನ ಮಾಡುವುದು. ಶೈಕ್ಷಣಿಕವಾಗಿ ಶಾಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಸಂವಹನ ಮಾಡಬೇಕು. ಈ ಕಾರಣಕ್ಕಾಗಿ, ಇದು ಸಂವಹನ ಅಷ್ಟೇ ಅಲ್ಲದೇ ಕಲಿಕೆಯನ್ನು ಸ್ಪಷ್ಟಗೊಳಿಸುತ್ತದೆ ಹಾಗೂ ನೆನಪಿನ ಶಕ್ತಿಯನ್ನು ಹೆಚ್ಚಿಸಿ, ಕಲಿಕಾರ್ಥಿಯಲ್ಲಿ ಚಿಂತನಾಶೀಲತೆಯನ್ನು ಬೆಳೆಸುತ್ತದೆ. ಬರಹವು ತಮ್ಮ ಜ್ಞಾನವನ್ನು ಸಂವಹಿಸಲು ಮೂಲಭೂತವಾದ ಹಾಗೂ ಪ್ರಮುಖ ಸಾಧನವಾಗಿದೆ, ಏಕೆಂದರೆ ಶಿಕ್ಷಣದ ಅವಧಿಯಲ್ಲಿ ಯಶಸ್ಸನು ಸಾಧಿಸಲು ಬರಹ ಒಂದು ಪ್ರಮುಖವಾದ ಕೌಶಲವಾಗಿದೆ.ಮೆದುಳಿನ ಅನೇಕ ರಚನೆಗಳು ಮತ್ತು ಸರ್ಕ್ಯೂಟ್‌ಗಳ ಪರಸ್ಪರ ಕ್ರಿಯೆಗಳ ಮೂಲಕ ಕೈಬರಹವು ರಚನೆಯಾಗುತ್ತದೆ. ಕೈಬರಹವು ಧ್ಯಾನದಂತೆ ಮೆದುಳಿನ ಕೆಲವು ಭಾಗಗಳಲ್ಲಿ ನರಗಳ ಚಟುವಟಿಕೆಯನ್ನು ಹೆಚ್ಚಿಸುತ್ತದೆ. ಕೈಬರಹವು ಮೆದುಳಿನ ತೀಕ್ಷ್ಣಗೊಳಿಸುತ್ತದೆ ಮತ್ತು ನಮಗೆ ಕಲಿಯಲು ಸಹಾಯ ಮಾಡುತ್ತದೆ, (ನ್ಯಾನ್ಸಿ ಓಲ್ಸನ್).

ಬರವಣಿಗೆ ವ್ಯಕ್ತಿಯಿಂದ ಪ್ರತಿಬಿಂಬಿತವಾಗುವ ಮನಸ್ಸಿನ ಭಾಗವಾಗಿದೆ, ಬರವಣಿಗೆ ಮೆದುಳಿನಲ್ಲಿ ಹುಟ್ಟಿ ಅದು ನರಮಂಡಲದ ಮೂಲಕವಾಗಿ ಹರಡುತ್ತದೆ. ಆದುದರಿಂದ ಅದನ್ನು 'ಮೆದುಳಿನ ಬರಹ ಅಥವಾ ಮನಸ್ಸಿನ ಬರಹ' ಎಂದು ಕರೆಯಲಾಗುವುದು. ಬರವಣಿಗೆ 'ಮೆದುಳು–ಕಣ್ಣು–ಕೈಗಳ' ಸಂಕೀರ್ಣ ಕೌಶಲವಾಗಿದೆ. ಕೈ ಬರವಣಿಗೆ ಜಾಗೃತ ಮತ್ತು ಪ್ರಜ್ಞಾಪೂರ್ವಕ ಸ್ಥಿತಿಯ ಸಂಯೋಜನಾ ಕ್ರಿಯೆಯಾಗಿದೆ.ಕೈಬರಹವು ವಾಸ್ತವವಾಗಿ 'ಮೆದುಳಿನ ಬರಹ' ಮತ್ತು 'ಕಾಗದದ ಮೇಲೆ 'ಮೆದುಳಿನ ಮುದ್ರಣ' ಎಂದು ಕರೆಯಲಾಗಿದೆ. ವ್ಯಕ್ತಿಯ ನರ–ಸ್ನಾಯುಗಳ ಚಲನೆಯು ನಿರ್ದಿಷ್ಟ ವ್ಯಕ್ತಿತ್ವ ಗುಣಲಕ್ಷಣಗಳೊಂದಿಗೆ ಸಂಬಂಧವನ್ನು ಹೊಂದಿದೆ. ಪ್ರತಿಯೊಂದು ವ್ಯಕ್ತಿತ್ವದ ಲಕ್ಷಣಗಳು ನರವಿಜ್ಞಾನ ಮೆದುಳಿನ ಮಾದರಿಯಾಗಿದೆ. ಅದು ವಿಶಿಷ್ಟವಾದ ನರ–ಸ್ನಾಯುಗಳ ಚಲನೆಯನ್ನು ಉಂಟುಮಾಡುತ್ತದೆ, ಈ ಪ್ರಕ್ರಿಯೆ ಪ್ರತಿಯೊಬ್ಬ ವ್ಯಕ್ತಿಗೂ ಒಂದೇ ಆಗಿರುತ್ತದೆ. ಬರೆಯುವಾಗ ಈ ಚಲನೆಗಳು ಅರಿವಿಲ್ಲದಂತೆ ಪರಸ್ಪರ ಸಂಭವಿಸುತ್ತವೆ. ಪ್ರತಿಯೊಂದು ಲಿಖಿತ ಚಲನೆ ಅಥವಾ ಬರವಣಿಗೆ ವ್ಯಕ್ತಿತ್ವದ ಲಕ್ಷಣವನ್ನು ತೋರಿಸುತ್ತದೆ. ಕೈಬರಹ ವಿಶ್ಲೇಷಕರು ಬರವಣಿಗೆಯstrokesಆಧಾರದ ಮೇಲೆ ಕೈಬರಹ ಮತ್ತು ವ್ಯಕ್ತಿತ್ವ ಸಂಬಂಧಿತ ಲಕ್ಷಣವನ್ನು ವಿವರಿಸುವರು. ಕೈ ಬರವಣಿಗೆಯೂ ಸಹ ದೇಹಭಾಷೆಯಿದ್ದಂತೆ, ಆದರೆ ನಮ್ಮ ಸುಪ್ತಾವಸ್ಥೆಯ ಚಲನೆಗಳನ್ನು ನಿರ್ಧಿಷ್ಟವಾಗಿ ವಿಶ್ಲೇಷಿಸಬೇಕಾಗುವುದು.

## ಅಧ್ಯಯನದ ಅಗತ್ಯತೆ ಮತ್ತು ಪ್ರಾಮುಖ್ಯತೆ

ಗ್ರಾಫಾಲಜಿಯ ಕುರಿತು ಹಲವು ಸಂಶೋಧನೆಗಳು ನಡೆದಿದ್ದು ಕೈಬರಹ ಮತ್ತು ಬುದ್ಧಿಶಕ್ತಿಯ ನಡುವೆ ಸಂಬಂಧವಿರುವುದನ್ನು ದೃಢಪಡಿಸಿವೆ. ಗ್ರಾಫಾಲಜಿಯ ಅಧ್ಯಯನ ಮತ್ತು ಸಂಶೋಧನೆಗಳ ವ್ಯಾಪ್ತಿ ವಿಶಾಲವಾದಂತೆ ಎಲ್ಲಾ ಭಾಷೆಗಳ ಕೈಬರವಣಿಗೆಯ ವಿಶ್ಲೇಷಣೆಗೆ ಅನ್ವಯವಾಗುವಂತೆ ವಿಶ್ಲೇಷಣೆಯ ನಿಯಮಗಳನ್ನು ರೂಪಿಸಿದರು. ಈ ನಿಯಮಗಳಿಂದ ಯಾವುದೇ ಭಾಷೆಯ ಕೈಬರವಣಿಗೆಯಿಂದ ವ್ಯಕ್ತಿತ್ವದ ಗುಣಲಕ್ಷಣಗಳನ್ನು ಗುರುತಿಸಬಹುದಾಗಿದೆ. ಗ್ರಾಫಾಲಜಿ ಅಧ್ಯಯನವು ವ್ಯಕ್ತಿಯ ಸಾಮಾಜಿಕ, ಮನೋವೈಜ್ಞಾನಿಕ, ಔದ್ಯೋಗಿಕ (ವೃತ್ತಿ) ಮತ್ತು ವೈದ್ಯಕೀಯ ಗುಣಲಕ್ಷಣಗಳನ್ನು ತಮ್ಮ ಬರವಣಿಗೆಯ ಮೂಲಕವಾಗಿ ನಿರ್ಧರಿಸುವ ವೈಜ್ಞಾನಿಕ ವಿಧಾನವಾಗಿದೆ ಎಂದು ಬೇಸ್ಟೈರ್ನ್, (1996) ಸಂಶೋಧನೆಯಿಂದ ಕಂಡುಹಿಡಿಯಲಾಗಿದೆ. ಪ್ರಸಿದ್ಧ ಮನೋವಿಜ್ಞಾನ ತಜ್ಞರಾದ ಫ್ರಾಯ್ಡ್ ಮತ್ತು ಜಂಗ್‌ರವರ ಪ್ರಕಾರ ಗ್ರಾಫಾಲಜಿಯು ಜಾಗೃತ ಮತ್ತು ಸುಪ್ತಾವಸ್ಥೆಯ ವ್ಯಕ್ತಿಗಳ ಸ್ಥಿತಿಯನ್ನು ಅಧ್ಯಯನ ಮಾಡಲು ಉಪಯುಕ್ತವಾಗಿದೆ. ಒಬ್ಬ ವ್ಯಕ್ತಿಯ ಕೈಬರಹ ವ್ಯಕ್ತಿಯ ಸಾಮಾನ್ಯ ಬುದ್ಧಿವಂತಿಕೆ, ಭಾವನಾತ್ಮಕ ಸ್ಥಿರತೆ, ಪ್ರಾಮಾಣಿಕತೆ, ಕ್ರಿಯಾತ್ಮಕತೆಯ ಮಟ್ಟ, ನಾಯಕತ್ವದ ಗುಣಗಳನ್ನು ನಿರ್ಧರಿಸಬಹುದಾಗಿದೆ, (ಸ್ಕ್ಯಾನ್ಲಾನ್ ಮತ್ತು ಜೇಮ್ಸ್ ಮೌರೋ, 1992) ಎಂಬ ಅಂಶವು ತಿಳಿದು ಬಂದಿದೆ.

ಕೈಬರಹವನ್ನು ಮೌಲ್ಯಮಾಪನ ಮಾಡಲು ಅತ್ಯಂತ ಮಹತ್ವವಾಗಿರುವ ಅಂಶಗಳೆಂದರೆ – ಅಕ್ಷರಗಳ ಗಾತ್ರ, ಸ್ಲ್ಯಾಂಟ್‌ನೆಸ್, ಅಕ್ಷರ–ಅಕ್ಷರಗಳ ನಡುವೆ ಮತ್ತು ಸಾಲುಗಳ ನಡುವಿನ ಅಂತರ, ಮಾರ್ಜಿನ್, ಬರವಣಿಗೆಯ ಒತ್ತಡ ಮತ್ತು ಪ್ಯಾರಾಗ್ರಾಫ್‌ಗಳ ರಚನೆ ಮುಖ್ಯವಾಗಿವೆ. ವಾಷಿಂಗ್ಟನ್ ವಿಶ್ವವಿದ್ಯಾಲಯದ ಶೈಕ್ಷಣಿಕ ಮನಃಶಾಸ್ತ್ರಜ್ಞರ ಪ್ರಕಾರ ಕೈಬರಹ ವಿದ್ಯಾರ್ಥಿಗಳ ಜ್ಞಾನದ ಅಭಿವೃದ್ಧಿಯ ಜೊತೆಗೆ ಕ್ರಿಯಾತ್ಮಕತೆಯನ್ನು ಬೆಳೆಸುವುದು, (ಝುಬ್ರಿಜಿಕಿ, 2012). ಶಿಕ್ಷಣದ ಅಭಿವೃದ್ಧಿಯಲ್ಲಿ ಕೈಬರಹದ ಪ್ರಾಮುಖ್ಯತೆ ಅತ್ಯಂತ ಪ್ರಮುಖವಾದುದು. ತಂತ್ರಜ್ಞಾನ ಯುಗದಲ್ಲಿಯೂ ಸಹ ವ್ಯಕ್ತಿಗಳ ನಡುವೆ ಮತ್ತು ತರಗತಿಗಳಲ್ಲಿ ಸಂವಹನ ಮತ್ತು ಜ್ಞಾನದ ಮೌಲ್ಯಮಾಪನದಲ್ಲಿ ಕೈಬರವಣಿಗೆ ಮುಖ್ಯವಾದ ಸಾಧನವಾಗಿದೆ. ಕೈಬರಹದ ವಿಶ್ಲೇಷಣೆ ತರಗತಿಯಿಂದ ಆಚೆಗೂ ಸಹ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ತಾಂತ್ರಿಕ ಸಾಧನಗಳ ಮೂಲಕ ಬರವಣಿಗೆ ಮೂಂಚೂಣಿಯಲ್ಲಿದ್ದರೂ ಕೈಬರಹ ವಿಶ್ಲೇಷಣೆ ಹೆಚ್ಚು ಬೇಡಿಕೆಯನ್ನು ಪಡೆದುಕೊಳ್ಳುತ್ತಿದೆ. ಭಾರತದಲ್ಲಿ ಗ್ರಾಫಾಲಜಿ ಇತ್ತೀಚಿನ ದಶಕಗಳಲ್ಲಿ ಅಧ್ಯಯನಕ್ಕೆ ಒಳಪಟ್ಟಿದ್ದರು, ಭಾರತೀಯ ಭಾಷೆಗಳ ಕೈಬರಹದ ಮೂಲಕ ವ್ಯಕ್ತಿತ್ವ ವಿಶ್ಲೇಷಣೆ ಮಾಡುವ ಮಾಪನಗಳನ್ನು ಸಿದ್ದಪಡಿಸಲಾಗುತ್ತಿದೆ, ಹಾಗಾಗಿ ನಮ್ಮ ಪ್ರಾದೇಶಿಕ ಭಾಷೆಯಾದ ಕನ್ನಡ ಕೈಬರಹ ವಿಶ್ಲೇಷಣೆ ಮಾಡುವ ಪ್ರಯತ್ನವಾಗಿ ಈ ಅಧ್ಯಯನ ಕೈಗೊಳ್ಳಲಾಗಿದೆ. ಈ ಅಧ್ಯಯನ ಕೈಗೊಳ್ಳುವ ಪೂರ್ವದಲ್ಲಿ ಕನ್ನಡ ಕೈಬರಹದ ಗುಣಲಕ್ಷಣಗಳನ್ನು ಅಧ್ಯಯನ ಮಾಡಿದ್ದು, ಆ ಲಕ್ಷಣಗಳಿಗೆ ಮತ್ತು ಕನ್ನಡ ಬರವಣಿಗೆಯ ಸ್ವರೂಪದ ಅನುಗುಣವಾಗಿ ಹೊಂದಿಕೊಳ್ಳುವ ಗ್ರಾಫಾಲಜಿಯ ನಿಯಮಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳ ಕೈಬರವಣಿಗೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಬುದ್ಧಿಶಕ್ತಿ ಅಮೂರ್ತ ಚಿಂತನೆಯಾಗಿದ್ದು ಹೊಸ ಸನ್ನಿವೇಶಗಳಿಗೆ ಹೊಂದಾಣಿಕೆ, ಕಲಿಯುವ ಸಾಮಾರ್ಥ್ಯ ಹಾಗೂ ಜ್ಞಾನವನ್ನು ಪಡೆಯುವ ಹಾಗೂ ಪ್ರಕಟಪಡಿಸುವ ಸಾಧನ ಬುದ್ಧಿಶಕ್ತಿಯಾಗಿದೆ. ಈ ಸಂಶೋಧನೆಯು ಬುದ್ಧಿಶಕ್ತಿಮಟ್ಟ ಮತ್ತು ಕೈಬರವಣಿಗೆ ಇರುವ ಸಂಬಂಧವನ್ನು ಪ್ರಸ್ತುತಪಡಿಸುತ್ತಿದೆ. ಕೈಬರವಣಿಗೆಯ ಲಕ್ಷಣಗಳಿಗೆ ಅನುಗುಣವಾಗಿ ವ್ಯಕ್ತಿಗಳು ಯಾವ ಮಟ್ಟದ ಬುದ್ಧಿಶಕ್ತಿಮಟ್ಟ ಹೊಂದಿದ್ದಾರೆ ಎಂಬುದನ್ನು ತಿಳಿಯುವುದು ಇದರ ಮುಖ್ಯ ಉದ್ದೇಶವೂ ಕೂಡ ಆಗಿದೆ. ಕೈಬರವಣಿಗೆ ವಿಶ್ಲೇಷಣೆಯಿಂದಲೂ ಸಹ ಬುದ್ಧಿಶಕ್ತಿಯ ಮಟ್ಟವನ್ನು ಗುರುತಿಸಬಹುದು ಎಂಬುದು ಈ ಸಂಶೋಧನೆಯಿಂದ ತಿಳಿದುಕೊಳ್ಳಬಹುದಾದ ಸೃಜನಾತ್ಮಕ ಅನ್ವೇಷಣೆಯಾಗಿದೆ.

ಕೈ ಬರಹವನ್ನು ಎಲ್ಲ ಸಮಯದಲ್ಲಿಯೂ ಒಂದೇ ಶೈಲಿಯಲ್ಲಿ ಬರೆಯುವುದು ಅಸಾಧ್ಯ. ಅದು ಬರಹಗಾರರು ಸನ್ನಿವೇಷಕ್ಕೆ ಅನುಗುಣವಾಗಿರುವುದು ಸಹಜ ಸಾಮಾನ್ಯವಾದುದಾಗಿದೆ. ತರಗತಿಯಲ್ಲಿ ಕಪ್ಪು ಹಲಗೆಯ ಮೇಲೆ ಬರೆಯುವುದು, ದೊಡ್ಡ ಗಾತ್ರದ ಡ್ರಾಯಿಂಗ್ ಕಾಗದದಲ್ಲಿ ಬರೆಯುವ ಸಂದರ್ಭದಲ್ಲಿ ಬರೆಯುವ ಕೈಬರಹದ ಗಾತ್ರದಲ್ಲಿ ವ್ಯತ್ಯಾಸವಾಗುವುದು ಸಹಜವಾದುದು. ಆದರೆ ಗ್ರಾಫಾಲಜಿಯ ಪ್ರಕಾರ A4 ಕಾಗದದಲ್ಲಿ ಬರೆದ ಬರಹವನ್ನು ವಿಶ್ಲೇಷಣೆಗೆ ಬಳಸಲಾಗುವುದು. ಅದೇ ರೀತಿಯಾಗಿ ಕನ್ನಡ ಕೈಬರವಣಿಗೆ ಶೈಲಿಯಿಂದ ವಿದ್ಯಾರ್ಥಿಗಳ ವ್ಯಕ್ತಿತ್ವದ ಗುಣಲಕ್ಷಣಗಳನ್ನು ಅಧ್ಯಯನ ಮಾಡಬಹುದಾಗಿದೆ. ಕನ್ನಡ ಬರವಣಿಗೆಯು ಸ್ವರೂಪದ ಅನುಗುಣವಾಗಿ ಹೊಂದಿಕೊಳ್ಳುವ ಗ್ರಾಫಾಲಜಿಯ ನಿಯಮಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳ ಬರಹದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿ ಅದರ ಮೂಲಕವಾಗಿ ವಿದ್ಯಾರ್ಥಿಯ ಬುದ್ಧಿಶಕ್ತಿ ಮಟ್ಟವನ್ನು ಮಾಪನ ಮಾಡಲಾಗಿದೆ ಹಾಗೂ ಬುದ್ಧಿಶಕ್ತಿಯ ಮಟ್ಟವನ್ನು ವಿವಿಧ ಹಂತಗಳಾಗಿ ವಿಂಗಡಿಸಲಾಗಿದೆ. ಕನ್ನಡ ಕೈಬರಹದ ಮೂಲಕ ಬುದ್ಧಿಶಕ್ತಿಯ ಮಟ್ಟವನ್ನು ಗುರುತಿಸುವ ನವೀನ ಪ್ರಯತ್ನವೇ ಈ ಅಧ್ಯಯನದ ಮಹತ್ವವಾಗಿದೆ.

## ಸಂಶೋಧನಾ ಸಂಬಂಧಿತ ಸಾಹಿತ್ಯಾವಲೋಕನ

ಕೈಬರಹ ಮತ್ತು ಬುದ್ಧಿಶಕ್ತಿ ಸಂಬಂಧದ ಕುರಿತು ಈಗಾಗಲೇ ನಡೆದಿರುವ ಸಂಶೋಧನೆಗಳ ಮತ್ತು ಅವುಗಳ ಫಲಿತಾಂಶವನ್ನು ಇಲ್ಲಿ ಚರ್ಚಿಸಲಾಗಿದೆ.ಆರಿ ಸೆಟ್ಯಾ ಬಿ. ನಿಂಗ್ರಮ್ ಮತ್ತು ರೋಹ್ಮತ್ ಅಗುಂಗ್ ವಿಬೊವೊ (2017),ರವರು ಓದುವ ಸಾಮರ್ಥ್ಯ ಮತ್ತು ಬರವಣಿಗೆ ಸಾಧನೆಯಲ್ಲಿ ಬುದ್ಧಿಶಕ್ತಿಯ ಪರಸ್ಪರ ಸಂಬಂಧವನ್ನು ಅಧ್ಯಯನ ಮಾಡಲಾಗಿದೆ.ಓದುವ ಸಾಮರ್ಥ್ಯ ಮತ್ತು ಬರವಣಿಗೆ ಸಾಧನೆಯಲ್ಲಿ ಬುದ್ಧಿಶಕ್ತಿಯು ಮಹತ್ವಪೂರ್ಣ ಪಾತ್ರವಹಿಸಿದೆ ಎಂಬ ಫಲಿತಾಂಶ ಕಂಡುಬಂದಿದೆ. ರೆಝೂನ್ ಸಜ್ಜಿದಿ ರಾಡ್, ಮತ್ತು ಇತರರು (2014) ವೈದ್ಯಕೀಯ ವಿದ್ಯಾರ್ಥಿಗಳ ಬಹು ಬುದ್ಧಿಶಕ್ತಿ ಮತ್ತು ಬರವಣಿಗೆ ಕೌಶಲಗಳ ನಡುವಿನ ಸಂಬಂಧವನ್ನು ಅಧ್ಯಯನ ಮಾಡಲಾಗಿದೆ. ವಿದ್ಯಾರ್ಥಿಗಳ ಬಹುಬುದ್ಧಿಶಕ್ತಿ ಮತ್ತು ಭಾಷಾ ಕಲಿಕೆಯ ಸಾಮರ್ಥ್ಯಗಳ ನಡುವೆ ಹಲವು ಸಂಶೋಧನೆಗಳಾಗಿದ್ದರೂ ಕೂಡ ಈ ಎರಡು ಚರಾಂಶಗಳ ನಡುವೆ ಯಾವುದೇ ಹೊಂದಾಣಿಕೆ ಕಂಡುಬಂದಿರುವುದಿಲ್ಲ. ಉದಾಹರಣೆಗೆ ಬರವಣಿಗೆಯ ಕೌಶಲದಲ್ಲಿ ಮಹತ್ವಪೂರ್ಣ ಸಂಬಂಧ ಕಂಡುಬಂದರೆ, ಕೆಲವು ಭಾಗಶಃ ಸಂಬಂಧ ಕಂಡುಬಂದಿದೆ, ಆದರೆ ಅಂತಿಮವಾಗಿ ಈ ಎರಡು ಚರಾಂಶಗಳ ನಡುವೆ ಋಣಾತ್ಮಕ ಸಂಬಂಧವನ್ನು ಹೊಂದಿರುವುದು ಕಂಡುಬಂದಿದೆ. ಈ ಅಂತರವನ್ನು ಸಂಶೋಧಿಸಲು ವೈದ್ಯಕೀಯ ವಿದ್ಯಾರ್ಥಿಗಳ ಬಹುಬುದ್ಧಿಶಕ್ತಿ ಮತ್ತು ವಿದ್ಯಾರ್ಥಿಗಳ ಬರವಣಿಗೆ ಕೌಶಲದ ನಡುವಿನ ಸಂಬಂಧವನ್ನು ಅನ್ವೇಷಿಸಿದೆ. ವೈದ್ಯಕೀಯ ವಿದ್ಯಾರ್ಥಿಗಳ ಬಹುಬುದ್ಧಿಶಕ್ತಿ ಮತ್ತು ವಿದ್ಯಾರ್ಥಿಗಳ ಬರವಣಿಗೆ ಕೌಶಲದ ನಡುವೆ ಯಾವುದೇ ಮಹತ್ವಪೂರ್ಣ ಸಂಬಂಧವಿಲ್ಲ ಎಂಬ ಫಲಿತಾಂಶವನ್ನು ಈ ಅಧ್ಯಯನದಿಂದ ತಿಳಿದು ಬಂದಿದೆ. ಬಾಗೇರಿ, ಎಮ್.ಎಸ್. ಮತ್ತು ಘಾಸೆಮಿ ಎಲ್ನಾಜ್ (2013)ರಲ್ಲಿ ಸಂವೇಗನಾತ್ಮಕ ಬುದ್ಧಿಶಕ್ತಿ ಮತ್ತು ಬರವಣಿಗೆಯ ಕಾರ್ಯಕ್ಷಮತೆಯ ನಡುವಿನ ಸಂಬಂಧವನ್ನು ಅಧ್ಯಯನ ಮಾಡಲಾಗಿದೆ. ಸಂವೇಗನಾತ್ಮಕ ಬುದ್ಧಿಶಕ್ತಿಯು ಕಲಿಕಾರ್ಥಿಗಳ ಬರವಣಿಗೆಯ ಮೇಲೆ ಪ್ರಭಾವವನ್ನೇನಾದರು ಬೀರುವುದೇ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಸಂವೇಗನಾತ್ಮಕ ಬುದ್ಧಿಶಕ್ತಿ ಮತ್ತು ಬರವಣಿಗೆಯ ಕಾರ್ಯಕ್ಷಮತೆ ನಡುವೆ ಯಾವುದೇ ಮಹತ್ವಪೂರ್ಣ ಸಂಬಂಧ ಕಂಡುಬಂದಿರುವುದಿಲ್ಲ ಎಂದು ಕಂಡುಬಂದಿದೆ ಹಾಗೂ ಸಂವೇಗನಾತ್ಮಕ ಬುದ್ಧಿಶಕ್ತಿ ಘಟಕಾಂಶಗಳು ಮತ್ತು ಬರವಣಿಗೆಯ ನಡುವೆ ಯಾವುದೇ ಮಹತ್ವಪೂರ್ಣ ಸಂಬಂಧ ಕಂಡುಬಂದಿರುವುದಿಲ್ಲ.

ಎಲ್ಮರ್ ಎ, ಲೆಮ್ಕೆ ಮತ್ತು ಜಾನ್ ಹೆಚ್ ಕಿರ್ಚ್ನರ್‌ರವರು (2010) ಬರವಣಿಗೆ, ಬುದ್ಧಿಶಕ್ತಿ ಮತ್ತು ವ್ಯಕ್ತಿತ್ವಗಳ ನಡುವಿನ ಸಂಬಂಧವನ್ನು ಅಧ್ಯಯನ ಮಾಡಲಾಗಿದೆ. ಬರವಣಿಗೆಯ ಲಕ್ಷಣಗಳು, ವ್ಯಕ್ತಿತ್ವ ಲಕ್ಷಣಗಳ ಮತ್ತು ಬುದ್ಧಿಶಕ್ತಿ ಅಂಶಗಳ ನಡುವೆ ಸಂಬಂಧವಿದೆ ಎಂಬ ಫಲಿತಾಂಶವು ಕಂಡುಬಂದಿದೆ. ಸಾರಾ ಆರ್. ಕ್ಲಾರ್ಕ್‌ರವರು (2005) ಗ್ರಾಫೊಲಜಿ: ಬುದ್ಧಿಶಕ್ತಿಯ ಮುನ್ಸೂಚನೆ ಎಂಬುದರ ಕುರಿತು ಅಧ್ಯಯನ ನಡೆಸಿದ್ದು, ಈ ಅಧ್ಯಯನವು ಕೈಬರಹ ವಿಶ್ಲೇಷಣೆಯ ಮೂಲಕ ವ್ಯಕ್ತಿಯ ಬುದ್ಧಿಶಕ್ತಿಯನ್ನು ಊಹಿಸುವುದನ್ನು ಪರೀಕ್ಷಿಸಲಾಗಿದೆ. ಮನೋವಿಜ್ಞಾನ ವಿದ್ಯಾರ್ಥಿಗಳನ್ನು ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದು, ಕೈಬರಹವನ್ನು ವಿದ್ಯಾರ್ಥಿಗಳಿಂದ ಪಡೆದು ಅದರಲ್ಲಿ ಸ್ಲಾಂಟ್ ಬರವಣಿಗೆ, ಬರವಣಿಗೆ ಗಾತ್ರ ಹಾಗೂ ವಾಕ್ಯ ರಚನೆ ಅಂಶಗಳನ್ನು ವಿಶ್ಲೇಷಣೆಗೆ ಪರಿಗಣಿಸಲಾಗಿದೆ. ಬರವಣಿಗೆಯ ಮೂಲಕ ಬುದ್ಧಿಶಕ್ತಿ ವಿಶ್ಲೇಷಣೆಗೆ ಸಂಬಂಧಿಸಿದಂತೆ, ಈ ಸಂಶೋಧನೆ ಈ ಎರಡು ಚರಾಂಶಗಳ ನಡುವೆ ಯಾವುದೇ ಮಹತ್ವಪೂರ್ಣ ಸಂಬಂಧವಿಲ್ಲವೆಂಬುದನ್ನು ಸ್ಪಷ್ಟಪಡಿಸಿದೆ. ಆರ್ಡಿ ಸೆತ್ಯ ಬಿ ನಿಂಗ್ರಾಮ್ ಮತ್ತು ಅಗುಂಗ್ ವಿಬೋವೊರವರ (2017), ಅಧ್ಯಯನದ ಪ್ರಕಾರ ಓದುವ ಮತ್ತು ಬರೆಯುವ ಕೌಶಲಗಳ ಮೇಲೆ ಬುದ್ಧಿಶಕ್ತಿ ಪ್ರಭಾವವನ್ನು ಬೀರುತ್ತದೆ ಎಂಬ ಅಂಶ ಕಂಡುಬಂದಿದೆ. ಹಾಗೂ ಓದುವ ಮತ್ತು ಬರೆಯುವ ಸಾಮರ್ಥ್ಯಗಳ ನಡುವೆ ಪರಸ್ಪರ ಸಂಬಂಧದದ ಅಸ್ತಿತ್ವವಿರುವುದು ಎಂದು ಸೂಚಿಸುತ್ತದೆ. ಪಿಳ್ಳೈ ನಾಯರ್‌ರವರು(1967) ಕೈಬರಹ (ಮಲಯಾಲಮ್) ಮತ್ತು ಬುದ್ಧಿಶಕ್ತಿಯ ನಡುವೆ ಧನಾತ್ಮಕವಾದ ಸಂಬಂಧವಿದೆ ಎಂಬುದನ್ನು ಸೂಚಿಸಿದೆ.

ಕರಿಮ್ ಸದೇಘಿ ಮತ್ತು ಬಹರೇಹ್ ಫರ್ಜಿಝಾಹ್ (2013), ಬರವಣಿಗೆ ಸಾಮರ್ಥ್ಯ ಮತ್ತು ಭಾವನಾತ್ಮಕ ಸ್ವ–ಅರಿವು ಹಾಗೂ ಭಾವನಾತ್ಮಕ ಬುದ್ಧಿಶಕ್ತಿಯ ನಡುವೆ ಸಕಾರಾತ್ಮಕ ಸಂಬಂಧವಿದೆ ಎಂಬ ಅಂಶವು ಕಂಡುಬಂದಿರುತ್ತದೆ. ಎಲ್ಮರ್ ಎ. ಲೆಮ್ಕೆ ಮತ್ತು ಜಾನ್ ಹೆಚ್ ಕಿರ್ಚ್ನರ್, (2010) ಕೈಬರವಣಿಗೆ ಅಂಶಗಳು ವ್ಯಕ್ತಿತ್ವ ಮತ್ತು ಬುದ್ಧಿಶಕ್ತಿ ಅಂಶಗಳನ್ನು ಊಹಿಸಬಹುದೆಂದು ಸೂಚಿಸಿದ್ದಾರೆ. ಇತ್ತೀಚಿನ ಅಧ್ಯಯನದ (ಕ್ರಾಸ್, 2011) ಪ್ರಕಾರ ಹೆಚ್ಚಿನ ಬುದ್ಧಿಶಕ್ತಿಮಟ್ಟ ಹೊಂದಿರುವವರು ಚಿಕ್ಕ ಕೈಬರವಣಿಗೆಯನ್ನು ಹೊಂದಿರುತ್ತಾರೆ. ಬರವಣಿಗೆಯನ್ನು ಮೂಲಕ ವ್ಯಕ್ತಿಯ ದೃಢತೆ, ಆತ್ಮ ವಿಶ್ವಾಸ, ಸಾಧನೆಯ ಮಟ್ಟ, ಸ್ವಯಂ ಪ್ರೇರಣೆ ಇತ್ಯಾದಿಗಳನ್ನು ಗುರುತಿಸಬಹುದು. ಉತ್ತಮ ಬರವಣಿಗೆಯ ಸಾಮರ್ಥ್ಯವು ವೈಯಕ್ತಿಕ ಪ್ರಗತಿಗೆ ಸ್ವ–ಪ್ರೇರಣೆ ದೊರೆಯುತ್ತದೆ. ಲೂರಿಯಾ ಮತ್ತು ರೊಸೆನ್‌ಬರ್ಗ್ (2010) ಕೈಬರವಣಿಗೆಯನ್ನು ಸ್ವಲ್ಪ ನಡುಕ ಉಂಟಾದ ರೀತಿಯಲ್ಲಿ ಬರೆದಿದ್ದರೆ ಅವರು ಸ್ವಲ್ಪ ಮಟ್ಟಿಗೆ ಭಯವನ್ನು ಹೊಂದಿರುತ್ತಾರೆಂದು ತಿಳಿದುಬಂದಿದೆ. ಅಧ್ಯಯನ ಒಂದರ ಪ್ರಕಾರ (ಪ್ಲೂಗ್, 2013) ಕೈಬರಹದಲ್ಲಿ ಪ್ರೇರಣೆ ಮತ್ತು ಚೈತನ್ಯವನ್ನು ಕಾಣಬಹುದು, ವಿಶೇಷವಾಗಿ ಕಾಲ ನಂತರ ಆ ಪ್ರೇರಣೆ ಸ್ಥಿರವಾಗಿರುತ್ತದೆ. ಜೀವನದ ಹೆಚ್ಚಿನ ಯಶಸ್ಸಿನ ಭರವಸೆ ಹೊಂದಿರುವವರು ದೊಡ್ಡ ಗಾತ್ರದಲ್ಲಿ ಬರೆಯುವವರಾಗಿದ್ದು, ಪದಗಳ ನಡುವೆ ಹೆಚ್ಚು ಅಂತರದಲ್ಲಿ ಬರೆಯುವವರಾಗಿರುತ್ತಾರೆ. ಸಾಲುಗಳನ್ನು ಏರಿಕೆಯ ದಿಕ್ಕಿನಲ್ಲಿ ಓರೆಯಾಗಿ ಬರೆಯುವವರು ವೇಗವಾಗಿ ಬರೆಯುತ್ತಾರೆ. ಪದಗಳ ನಡುವೆ ಕಡಿಮೆ ಅಂತರದಲ್ಲಿ ಹಾಗೂ ಚಿಕ್ಕ ಗಾತ್ರದಲ್ಲಿ ಬರೆಯುವವರು ಹೆಚ್ಚು ವೈಫಲ್ಯದ, ಭಯದ ಸ್ವಭಾವವನ್ನು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಹೊಂದಿರುತ್ತಾರೆ. ಅಕ್ಷರಗಳನ್ನು ಎಡಕ್ಕೆ ಓರೆಯಾಗಿ ಬರೆಯುವವರು ಕಡಿಮೆ ವೇಗದಲ್ಲಿ ಬರೆಯುವವರಾಗಿದ್ದು ಕಡಿಮೆ ಒತ್ತಡವನ್ನು ಹೊಂದಿರುತ್ತಾರೆ. ಪ್ಲೂಗ್, (2013) ರವರ ಪ್ರಕಾರ ಪದಗಳನ್ನು ಹೆಚ್ಚಿನ ಗಾತ್ರದಲ್ಲಿ, ಹೆಚ್ಚು ಅಂತರದಲ್ಲಿ ಹಾಗೂ ಸಾಲುಗಳನ್ನು ಏರಿಕೆ ಕ್ರಮದಲ್ಲಿ, ಬಲಭಾಗಕ್ಕೆ ಓರೆಯಾಗಿ ವೇಗವಾಗಿ ಬರೆಯುವ ವ್ಯಕ್ತಿಗಳು ಹೆಚ್ಚಿನ ಯಶಸ್ಸಿನ ಭರವಸೆ ಹೊಂದಿರುವವರು. ಚಿಕ್ಕ ಗಾತ್ರದಲ್ಲಿ, ಕಡಿಮೆ ಅಂತರದಲ್ಲಿ, ಎಡಕ್ಕೆ ತಿರಗಿಸಿದ ರೀತಿಯಲ್ಲಿ ಕಡಿಮೆ ವೇಗದಲ್ಲಿ ಬರೆಯುವ ವ್ಯಕ್ತಿಗಳಲ್ಲಿ ವೈಫಲ್ಯದ ಭಯ ಹೆಚ್ಚಿರುತ್ತದೆ ಎಂದು ಕಂಡುಬಂದಿದೆ. ಗ್ರಾಫಾಲಜಿ ಕಲಿಕೆ ಮತ್ತು ಅಭಿಪ್ರೇರಣೆಯ ನಡುವೆ ಉತ್ತಮ ಸಂಬಂಧವಿರುವುದನ್ನು ಸೂಚಿಸುತ್ತದೆ. ಲೋವಿಸ್ ಮತ್ತು ಮೂನಿ (2001) ರವರು ವಿದ್ಯಾರ್ಥಿಗಳ ಸಾಧನೆಯೊಂದಿಗೆ ಗ್ರಾಫೊಲಾಜಿ ಸಂಯೋಜನೆಯನ್ನು ಮಾಡಿ ವೈಯಕ್ತಿಕವಾಗಿ ವಿದ್ಯಾರ್ಥಿಗಳ ಭವಿಷ್ಯ ಸಾಧನೆಯ ಮಟ್ಟವನ್ನು ಊಹಿಸಬಹುದೆಂದು ಹೇಳಿದ್ದಾರೆ. ಈ ಮೇಲೆ ಚರ್ಚಿಸಿದ ಸಂಶೋಧನಾ ಫಲಿತಾಂಶಗಳು ಕೆಲವು ಸಾಮ್ಯತೆ ಹೊಂದಿದ್ದು ಮತ್ತೆ ಕೆಲವು ವಿಭಿನ್ನ ಫಲಿತಾಂಶಗಳು ಕಂಡುಬಂದಿದೆ. ಈ ಎಲ್ಲ ಸಂಶೋಧನಾ ಫಲಿತಾಂಶಗಳು ಕನ್ನಡ ಕೈಬರಹದ ವಿಶ್ಲೇಷಣೆಯಲ್ಲಿ ಹೇಗೆ ಅನ್ವಯವಾಗುತ್ತವೆ ಎಂಬುದನ್ನು ಈ ಸಂಶೋಧನೆಯಿಂದ ತಿಳಿಯಬಹುದಾಗಿದೆ.

## ಅಧ್ಯಯನದ ಉದ್ದೇಶಗಳು

1. ಅಕ್ಷರಗಳ ಓರೆ ಬರಹದ (Slantness of Handwrting) ವಿವಿಧ ಪ್ರಕಾರಗಳ ಮೂಲಕ ಮೂಲಕ ಬುದ್ಧಿಶಕ್ತಿಯ ಮಟ್ಟವನ್ನು ವಿಶ್ಲೇಷಿಸುವುದು.
2. ಕೈಬರವಣಿಗೆಯ ಬರವಣಿಗೆಯ ಸಾಲಿನ ನಡುವಿನ ಅಂತರದ (Spacing of Handwriting) ವಿವಿಧ ಪ್ರಕಾರಗಳ ಮೂಲಕ ಬುದ್ಧಿಶಕ್ತಿಯ ಮಟ್ಟವನ್ನು ವಿಶ್ಲೇಷಿಸುವುದು.

## ಅಧ್ಯಯನದ ಚರಾಂಶಗಳು

ಪ್ರಸ್ತುತ ಅಧ್ಯಯನದಲ್ಲಿ ಕನ್ನಡ ಕೈಬರಹ ಮತ್ತು ಬುದ್ಧಿಶಕ್ತಿಯನ್ನು ಚರಾಂಶಗಳಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

## ಸಂಶೋಧನಾ ವಿಧಾನ

ಈ ಅಧ್ಯಯನಕ್ಕಾಗಿ ವಿವರಣಾತ್ಮಕ ಸಂಶೋಧನೆಯಲ್ಲಿ ಸಮೀಕ್ಷಾ ವಿಧಾನವನ್ನು ಬಳಸಲಾಗಿದೆ. ಈ ಅಧ್ಯಯನದ ಮಾದರಿ ಸಂಹಗ್ರಹಕ್ಕಾಗಿ ಸರಳ ಯಾದೃಚ್ಛಿಕ ಮತ್ತು ಉದ್ದೇಶಪೂರಿತ ಮಾದರಿಯ ಮೂಲಕ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ವಿವಿಧ ವಿಭಾಗಗಳಿಂದ 400 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

## ದತ್ತಾಂಶ ಸಂಗ್ರಹ ಸಾಧನಗಳ ಬಳಕೆ

ಈ ಅಧ್ಯಯನಕ್ಕಾಗಿ " 'ರೇವನ್ಸ್' ರವರ ಆಶಾಬ್ದಿಕ ಬುದ್ಧಶಕ್ತಿ ಪರೀಕ್ಷಣ" ಮತ್ತು 'ಕನ್ನಡ ಕೈಬರಹ ವಿಶ್ಲೇಷಣಾ ಮಾಪನವನ್ನು' (ಗಿರೀಶ್ ಟಿ. ಮತ್ತು ಜಗನ್ನಾಥ ಕೆ. ಡಾಂಗೆ) ಬಳಸಿಕೊಂಡು ದತ್ತಾಂಶ ಸಂಗ್ರಹಿಸಲಾಗಿದೆ. ರೇವನ್ಸ್ ಬುದ್ಧಿಶಕ್ತಿ ಪರೀಕ್ಷಣದ ಪರೀಕ್ಷೆಯ ಮೂಲಕ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಬುದ್ಧಿಶಕ್ತಿಯ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಾಗಿ ಅದೇ ವಿದ್ಯಾರ್ಥಿಗಳ ಕನ್ನಡ ಕೈಬರಹದ ಮಾದರಿ ಸಂಗ್ರಹಕ್ಕಾಗಿ ವಿದ್ಯಾರ್ಥಿಗಳು ಯಾವುದಾದರೊಂದು ವಿಷಯವನ್ನು ಬರೆಯಲು ಅವರೇ ಆಯ್ದುಕೊಳ್ಳುವಂತೆ ಅವಕಾಶವನ್ನು ನೀಡಲಾಗಿದೆ ಮತ್ತು ವಿದ್ಯಾರ್ಥಿಗಳ ಬರವಣಿಗೆ ಯಾವುದೇ ನಕಲು ಮಾಡದೆ, ನೈಜ ಸನ್ನಿವೇಶದಲ್ಲಿ ಬರೆದಂತಹ ಕೈಬರಹವನ್ನು ಸಂಗ್ರಹಿಸಲಾಗಿದೆ. A4 ಅಳತೆಯ ಪೇಪರ್‌ನಲ್ಲಿ ವಿದ್ಯಾರ್ಥಿಗಳ ಕೈಬರಹವನ್ನು ಸಂಗ್ರಹಿಸಲಾಗಿದೆ.

## ಸಂಖ್ಯಾಶಾಸ್ತ್ರೀಯ ತಂತ್ರಗಳ ಬಳಕೆ

ಪ್ರಸ್ತುತ ಅಧ್ಯಯನದಲ್ಲಿ ದತ್ತಾಂಶಗಳ ವಿಶ್ಲೇಷಣೆಗಾಗಿ ಸಂಖ್ಯಾಶಾಸ್ತ್ರೀಯ ತಂತ್ರವಾದ 'ಸರಾಸರಿ' ಮತ್ತು 'ಕೈವರ್ಗ' ಪರೀಕ್ಷಣಾ ತಂತ್ರಗಳನ್ನು ಬಳಸಿಕೊಳ್ಳಲಾಗಿದೆ.

## ದತ್ತಾಂಶ ವಿಶ್ಲೇಷಣೆ ಮತ್ತು ವ್ಯಾಖ್ಯಾನ

ಕೈಬರವಣಿಗೆಯ ವಿವಿಧ ಪ್ರಕಾರಗಳ ಮೂಲಕ ಬುದ್ಧಿಶಕ್ತಿ ಮಟ್ಟದ ವಿಶ್ಲೇಷಣೆ

**ಉದ್ದೇಶ 01 :** ಅಕ್ಷರಗಳ ಓರೆ ಬರಹದ (Slantness of Handwriting) ವಿವಿಧ ಪ್ರಕಾರಗಳ ಮೂಲಕ ಮೂಲಕ ಬುದ್ಧಿಶಕ್ತಿಯ ಮಟ್ಟವನ್ನು ವಿಶ್ಲೇಷಿಸುವುದು.


**ಕೋಷ್ಟಕ-01. ಅಕ್ಷರಗಳ ಓರೆ ಬರಹದ (Slantness of Handwriting) ವಿವಿಧ ಪ್ರಕಾರಗಳ ಮೂಲಕ ಬುದ್ಧಿಶಕ್ತಿಯ ಮಟ್ಟದ ಪ್ರಮಾಣವನ್ನು ತೋರಿಸುವುದು.**

| Levels of Intelligence | Slantness of Handwriting | | | Total |
|---|---|---|---|---|
| | Left slant | Right slant | Vertical | |
| Intelligent | 1.5% | 1.3% | 13.0% | 15.8% |
| Average | 7.8% | 5.3% | 45.5% | 58.5% |
| Below average | 2.0% | 1.3% | 22.5% | 25.8% |
| Total | 11.3% | 7.8% | 81.0% | 100.0% |

ಈ ಮೇಲಿನ ಕೋಷ್ಟಕ-01 ರಲ್ಲಿ ಕಂಡು ಬಂದಿರುವಂತೆ ಬರವಣಿಗೆಯ ಅಕ್ಷರಗಳ ಓರೆ ಬರಹದ(Slantness of HW)ವಿವಿಧ ಪ್ರಕಾರಗಳಲ್ಲಿ ಬರೆಯುವವರಲ್ಲಿ ಬುದ್ಧಿಶಕ್ತಿಯ ಮಟ್ಟಗಳನ್ನು ತೋರಿಸುತ್ತದೆ. ಕೈಬರವಣಿಗೆಯ ಓರೆ ಬರಹದಲ್ಲಿ ಹೆಚ್ಚು ನೇರವಾಗಿ(Vertical) ಬರೆಯುವವರ ಪ್ರಮಾಣ 81% ರಷ್ಟಿದ್ದು, ಅದರಲ್ಲಿ 13% ರಷ್ಟು ಬುದ್ಧಿವಂತರಾಗಿದ್ದು, 45.5% ರಷ್ಟು ಸರಾಸರಿ ಮಟ್ಟದ ಬುದ್ಧಿಶಕ್ತಿ ಹೊಂದಿದ್ದಾರೆ, ಹಾಗೂ 22.5% ರಷ್ಟು ಸರಾಸರಿಗಿಂತ ಕಡಿಮೆ ಮಟ್ಟದ ಬುದ್ಧಿಶಕ್ತಿ ಹೊಂದಿದ್ದಾರೆ ಎಂಬುದನ್ನು ಗಮನಿಸ ಬಹುದಾಗಿದೆ. ನೇರವಾಗಿ ಬರೆಯುವವರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸರಾಸರಿ ಮಟ್ಟದ ಬುದ್ಧಿಶಕ್ತಿ ಹೊಂದಿರುತ್ತಾರೆ. ಅದೇ ರೀತಿಯಾಗಿ ಸಾಲುಗಳನ್ನು ಬಲಭಾಗಕ್ಕೆ ಓರೆಯಾಗಿ (Right slant) ಬರೆಯುವವರು 7.8% ರಷ್ಟಿದ್ದು, ಅದರಲ್ಲಿ 5.3% ರಷ್ಟು ಸರಾಸರಿ ಬುದ್ಧಿವಂತರಾಗಿದ್ದು, 1.3% ರಷ್ಟು ಸರಾಸರಿಗಿಂತ ಕಡಿಮೆ ಮಟ್ಟದ ಬುದ್ಧಿಶಕ್ತಿ ಹೊಂದಿದ್ದಾರೆ, ಹಾಗೂ 1.3% ರಷ್ಟು ಬುದ್ಧಿವಂತರಾಗಿದ್ದಾರೆ, ಮತ್ತು ಸಾಲುಗಳನ್ನು ಎಡಭಾಗಕ್ಕೆ ಓರೆಯಾಗಿ (Left slant) ಬರೆಯುವವರು 11.3% ರಷ್ಟು ಪ್ರಮಾಣದಲ್ಲಿ 1.5% ಬುದ್ಧಿವಂತರಿದ್ದು, 7.8% ಸರಾಸರಿ ಮಟ್ಟದ ಬುದ್ಧಿಶಕ್ತಿ ಹೊಂದಿದ್ದಾರೆ, ಹಾಗೂ 2% ರಷ್ಟು ಸರಾಸರಿಗಿಂತ ಕಡಿಮೆ ಮಟ್ಟದ ಬುದ್ಧಿಶಕ್ತಿ ಹೊಂದಿದ್ದಾರೆ. ಒಟ್ಟಾರೆಯಾಗಿ ಕೈಬರವಣಿಗೆಯನ್ನು ಓರೆಯಾಗಿ ಬರೆಯುವ ವಿವಿಧ ಪ್ರಕಾರಗಳಲ್ಲಿ ನೇರವಾಗಿ ಬರೆಯುವವರ ಪ್ರಮಾಣ ಹೆಚ್ಚಿದ್ದು (81%), ಅದರಲ್ಲಿ ಹೆಚ್ಚು ಮಂದಿ ಸರಾಸರಿ ಮಟ್ಟದ ಬುದ್ಧಿಶಕ್ತಿ ಹೊಂದಿದ್ದಾರೆ ಎಂದು ಕಂಡುಬಂದಿದೆ.

**ಉದ್ದೇಶ 02 :** ಕೈ ಬರವಣಿಗೆಯ 02 ಬರವಣಿಗೆಯ ಸಾಲಿನ ನಡುವಿನ ಅಂತರದ (Spacing of Hand Writing) ವಿವಿಧ ಪ್ರಕಾರಗಳ ಮೂಲಕ ಬುದ್ಧಿಶಕ್ತಿಯ ಮಟ್ಟವನ್ನು ವಿಶ್ಲೇಷಿಸುವುದು.


ISSN : 2249-2429 ಸಂಶೋಧನೆ RNI REG.NO.KARKAN/2011/38712




ನಕ್ಷೆ–01 : ಸ್ಲಾಂಟ್‌ನೆಸ್ ಕೈಬರವಣಿಗೆ ಮತ್ತು ಬುದ್ಧಿಶಕ್ತಿ ಮಟ್ಟ

**ಕೋಷ್ಟಕ–02. ಕೈಬರವಣಿಗೆಯ ಬರವಣಿಗೆಯ ಸಾಲಿನ ನಡುವಿನ ಅಂತರದ ವಿವಿಧ ಪ್ರಕಾರಗಳ (Spacing of Hand Writing) ಬುದ್ಧಿಶಕ್ತಿಯ ಮಟ್ಟದ ಪ್ರಮಾಣವನ್ನು ತೋರಿಸುವುದು.**

| Levels of Intelligence | Slantness of Handwriting | | | Total |
|---|---|---|---|---|
| | Narrow spacing | Wide spacing | Stable spacing | |
| Intelligent | 2.0% | .8% | 13.0% | 15.8% |
| Average | 6.5% | 8.0% | 44.0% | 58.5% |
| Below average | 2.8% | 2.0% | 21.0% | 25.8% |
| Total | 11.3% | 10.8% | 78.0% | 100.0% |




ನಕ್ಷೆ–02 : ಬರವಣಿಗೆಯ ಸಾಲಿನ ನಡವಿನ ಅಂತರ ಮತ್ತು ಬುದ್ಧಿಮಟ್ಟ

## ಅಧ್ಯಯನದ ಫಲಿತಾಂಶಗಳು

- ಕೈ ಬರವಣಿಗೆಯನ್ನು ಓರೆಯಾಗಿ ಬರೆಯುವ ವಿವಿಧ ಪ್ರಕಾರಗಳಲ್ಲಿ ನೇರವಾಗಿ ಬರೆಯುವವರ ಪ್ರಮಾಣ ಹೆಚ್ಚಿದ್ದು (81%), ಅದರಲ್ಲಿ ಹೆಚ್ಚು ಮಂದಿ ಸರಾಸರಿ ಮಟ್ಟದ ಬುದ್ಧಿಶಕ್ತಿ ಹೊಂದಿದ್ದಾರೆ ಎಂದು ಕಂಡುಬಂದಿದೆ.
- ಕೈಬರವಣಿಗೆಯ ಸಾಲಿನ ನಡುವೆ ಅಂತರದ ಬಿಟ್ಟು ಬರೆಯುವ ವಿವಿಧ ಪ್ರಕಾರಗಳಲ್ಲಿ ಸಾಲುಗಳನ್ನು ಸ್ಥಿರ ಅಂತರದಲ್ಲಿ ಬರೆಯುವವರು ಹೆಚ್ಚಿನ ಪ್ರಮಾಣದಲ್ಲಿದ್ದು (78%), ಇದರಲ್ಲಿ ಹೆಚ್ಚಿನ ಪ್ರಮಾಣದವರು ಸರಾಸರಿ ಮಟ್ಟದ ಬುದ್ಧಿಶಕ್ತಿ ಹೊಂದಿರುತ್ತಾರೆ.

## ಸಾರಾಂಶ

ಕೈ ಬರಹವು ಶೈಕ್ಷಣಿಕ ಪ್ರಗತಿಗೆ ಹೇಗೆ ಮುಖ್ಯವಾಗಿದೆಯೋ ಅದೇ ರೀತಿಯಾಗಿ ಬುದ್ಧಿಶಕ್ತಿ ಬೆಳವಣಿಗೆಗೆ ಪೂರಕವಾಗಿದೆ. ಬರಹವು ವಿದ್ಯಾರ್ಥಿಗಳ ಆಲೋಚನೆಯ ಅಭಿವ್ಯಕ್ತಿಯ ರೂಪವಾಗಿರುವುದರಿಂದ ಶಿಕ್ಷಕರುಗಳು ವಿದ್ಯಾರ್ಥಿಗಳ ಕೈಬರವಣಿಗೆಯಿಂದ ಬುದ್ಧಿಮಟ್ಟವನ್ನು ಗುರುತಿಸಿ, ಅವರ ಶೈಕ್ಷಣಿಕ ಪ್ರಗತಿಗೆ ಮಾರ್ಗದರ್ಶಿಸಬಹುದು. ವಿದ್ಯಾರ್ಥಿಗಳಲ್ಲಿನ ದೌರ್ಬಲ್ಯಗಳನ್ನು ಗುರುತಿಸಿ, ಉತ್ತಮ ಬರವಣಿಗೆ ಅಭ್ಯಾಸದ ಮೂಲಕವಾಗಿ ಕಲಿಕೆಯು ಕಡೆ ಏಕಾಗ್ರತೆ, ಶಿಸ್ತು, ಅಧ್ಯಯನಶೀಲತೆ, ಸೃಜನಶೀಲ ಚಿಂತನೆ, ಇತ್ಯಾದಿ ಗುಣಗಳನ್ನು ಬೆಳೆಸಲು ಸಹಾಯಕವಾಗಿದೆ. ಈ ಲೇಖನದ ಸಹಾಯದಿಂದ ಪ್ರತಿಯೊಬ್ಬರೂ ಸಹ ತಮ್ಮ ಕೈಬರಹ ಯಾವ ಗುಂಪಿಗೆ ಸೇರುತ್ತದೆ, ನಮ್ಮ ಬುದ್ಧಿಶಕ್ತಿಮಟ್ಟವೇನು ಎಂಬುದನ್ನು ತಿಳಿಯಬಹುದಾಗಿದೆ. ಯಾವ ಶೈಲಿಯಲ್ಲಿ ಕೈಬರಹವನ್ನು ಬರೆಯುವವರು ಯಾವ ಬುದ್ಧಿಮಟ್ಟವನ್ನು ಹೊಂದಿರುತ್ತಾರೆಂಬುದನ್ನು ಕೂಡ ತಿಳಿಯಬಹುದು. ಕೈಬರಹ ವಿಶ್ಲೇಷಣೆ ಮಾಡಲು ಈ ಲೇಖನ ಓದಿದರಷ್ಟೇ ಸಾಲದು ಗ್ರಾಫಾಲಜಿಯನ್ನು ಕುರಿತು ವಿಶೇಷ ಅಧ್ಯಯನ ಮತ್ತು ತರಬೇತಿಯಿಂದ ನೀವೂಕೂಡ ಕೈಬರಹ ವಿಶ್ಲೇಷಿಸಬಹುದಾಗಿದೆ.

## ಆಕರ ಗ್ರಂಥಗಳು


- **ಕನ್ನಡ ಶೈಲಿ ಕೈಪಿಡಿ (2006) :** ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು, ಹಂಪಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ.
- **ನಾರಾಯಣ ಕೆ.ವಿ (2007) :** ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಭಾಷೆ–1, ಪ್ರಸಾರಾಂಗ ಹಂಪಿ ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ.
- **ಯಂಡಮೂರಿ ವೀರೇಂದ್ರನಾಥ್ (2012) :** ಗ್ರಾಫಾಲಜಿ; ಕನ್ನಡಕ್ಕೆ ಅನುವಾದ–ರಾಜಾ ಬೆಂಗಳೂರು ಚೆಂಡೂರ್, ಸುಧಾ ಎಂಟರ್ ಪ್ರೈಸಸ್, ಕರ್ನಾಟಕ.
- **ಗಿರೀಶ್ ಟಿ (2021) :** ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಕನ್ನಡ ಕೈಬರಹದ ಮೂಲಕ ಬುದ್ಧಿಶಕ್ತಿ ವಿಶ್ಲೇಷಣೆ, ಅರುಹು ಕುರುಹು ತ್ರೈಮಾಸಿಕ ಪತ್ರಿಕೆ, Vol:11,ISSUE-44 , pp-156-163.
- **ಗಿರೀಶ್ ಟಿ (2020) :** ಗ್ರಾಫಾಲಜಿ; ಕನ್ನಡ ಕೈ ಬರವಣಿಗೆಯ ಮೂಲಕ ವ್ಯಕ್ತಿತ್ವದ ವಿಶ್ಲೇಷಣೆ, ಗದಗ ಶಿಕ್ಷಣ ಸೌಧ ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ, Vol:10,ISSUE-2, pp-25 & 27.
- **ಗಿರೀಶ್ ಟಿ (2019) :** ಕನ್ನಡ ಕೈ ಬರವಣಿಗೆಯ ಮೂಲಕ ವ್ಯಕ್ತಿತ್ವದ ವಿಶ್ಲೇಷಣೆ, ಗದಗ ಶಿಕ್ಷಣ ಸೌಧ ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ, Vol:9,ISSUE-9, pp-7 & 34.
- **Ary Setya B. Ningrum., & Rohmat, Agung Wibowo.(2017).** Intelligence Quotient (IQ) As A Predictor of Reading Comprehension and Writing Achievement of EFL Learners.Journal of English Education and Linguistics Studies, 4(1).
- **Bagheri, M. S., & Ghasemi, Elnaz. (2013).** The Relationship between Emotional Intelligence and Writing Performance of Ielts Learners. Modern Journal of Language Teaching Methods, 3 (4), p-83.
- **Beyerstein, Barry L. (1996).** How Graphology Fools People. In The Encyclopedia of the Paranormal. Retrieved from: http://www.quackwatch. org/01QuackeryRelatedTopics /Tests/grapho.html
- **Champa, H. N., & Ananda Kumar, K. R. (2010)**. Artificial Neural Network for Human Behavior Prediction through Handwriting Analysis. International Journal of Computer Applications , 2(2).36.

ISSN : 2249-2429 ಸಂಶೋಧನೆ RNI REG.NO.KARKAN/2011/38712


- **Clark, S. R. (2005).** Graphology: Predicting Intelligence, National Undergraduate Research Clearinghouse, 8. Retrieved at http://www.Webcl earinghouse. net/volume/. June 27, 2019.
- **Elmer A. Lemke.,& John H. Kirchner. (2010).** A Multivariate Study of Handwriting, Intelligence, and Personality Correlates. Journal of Personality Assessment, 35 (6), 584-592.
- **Girisha T,& Dange J K. (2017).** Development of Kannada Handwriting Analysis Scale, Asian Journal of Multidimensional Research, pp.15-26.
- **Girisha T., & Dange, J.K. (2017).** Gender difference in Kannada Handwriting of Postgraduate students. An International Multidisciplinary Journal, 1 (9),46.
- **Girisha T., & Dange, J.K. (2019).** Analysis of Intelligence through Kannada Handwriting of post graduate students, *International Journal of Research and Analytical Reviews,*March-2019.
- **Lowe, S.R. (1999).** The complete idiot's guide to Handwriting analysis. New York: Alpha Books.
- **Lowis, M. J., & Mooney, S. (2001).**Examination Performance and Graphological Analysis of Students' Handwriting. Perceptual and Motor Skills, 93(2), 367–381.
- **Luria, G., & Rosenblum, S. (2010).**Comparing the Handwriting Behaviours of True and False Writing with Computerized Handwriting Measures.Applied Cognitive Psychology, 24, 1115-1128.
- **Pillai, N. P,, Nair, A. S., & Nair, K.S. (1967).**A monograph on the scaling of handwriting specimens and the construction and standardization of the Kerala University handwriting scale for Malayalam. Trivandrum: Department of Education, Kerala University.
- **Ploog, H. (2013**). Handwriting Psychology: Personality Reflected in Handwriting. London : University.
- **Rafaeli, A., & Drory, A. (1988).**Graphological Assessments for Personnel Selection.Concerns and suggestions for research. Perceptual and Motor Skills, 66, 743-759.
- **Ravindra Negi. (2014).** Personality traits in Handwriting.www.self-publish.in
- **Sadeghi, K., Farzizadeh, B. (2013).**The relationship between emotional intelligence and writing ability of Iranian EFL learners.Brazilian English Language Teaching Journal, 4(1), 20-29.
- **Scanlon, Matthew., & James Mauro. (1992).**The Lowdown on Handwriting Analysis. In Psychology Today.Online. Retrieved from: https://www.Psycho logytoday.com/articles/200910/the-lowdown-handwriting-analysis
- **Van Rooij, J. J., & Hazelzet A. M. (1997).**Graphologists assessment of extraversion, Perceptual and Motor Skills, 85, 919-1009.
- **Wellinham-Jones, P. (1989).** Evaluation of the handwriting of successful women through the Roman-Staemfli psychogram. Perceptual and Motor Skills.69, 999-101.
- **Zubrzycki, J. (2012).**Summit to Make a Case for Teaching Handwriting. Education Week, Retrieved from http://www.edweek.org/ew/articles/2012/01/25/18handwriting_ep.h31.ht ml?qs=cursive.


■■


**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

*ಚಂದಾ ವಿವರ :*

| | | |
|---|---|---|
| ವಾರ್ಷಿಕ ಚಂದಾ | ₹ 750/- | ☐ |
| ತ್ರೈವಾರ್ಷಿಕ ಚಂದಾ | ₹ 2100/- | ☐ |
| ಆಜೀವ ಸದಸ್ಯತ್ವ | ₹ 7000 /- | ☐ |

*ಚಂದಾದಾರರು :*

ವಿದ್ಯಾನಿಧಿ ಪ್ರಕಾಶನ, ಗದಗ.

ಈ ಹೆಸರಿನ ಮೇಲೆ ಡಿಡಿ ತೆಗೆಯಿಸಬೇಕು.

*Bank Detils :*
**Vidyanidhi Prakashana**
State Bank of India
APMC Yard, Gadag Branch
A/c.No.: 10824825080
IFSC : SBIN0000838

ಡಿ.ಡಿ. ಕಳುಹಿಸಬೇಕಾದ ವಿಳಾಸ :

**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ವಿದ್ಯಾನಿಧಿ ಪ್ರಕಾಶನ
ಸ್ಟೇಶನ್ ರೋಡ ಮತ್ತು 'ನನಸು' ಜೆ.ಟಿ.ಮಠ ರೋಡ,
ಗದಗ – 582101. ಕರ್ನಾಟಕ ರಾಜ್ಯ
ಫೋನ್ : 08372–237527, 277527
Email : shikshansoudha@gmail.com

**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ
ನೂತನ ಚಂದಾದಾರರ ನೋಂದಣಿ ಪ್ರತಿ

Date :

Name :______________________________

Designation :______________________________

Institution :______________________________

Address :______________________________

______________________________

Phone Cell Nos.:______________________________

e-mail :______________________________

D.D. No. :______________ Dated :__________

Amount :________ Bank :__________________

*Institution's Signature*

ISSN : 2249-2429 ಸಂಶೋಧನೆ RNI REG.NO.KARKAN/2011/38712

# "ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ಆತಂಕದ" ಕುರಿತು ಅಧ್ಯಯನ

✍ **ಡಾ.ಭಾರತಿ ಗಾಣಿಗೇರ,**ಸಹಾಯಕ ಪ್ರಾಧ್ಯಾಪಕರು ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

✍ **ಶಿವಮ್ಮ ಎನ್. ಹಂಡೇಗಾರ,** ಸಂಶೋಧನಾ ವಿದ್ಯಾರ್ಥಿನಿ, ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

*ಸಾರಾಂಶ:*

*ಮಾನವಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ಆತಂಕ ಎಂಬುವುದು ಇದೊಂದು ಮನಸ್ಸಿನ ಸಂಕೀರ್ಣ ಸ್ಥಿತಿಯಾಗಿದ್ದು. ಇದು ಎಲ್ಲ ವಿದ್ಯಾರ್ಥಿಗಳಲ್ಲಿ ಬಂದು ಹೋಗುವಂತಾಗಿದೆ. ಈ ಆತಂಕ ಅತೀಯಾದಾಗ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಹಲವಾರು ಸಮಸ್ಯೆಗಳಿಗೆ ಒಳಗಾಗುತ್ತಾರೆ. ಇದರಿಂದ ಅವರು ಪರೀಕ್ಷೆ ಗೈರು ಆಗಬಹುದು ಅಥವಾ ಅವರ ಪ್ರಾಣವನ್ನು ಕಳೆದುಕೊಳ್ಳಬಹುದು. ಇವರ ಆತಂಕವನ್ನು ಹೇಗೆ ಹೋಗಲಾಡಿಸಬಹುದು ಮತ್ತು ವಿದ್ಯಾರ್ಥಿಗಳನ್ನು ಸಂಪೂರ್ಣ ತಯಾರಿ ಮಾಡಬಹುದು? ಎಂಬುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.*

***Key Words :*** *ಎಸ್.ಎಸ್.ಎಲ್.ಸಿ. ಪರೀಕ್ಷಾ ಆತಂಕ.*

## ಪ್ರಸ್ತಾವನೆ

ಮಾನವ ತನ್ನ ವೈಶಿಷ್ಟ್ಯಪೂರ್ಣ ಗುಣಗಳಾದ ವೈಚಾರಿಕತೆ, ಬುದ್ಧಿವಂತಿಕೆ, ಅಭಿವ್ಯಕ್ತಿ, ಸಾಮರ್ಥ್ಯಗಳಿಂದ ಸರ್ವ ಪ್ರಾಣಿಗಳಲ್ಲಿಯೇ ಅತ್ಯಂತ ಶ್ರೇಷ್ಠ ಪ್ರಾಣಿ ಎಂದು ಪರಿಗಣಿಸಲ್ಪಟ್ಟಿರುತ್ತದೆ. ಇಂತಹ ಪ್ರಗತಿಯನ್ನು ಮಾನವನು ಹೇಗೆ ಸಂಪಾದಿಸಿದ ? ಎಂಬ ಪ್ರಶ್ನೆಗೆ ಉತ್ತರವೇ "ಶಿಕ್ಷಣ" ಎಂದು ಹೇಳಬಹುದು.

ಅದೇ ರೀತಿ "ಎಸ್.ಎಸ್.ಎಲ್.ಸಿ.ಯ ವಿದ್ಯಾರ್ಥಿಗಳ ಪರೀಕ್ಷಾ ಆತಂಕವು" ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಬಂದು ಹೋಗುವುದಾಗಿದೆ. ಅಂದರೆ "ನಾಳೆಯ ಭವಿಷ್ಯ ಇಂದೇ ನಿರ್ಮಾಣವಾಗುತ್ತಿದೆ." ಯಾವ ವ್ಯಕ್ತಿ ಇಂದಿನ ದಿನವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾನೋ ಮುಂದೆ ಜಗತ್ತನ್ನು ಆಳುತ್ತಾನೆ. ಆದುದರಿಂದ "ಇಂದು ನೀನು ಕಾಲವನ್ನು ಗೌರವಿಸಿದರೆ, ನಿನ್ನನ್ನು ಗೌರವಿಸುವ ಕಾಲ ಬರುತ್ತದೆ".

ವಿದ್ಯಾರ್ಥಿಗಳ ಜೀವನದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ವಿದ್ಯಾರ್ಥಿಗಳ ಭಾವಿ ಜೀವನವನ್ನು ನಿರ್ಣಯಿಸುವ ಮೈಲುಗಲ್ಲಾಗಿದೆ. ಇದರಿಂದ ಪರೀಕ್ಷಾ ಆತಂಕ ಮೂಡುವುದು ಸಹಜವಾಗಿದೆ.

## ಸಾಮಾನ್ಯ ವ್ಯಾಖ್ಯೆ

ವಿದ್ಯಾರ್ಥಿಗಳ ಮನಸ್ಸಿನಲ್ಲಿ ಉಂಟಾಗುವ ಸಂಕೀರ್ಣ ಸ್ಥಿತಿಯನ್ನು ಪರೀಕ್ಷಾ ಆತಂಕ ಎನ್ನುವರು.

**ರಾಬರ್ಟ್ ದಿ ಬ್ರೂಸ್ ಮಾತಿನಂತೆ :** "If you don't succeed the first time, try try and try again" ಅಂದರೆ ಸಾಧಿಸುವವರಿಗೆ ಪ್ರಯತ್ನ ಬಿಡಬೇಡಿ ಎಂದಿದ್ದಾರೆ.

## ಸಂಬಂಧಿತ ಸಾಹಿತ್ಯದ ಪುನರಾವಲೋಕನ

ಸಂಶೋಧಕರು ತಮ್ಮ ಸಮಸ್ಯೆಗಳನ್ನು ಆಯ್ದುಕೊಂಡು ನಂತರ ಆ ಸಮಸ್ಯೆಯ ಬಗ್ಗೆ ಬೇರೆ ಯಾವುದೇ ಸಂಶೋಧನೆ ನಡೆದಿದೆಯೋ ಎಂದು ತಿಳಿಯುವ ನಿಟ್ಟಿನಲ್ಲಿ ಮತ್ತು ತಮ್ಮ ಹರಿವನ್ನು ನಿಖರಗೊಳಿಸುವ ಉದ್ದೇಶದಿಂದ ಬೇರೆ ಸಂಶೋಧಕರು ಮಾಡಿದ ಸಂಶೋಧನಾ ಸಾಹಿತ್ಯಗಳನ್ನು ಅವಲೋಕನ ಮಾಡಿದರು. ಅವುಗಳುಗಳೆಂದರೆ, **ಕೌರದೀಪಿಕಾ (1964)** ಎಂಬುವರು ವಿದ್ಯಾರ್ಥಿಗಳ ಆತಂಕ, ಹೊಂದಾಣಿಕೆ, ಸಾಧನಾ ಪ್ರೇರಣೆ ಸ್ವಪರಿಕಲ್ಪನೆ ಮತ್ತು ಶೈಕ್ಷಣಿಕ ಸಾಧನೆ ಮೇಲೆ ಕುಟುಂಬದ ಪ್ರಭಾವ ಕುರಿತು ಒಂದು ಅಧ್ಯಯನವನು ಕೈಗೊಂಡಿರುವರು. **ಸೆಕ್ಷನ್ ವಂದನಾ (1988)** ಎಂಬುವರು ವಿದ್ಯಾರ್ಥಿಗಳ ಆತಂಕ, ಹೊಂದಾಣಿಕೆ, ಸಾಧನಾ ಪ್ರೇರಣೆ, ಸ್ವಪರಿಕಲ್ಪನೆ ಮತ್ತು ಶೈಕ್ಷಣಿಕ ಸಾಧನೆ ಮೇಲೆ ಕುಟುಂಬದ ಪ್ರಭಾವ ಕುರಿತು ಒಂದು ಅಧ್ಯಾಯನವನ್ನು ಕೈಗೊಂಡಿರುವರು. **ಬದರಿ** ಎಂಬುವರು ಸರಕಾರಿ ಮಾಧ್ಯಮಿಕ ಶಾಲೆಗಳಲ್ಲಿ ಕಡಿಮೆ ಶೈಕ್ಷಣಿಕ ಸಾಧನೆಗೆ ಕಾರಣಗಳು ಕುರಿತು ಅಧ್ಯಯನವನ್ನು ಕೈಗೊಂಡಿರುವರು. ಸೈಬಿಯಾ ಅಂಜುಮನ್‌ರವರು ಬಾಲಕಿಯರಲ್ಲಿರುವ ಸಾಧನೆಗೆ ಪರೀಕ್ಷಾ ಆತಂಕ ಮತ್ತು ಬುದ್ದಿ ಶಕ್ತಿಯು ಕಾಲಜ್ಞಾನವಾಗಿದೆ ಎಂಬುದರ ಕುರಿತು ಅಧ್ಯಾಯ ಕೈಗೊಂಡಿದ್ದಾರೆ. ಬರಿಂದರ್‌ರವರು ಅಂತರ್ಮುಖ ವಿದ್ಯಾರ್ಥಿಗಳಲ್ಲಿರುವ ಸಾಮಾನ್ಯ ಆತಂಕ ಮತ್ತು ಪರೀಕ್ಷಾ ಆತಂಕದ ಮೇಲೆ ಪರಿಸರದ ಅಂಶಗಳ ಪ್ರಭಾವ ಕುರಿತು ಅಧ್ಯಾಯನ ಕೈಗೊಂಡಿದ್ದಾರೆ. **ದಗೌರ. ಎಸ್.** ರವರು ಬಹಿರ್ಮುಖಿಗಳಲ್ಲಿರುವ ಆತಂಕ ಮತ್ತು ಸೃಜನಾತ್ಮಕತೆಗಳ ನಡುವಿನ ಸಂಬಂಧವನ್ನು ಕುರಿತು ಅಧ್ಯಯನ ಕೈಗೊಂಡಿದ್ದಾರೆ. ವರ್ಮಾ ಬಿ.ಸಿ. ರವರು ಕಿಶೋರಾವಸ್ಥೆಯಲ್ಲಿ ಕಲಿಯುವ ವಿದ್ಯಾರ್ಥಿಗಳ ಆತ್ಮ ವಿಶ್ವಾಸ ಆತಂಕ ಅಪಾಯ ತಂದುಕೊಳ್ಳುವ ಸಂಬಂಧಪಟ್ಟಂತೆ ಅಧ್ಯಯನ ಕೈಗೊಂಡಿದ್ದಾರೆ.

## ಅಧ್ಯಯನದ ಅವಶ್ಯಕತೆ ಮತ್ತು ಮಹತ್ವ

ಸಮಸ್ಯೆಗಳಿಲ್ಲದೆ ಕ್ಷೇತ್ರ ಯಾವುದೂ ಇಲ್ಲ. ಎಲ್ಲ ರಂಗಗಳಲ್ಲಿಯೂ ನಾವು ಸಮಸ್ಯೆಯನ್ನು ಕಾಣುವಂತೆ ಶಾಲಾ ಮಟ್ಟದಲ್ಲಿಯೂ ನಾವು ಹಲವಾರು ಸಮಸ್ಯೆಗಳನ್ನು ಕಾಣುತ್ತೇವೆ. ಪ್ರತಿಯೊಬ್ಬ ವಿದ್ಯಾರ್ಥಿಯು ಒಂದಲ್ಲ ಒಂದು ಸಮಸ್ಯೆಯನ್ನು ಎದುರಿಸುತ್ತಾರೆ. ಅದೇ ರೀತಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು ಪರೀಕ್ಷಾ ಆತಂಕವೂ ಕೂಡಾ ವಿದ್ಯಾರ್ಥಿಗಳ ಸಮಸ್ಯೆಯಾಗಿ ಮುಂದೆ ಶಿಕ್ಷಕರ ಸಮಸ್ಯೆಯಾಗಿ ಕೊನೆಗೂ ಸಮಾಜಕ್ಕೂ ಸಮಸ್ಯೆಯಾಗಿ ಪರಿಣಮಿಸುತ್ತದೆ.

ಈಗಾಗಲೇ ಸಂಶೋಧಕರು ನಡೆಸಿದ ಹಿಂದಿನ ಸಂಶೋಧನೆಗಳ ಅವಲೋಕನದಿಂದ ಪಾಲಕರ ಒತ್ತಡ, ಪಾಲಕರ ಅನಕ್ಷರತೆ, ವಿದ್ಯಾರ್ಥಿಗಳು ಶಾಲೆಗೆ ಸರಿಯಾಗಿ ಹೋಗದೇ ಇರುವುದು ಇತ್ಯಾದಿಗಳಿಂದ ವಿದ್ಯಾರ್ಥಿಗಳು ಪರೀಕ್ಷೆ ಆತಂಕಕ್ಕೆ ಒಳಗಾಗುತ್ತಾರೆ. ಅದೇ ರೀತಿ ಶಾಲೆಯ ವಾತಾವರಣ ಆಯಾ ವಿಷಯದ ಶಿಕ್ಷಕರ ಕೊರತೆ, ಅಸಮರ್ಪಕ ಬೋಧನಾ ಪದ್ಧತಿ ಅಥವಾ ಅಭ್ಯಾಸ ಸೂಚಿಯನ್ನು ಸರಿಯಾದ ರೀತಿಯಲ್ಲಿ ಬಳಸದೆ ಬೋಧನೆ ಮಾಡುವುದು. ಸೂಕ್ತವಾದ ಸೌಲಭ್ಯಗಳ ಕೊರತೆ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮುಂತಾದವುಗಳು ವಿದ್ಯಾರ್ಥಿಗಳ ಕಲಿಕಾ ಪರಿಸರದ ಮೇಲೆ ಗಾಢವಾದ ಪ್ರಭಾವವನ್ನು ಬಿರುತ್ತದೆ. ಈ ಎಲ್ಲಾ ಅಂಶಗಳನ್ನು ಗಣನೆಯಲ್ಲಿ ಇಟ್ಟುಕೊಂಡು ಈ ದಿಸೆಯಲ್ಲಿ ಪ್ರಸ್ತುತ ಅಧ್ಯಯನವು ಮಹತ್ವವನ್ನು ಹೊಂದಿದೆ.

## ಸಮಸ್ಯೆ ಹೇಳಿಕೆ

"ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ಆತಂಕ ಕುರಿತು ಒಂದು ಅಧ್ಯಯನ".

## ಅಧ್ಯಯನದ ಉದ್ದೇಶಗಳು

- ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ಆತಂಕದ ಬಗ್ಗೆ ಅಧ್ಯಯನ ಮಾಡುವುದು.
- ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ಆತಂಕದಿಂದ ಅವರ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ತಿಳಿಯುವುದು.
- ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ನೀಗಿಸಲು ಮಾರ್ಗ ಉಪಾಯಗಳನ್ನು ಸೂಚಿಸುವುದು.

## ಪ್ರಾಕಲ್ಪನೆಗಳು

- ಸರಕಾರಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರು ಮತ್ತು ಬಾಲಕಿಯರ ಪರೀಕ್ಷಾ ಆತಂಕದಲ್ಲಿ ಯಾವುದೇ ಪರಿಣಾಮಕಾರಿ ವ್ಯತ್ಯಾಸ ಇರುವುದಿಲ್ಲ.
- ಖಾಸಗಿ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರು ಮತ್ತು ಬಾಲಕಿಯರ ಪರೀಕ್ಷಾ ಆತಂಕ ನಡುವೆ ಯಾವುದೇ ಪರಿಣಾಮಕಾರಿ ವ್ಯತ್ಯಾಸವಿಲ್ಲ.
- ಸರಕಾರಿ ಶಾಲೆಯ ಮತ್ತು ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರ ನಡುವೆ ಯಾವುದೇ ಪರಿಣಾಮಕಾರಿ ವ್ಯತ್ಯಾಸವಿಲ್ಲ.
- ಸರಕಾರಿ ಮತ್ತು ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕಿಯರ ಪರೀಕ್ಷಾ ಆತಂಕ ನಡುವೆ ಯಾವುದೇ ಪರಿಣಾಮಕಾರಿ ವ್ಯತ್ಯಾಸವಿಲ್ಲ.

## ಅಧ್ಯಯನದ ವಿಧಾನ

ಅಧ್ಯಯನದ ವಿಧಾನವು ಒಂದು ಸಂಶೋಧನೆಯ ನೀಲಿ ನಕ್ಷೆಯಾಗಿದ್ದು, ಸಂಶೋಧಕರಿಗೆ ತಾವು ಮಾಡಬೇಕಾದ ಅಧ್ಯಾಯನದ ವಿಶಾಲರೂಪ ರೇಷೆಗಳನ್ನು ತಿಳಿಸಿಕೊಡುವುದು. ಇದೊಂದು ಸಮೀಕ್ಷಾ ಪದ್ಧತಿಯನ್ನು ಅಳವಡಿಸಿಕೊಂಡು ಮಾಡಿದಂತಹ ಸಂಶೋಧನೆಯಾಗಿದೆ.

## ಪಾರಿಭಾಷಿಕ ಪದಗಳ ಅರ್ಥ

**ಪರೀಕ್ಷೆ :** ಕಲಿಯುವ ಮನಸ್ಸಿನಲ್ಲಿ ಕಲಿಸಿದ ವಿಷಯವು ಸ್ಥಿರವಾಗಿ ಉಳಿದಿದೆಯೋ ಇಲ್ಲವೋ? ಎಂಬುದನ್ನು ತಕ್ಷಣವೇ ಕಂಡು ಹಿಡಿಯುವ ವಿಧಾನವನ್ನು ಪರೀಕ್ಷೆ ಎನ್ನುವರು.

**ಪರೀಕ್ಷೆ ಅರ್ಥ :** ಪರೀಕ್ಷೆಯನ್ನು ಆಂಗ್ಲಭಾಷೆಯಲ್ಲಿ "Test" ಎಂದು ಕರೆಯುತ್ತಾರೆ.

## ಪರೀಕ್ಷೆಯ ವ್ಯಾಖ್ಯೆಗಳು

**ಎಚ್. ಜಿ. ಸ್ಪಿಡ್‌ರವರ ಪ್ರಕಾರ :** "ಪರೀಕ್ಷೆಗಳು ವಿದ್ಯಾರ್ಥಿಗಳಲ್ಲಿ ಭಾವನಾತ್ಮಕ ಗೊಂದಲಗಳನ್ನು ಎಬ್ಬಿಸುತ್ತವೆ. ಅದರಿಂದ ಅವು ನಿಜವಾದ ಕಲಿಕೆಗೆ ಪ್ರೇರಣೆಗಳಾಗಿಲ್ಲ".

**ಕ್ಲಿರ್ಬ್ಸ್ ರವರ ಪ್ರಕಾರ :** "ಪರೀಕ್ಷೆಗಳು ರಚನಾತ್ಮಕ ಕಾರ್ಯದ ವೈರಿಗಳಾಗಿವೆ". **ಸಾಮಾನ್ಯ ವ್ಯಾಖ್ಯೆ :** "ಭವಿಷ್ಯಕ್ಕೆ ವೈಯುವಂತ ದಾರಿಯಾಗಿದೆ".

**ಪರೀಕ್ಷಾ ಆತಂಕ :** ಪರೀಕ್ಷಾ ಆತಂಕವು ಪರೀಕ್ಷೆಯ ನಮೂನೆ ಅನುಭವಿಸುತ್ತಿರುವ ಅಥವಾ ಅಪಾಯಕರ ಅರಿವು ಉಂಟಾಗಿರುವ ಅಸೌಖ್ಯ ಅಥವಾ ಮನಸ್ಸಿನ ಸಂಕೀರ್ಣ ಸ್ಥಿತಿಯಾಗಿದೆ.

## ಚಲಕಗಳು

1) ಸ್ವತಂತ್ರಚಲಕ : ಪರೀಕ್ಷಾ ಆತಂಕ
2) ಮಧ್ಯವರ್ತಿ ಚಲಕ

**ಲಿಂಗ :** ಅ. ಬಾಲಕರು
ಬ. ಬಾಲಕಿಯರು ಶಾಲೆಯ ಮಾದರಿ
ಅ) ಸರಕಾರಿ ಪ್ರೌಢಶಾಲೆ
ಬ) ಖಾಸಗಿ ಪ್ರೌಢಶಾಲೆ

## ಅಧ್ಯಯನದ ಸಾಧನಗಳು

ಸಂಶೋಧನಾ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಅನೇಕ ಸಾಧನಗಳನ್ನು ಮತ್ತು ತಂತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಹಾಗಾಗಿ ಸಂಶೋಧನೆಯಲ್ಲಿ ಸಾಧನಗಳು ಪ್ರಮುಖ ಪಾತ್ರವಹಿಸುತ್ತಿದೆ. ಉದಾ : ಸಂದರ್ಶನ, ಪ್ರಶ್ನಾವಳಿ ಮತ್ತು ತಾಳೆಪಟ್ಟಿ ಪ್ರತಿಯೊಂದಕ್ಕೂ ಅದರದೇ ಆದ ಮಹತ್ವವುಂಟು. ಆಯಾ ಸನ್ನಿವೇಶಕ್ಕೆ ಅನುಗುಣವಾಗಿ ಆ ಸಾಧನಗಳನ್ನು ಉಪಯೋಗಿಸಲಾಗುತ್ತಿದೆ. ಪ್ರಸ್ತುತ ಅಧ್ಯಾಯನದಲ್ಲಿ ಸಂಶೋಧಕರು ಈ ಕೆಳಗಿನ ಸಾಧನಗಳನ್ನು ಉಪಯೋಗಿಸಿದವರು.

## ವಾಲ್ಲೇಸ್‌ರವರ ಪ್ರಕಾರ

ಮುದ್ರಿತ ಪ್ರಶ್ನೆಗಳಿಗೆ ಮಾಹಿತಿ ನೀಡುವುದರಿಂದಲೇ ಉತ್ತರಗಳನ್ನು ಪ್ರೇರಿತವಾಗಿ ಭರ್ತಿ ಮಾಡಿಸಿ ಪಡೆಯುವುದರ ಮೂಲಕ ಮಾಹಿತಿ ಸಂಗ್ರಹಿಸುವ ವಿಧಾನವೇ ಪ್ರಶ್ನಾವಳಿ.

ಈ ಪ್ರಶ್ನಾವಳಿಯ ಈ ಕೆಳಗಿನ ಅಂಶಗಳಿಂದ ಕೂಡಿದೆ.

1. ಆರೋಗ್ಯದ ಸಮಸ್ಯೆ
2. ಪರೀಕ್ಷೆ ತಯಾರಿಯಲ್ಲಿ ಉಂಟಾಗುವ ತೊಂದರೆಗಳು
3. ವಿದ್ಯಾರ್ಥಿ ಆರೋಗ್ಯದ ಮೇಲೆ ಪರಿಣಾಮ.

**ನಮೂನೆಯ ವಿನ್ಯಾಸ**

**N = 100**

| ಸರಕಾರಿ ಶಾಲೆ – 50 | ಖಾಸಗಿ ಶಾಲೆ – 50 |
|---|---|
| ಬಾಲಕರು – 25 | ಬಾಲಕರು – 25 |
| ಬಾಲಕಿಯರು – 25 | ಬಾಲಕಿಯರು – 25 |

## ದತ್ತಾಂಶ ಸಂಗ್ರಹಣಾ ವಿಧಾನ

ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ಆತಂಕ ಕುರಿತು ಒಂದು ಅಧ್ಯಯನ ಎಂಬ ಸಮಸ್ಯೆಯನ್ನು ಆರಿಸಿಕೊಂಡು ಪ್ರಶ್ನಾವಳಿಯನ್ನು ಉಪಯೋಗಿಸಿಕೊಂಡು, ಪ್ರಶ್ನಾವಳಿಯನ್ನು ನಂತರ ಕೆಲವೊಂದು ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಸರಕಾರಿ ಮತ್ತು ಖಾಸಗಿ ಪ್ರೌಢ ಶಾಲೆಗಳಿಗೆ ಭೇಟಿ ನೀಡಿ ಮುಖ್ಯೋಪಾಧ್ಯಾಯರೊಂದಿಗೆ ಅಧ್ಯಯನದ

ವಿಷಯದ ಕುರಿತು ಚರ್ಚಿಸಿ ದತ್ತಾಂಶ ಸಂಗ್ರಹಣೆಗಾಗಿ ಅನುಮತಿ ಪಡೆದುಕೊಳ್ಳಲಾಯಿತು. ದತ್ತಾಂಶ ಸಂಗ್ರಹಣೆಗಾಗಿ ಅನುಮತಿ ಪಡೆದುಕೊಂಡು ಆ ಶಾಲೆಯ ಸಹ ಶಿಕ್ಷಕರ ಸಹಾಯದೊಂದಿಗೆ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳನ್ನು ಭೇಟಿ ನೀಡಿ, ವಿದ್ಯಾರ್ಥಿಗಳಿಗೆ ಪ್ರಶ್ನಾವಳಿ ಮಾಹಿತಿಯನ್ನು ಸಂಕ್ಷಿಪ್ತವಾಗಿ ನೀಡಿ ಮತ್ತು ಪ್ರಶ್ನಾವಳಿಗೆ ಸೂಕ್ತ ಪ್ರತಿಕ್ರಿಯೆ ನೀಡುವಂತೆ ಅವರಿಗೆ ಹೇಳಲಾಯಿತು.

## ಅಧ್ಯಯನಕ್ಕಾಗಿ ಬಳಿಸಿದ ಸಾಧನಗಳು

ಈ ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದಂತೆ ದತ್ತಾಂಶಗಳ ಸಂಗ್ರಹಣೆ ಮಾಡಲು ಪ್ರಶ್ನೆಗಳು ಅತ್ಯುತ್ತಮ ತಂತ್ರವಾಗಿದೆ. ಈ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗಿ ಅವರ ಪ್ರತಿಕ್ರಿಯೆಯನ್ನು ಆಯ್ಕೆ ವಿಧಾನದ ಮೂಲಕ ಸಂಗ್ರಹಿಸಲಾಯಿತು. ವಿದ್ಯಾರ್ಥಿಗಳಿಗೆ ಹೌದು ಇಲ್ಲ ಕ್ರಿಯೆಗೆ (✓) ಮೂಲಕ ಗುರುತಿಸಿದ್ದಾರೆ.

## ಸಂಖ್ಯಾಶಾಸ್ತ್ರೀಯ ತಂತ್ರಗಳು

ಸಂಖ್ಯಾಶಾಸ್ತ್ರೀಯ ತಂತ್ರಗಳು, ಸಂಶೋಧನೆ ದತ್ತಾಂಶಗಳು ವಿಶ್ಲೇಷಿಸಲು ಪ್ರಮುಖವಾದ ಪಾತ್ರವಹಿಸುತ್ತದೆ. ಪ್ರಸ್ತುತ ಅಧ್ಯಾಯನದಲ್ಲಿ ಸರಾಸರಿ, ಮಾನಕ ವಿಚಲನೆ ಹಾಗೂ 't' ಟೆಸ್ಟ್‌ನ್ನು ದತಾಂಶ ವಿಶ್ಲೇಷಣೆಗಾಗಿ ಉಪಯೋಗಿಸಲಾಗಿದೆ.

## ಫಲಿತಾಂಶ ಮತ್ತು ಚರ್ಚೆ

ಸಂಶೋಧನೆ ಉದ್ದೇಶಕ್ಕನುಗುಣವಾಗಿ ದತ್ತಾಂಶಗಳನ್ನು ಸಂಗ್ರಹಿಸಿ ಮಾಹಿತಿಯನ್ನು ಕ್ರಮಬದ್ಧವಾಗಿ ಕ್ರೂಢೀಕರಿಸಿ ವರ್ಗೀಕರಣ ಮಾಡಿ ಅಂಶಗಳಿಗೆ ಯಥೋಚಿತ್ತವಾದ ವ್ಯಾಖ್ಯಾನ ನೀಡಿದಾಗ ಮಾತ್ರ ಸಂಶೋಧನಾ ಕಾರ್ಯಕ್ರಮದಲ್ಲಿ ಮಾಹಿತಿ ವಿಶ್ಲೇಷಣೆ ಅರ್ಥ ನಿರೂಪಣೆ ಮಾಡಲು ಅನುಕೂಲವಾಗಿದೆ ಎಂದು ಹೇಳಬಹುದು.

**ಕೋಷ್ಟಕ 1 : ಸರಕಾರಿ ಶಾಲೆಯ ಎಸ್.ಎಸ್.ಎಲ್.ಸಿ ಬಾಲಕ ಮತ್ತು ಬಾಲಕಿಯರ ಪರೀಕ್ಷಾ ಆತಂಕ**

| | ನಮೂನೆ Sample | ಸರಾಸರಿ Mean | ಮಾನಕ ವಿಚಲನೆ S.D. | 't' ಕೋಷ್ಟಕ ಮೌಲ್ಯಾಂಕನ | 't' ದತ್ತಾಂಶದ ಮೌಲ್ಯಾಂಕನ | ಗಮ ನಾರ್ಹತೆ |
|---|---|---|---|---|---|---|
| ಬಾಲಕರು | 25 | 17.36 | 4.111772 | 5.56 | 2.796939 | * |
| ಬಾಲಕಿಯರು | 25 | 14.04 | 4.467289 | | | |

* Significant at 0.01 level

**ಅರ್ಥೈಸುವಿಕೆ :** ಮೇಲಿನ ಕೋಷ್ಟಕ 1 ರಿಂದ ತಿಳಿದು ಬರುವುದೇನೆಂದರೆ, 't' ಕಂಡುಹಿಡಿದ ಕಂಡುಹಿಡಿದ 't' ಬೆಲೆಯು 't' table ಬೆಲೆಗಿಂತ ಹೆಚ್ಚಾಗಿರುವುದರಿಂದ ಶೂನ್ಯ ಪ್ರಾಕಲ್ಪನೆ–1 ರ ಪ್ರಕಾರ ಶೂನ್ಯ ಪ್ರಾಕಲ್ಪನೆ–ಸರಕಾರಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರ ಹಾಗೂ ಬಾಲಕಿಯರ ಪರೀಕ್ಷಾ ಆತಂಕದಲ್ಲಿ ವ್ಯತ್ಯಾಸ ಇರುವುದಿಲ್ಲ. ಇದನ್ನು ಸ್ವೀಕರಿಸಲಾಗುವುದಿಲ್ಲ. ಆದುದರಿಂದ ಸರಕಾರಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರ ಮತ್ತು ಬಾಲಕಿಯರ ನಡುವೆ ಪರೀಕ್ಷಾ ಆತಂಕದಲ್ಲಿ ವ್ಯತ್ಯಾಸ ಕಂಡುಬರುತ್ತದೆ.

**ಚರ್ಚಿಸುವಿಕೆ :** ಮೇಲಿನ ಕೋಷ್ಟಕ 1 ರಿಂದ ತಿಳಿದು ಬರುವುದೇ ನೆಂದರೆ, ಸರಕಾರಿ ಪ್ರೌಢಶಾಲೆ ಬಾಲಕರಲ್ಲಿ ಪರೀಕ್ಷಾ ಆತಂಕ ಹೆಚ್ಚಾಗಿದ್ದು, ಇದಕ್ಕೆ ಬಹುಶಃ ಕಾರಣವೆಂದರೆ ಬಾಲಕರಿಗೆ ಅವರ ಕುಟುಂಬದ ಮುಂದಿನ ಜವಾಬ್ದಾರಿಗಳು ಹೆಚ್ಚಾಗಿರುವುದು. ಉದಾ : ಕುಟುಂಬದ ಆರ್ಥಿಕ ಸ್ಥಿತಿ ಸರಿಯಾಗಿ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಬಾಲಕರು ತಮ್ಮ ಓದಿನ ಜೊತೆಗೆ ಕುಟುಂಬದ ಕಡೆಗೆ ಒಲುವು ಹೆಚ್ಚಾಗಿರುತ್ತದೆ. ಇಂತಹ ಪರೀಕ್ಷೆಗಳ ಆತಂಕಕ್ಕೆ ಒಳಗಾಗಬಹುದೆಂಬುದನ್ನು ತಿಳಿದುಬರುವುದು.

**ಕೋಷ್ಟಕ : 2**

**ಖಾಸಗಿ ಪ್ರೌಢ ಶಾಲೆಯ ಎಸ್.ಎಸ್.ಎಲ್.ಸಿ ಬಾಲಕರು ಮತ್ತು ಬಾಲಕಿಯರು**

| | ನಮೂನೆ Sample | ಸರಾಸರಿ Mean | ಮಾನಕ ವಿಚಲನೆ S.D. | 't' ಕೋಷ್ಟಕ ಮೌಲ್ಯಾಂಕನ | 't' ದತ್ತಾಂಶದ ಮೌಲ್ಯಾಂಕನ | ಗಮ ನಾರ್ಹತೆ |
|---|---|---|---|---|---|---|
| ಬಾಲಕರು | 25 | 16.28 | 4.178516 | 5.32 | 2796969 | * |
| ಬಾಲಕಿಯರು | 25 | 19.2 | 3.041318 | | | |

* Significant at 0.01 level

**ಅರ್ಥೈಸುವಿಕೆ :** ಮೇಲಿನ ಕೋಷ್ಟಕ 2 ರಿಂದ ತಿಳಿದು ಬರುವುದೇನೆಂದರೆ, ಕಂಡುಹಿಡಿದ 't' ಬೆಲೆಯು table 't' ಬೆಲೆಗಿಂತ ಹೆಚ್ಚಾಗಿರುವುದರಿಂದ ಇಲ್ಲಿ ಶೂನ್ಯ ಪ್ರಾಕಲ್ಪನೆಯಾಗಿದೆ. ಖಾಸಗಿ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರು ಮತ್ತು ಬಾಲಕಿಯರ ಪರೀಕ್ಷಾ ಆತಂಕ ನಡುವೆ ಯಾವುದೇ ಪರಿಣಾಮಕಾರಿ ವ್ಯತ್ಯಾಸವಿಲ್ಲ ಎಂಬುದನ್ನು ಸ್ವೀಕರಿಸಲಾಗುವುದಿಲ್ಲ.

**ಚರ್ಚಿಸುವಿಕೆ :** ಖಾಸಗಿ ಶಾಲೆಯು ಎಸ್.ಎಸ್.ಎಲ್.ಸಿ. ಬಾಲಕಿಯರಲ್ಲಿ ಪರೀಕ್ಷಾ ಆತಂಕ ಹೆಚ್ಚಾಗಲು ಕಾರಣಗಳಿವೆ. ಇಲ್ಲಿ ಬಾಲಕಿಯರಲ್ಲಿ ಅತೀಯಾದ ಹಣ ಖರ್ಚು ಮಾಡಿ ಶಿಕ್ಷಣ ಕೊಡಿಸುವುದ ರಿಂದ ಮನೆಯಲ್ಲಿ ಅತೀಯಾದ ಒತ್ತಡ ಹೇರುವುದರಿಂದ ಒಂದು ಕಾರಣವಾದರೆ, ಖಾಸಗಿ ಶಾಲೆಯಾದುದರಿಂದ ಜಾಸ್ತಿ ಫಲಿತಾಂಶ ಬರಲೇಬೇಕೆಂಬುದು ಕೂಡಾ ಇನ್ನೊಂದು ಕಾರಣವಾಗಿದೆ. ಅದೇ ರೀತಿ ಬಾಲಕೀಯರ ಈ ವಯಸ್ಸಿನಲ್ಲಿ ಆರೋಗ್ಯದಲ್ಲಿ ಏರುಪೇರಾಗುವುದರಿಂದ ಕೂಡಾ ಆತಂಕವನ್ನು ಎದುರಿಸಬಹುದು.

**ಕೋಷ್ಟಕ –3 : ಸರಕಾರಿ ಪ್ರೌಢ ಶಾಲೆಯ ಎಸ್.ಎಸ್.ಎಲ್.ಸಿ ಬಾಲಕರು ಮತ್ತು ಬಾಲಕಿಯರು**

| | ನಮೂನೆ Sample | ಸರಾಸರಿ Mean | ಮಾನಕ ವಿಚಲನೆ S.D. | 't' ಕೋಷ್ಟಕ ಮೌಲ್ಯಾಂಕನ | 't' ದತ್ತಾಂಶದ ಮೌಲ್ಯಾಂಕನ | ಗಮ ನಾರ್ಹತೆ |
|---|---|---|---|---|---|---|
| ಸ.ಶಾಲೆಯ ಬಾಲಕರು | 25 | 17.39 | 4.111772 | 2.18 | 2.796939 | NS |
| ಖಾ.ಶಾಲೆಯ ಬಾಲಕರು | 25 | 16.28 | 4.178516 | | | |

* Significant at 0.01 level

**ಅರ್ಥೈಸುವಿಕೆ :** ಮೇಲಿನ ಕೋಷ್ಟಕ 3 ರಿಂದ ತಿಳಿದು ಬರುವುದೇನೆಂದರೆ, ಕಂಡುಹಿಡಿದ 't' ಬೆಲೆ table 't' ಬೆಲೆಗಿಂತ ಕಡಿಮೆ ಇರುವುದರಿಂದ, ಶೂನ್ಯ ಪ್ರಾಕಲ್ಪನೆ "ಸರಕಾರಿ ಶಾಲೆಯ ಮತ್ತು ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರಲ್ಲಿ ಪರೀಕ್ಷಾ ಆತಂಕದ ನಡುವೆ ಯಾವುದೇ ಪರಿಣಾಮಕಾರಿ ವ್ಯತ್ಯಾಸವಿಲ್ಲ" ಇದನ್ನು ನಿರಾಕರಿಸಲು ಸಾಧ್ಯವಿಲ್ಲ. ಆದ್ದರಿಂದ ಸರಕಾರಿ ಮತ್ತು ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರ ಪರೀಕ್ಷಾ ಆತಂಕದಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವದಿಲ್ಲ.

**ಚರ್ಚಿಸುವಿಕೆ :** ಸರಕಾರಿ ಮತ್ತು ಖಾಸಗಿ ಶಾಲೆಯು ಎಸ್.ಎಸ್.ಎಲ್.ಸಿ. ಬಾಲಕರ ಪರೀಕ್ಷಾ ಆತಂಕದಲ್ಲಿ ಯಾವುದೇ ಪರಿಣಾಮಕಾರಿ ವ್ಯತ್ಯಾಸವಿರುವುದಿಲ್ಲ. ಏಕೆಂದರೆ ಇವರು ಬಾಲಕರವಿರುವುದ ರಿಂದ ಸ್ವತಂತ್ರವಾಗಿ ಬಿಟ್ಟಿರುತ್ತಾರೆ. ಇವರು ಯಾರ ಮಾತಿಗೂ ಒತ್ತುಕೊಡುವುದಿಲ್ಲ. ಅದೇ ಇವರ ಇಬ್ಬರು ವಯಸ್ಸು ಒಂದೆ ಆಗಿರುವುದರಿಂದ ಇವರಲ್ಲಿ ವ್ಯತ್ಯಾಸ ಇಲ್ಲದೇ ಇರಬಹುದು. ಇಡೀ ವರ್ಷ ಆಟ, ಮೋಜು, ಮಸ್ತಿ ಅಂತ ಕಾಲಹರಣ ಮಾಡುತ್ತಾರೆ. ಆದರೆ ಪರೀಕ್ಷಾ ಸಮಯದಲ್ಲಿ ಯಾವ ವಿಷಯ ಯಾವ ಸಮಯಕ್ಕೆ ಯಾವದು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಓದಬೇಕೆಂಬುದು ಅವರು ಆತಂಕಕ್ಕೆ ಒಳಗಾಗುತ್ತಾರೆ. ಇದು ಕೂಡಾ ಕಾರಣವಾಗಿರಬಹುದು.

**ಕೋಷ್ಟಕ –4 : ಸರಕಾರಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕಿಯರ ಮತ್ತು ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕಿಯರು**

| | ನಮೂನೆ Sample | ಸರಾಸರಿ Mean | ಮಾನಕ ವಿಚಲನೆ S.D. | 't' ಕೋಷ್ಟಕ ಮೌಲ್ಯಾಂಕನ | 't' ದತ್ತಾಂಶದ ಮೌಲ್ಯಾಂಕನ | ಗಮ ನಾರ್ಹತೆ |
|---|---|---|---|---|---|---|
| ಸ.ಶಾಲೆಯ ಬಾಲಕರು | 25 | 14.0 | 4.467289 | 8.872 | 2.796939 | * |
| ಖಾ.ಶಾಲೆಯ ಬಾಲಕರು | 25 | 19.2 | 3.041381 | | | |

* Significant at 0.01 level

**ಅರ್ಥೈಸುವಿಕೆ :** ಮೇಲಿನ ಕೋಷ್ಟಕ 4 ರಿಂದ ತಿಳಿದು ಬರುವುದೇನೆಂದರೆ, ಕಂಡುಹಿಡಿದ 't' ಬೆಲೆ 't' table ಬೆಲೆಗಿಂತ ಹೆಚ್ಚಾಗಿರುವುದರಿಂದ ಶೂನ್ಯ ಪ್ರಾಕಲ್ಪನೆ. "ಸರಕಾರಿ ಮತ್ತು ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರ ಮತ್ತು ಬಾಲಕಿಯರಲ್ಲಿ ಪರೀಕ್ಷಾ ಆತಂಕದ ನಡುವೆ ಯಾವುದೇ ಪರಿಣಾಮಕಾರಿ ವ್ಯತ್ಯಾಸ ಇಲ್ಲ" ಇದನ್ನು ಸ್ವೀಕರಿಸಲಾಗುವುದಿಲ್ಲ. ಆದ್ದರಿಂದ ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕಿಯರಲ್ಲಿ ಪರೀಕ್ಷಾ ಆತಂಕ ಹೆಚ್ಚಾಗಿ ಕಂಡುಬಂದಿದೆ.

**ಚರ್ಚಿಸುವಿಕೆ :** ಪೋಷಕರ ಅತೀಯಾದ ಒತ್ತಡ ಖಾಸಗಿ ಸಂಸ್ಥೆಯಿರುವುದರಿಂದ ತಮ್ಮ ಶಿಕ್ಷಣ ಸಂಸ್ಥೆ ಪ್ರಥಮ ರ್‍ಯಾಂಕ್ ಬರಬೇಕೆಂಬ ಹಂಬಲದಿಂದ ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರುತ್ತಾರೆ. ಅವರಿಗೆ ಸ್ವತಂತ್ರವಾಗಿ ಬಿಡುವುದಿಲ್ಲ. ಪೋಷಕರು ಅತೀಯಾದ ಹಣ ಖರ್ಚು ಮಾಡಿದ್ದ ನೀನು ಮೊದಲ ಸ್ಥಾನ ಬರಬೇಕು. ಈ ರೀತಿ0ಯಾಗಿ ಹಲವಾರು ಕಡೆಯಿಂದ ಎಸ್.ಎಸ್.ಎಲ್.ಸಿ. ಬಾಲಕಿಯರ ಮೇಲೆ ಒತ್ತಡ ಹೇರುವುದರಿಂದ ಈ ರೀತಿ ಪರೀಕ್ಷಾ ಆತಂಕಕ್ಕೆ ಒಳಗಾಗಿರುತ್ತಾರೆ.

## ಉಪಸಂಹಾರ

ಈ ಸಂಶೋಧನೆಯಿಂದ ತಿಳಿದು ಬರುವುದೇನೆಂದರೆ, ವಿಜಯಪುರ ನಗರದ ಸರಕಾರಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರ ಹಾಗೂ ಬಾಲಕಿಯರ ಪರೀಕ್ಷಾ ಆತಂಕದಲ್ಲಿ ವ್ಯತ್ಯಾಸವಿರುವುದಿಲ್ಲ. ಸರಕಾರಿ ಶಾಲೆಯಲ್ಲಿ ಬಾಲಕರು ಜಾಸ್ತಿ ಪರೀಕ್ಷಾ ಆತಂಕಕ್ಕೆ ಒಳಗಾಗಿರುವುದು ಕಂಡುಬಂದಿದೆ. ಅದೇರೀತಿಯಾಗಿ ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರ ಮತ್ತು ಬಾಲಕಿಯರ ಪರೀಕ್ಷಾ ಆತಂಕದ ನಡುವೆ ಯಾವುದೇ ಪರಿಣಾಮಕಾರಿ ವ್ಯತ್ಯಾಸವಿಲ್ಲ ಹಾಗೆಯೇ ಸರಕಾರಿ ಶಾಲೆಯ ಮತ್ತು ಖಾಸಗಿ ಶಾಲೆಯ ಎಸ್.ಎಸ್.ಎಲ್.ಸಿ. ಬಾಲಕರಲ್ಲಿ ಪರೀಕ್ಷಾ ಆತಂಕದ ನಡುವೆ ಯಾವುದೇ ಪರಿಣಾಮಕಾರಿ ವ್ಯತ್ಯಾಸವಿಲ್ಲ. ಅದೇರೀತಿಯಾಗಿ ಸರಕಾರಿ ಶಾಲೆಯ ಮತ್ತು ಖಾಸಗಿ ಎಸ್.ಎಸ್.ಎಲ್.ಸಿ. ಬಾಲಕಿಯರಲ್ಲಿ ಪರೀಕ್ಷಾ ಆತಂಕದ ನಡುವೆ ಯಾವುದೇ ವ್ಯತ್ಯಾಸವಿಲ್ಲ ಎಂಬುದನ್ನು ತಿಳಿದು ಬಂದಿದು. ಈ ಪರೀಕ್ಷಾ ಆತಂಕ ಬೇಕು ಆದರೆ ಅತಿಯಾಗಬಾರದು. ಏಕೆಂದರೆ ಪರೀಕ್ಷಾ ಆತಂಕ ಅತಿಯಾದಾಗ ಹಲವಾರು ಸಮಸ್ಯೆಗಳನ್ನು ನಾವು ನೋಡಿದ್ದೆ ಕೇಳಿದ್ದೆ, ಅದನ್ನು ಎಷ್ಟು ವಿದ್ಯಾರ್ಥಿಗಳು ಅನುಭವಿಸಿದ್ದಾರೆ. ಪರೀಕ್ಷಾ ಆತಂಕವು ಯಾವುದೇ ರೀತಿ ಅಪಾಯವಾಗದ ಹಾಗೆ ಶಿಕ್ಷಕರು ಪೋಷಕರು ಸಮಾಜದವರೂ ಮೇಲೆ ಆಗಿ ವಿದ್ಯಾರ್ಥಿಗಳು ಅದನ್ನು ಸರಳವಾಗಿ ಸರಿದೋಗಿಸಿಕೊಂಡು ಹೋಗಬೇಕು.

## ಪರೀಕ್ಷಾ ಆತಂಕ ಕಡಿಮೆಗೊಳಿಸಲು ಸಲಹೆಗಳು

**1. ಪೋಷಕರಿಗೆ ಸಲಹೆಗಳು :** ಮಕ್ಕಳಿಗೆ ಊಟ ಉಪಹಾರದ ಬಗ್ಗೆ ಯಾವ ಆಹಾರ ತಿನ್ನಬೇಕು ಎಂಬುದನ್ನು ಅರಿತಿರಬೇಕು (ಪೌಷ್ಠಿಕ ಆಹಾರ ನೀಡಬೇಕು), ಆಗಾಗ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳು ಬಿಡಿ, ಓದಲು ಸೂಕ್ತ ಸ್ಥಳ ಅಂದರೆ ಸರಿಯಾದ ಗಾಳಿ ಬೆಳಕು ಇರುವ ಜಾಗದಲ್ಲಿ ಓದಲು ವ್ಯವಸ್ಥೆ ಮಾಡಬೇಕು, ಪರೀಕ್ಷೆ ಅವರದೇ ಆದ ಜವಾಬ್ದಾರಿ ಎಂದು ಬಿಂಬಿಸದೇ ಆ ಜವಾಬ್ದಾರಿಯಲ್ಲಿ ನೀವು ಪಾಲುದಾರರು ಎಂದು ತೋರಿಸಿಕೊಳ್ಳಿ, ಮಕ್ಕಳ ಮೇಲೆ ಒತ್ತಡವನ್ನು ಹೇರದೇ ಅವರ ಬೆಂಬಲಕ್ಕೆ ಸದಾ ಸಿದ್ಧರಾಗಿರಿ, ಮಕ್ಕಳ ಆರೋಗ್ಯದ ಮೇಲೆ ಸದಾ ಗಮನವಿರಲಿ, ಮಕ್ಕಳನ್ನು ಯಾರ ಜೊತೆಗೂ ಹೊಲಿಸಿ ಮಾತನಾಡಬಾರದು. ಇವು ಅವರ ಉತ್ಸಾಹಕ್ಕೆ ತಣ್ಣೀರೆರಚುತ್ತದೆ. ಎಲ್ಲರಿಗೂ ಅವರದೇ ಆದ ಸಾಮರ್ಥ್ಯವಿರುತ್ತದೆ. ಮಕ್ಕಳನ್ನು ಯಾವಾಗಲೂ ಪುಸ್ತಕದ ಜತೆ ಇರಲು ಬೀಡದೆ ಪುಸ್ತಕ ಓದುವುದರ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರಣೆ ನೀಡಬೇಕು.

**2. ಶಿಕ್ಷಕರಿಗೆ ಸಲಹೆಗಳು :** ವಿದ್ಯಾರ್ಥಿಗಳನ್ನು ಅವರವರ ಬೌದ್ಧಿಕ ಸಾಮರ್ಥ್ಯಕ್ಕನುಗುಣವಾಗಿ ಬೋಧನೆ ಮಾಡಬೇಕು. ಕಾಲ ಕಾಲಕ್ಕೆ ಘಟಕ ಪರೀಕ್ಷೆಗಳು ಹಾಗೂ ಕಿರುಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು. ಸಂದರ್ಭಕ್ಕೆ ತಕ್ಕಂತೆ ವಿವಿಧ ಬೋಧನಾಪಕರಣಗಳನ್ನು ಉಪಯೋಗಿಸಬೇಕು. ವಿದ್ಯಾರ್ಥಿ ಗಳಲ್ಲಿ ಪಕ್ಷಪಾತ ಮಾಡಬಾರದು. ಕಠಿಣವಾದ ವಿಷಯಗಳನ್ನು ವೇಳಾ ಪತ್ರಿಕೆಯಲ್ಲಿ ಮೊದಲನೇಯ ಅವಧಿಯಲ್ಲಿಡಬೇಕು. ವಿದ್ಯಾರ್ಥಿಗಳಲ್ಲಿ ಪರೀಕ್ಷೆಯನ್ನು ಯಾವ ರೀತಿ ಬರೆಯಬೇಕೆಂದು ಆಗಾಗ ತಿಳಿಸಿಕೊಡಬೇಕು. ಹಿಂದಿನ ಪ್ರಶ್ನೆ ಪತ್ರಿಕೆಗಳನ್ನು ಉಳಿದಂತಹ ಸಮಯದಲ್ಲಿ ಬಿಡಿಸಿ, ಅದರ ಸಲಹೆಗಳನ್ನು ನೀಡಬೇಕು. ಉತ್ತಮ ಗ್ರಂಥಾಲಯದ ವ್ಯವಸ್ಥೆ ಮಾಡಿಕೊಡಬೇಕು. ಮಕ್ಕಳ ಜೊತೆ, ಸ್ನೇಹಿತ, ಮಾರ್ಗದರ್ಶಕ ಹಾಗೂ ತತ್ವಜ್ಞಾನಿಯಂತೆ ವರ್ತಿಸಬೇಕು. ಶಿಕ್ಷಕರ ವ್ಯಕ್ತಿತ್ವ ವಿದ್ಯಾರ್ಥಿಗಳಿಗೆ ಮಾದರಿಯಾಗಿರಬೇಕು. ವಿಷಯದ ಮಧ್ಯ ಮಧ್ಯ ವಿಶ್ರಾಂತಿ ಇರಬೇಕು. ಮುಕ್ತ ಚರ್ಚೆಗೆ ಅವಕಾಶ ನೀಡಬೇಕು. ವಿದ್ಯಾರ್ಥಿಗಳಲ್ಲಿ ಆತಂಕದ ಮನೋಭಾವನೆಯನ್ನು ಹೋಗಲಾಡಿಸಬೇಕು.

**3. ವಿದ್ಯಾರ್ಥಿಗಳಿಗೆ ಸಲಹೆಗಳು :** "ಓದಿದಾ ಓದು ತಾ ಮೇವ ಕಬ್ಬಿನ ಸಿಪ್ಪೆ. ಓದಿ ನೋಡಲರಿದಿಹರೆ ಸಿಪ್ಪೆ ಕಬ್ಬಾದಂತೆ ಕಾಣೋ ಸರ್ವಜ್ಞ" ಎನ್ನುವಂತೆ ಕಠಿಣವಾದ ವಿಷಯವನ್ನು ಅರ್ಥ ಮಾಡಿಕೊಂಡು ಮನನ ಮಾಡಿದಾಗ ಅದು ಬಹಳ ದಿನ ನಮ್ಮ ನೆನಪಿನಾಳದಲ್ಲಿ ಉಳಿಯುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಪರೀಕ್ಷಾ ತಯಾರಿಗಾಗಿ ಕೆಲವೊಂದು ಸಲಹೆಗಳು ಈ ಕೆಳಗಿನಂತಿವೆ. 1. ಗ್ರಹಿಕೆ ಮಾಡಿಕೊಳ್ಳಬೇಕು. 2. ವಿಷಯದ ಮೇಲೆ ಪ್ರೀತಿ, ಗೌರವವಿರಬೇಕು. 3. ಪರಿಶ್ರಮ ಪಡಬೇಕು. 4. ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. 5. ಸರಿಯಾಗಿ ನಿದ್ರೆ ಮಾಡಬೇಕು. 6. ಗುರಿ ಇರಲೇಬೇಕು. 7. ಮಲಗಿಕೊಂಡು ಅಭ್ಯಾಸ ಮಾಡಬಾರದು. 8. ಏಕಾಗ್ರತೆಯಿಂದ ಓದಬೇಕು. 9. ವಿಷಯದ ಕುರಿತು ಚರ್ಚೆ ಮಾಡಬೇಕು. 10. ಸರಿಯಾದ ಪ್ರಮಾಣ ನೀರು ಸೇವನೆ ಮಾಡುವುದು ಅವಶ್ಯವಿದೆ. 11. ಆತ್ಮ ವಿಶ್ವಾಸವಿರಬೇಕು. 12. ಸರಿಯಾದ ವೇಳಾಪಟ್ಟಿ ಇರಬೇಕು. 13. ಯಾವುದೇ ಸಮಸ್ಯೆಯನ್ನು ಸಮಾಧಾನದಿಂದ ಬಗೆಹರಿಸಬೇಕು. 14. ಪ್ರತಿಯೊಂದಕ್ಕೂ ಆತಂಕ ಹಾಗೂ ಕೋಪ ಮಾಡಿಕೊಳ್ಳದೆ

– 66ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸಂಶೋಧನೆ RNI REG.NO.KARKAN/2011/38712

# "ಮಾದಕೀಯ ಸನ್ನಿವೇಶಗಳ ಚಿತ್ರಣಗಳನ್ನು ವೀಕ್ಷಿಸುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲಾಗುವ ಪ್ರಭಾವದ ಒಂದು ಅಧ್ಯಯನ"

✍ **ಡಾ. ಪ್ರಕಾಶ ಕೆ. ಬಡಿಗೇರ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.

*ಸಾರಾಂಶ :*

ಈ ಸಂಶೋಧನೆಯು ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖ ಪ್ರಕ್ರಿಯೆಯಾದ ಕಲಿಕೆ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪತ್ತೆಹಚ್ಚುವ ಅಧ್ಯಯನವಾಗಿದೆ. ಈ ಅಧ್ಯಯನದಲ್ಲಿ ಕಲಿಕೆ ಮೇಲೆ ಮಾದಕೀಯ ಸನ್ನಿವೇಶಗಳು ಋಣಾತ್ಮಕ ಪ್ರಭಾವ ಬೀರುತ್ತವೆಯೆಂದು ಕಂಡುಕೊಳ್ಳಲಾಗಿದ್ದು, ಆ ಕುರಿತಾಗಿ ಸರಕಾರವು ಕೆಲವು ನೀತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ವಿಶೇಷವಾಗಿ ವಿದ್ಯಾರ್ಥಿಗಳ ಪಾಲಕರು, ಪೋಷಕರು, ಶಿಕ್ಷಕರು ಜೊತೆಗೆ ಸಮಾಜವೂ ಕೂಡ ವಿದ್ಯಾರ್ಥಿಗಳ ಮೇಲೆ ವಿಶೇಷ ಕಾಳಜಿ ವಹಿಸಬೇಕು.

## ಪೀಠಿಕೆ

**'ಕಲಿಕೆ'** ಎಂಬುದು ಒಂದು ಸಂಕೀರ್ಣ ಪರಿಕಲ್ಪನೆಯಾಗಿದೆ. ಕಲಿಕೆಯ ಮೇಲೆ ಅನೇಕಾನೇಕ ಕಾರಕಾಂಶಗಳು ಪ್ರಭಾವ ಬೀರುತ್ತದೆ. ಈ ಕಾರಕಾಂಶಗಳು ಎಲ್ಲಾ ಕಾಲಗಳಲ್ಲಿ ಒಂದೇ ರೀತಿಯದ್ದಾಗಿರುವುದಿಲ್ಲ.

ಪ್ರಸ್ತುತ ಸಾಮಾಜಿಕ ಸನ್ನಿವೇಶಗಳಲ್ಲಿ ಸಮೂಹ ಮಾಧ್ಯಮ ಮತ್ತು ಅವುಗಳ ಬಿತ್ತರಿಸುವ ಕಾರ್ಯಕ್ರಮಗಳು ಕಲಿಕೆಯ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಲ್ಲೊಂದಾಗಿದೆ. ಈ ಹಿನ್ನಲೆಯಲ್ಲಿ ಸಮೂಹ ಮಾಧ್ಯಮಗಳಲ್ಲಿ ಕಂಡು ಬರುವ ಮಾದಕೀಯ ಸನ್ನಿವೇಶಗಳು ಹದಿಹರೆಯದ ಅಥವಾ ತಾರುಣ್ಯಾವಸ್ಥೆಯಲ್ಲಿರುವ ವಿದ್ಯಾರ್ಥಿನಿ-ವಿದ್ಯಾರ್ಥಿಗಳ ಮೇಲೆ ಅಥವಾ ಅವರ ಕಲಿಕೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ. ಆದ್ದರಿಂದ ಮಾದಕೀಯ ಸನ್ನಿವೇಶಗಳು ಕಲಿಕೆಯ ಮೇಲೆ ಪ್ರಭಾವಬೀರುವ ಪ್ರಸ್ತುತ ಕಾರಕಾಂಶಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.

## ಅಧ್ಯಯನದ ಮಹತ್ವ

ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾದ ಅನುವಂಶೀಯತೆ, ಕುಟುಂಬ, ವೈಯಕ್ತಿಕ ಭಿನ್ನತೆಗಳು, ಪರಿಸರ, ಸಮೂಹ ಮಾಧ್ಯಮಗಳು ಮತ್ತು ಮಾದಕ ಪದಾರ್ಥಗಳ ಸೇವನೆ ಇತ್ಯಾದಿ ವಿಷಯಗಳ ಬಗ್ಗೆ ಸಂಶೋಧನೆ ಕೈಗೊಳ್ಳಲಾಗಿದೆ. ಆದರೆ, ಕಲಿಕೆಯ ಮೇಲೆ ಮಾದಕೀಯ ಸನ್ನಿವೇಶಗಳ ಪ್ರಭಾವ ಹಾಗೂ ಆ ಪರಿಣಾಮದ ತೀವ್ರತೆಯ ಕುರಿತು ಬೆಳಕು ಚಲ್ಲದೇ ಇರುವ ಕಾರಣ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

## ಅಧ್ಯಯನದ ಶೀರ್ಷಿಕೆ

"ಮಾದಕೀಯ ಸನ್ನಿವೇಶಗಳ ಚಿತ್ರಣಗಳನ್ನು ವೀಕ್ಷಿಸುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲಾಗುವ ಪ್ರಭಾವದ ಒಂದು ಅಧ್ಯಯನ."

## ಅಧ್ಯಯನದ ಉದ್ದೇಶಗಳು

1. ಮಾದಕೀಯ ಸನ್ನಿವೇಶಗಳನ್ನು ವೀಕ್ಷಿಸುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲಾಗುವ ಪ್ರಭಾವವನ್ನು ಕಂಡುಕೊಳ್ಳುವುದು.
2. ಮಾದಕೀಯ ಸನ್ನಿವೇಶಗಳ ಚಿತ್ರಣಗಳನ್ನು ವೀಕ್ಷಿಸುವುದರಿಂದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಕಲಿಕೆಯ ಮೇಲಾಗುವ ಪ್ರಭಾವದ ಅಧ್ಯಯನ ಮಾಡುವುದು.
3. ಮಾದಕೀಯ ಸನ್ನಿವೇಶಗಳನ್ನು ವೀಕ್ಷಿಸುವುದರಿಂದ ಪ್ರದೇಶ ಮತ್ತು ನಗರ ಪ್ರದೇಶದವರ ಮೇಲಾಗುವ ಪ್ರಭಾವವನ್ನು ಅಧ್ಯಯನ ಮಾಡುವುದು.
4. ಮಾದಕೀಯ ಸನ್ನಿವೇಶಗಳನ್ನು ವೀಕ್ಷಿಸುವುದರಿಂದ ಸರಕಾರಿ ಮತ್ತು ಖಾಸಗಿ ಶಾಲೆಯ ವಿದ್ಯಾರ್ಥಿಗಳ ಮೇಲಾಗುವ ಪ್ರಭಾವವನ್ನು ತಿಳಿಯುವುದು.

## ಅಧ್ಯಯನದ ಪ್ರಾಕಲ್ಪನೆಗಳು

1. ಮಾದಕೀಯ ಸನ್ನಿವೇಶಗಳ ಚಿತ್ರಣಗಳನ್ನು ವೀಕ್ಷಿಸುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಪ್ರಭಾವದ ಮೇಲಿನ ಪ್ರತಿಕ್ರಿಯಯಲ್ಲಿ ನಗರ ಮತ್ತು ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.
2. ಮಾದಕೀಯ ಸನ್ನಿವೇಶಗಳ ಚಿತ್ರಣಗಳನ್ನು ವೀಕ್ಷಿಸುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಪ್ರಭಾವದ ಮೇಲಿನ ಪ್ರತಿಕ್ರಿಯೆಯಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಲ್ಲಿ ಯಾವುದೇ ವ್ಯತ್ಯಾಸವಿಲ್ಲ.
3. ಮಾದಕೀಯ ಸನ್ನಿವೇಶಗಳನ್ನು ವೀಕ್ಷಿಸುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಪ್ರಭಾವದ ಮೇಲಿನ ಪ್ರತಿಕ್ರಿಯೆಯಲ್ಲಿ ಸರಕಾರಿ ಮತ್ತು ಖಾಸಗಿ ಶಾಲಾ ವಿದ್ಯಾರ್ಥಿಗಳಲ್ಲಿ ವ್ಯತ್ಯಾಸವಿಲ್ಲ.

## ಅಧ್ಯಯನದಲ್ಲಿ ಬಳಸಿದ ಪದಗಳ ಕಾರ್ಯಾತ್ಮಕ ವ್ಯಾಖ್ಯಾನ

**1. ಮಾದಕೀಯ ಸನ್ನಿವೇಶಗಳ ಚಿತ್ರಣಗಳು :** ಸಂಶೋಧನೆಯಲ್ಲಿ ಮಾದಕೀಯ ಸನ್ನಿವೇಶಗಳೆಂದರೆ, ಮಾದಕ ವಸ್ತುಗಳ ಸೇವನೆಯ ಸನ್ನಿವೇಶಗಳು ಮತ್ತು ಲೈಂಗಿಕ ಪ್ರಚೋದಕ ಮಾದಕೀಯ ಸನ್ನಿವೇಶಗಳ ಎಂದು ಪರಿಗಣಿಸಲಾಗಿದೆ.

**2. ಮಾದಕೀಯ ಸನ್ನಿವೇಶಗಳ ಚಿತ್ರಣಗಳ ವೀಕ್ಷಣೆ :** ಇಲ್ಲಿ ವಿದ್ಯಾರ್ಥಿಗಳು ಸಮಾಜದಲ್ಲಿ ಸಾಮಾನ್ಯವಾಗಿ ಸಮೂಹ-ಮಾಧ್ಯಮಗಳಲ್ಲಿ ವೀಕ್ಷಿಸುವ ಮಾದಕೀಯ ಸನ್ನಿವೇಶಗಳನ್ನು ಮಾದಕೀಯ ಸನ್ನಿವೇಶಗಳ ವೀಕ್ಷಣೆಯೆಂದು ಪರಿಗಣಿಸಲಾಗಿದೆ.

**3. ವಿದ್ಯಾರ್ಥಿಗಳ ಕಲಿಕೆಯ ಮೇಲೆ ಆಗುವ ಪ್ರಭಾವ :** ವಿದ್ಯಾರ್ಥಿಗಳ ಕಲಿಕೆಯ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ. ಇಲ್ಲಿ ಮಾದಕೀಯ ಸನ್ನಿವೇಶಗಳನ್ನು ಮಾತ್ರ ಕಲಿಕೆಯ ಮೇಲೆ ಪ್ರಭಾವ ಬೀರುತ್ತವೆ ಎಂದು ಪರಿಗಣಿಸಲಾಗಿದೆ.

## ಅಧ್ಯಯನದ ವಿನ್ಯಾಸ

**ವಿಧಾನ :** ಕೈಗೊಂಡಿರುವ ಸಂಶೋಧನೆಯು ಸಮೀಕ್ಷಾ ವಿಧಾನದ ಸಂಶೋಧನೆಯಾಗಿರುತ್ತದೆ. ಇದು ವರ್ಣನಾತ್ಮಕ ಸಮೀಕ್ಷಾ ಪದ್ಧತಿಯ ಪರಿಮಾಣಾತ್ಮಕ ದತ್ತಾಂಶ ಸಮೀಕ್ಷೆಯಾಗಿದೆ.

## ಪ್ರತಿಚಯನ

ವಿಜಯಪುರ ಜಿಲ್ಲೆಯ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಸಮಷ್ಟಿ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಎಂದು ಪರಿಗಣಿಸಲಾಗಿದೆ. ಅದರಲ್ಲಿ ಒಟ್ಟು ಪ್ರತಿಚಯನವನ್ನಾಗಿ ಪ್ರೌಢ ಶಾಲೆಯ 9 ನೇ ತರಗತಿಯ 100 ವಿದ್ಯಾರ್ಥಿಗಳನ್ನು ಸರಳ ಯಾದೃಚ್ಛಿಕ ವಿಧಾನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ದುಕೊಂಡ 100 ವಿದ್ಯಾರ್ಥಿಗಳನ್ನು ಸರಕಾರಿ ಶಾಲೆ ಮತ್ತು ಖಾಸಗಿ ಶಾಲೆ, ಗಂಡು–ಹೆಣ್ಣು, ಗ್ರಾಮೀಣ–ನಗರವೆಂದು ವರ್ಗೀಕರಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ನಮೂನೆಯ ಆಯ್ಕೆ**
**100 ವಿದ್ಯಾರ್ಥಿಗಳು**

**50 ನಗರ ವಿದ್ಯಾರ್ಥಿಗಳು** | **50 ಗ್ರಾಮೀಣ ವಿದ್ಯಾರ್ಥಿಗಳು**

**25 ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು** | **25 ಖಾಸಗಿ ಪ್ರೌಢಶಾಲೆಯ ವಿದ್ಯಾರ್ಥಿಗಳು** | **25 ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು** | **25 ಖಾಸಗಿ ಪ್ರೌಢಶಾಲೆಯ ವಿದ್ಯಾರ್ಥಿಗಳು**

**13 (ಗಂ.) 12 (ಹೆ.)** | **13 (ಗಂ.) 12 (ಹೆ.)** | **13 (ಗಂ.) 12 (ಹೆ.)** | **13 (ಗಂ.) 12 (ಹೆ.)**

## ಅಧ್ಯಯನದಲ್ಲಿ ಪರಿಗಣಿಸಿದ ಚಲಕಗಳು

1. ಸ್ವತಂತ್ರ ಚಲಕ – ಮಾದಕೀಯ ಸನ್ನಿವೇಶದ ಚಿತ್ರಣಗಳು.
2. ಪರತಂತ್ರ ಚಲಕ – ವಿದ್ಯಾರ್ಥಿಗಳ ಕಲಿಕೆ.
3. ಮಧ್ಯವರ್ತಿ ಚಲಕ – ಗಂಡು–ಹೆಣ್ಣು (ಲಿಂಗ), ನಗರ ಮತ್ತು ಗ್ರಾಮೀಣ (ಸ್ಥಳ) & ಶಾಲೆ ವಿಧ

## ಸಾಧನಗಳು

ಮಾದಕೀಯ ಸನ್ನಿವೇಶಗಳು ಕಲಿಕೆ ಮೇಲೆ ಬೀರುವ ಪ್ರಭಾವವನ್ನು ಕಂಡು ಹಿಡಿಯಲು ಈ ಕೆಳಗಿನ ಎರಡು ರೀತಿಯ ಸಾಧನೆಗಳನ್ನು ಬಳಸಿಕೊಳ್ಳಲಾಗಿದೆ.

1. ಆಯ್ದ ಮಾದಕೀಯ ಸನ್ನಿವೇಶಗಳ ವೀಡಿಯೋ ಕ್ಲಿಪಿಂಗ್ ಮತ್ತು ದೃಶ್ಯಾವಳಿಗಳು
2. ಸಂಶೋಧಕರೇ ಸ್ವತಃ ಸಿದ್ದ ಪಡಿಸಿದ ಪ್ರಶ್ನಾವಳಿ.

**ಅಶ್ಲೀಲ ದೃಶ್ಯಗಳು**

**ವಿಡೀಯೋ ಕ್ಲಿಪಿಂಗ್ ದೃಶ್ಯಗಳು** → **9. ಅಶ್ಲೀಲ ವಿಡೀಯೋ ದೃಶ್ಯಗಳು**

**ಚಿತ್ರಗಳು** (Photos ) → **7. ಅಶ್ಲೀಲ ಭಾವಚಿತ್ರಗಳು**

**ಮಾದಕ ಪದಾರ್ಥಗಳ ಸೇವನೆಯ ದೃಶ್ಯಗಳು**

**ಆಯ್ಕೆ ಮಾಡಿದ ವೀಡಿಯೋ ಕ್ಲಿಪಿಂಗ್ ದೃಶ್ಯಗಳು**

1. **ಮಧ್ಯಪಾನಸೇವನೆಯ ದೃಶ್ಯ 1**
2. **ಮಾದಕ ಪದಾರ್ಥಗಳ ಚುಚ್ಚುಮದ್ದುಸೇವನೆಯ ದೃಶ್ಯ 1**
3. **ಧೂಮಪಾನ ಮಾಡುವ ದೃಶ್ಯ–1**
4. **ಮಾದಕ ಪದಾರ್ಥಗಳ ಸೇವನೆ ಮಾಡುತ್ತ ಕ್ಲಬ್ ಡ್ಯಾನ್ಸ್ ಮಾಡುವುದು–1**
5. **ಬೆಲ್ಲಿ ಡ್ಯಾನ್ಸ್ ಮಾಡುವುದು–1**

**ಆಯ್ಕೆ ಮಾಡಿದ ಚಿತ್ರಗಳು** (Photos)

1. **ಧೂಮಪಾನ ಮಾಡುವ ಚಿತ್ರಗಳು** (Photos)**3**
2. **ಅಶ್ಲೀಲ ಚಿತ್ರಗಳು** (Photos) **8**

ವಿಧಾನ 1 : ಮಾದಕೀಯ ಸನ್ನಿವೇಶದ ಚಿತ್ರಣಗಳನ್ನು ಲ್ಯಾಪ್‌ಟಾಪ್ ಮೂಲಕ ವಿದ್ಯಾರ್ಥಿಗಳಿಗೆ ಪ್ರದರ್ಶಿಸಲಾಯಿತು.

ವಿಧಾನ 2 : ಪ್ರಶ್ನಾವಳಿಯನ್ನು ವಿದ್ಯಾರ್ಥಿಗಳಿಗೆ ನೀಡಿ ದತ್ತಾಂಶವನ್ನು ಸಂಗ್ರಹಿಸಲಾಯಿತು.

## ದತ್ತಾಂಶ ವಿಶ್ಲೇಷಣೆ

ದತ್ತಾಂಶ ವಿಶ್ಲೇಷಣೆಗೆ ಶೇಕಡಾವಾರು ವಿಶ್ಲೇಷಣೆಯನ್ನು (Percentage Analysis) ಬಳಸಲಾಯಿತು. ಒಟ್ಟು 25 ಹೇಳಿಕೆಗಳಿದ್ದು, ಪ್ರತಿಯೊಂದು ಹೇಳಿಕೆಯನ್ನು ವಿಶ್ಲೇಷಿಸಿ ಈ ಕೆಳಗಿನಂತೆ ಅರ್ಥೈಸಲಾಗಿದೆ.

**ಕೋಷ್ಟಕ 1 : ಹೇಳಿಕೆ 1: "ನನಗೆ ತರಗತಿಯ ಪಾಠಗಳಿಗಿಂತ ಇಂತಹ (ಅಶ್ಲೀಲ) ಸನ್ನಿವೇಶಗಳು ಹೆಚ್ಚಿನ ಸಂತೋಷ ಕೊಡುತ್ತವೆ.**

| ಆಯ್ಕೆಗಳು | ಪ್ರದೇಶ | | ಲಿಂಗ | | ಶಾಲೆ | |
|---|---|---|---|---|---|---|
| | ಗ್ರಾಮೀಣ | ನಗರ | ಗಂಡು | ಹೆಣ್ಣು | ಸರಕಾರಿ | ಖಾಸಗಿ |
| ಯಾವಾಗಲೂ ಇಲ್ಲ (1) | 23<br>71.9 | 9<br>28.1% | 20<br>62.5% | 12<br>37.5 | 12<br>37.5 | 20<br>62.5 |
| ಕೆಲವೊಮ್ಮೆ (2) | 21<br>38.2 | 34<br>61.8 | 24<br>43.6 | 31<br>56.4 | 32<br>58.2 | 23<br>41.8 |
| ಆಗಾಗ (3) | 6<br>46.2 | 7<br>53.8 | 7<br>53.8 | 6<br>46.2 | 6<br>46.2 | 7<br>53.8 |
| ಯಾವಾಗಲೂ (4) | – | – | – | – | – | – |

ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ, ಈ ಮೇಲಿನ ಹೇಳಿಕೆಗೆ "ಯಾವಾಗಲೂ ಇಲ್ಲ" ಎಂದು ಶೇಕಡಾ 32% ರಷ್ಟು ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡಿರುತ್ತಾರೆ. ಇದರಲ್ಲಿ ನಗರದವರಿಗಿಂತ ಗ್ರಾಮೀಣದವರು ಶೇಕಡಾ 43.8% ರಷ್ಟು ಹೆಚ್ಚಿನ ಪ್ರತಿಕ್ರಿಯೆ ನೀಡಿರುತ್ತಾರೆ. ಇದೇ ಪ್ರತಿಕ್ರಿಯೆಗೆ ಸಂಬಂಧಪಟ್ಟಂತೆ ಹುಡಿಗಿಯರಿಗಿಂತ ಹುಡುಗರು 25% ಹೆಚ್ಚಿಗೆ ಪ್ರತಿಕ್ರಿಯೆ ನೀಡಿರುತ್ತಾರೆ. ಸರ್ಕಾರಿಗಿಂತ ಖಾಸಗಿಯವರು ಶೇ. 25% ಹೆಚ್ಚಿಗೆ ಪ್ರತಿಕ್ರಿಯೆ ನೀಡಿರುತ್ತಾರೆ.

ಈ ಹೇಳಿಕೆಗೆ "ಕೆಲವೊಮ್ಮೆ" ಎಂಬ ಪ್ರತಿಕ್ರಿಯೆಗೆ ಸಂಬಂಧಪಟ್ಟಂತೆ ಶೇ.55% ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡಿರುತ್ತಾರೆ. ಇದರಲ್ಲಿ ಗ್ರಾಮೀಣದವರಿಗಿಂತ ನಗರದವರು ಶೇ.23.6% ರಷ್ಟು ಹೆಚ್ಚಿನ ಪ್ರತಿಕ್ರಿಯೆ ನೀಡಿರುತ್ತಾರೆ. ಹುಡುಗರಿಗಿಂತ ಹುಡಿಗಿಯರು ಶೇ.16.4% ರಷ್ಟು ಹೆಚ್ಚಿಗೆ ಪ್ರತಿಕ್ರಿಯೆ ನೀಡಿರುತ್ತಾರೆ. ಖಾಸಗಿಯವರಿಗಿಂತ ಸರ್ಕಾರಿಯವರು ಶೇ. 16.4 ರಷ್ಟು ಹೆಚ್ಚಿಗೆ ಪ್ರತಿಕ್ರಿಯೆ ನೀಡಿರುತ್ತಾರೆ.

ಇದೇ ಹೇಳಿಕೆಗೆ "ಆಗಾಗ" ಎಂಬ ಪ್ರತಿಕ್ರಿಯೆ ಸಂಬಂಧಪಟ್ಟಂತೆ 20% ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡಿರುತ್ತಾರೆ. ಗ್ರಾಮೀಣದವರಿಗಿಂತ ನಗರದವರು ಶೇ.7.6% ರಷ್ಟು ಹೆಚ್ಚಿಗೆ ಪ್ರತಿಕ್ರಿಯೆ ನೀಡಿರುತ್ತಾರೆ. ಹುಡಿಗಿಯರಿಗಿಂತ ಹುಡುಗರು 7.6 ರಷ್ಟು ಹೆಚ್ಚಿಗೆ ಪ್ರತಿಕ್ರಿಯೆ ನೀಡಿರುತ್ತಾರೆ. ಸರ್ಕಾರಿಯವರಿಗಿಂತ ಖಾಸಗೀಯವರು ಶೇ. 7.6 ರಷ್ಟು ಪ್ರತಿಕ್ರಿಯೆ ನೀಡಿರುತ್ತಾರೆ.

ಇದೇ ಹೇಳಿಕೆಗೆ ಸಂಬಂಧಪಟ್ಟಂತೆ "ಯಾವಾಗಲೂ" ಎಂಬ ಹೇಳಿಕೆಯನ್ನು ಯಾರು ಕೂಡ ಪ್ರತಿಕ್ರಿಯಿಸಿರುವುದಿಲ್ಲ. (ಇದೇ ರೀತಿಯಲ್ಲಿ 25 ಹೇಳಿಕೆಗಳನ್ನು ಈ ಸಂಶೋಧನೆಯಲ್ಲಿ ವಿಶ್ಲೇಷಿಸಲಾಗಿದೆ).

## ಅಧ್ಯಯನದಿಂದ ಕಂಡು ಬಂದ ಗಮನಾರ್ಹ ಅಂಶಗಳು

1. ವಿದ್ಯಾರ್ಥಿಗಳು ವಿವಿಧ ಮಾಧ್ಯಮದ ಮೂಲಕ ವೀಕ್ಷಿಸುವ ಮಾದಕೀಯ ಸನ್ನಿವೇಶಗಳಂತೆ ಅನುಕರಣೆಯನ್ನು ತಮ್ಮ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಗೆಳೆಯರೊಂದಿಗೆ ಮಾಡುತ್ತಾರೆ ಮತ್ತು ಆ ಅನುಕರುಣೆಯು ಅತ್ಯಂತ ವೇಗವುಳ್ಳದಾಗಿರುತ್ತದೆ. ಈ ಮಾದಕೀಯ ಪ್ರಸಂಗಗಳಿಗಾಗಿ ವಿದ್ಯಾರ್ಥಿಗಳ ಹೆಚ್ಚು ಸಮಯವನ್ನು ವ್ಯಯಿಸುತ್ತಾರೆ. ಇವುಗಳನ್ನು ಗುಪ್ತವಾಗಿ ಕೈಗೊಳ್ಳಬೇಕಾದುದರಿಂದ ಈ ಮಾದಕೀಯ ಪ್ರಸಂಗಗಳಲ್ಲಿ ಭಾಗವಹಿಸುವ ಮುನ್ನ, ಭಾಗವಹಿಸುವಾಗ, ಭಾಗವಹಿಸಿದ ನಂತರ ವಿದ್ಯಾರ್ಥಿಗಳು ಆತಂಕ, ಭಯ, ಗಾಬರಿ, ಜಿಗುಪ್ಸೆ ಮತ್ತು ಉದ್ವೇಗಕ್ಕೆ ಒಳಗಾಗುತ್ತಾರೆ.

2. ಮಾದಕೀಯ ಸನ್ನಿವೇಶಗಳನ್ನು ವೀಕ್ಷಿಸಿದ ನಂತರ ಓದುವಲ್ಲಿ ಆಸಕ್ತಿ ಕಡಿಮೆಯಾಗುತ್ತದೆ ಮತ್ತು ಮಾದಕೀಯ ಸನ್ನಿವೇಶ ವೀಕ್ಷಣೆ ನಂತರ ತರಗತಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಿಲ್ಲ ಮತ್ತು ಸಮಾಜ ದ್ರೋಹಿ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದೇನೆ ಎಂದು ಅತಿ ಕಡಿಮೆ ಅಭಿಪ್ರಾಯ ವ್ಯಕ್ತವಾಗಿರುತ್ತದೆ. ಆದರೆ ಮಾದಕೀಯ ಸನ್ನಿವೇಶವು ಕಲಿಕಾ ಚಟುವಟಿಕೆಗಳ ಮೇಲೆ ಬೀರುವ ಪ್ರಭಾವದ ಕುರಿತಾದ ಪ್ರತಿಕ್ರಿಯೆಯಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನೀಯರಲ್ಲಿ ಗಣನೀಯ ವ್ಯತ್ಯಾಸ ಕಂಡು ಬರುತ್ತದೆ. ಇದರಲ್ಲಿ ವಿದ್ಯಾರ್ಥಿನಿಯರಿಗಿಂತ ವಿದ್ಯಾರ್ಥಿಗಳು ಮಾದಕೀಯ ಸನ್ನಿವೇಶಗಳ ಪ್ರಭಾವಕ್ಕೆ ಒಳಗಾಗಿರುತ್ತಾರೆ.

3. ಮಾದಕೀಯ ಸನ್ನಿವೇಶದ ಚಿತ್ರಣಗಳನ್ನು ವೀಕ್ಷಿಸುತ್ತೇನೆ ಮತ್ತು ವಿಕ್ಷಿಸಬೇಕೆಂಬ ಹೆಚ್ಚಿನ ಬಯಕೆಯಿದೆ. ನಾನು ತರಗತಿಯಲ್ಲಿ ಕುಳಿತಾಗ ಅಶ್ಲೀಲ ದೃಶ್ಯಗಳು ನನ್ನ ಸ್ಮರಣೆಗೆ ಬರುತ್ತದೆ. ನಾನು ಪರೀಕ್ಷೆಯಲ್ಲಿ ಕುಳಿತಾಗ ಮಾದಕೀಯ ಸನ್ನಿವೇಶಗಳು ಸ್ಮರಣೆಗೆ ಬರುತ್ತವೆ. ಮಾದಕೀಯ ಸನ್ನಿವೇಶಗಳನ್ನು ಒಳಗೊಂಡ ಪುಸ್ತಕಗಳನ್ನು ಓದುತ್ತಿರುತ್ತೇನೆ ಎಂದು ಹೆಚ್ಚು ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡಿದ್ದಾರೆ. ಇದರಲ್ಲಿ ನಗರ ಮತ್ತು ಗ್ರಾಮೀಣದವರ ಪ್ರತಿಕ್ರಿಯೆಯಲ್ಲಿ ಗಣನೀಯ ವ್ಯತ್ಯಾಸ ಕಂಡು ಬಂದಿದೆ. ನಗರದವರಿಗಿಂತ ಗ್ರಾಮೀಣದವರು ಇಂತಹ ಹೇಳಿಕೆಗಳಿಗೆ ಹೆಚ್ಚಾಗಿ ಪ್ರತಿಕ್ರಿಯಿಸಿರುತ್ತಾರೆ. ಅದಕ್ಕಾಗಿ ಮಾದಕೀಯ ಸನ್ನಿವೇಶಗಳು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ.

4. ದೂರದರ್ಶನದಲ್ಲಿ ಪ್ರಕಟವಾಗುವ ಚಿತ್ರಣಗಳು, ಪತ್ರಿಕೆಯಲ್ಲಿ ಪ್ರಕಟವಾಗುವ ಚಿತ್ರಣಗಳು, ಒಟ್ಟಾರೆಯಾಗಿ ಸಮೂಹ ಮಾಧ್ಯಮಗಳಿಂದ ಪ್ರಕಟವಾಗುವ ಅಶ್ಲೀಲ ದೃಶ್ಯಗಳಿಂದ ಹಾಗೂ ಹೆಚ್ಚು ಪ್ರಭಾವಕ್ಕೆ ಒಳಗಾಗುತ್ತೇವೆಯೆಂದು ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡಿದ್ದಾರೆ. ಈ ಮೇಲಿನ ಅಂಶಗಳ ಪ್ರತಿಕ್ರಿಯೆಯಲ್ಲಿ ಸರಕಾರಿ ಮತ್ತು ಖಾಸಗಿಯವರ ನಡುವೆ ಗಣನೀಯ ವ್ಯತ್ಯಾಸ ಕಂಡು ಬಂದಿದೆ. ಇದಕ್ಕೆ ಸರಕಾರಿಯವರಿಗಿಂತ ಖಾಸಗಿ ವಿದ್ಯಾರ್ಥಿಗಳು ಹೆಚ್ಚಿನ ಪ್ರತಿಕ್ರಿಯೆ ನೀಡಿದ್ದಾರೆ.

5. ಒಟ್ಟಾರೆಯಾಗಿ ಸಮೂಹ ಮಾಧ್ಯಮಗಳಲ್ಲಿ ಬಿತ್ತರವಾಗುವ ಮಾದಕೀಯ ಸನ್ನಿವೇಶಗಳು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುತ್ತವೆ. ಅದರಿಂದಾಗಿ ವಿದ್ಯಾರ್ಥಿಗಳು ಆತಂಕ, ಉದ್ವೇಗ, ಹತಾಶೆಗಳಿಂದ ವಿದ್ಯಾರ್ಥಿಗಳು ನರಳುತ್ತಾರೆ. ಮತ್ತು ತಮ್ಮ ಅಮೂಲ್ಯ ಸಮಯವನ್ನು ವ್ಯಯಿಸುತ್ತಾರೆ. ಇದು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಲಿಕೆ ಮೇಲೆ ಪ್ರಭಾವವನ್ನು ಉಂಟು ಮಾಡುತ್ತದೆ.

## ಶೈಕ್ಷಣಿಕ ನಿಹಿತಾರ್ಥಗಳು

1. ಕಲಿಕೆಯ ಮೇಲೆ ಪ್ರಭಾವ ಬೀರುವ (ಋಣಾತ್ಮಕ) ಅಂಶಗಳನ್ನು ಗುರುತಿಸಿ ಕಲಿಕೆ ವಿಕಾಸವಾಗದಂತೆ ನೋಡಿಕೊಳ್ಳುವುದು ಮುಖ್ಯವೆಂದು ಕಂಡು ಬರುತ್ತದೆ.
2. ಮಾದಕೀಯತೆಯಿಂದ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆ ಯಾಗುತ್ತದೆ. ಅದಕ್ಕಾಗಿ ಅದರ ನಿಯಂತ್ರಣ ಮತ್ತು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಅವಶ್ಯಕ.
3. ವಿದ್ಯಾರ್ಥಿಗಳು ಮಾದಕೀಯತೆಯಲ್ಲಿ ತೊಡಗದಂತೆ ಎಚ್ಚರ ವಹಿಸುವುದರಿಂದಾಗಿ ಕಲಿಕೆಗೆ ಅನುಕೂಲಕರ.

## ಅಧ್ಯಯನದ ಇತಿಮಿತಿಗಳು

1. ಈ ಅಧ್ಯಯನಕ್ಕೆ ಕೇವಲ ಪ್ರೌಢ ಶಾಲಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ.
2. ಸಂಶೋಧನೆಯು ಸಮೂಹ ಮಾಧ್ಯಮಗಳಲ್ಲಿ ಪ್ರಸಾರವಾಗುವ ಮಾದಕೀಯ ಸನ್ನಿವೇಶಗಳಲ್ಲಿ ಕೆಲವೊಂದು ಮಾತ್ರ ಆಯ್ಕೆ ಮಾಡಲಾಗಿದೆ.
3. ಕಲಿಕೆ ಮೇಲೆ ಪ್ರಭಾವ ಬೀರುವ ಅನೇಕ ಕಾರಕಾಂಶಗಳಲ್ಲಿ ಇಲ್ಲಿ ಮಾದಕೀಯ ಸನ್ನಿವೇಶಗಳನ್ನು ಮಾತ್ರ ಪರಿಗಣಿಸಲಾಗಿದೆ.

## ಆಕರ ಗ್ರಂಥಗಳು


- **Aggarwal, J.C. (1975) :** Educational Research : An Introduction. New Delhi : Arya Book Depot.
- **Best, J.W. (1971) :** Research in Education. New Jersey : Prentice-Hall.
- **Garret, H.E. (2006) :** Statistics in Psychology and Education. Surjet Publication.
- **Gilmore, D. Beehr, T. and Love, K. (1986) :** Effects of Applicant, Sex, Applicant Physical Attractiveness, Type of Rater and Type of Job on Interview Decision. Journal of Occupational Psychology, 59, pp. 103-109.
- **Goebel, Barbara, and Valjean (1979) :** Age, Sex and Attractiveness as Factors in Student Ratings of Teachers : A Developmental Study. Journal of Educational Psychology, 71 (Oct.), pp. 646-653.
- **Hurlock, B.E. (1976) :** Personality Development. Tata McGraw – Hill Edition, Pp. 143-171.
- **"ತರಂಗ"– "ಹೊಗೆ ಕೊಂದಿತು ಜೋಕೆ",** ಜೂನ 2 2011 (ಮೇ 31 ವಿಶ್ವ ಧೂಮಪಾನ ನಿಷೇಧಕ್ಕಾಗಿ ವಿಶೇಷ ಲೇಖನ), ಲೇಖಕರು– ಕೃಷ್ಣ ಎಸ್ ಭಟ್.
- ಹದಿಹರೆಯದವರ ಮೇಲೆ ಹಲ್ಲೆಯಾದಾಗ ಮಾತ್ರ ನಮ್ಮ ಆತ್ಮಸಾಕ್ಷಿ ಕೆರಳುವುದೇಕೆ ? ಪುಸ್ತಕ : "ಬೆತ್ತಲೆ ಜಗತ್ತು" ಭಾಗ – 9 31 ಜನೇವರಿ 2009, ಲೇಖಕರು–ಪ್ರತಾಪಸಿಂಹ.
- **ವಿಜಯ ಕರ್ನಾಟಕ ಪತ್ರಿಕೆ :** ಪೋಷಕರು, ವಿದ್ಯಾರ್ಥಿಗಳು, ಮೌಲ್ಯಾಧಾರಿತ ಶಿಕ್ಷಣ, ಮೇ 17 2011 ಪುಟ ಸಂ–6 ,ಲೇಖಕರು– ಡಾ. ಎಮ್. ವಾಯ್. ರವಿ.
- **"Self Eastern" :** ಇದರ ರಚನೆಕಾರರು 'ಸ್ಟಿಫನ್ ಆ್ಯಡ್ರವ್ಸ' ಲಂಡನ್ ಗಿಲ್ಡ್ ಹಾಲ್ ಯುನಿರ್ವಸಿಟಿ –2007.


■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ಜಾನ್ ಡ್ಯೂಯಿ (1859–1952)
## (JEAN DUEI 1859-1952)

✍ ಜಯದೇವ ಎಂ. ಮೆಣಸಗಿ ಎಂ.ಎ., ಮೈಲಾರಪ್ಪ ಮೆಣಸಗಿ ಮೇಮೊರಿಯಲ್ ಟ್ರಸ್ಟ್, ಗದಗ–582103


### ಜೀವನ

ಜಾನ ಡ್ಯೂಯಿಯು ಅಮೇರಿಕೆಯ ಅತ್ಯಂತ ಶ್ರೇಷ್ಠ ಶಿಕ್ಷಣತಜ್ಞ. ಜಗತ್ತಿನ ಆಧುನಿಕ ಶ್ರೇಷ್ಠ ಶಿಕ್ಷಣ ತಜ್ಞರಲ್ಲಿ ಅಗ್ರಗಣ್ಯನಾದ ಈತನು ಬರ್ಲಿಂಗಟನ್‌ನಲ್ಲಿ ಕ್ರಿ. ಶ. 1859 ರಲ್ಲಿ ಜನಿಸಿದನು. ವರಮಾಂಟದ ಪಬ್ಲಿಕ್ ಶಾಲೆಯಲ್ಲಿ ಶಿಕ್ಷಣ ಪಡೆದ, 1879 ರಲ್ಲಿ ವರಮಾಂಟ ವಿಶ್ವವಿದ್ಯಾಲಯದ ಪದವಿ ಪಡೆದ ನಂತರ ಜಾನ ಹಾಪಕಿನ್ಸ, ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರ, ಇತಿಹಾಸ ಮತ್ತು ತತ್ವಶಾಸ್ತ್ರಗಳ ಅಧ್ಯಯನ ಮಾಡಿದನು. ಅಲ್ಲಿಂದಲೇ ಪಿಎಚ್.ಡಿ. ಪದವಿ ಪಡೆದು ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾದ. 1894 ರಲ್ಲಿ ಚಿಕ್ಯಾಗೋ ವಿಶ್ವವಿದ್ಯಾಲಯದ ತತ್ವಶಾಸ್ತ್ರ ವಿಭಾಗದ ಮುಖ್ಯಸ್ಥನಾಗಿ ನೇಮಕಗೊಂಡ ಮೊದಲಿನಿಂದಲೂ ಶಿಕ್ಷಕನಾಗಿ ಕೆಲಸ ಮಾಡುವ ಆತುರತೆ ಅವನಲ್ಲಿತ್ತು, ಆದ್ದರಿಂದ ಆ ವೃತ್ತಿಯ ಪ್ರಾರಂಭದಿಂದಲೇ ಹೊಸ ಜ್ಞಾನ ಸಂಗ್ರಹಿಸಲು ಪ್ರಾರಂಭಿಸಿದ. ಶಿಕ್ಷಣದ ಬಗ್ಗೆ ಹೊಸ ಪ್ರಯೋಗಗಳನ್ನು ಮಾಡತೊಡಗಿದ. ಚಿಕ್ಯಾಗೋದಲ್ಲಿ ಒಂದು 'ವಿಶ್ವವಿದ್ಯಾಲಯ ಪ್ರಾಥಮಿಕ ಶಾಲೆ' ಯನ್ನು ಪ್ರಾರಂಭಿಸಿದ. ಆ ಶಾಲೆಯ ಇಡೀ ಅಮೇರಿಕೆಯ ಶೈಕ್ಷಣಿಕ ಸಿದ್ಧಾಂತ ಮತ್ತು ಅನ್ವಯಗಳ ಮೇಲೆ ಬಹಳ ಪ್ರಭಾವ ಬೀರಿತು. ಅವನ ಪ್ರಯೋಗಗಳೆಲ್ಲವೂ ಈ ಶಾಲೆಯಲ್ಲಿಯೇ ಮೊದಲು ಪ್ರಯೋಗಿಸಲ್ಪಟ್ಟವು. ಡ್ಯೂಯಿಯ ತತ್ವಗಳೆಲ್ಲವನ್ನು ಇಲ್ಲಿಯೇ ಒರೆಗಲ್ಲಿಗೆ ಹಚ್ಚಲಾಗಿತ್ತು, ನಾಲ್ಕರಿಂದ ಹದಿನಾಲ್ಕು ವರ್ಷದ ವಿದ್ಯಾರ್ಥಿಗಳಿಗೆ ಈ ಶಾಲೆಯಲ್ಲಿ ಪ್ರವೇಶವಿತ್ತು, ಇಲ್ಲಿರುವ ಅನುಭವಿಕ ಶಿಕ್ಷಕರು ಡ್ಯೂಯಿಯ ಮಾರ್ಗದರ್ಶನದಲ್ಲಿಯೇ ಕೆಲಸ ಮಾಡುತ್ತಿದ್ದರು. ಪ್ರತಿಯೊಂದು ವರ್ಗದಲ್ಲಿ ಕೇವಲ 8 ರಿಂದ 10 ವಿದ್ಯಾರ್ಥಿಗಳಿರುತ್ತಿದ್ದರು. ಜಾನ ಡ್ಯೂಯಿಯ ಇಲ್ಲಿನಡೆದ ಪ್ರಯೋಗಗಳೆಲ್ಲವು, ಕೇವಲ ಅಮೇರಿಕೆಯ ಶಾಲೆಗಳ ಮೇಲಷ್ಟೇ ಅಲ್ಲ ಇಡೀ ಜಗತ್ತಿನಲ್ಲಿಯ ಶಾಲೆಗಳ ಮೇಲೆ ಪ್ರಭಾವ ಬೀರಿದವು. ಆತನ ವಿದ್ಯಾರ್ಥಿಗಳೇ ಈ ಪ್ರಚಾರಕ್ಕೆ ಕಾರಣರಾದರು. ಇದರಿಂದಾಗಿ ಬೇರೆ ಬೇರೆ ದೇಶದವರು ಜಾನ ಡ್ಯೂಯಿಯನ್ನು ವಿವಿಧ ಶೈಕ್ಷಣಿಕ ವಿಷಯಗಳ ಬಗ್ಗೆ ಉಪನ್ಯಾಸ ಕೊಡಲು ಆಮಂತ್ರಿಸಿದರು. ಜಪಾನ, ಚೀನ, ರಶಿಯಾಗಳ ಬಗ್ಗೆ ಉಪನ್ಯಾಸದ ಲಾಭ ಪಡೆದವು. ರಶಿಯಾ ಮತ್ತು ಟರ್ಕಿ ದೇಶಗಳಂತೂ ಜಾನ ಡ್ಯೂಯಿಯನ್ನು ಆಮಂತ್ರಿಸಿ ತಮ್ಮ ದೇಶದ ಶಾಲಾ ಪದ್ಧತಿಯ ಪುನರ್ಘಟನೆಯಲ್ಲಿ ಸಹಾಯ ಮಾಡಲು ವಿನಂತಿಸಿಕೊಂಡವು.

1904ರಲ್ಲಿ ನ್ಯೂಯಾರ್ಕದ ಕೋಲಂಬಿಯಾ ವಿಶ್ವವಿದ್ಯಾಲಯದ ಕುಲಪತಿಯಾಗಿ ಜಾನ ಡ್ಯೂಯಿ ನೇಮಕಗೊಂಡ, ಕೊನೆಯವರೆಗೂ ಅಲ್ಲಿಯೇ ಕೆಲಸ ಮಾಡಿದ. 1952 ರಲ್ಲಿ ನಿಧನನಾದ.

### ಜಾನ್ ಡ್ಯೂಯಿಯ ಶೈಕ್ಷಣಿಕ ಕೃತಿಗಳು

ಜಾನ್ ಡ್ಯೂಯಿಯು ವಿದ್ಯಾರ್ಥಿಯಾಗಿದ್ದಾಗ ಪ್ರಸಿದ್ಧ ಪಂಡಿತರ ಮಾರ್ಗದರ್ಶನದಲ್ಲಿ ವಿವಿಧ ವಿಷಯಗಳನ್ನು ಕಲಿಯುವ ಅವಕಾಶ ಅವನಿಗೆ ದೊರೆಯಿತು. ಜಾರ್ಜ ಮಾರಿನ್ ಮತ್ತು ಚಾರ್ಲ್ಸ ಪಿಯರ್ಸರಿಂದ ತತ್ವಜ್ಞಾನ,, ಹರ್ಬರ್ಟ ಆಡಮ್ಸರಿಂದ ರಾಜನೀತಿಶಾಸ್ತ್ರ ಮತ್ತು ಸ್ಟ್ಯಾನ್ ಹಾಲ್‌ರಿಂದ ಮಾನಸಶಾಸ್ತ್ರವನ್ನು ಕಲಿಯುವ ಸೌಭಾಗ್ಯ ಆತನದಾಗಿತ್ತು, ಇದರಿಂದಾಗಿಯೇ ಆತನಲ್ಲಿ ಜ್ಞಾನ ಬೆಳೆಯಿತು ಮತ್ತು ಸಂಶೋಧನೆಯ ಹಂಬಲ ಹೆಚ್ಚಿತು. ಆದ್ದರಿಂದಲೇ ತನ್ನ ಶಾಲೆಯಲ್ಲಿಯೇ ಅನೇಕ ಪ್ರಯೋಗಗಳನ್ನು ಮಾಡಿದ. ಅದೇ ಕಾಲಕ್ಕೆ ಅನೇಕ ಉಪಯುಕ್ತ ಗ್ರಂಥಗಳನ್ನು ರಚಿಸಿದ್ದಾನೆ. ಅವನ ಅನೇಕ ಪಾಂಡಿತ್ಯಪೂರ್ಣ ಲೇಖನಗಳೂ ಪ್ರಕಟಗೊಂಡಿವೆ.



1. Interesat and effects as related to Will (1896)
2. The School and Society (1899).
3. The Child and the Curriculum (1902).
4. How we think (1910).
5. Interest and efforts in education (1913).
6. Schools of tomorrow (1916).
7. Democracy and education (1916).
8. Reconstruction in Philosophy (1920).
9. Human nature and Conduct - An Introduction to Social Psychology (1922).
10. Experience and Nature (1925).
11. Quest for certainy- A study of the relation of Knowledge and Action (1929).
12. Sources of a Science of Education (1929).
13. Moral principles of Education.
14. Education today.

### ಡ್ಯೂಯಿಯ ಶೈಕ್ಷಣಿಕ ವಿಚಾರಗಳು

ಜಾನ ಡ್ಯೂಯಿಯ ವಿಚಾರಗಳು ಶೈಕ್ಷಣಿಕ ಕ್ಷೇತ್ರದ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಅವನ ವಿಚಾರಗಳಿಗೆ ಸಾಕಷ್ಟು ಗೌರವವಿದೆ, ವಿರುದ್ಧ ಅನೇಕ ಟೀಕೆಗಳು ಬಂದಿವೆ.

1. ಡ್ಯೂಯಿಯ ಪ್ರಕಾರ ಯಾವುದು ಶಾಶ್ವತ ಸತ್ಯವಲ್ಲ. ಆದರೆ ಈ ಜಗತ್ತಿನಲ್ಲಿ ಅನೇಕ ಸಂಗತಿಗಳು ಯಾವತ್ತೂ ಸತ್ಯ ಸಂಗತಿಗಳಾಗಿವೆ. '' ಜಗತ್ತಿನಲ್ಲಿ ಕೆಲವು ಸತ್ಯಗಳಿವೆ. ಅವು ಎಂದೂ ಬದಲಾಗುವುದಿಲ್ಲ. ಅದರಂತೆ ಕೆಲವು ಸುಂದರ

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ವಸ್ತುಗಳಿವೆ. ಅವುಗಳ ಸೌಂದರ್ಯ ಎಂದೂ ಕಡಿಮೆಯಾಗುವುದಿಲ್ಲ'' ಎಂಬ ಹೇಳಿಕೆಯಲ್ಲಿ ಸತ್ಯವಿದೆ.

2. ಡ್ಯೂಯಿಯ ವಿಚಾರಧಾರೆಯು ಅಮೆರಿಕನ್ನರ ಜೀವನ ವಿಧಾನವನ್ನು ಅವಲಂಬಿಸಿದೆ. ಅದು ಭೌತಿಕವಾದವನ್ನು ಆಧರಿಸಿದೆ. ಇಲ್ಲಿ ಆದರ್ಶವಾದಕ್ಕೆ ಸ್ಥಾನವಿಲ್ಲ ನೆಮ್ಮದಿಯ ಜೀವನ ಸಾಗಿಸಲು ಜಗತ್ತು ಶಾಂತಿಯಿಂದ ಬಾಳಲು ಬೇಕಾಗುವ ತತ್ವಗಳು ಆದರ್ಶವಾದದಲ್ಲಿವೆ. ಅವುಗಳನ್ನು ಕೈಬಿಟ್ಟುದರಿಂದಲೇ ಶಾಂತಿ, ಸಹಬಾಳ್ವೆ, ಪ್ರೇಮ, ವಿಶ್ವಾಸ ಮುಂತಾದವುಗಳು ನಮ್ಮಿಂದ ದೂರ ಹೋಗಿವೆ, ಭದ್ರತೆ ಎಂಬುದೇ ಇಲ್ಲವಾಗಿದೆ.

3. ಶಿಕ್ಷಣವು ಜೀವನಕ್ಕಾಗಿ ಸಿದ್ಧತೆ ಎಂಬ ಮಾತನ್ನು ಡ್ಯೂಯಿ ಒಪ್ಪುವುದಿಲ್ಲ ಶಿಕ್ಷಣವೇ ಜೀವನ ಎಂಬುದು ಆತನ ಅಭಿಪ್ರಾಯ. ಇದನ್ನು ಅನೇಕರು ಒಪ್ಪುವುದಿಲ್ಲ, ಡ್ಯೂಯಿಯ ತತ್ವದ ಪ್ರಕಾರ ಮಗುವು ಜೀವನ ತುಂಬ ತನ್ನಿಂದ ತಾನೇ ಕಲಿಯಬೇಕಾಗುತ್ತದೆ. ಜೀವನದ ವಿವಿಧ ಹಂತಗಳಿಗೆ ಬೇಕಾಗುವ ತರಬೇತಿಯನ್ನು ಮಗುವು ತನ್ನಿಂದ ತಾನೇ ಪಡೆಯಬೇಕಾಗುತ್ತದೆ.

4. ಡ್ಯೂಯಿಯ ಪ್ರಕಾರ ಅನುಭವವೊಂದೇ ಶಿಕ್ಷಣ ಪಡೆಯಲು ಉತ್ತಮ ಸಾಧನ. ಅಭ್ಯಾಸ, ಪ್ರವಾಸ ಮುಂತಾದವುಗಳಿಂದಲೂ ಶಿಕ್ಷಣ ಪಡೆಯುವುದು ಸಾಧ್ಯ. ಆದರೆ ಅವನ ತತ್ವಗಳಲ್ಲಿ ಇವುಗಳಿಗೆ ಸ್ಥಾನ ಕೊಟ್ಟಿಲ್ಲ. ನಾವು ಸಾಕಷ್ಟು ಅನುಭವಗಳನ್ನು ಪಡೆಯುತ್ತೇವೆ. ಅವುಗಳಲ್ಲಿ ಅನೇಕ ಅನುಭವಗಳು ಶಿಕ್ಷಣಕ್ಕೆ ಸಂಬಂಧಿಸಿರುವುದೇ ಇಲ್ಲ ಆದ್ದರಿಂದ ಎಲ್ಲ ಶಿಕ್ಷಣವು ಅನುಭವವಲ್ಲ.

5. ಶಿಕ್ಷಣವು ಮಗುವಿನ ಆಸಕ್ತಿ ಮತ್ತು ಸಹಜ ಪ್ರವೃತ್ತಿಗಳಿಗನುಗುಣವಾಗಿ ನಡೆಯಬೇಕೆಂಬುದು ಡ್ಯೂಯಿಯ ಅಭಿಪ್ರಾಯ. ಮಗುವಿನಿಂದ ಮಗುವಿಗೆ ಆಸಕ್ತಿಗಳು ಬದಲಾಗುತ್ತ ಹೋಗುತ್ತವೆ. ಹೀಗಿದ್ದಾಗ ಪ್ರತಿಯೊಂದು ಮಗುವಿಗೆ ಶಿಕ್ಷಣ ಕೊಡುವುದು ಬಹು ಕಠಿಣವಾದ ಕೆಲಸ.

6. ಡ್ಯೂಯಿಯು ಶಿಕ್ಷಣ ವ್ಯವಸ್ಥೆಯು ಸ್ತ್ರೀಯರಿಗೆ ಉಪಯುಕ್ತವಾಗಲಿಕ್ಕಿಲ್ಲ, ಗೃಹ ಕೆಲಸ, ಶಿಶು ಪಾಲನೆ, ವಿಶ್ರಾಂತಿಯ ಉಪಯೋಗ ಮುಂತಾದವುಗಳ ಬಗ್ಗೆ ಅಲ್ಲಿ ಪ್ರಸ್ತಾಪವೇ ಇಲ್ಲ ಶಾರೀರಿಕ ಶಿಕ್ಷಣಕ್ಕೂ ಅವಕಾಶವಿಲ್ಲ.

7. ಎಲ್ಲ ವಿಷಯಗಳನ್ನು ಡ್ಯೂಯಿ ಹೇಳಿದ ವಿಧಾನದಲ್ಲಿ ಕಲಿಸುವುದು ಸಾಧ್ಯವಿಲ್ಲ ವಿಷಯಗಳಿಗೆ ತಕ್ಕ ವಿಧಾನಗಳನ್ನು ಅನುಸರಿಸಿ ಕಲಿಸಿದರೆ ಮಕ್ಕಳಲ್ಲಿ ಆಸಕ್ತಿ ಹುಟ್ಟುತ್ತದೆ. ಆದರೆ ಡ್ಯೂಯಿಯ ವಿಧಾನವು ಯಾಂತ್ರಿಕ ಮತ್ತು ಸಪ್ಪೆ ಪರಿಸರವನ್ನು ನಿರ್ಮಿಸುತ್ತದೆ.

■■

– 61ನೇ ಪುಟಕ್ಕೆ ಮುಂದುವರೆದುದು

ಸವಾಧಾನದಿಂದ ವರ್ತಿಸುವುದು. 15. ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಬೇಕು. ಇದರಿಂದ ಆತ್ಮವಿಶ್ವಾಸ ಹೆಚ್ಚುವುದು. 16. ಪೌಷ್ಠಿಕ ಆಹಾರವನ್ನು ಸೇವಿಸಬೇಕು.

## ಆಕರ ಗ್ರಂಥಗಳು


- **ದೇಸಾಯಿ ಜಿ.ಎನ್.(2002–03) :** **"ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ"**, ಪು.ಸಂ. 20–36 ಗದಗ : ವಿದ್ಯಾನಿಧಿ ಪ್ರಕಾಶನ
- **ಹೊಳೆಯಣ್ಣನವರ ಎಸ್.ಕೆ. :** **"ಶೈಕ್ಷಣಿಕ ಸಂಶೋಧನೆ ಪಟ್ಟಿ ಹಾಗೂ ಸಂಖ್ಯಾಶಾಸ್ತ್ರ"**, ಪುಟ ಸಂ. 26– 99 ಗದಗ : ವಿದ್ಯಾನಿಧಿ ಪ್ರಕಾಶನ.
- **ಕೊಂಗವಾಡ ಎನ್.ಬಿ.(2005):** **"ಶೈಕ್ಷಣಿಕ ತಂತ್ರಶಾಸ್ತ್ರ"**, ಪು.ಸಂ. 115, 113 ಗದಗ: ವಿದ್ಯಾನಿಧಿ ಪ್ರಕಾಶನ.
- **ಕುಲಕರ್ಣಿ ಕೆ.ಜಿ. :** **"ಪ್ರಾಯೋಗಿಕ ಮನಃಶಾಸ್ತ್ರ ಹಾಗೂ ಸಂಖ್ಯೆ"**, ಪು.ಸಂ. 44, 50 ಗದಗ: ವಿದ್ಯಾನಿಧಿ ಪ್ರಕಾಶನ.
- **ಕುಲಕರ್ಣಿ ಕೆ.ಜಿ. (2005–06) :** **"ಶೈಕ್ಷಣಿಕ ನಿರ್ವಹಣೆ"**, ಪುಟ ಸಂ. 197–253 ಗದಗ: ವಿದ್ಯಾನಿಧಿ ಪ್ರಕಾಶನ.
- **ಮ್ಯಾಗೇರಿ ಸಿ. ವಿ. :** **"ಶೈಕ್ಷಣಿಕ ತಂತ್ರಶಾಸ್ತ್ರ"**, ಪು.ಸಂ. 115–133 ಗದಗ: ವಿದ್ಯಾನಿಧಿ ಪ್ರಕಾಶನ.
- **ನಾಗರಾಜ ಪಿ (1999) :** **"ಸಮಕಾಲಿನ ಭಾರತದ ವಿನೂತನ ಶಿಕ್ಷಣ ವಿನ್ಯಾಸ"**, ಪು.ಸ. 200–203 ಗದಗ: ವಿದ್ಯಾನಿಧಿ ಪ್ರಕಾಶನ
- **ಓಬಳೇಶಘಟ್ಟಿ ಆರ್. (2003–04) :** **"ಉದಯೋನ್ಮುಖ ಭಾರತದಲ್ಲಿ ಶಿಕ್ಷಣ"**, ಪು.ಸಂ. 234–250 ಗದಗ: ವಿದ್ಯಾನಿಧಿ ಪ್ರಕಾಶನ.
- **ಪ್ರಭಾ ಗುಡ್ಡೆದಾನ್ವೇರಿ (2006) :** **"ಬೋಧನಾ ಕೌಶಲ್ಯಗಳು ಮತ್ತು ತಂತ್ರಗಳು"**, ಪುಟ ಸಂ. 101–142 ಗದಗ ವಿದ್ಯಾನಿಧಿ ಪ್ರಕಾಶನ.
- **ಯಾದವಾಡ ಎಸ್. ಬಿ. :** **"ಪ್ರಗತಿಶೀಲ ಭಾರತದಲ್ಲಿನ ಶಿಕ್ಷಣ"**, ಪು.ಸಂ. 361–366 ಗದಗ : ವಿದ್ಯಾನಿಧಿ ಪ್ರಕಾಶನ.
- **Cheek, J.R, Bradely . And Coy.D. (2002) :** An Intervention for helping Elementary students Reduce Test Anxiety, Professional School councelling', 6 (2).
- **Luti D.Okasha S and Cohen, A (2004) :** Test Anxiety and its effects on the personality of students with Learning Disabilities. 'Learning Disability Quarterly',27 (3)
- **Akca F (2011) :** The Relationship between Test Anxiety and Learner Helplessness, 'Social Behaviour and Personality : an international journal', 39 (1)


■■

**SHIKSHAN SOUDAH** *Kannada Quarterly* Printer, Publisher, Editor and Owned by : **Jayadev Mailarappa Menasagi** Resi. : Okkalageri Oni, GADAG-582101, Tq. Gadag, Dist.:Gadag. Karnataka State Printed at **Maima Akshara Mudrana,** S.P. Gadag Compound, J.T.Math Road, GADAG 582101, Tq. Gadag, Dist.:Gadag. Karnataka State Phone: 08372-237527, email : shikshansoudha@gmail.com.